ಮಥುರಾದಲ್ಲಿ ಭಾರಿ ಭದ್ರತೆ
ಕೃಷ್ಣ ಜನ್ಮಾಷ್ಟಮಿಯ ಕಾರಣಕ್ಕೆ ಲಕ್ಷಾಂತರ ಭಕ್ತರು ಶನಿವಾರ ಮಥುರಾಕ್ಕೆ ಭೇಟಿ ನೀಡುವ ನಿರೀಕ್ಷೆಯಿದ್ದು, ವೃಂದಾವನ ಸೇರಿದಂತೆ ಉಭಯ ನಗರಗಳಲ್ಲಿ ಬಿಗಿ ಭದ್ರತೆ ಕಲ್ಪಿಸಲಾಗಿದೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶ್ರೀಕೃಷ್ಣ ಜನ್ಮಾಷ್ಟಮಿಯ ಹಾರ್ದಿಕ ಶುಭಾಶಯಗಳು

ಮೇಘಸ್ಫೋಟ: ಸಾವಿನ ಸಂಖ್ಯೆ 60ಕ್ಕೆ ಏರಿಕೆ 9
'ಸುಪ್ರೀಂ' ಒಂದೇ ಶ್ರೇಷ್ಠ ಅಲ್ಲ: ಗವಾಯಿ 9

ಜಿಎಸ್‌ಟಿ: ತಗ್ಗಲಿದೆ ಗ್ರಾಹಕರ ಹೊರೆ

ಸರಕುಗಳನ್ನು ಶೇ 5 ಮತ್ತು 18ರ ತೆರಿಗೆ ವ್ಯಾಪ್ತಿಗೆ ತರಲು ಕೇಂದ್ರ ನಿರ್ಧಾರ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯಲ್ಲಿ (ಜಿಎಸ್‌ಟಿ) ಮಹತ್ತರ ಸುಧಾರಣೆ ತರಲು ಕೇಂದ್ರ ಸರ್ಕಾರ ಉದ್ದೇಶಿಸಿದೆ. ಬಹುತೇಕ ಎಲ್ಲಾ ಸರಕು ಮತ್ತು ಸೇವೆಗಳನ್ನು ಶೇ 5 ಮತ್ತು ಶೇ 18ರ ಸ್ಲ್ಯಾಬ್ ವ್ಯಾಪ್ತಿಗೆ ತರಲು ನಿರ್ಧರಿಸಲಾಗಿದ್ದು, ಈ ದೀಪಾವಳಿಯಿಂದಲೇ ನೂತನ ಬದಲಾವಣೆಯು ಅನುಷ್ಠಾನಕ್ಕೆ ಬರಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಪ್ರಸ್ತುತ, ಅಗತ್ಯ ವಸ್ತುಗಳಿಗೆ ಶೂನ್ಯ, ದಿನನಿತ್ಯದ ಬಳಕೆ ವಸ್ತುಗಳಿಗೆ ಶೇ 5ರಷ್ಟು, ಗುಣಮಟ್ಟದ ಸರಕುಗಳಿಗೆ ಶೇ 12ರಷ್ಟು ಹಾಗೂ ಎಲೆಕ್ಟ್ರಾನಿಕ್ ಮತ್ತು ಸೇವೆಗಳಿಗೆ ಶೇ 18ರಷ್ಟು, ಐಷಾರಾಮಿ ಮತ್ತು ಅಪಾಯಕಾರಿ ಸರಕುಗಳಿಗೆ ಶೇ 28ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಸ್ಲ್ಯಾಬ್‌ಗಳ ಬದಲಾವಣೆ ಜಾರಿಯಾದ ಮೇಲೆ ಗ್ರಾಹಕರ ಮೇಲಿನ ತೆರಿಗೆ ಹೊರೆ ತಗ್ಗಲಿದೆ ಎಂದು ಆ ಮೂಲಗಳು ಮಾಹಿತಿ ನೀಡಿವೆ.

ಜಿಎಸ್‌ಟಿ ಮಂಡಳಿಯು ಪರಿಷ್ಕೃತ ವ್ಯವಸ್ಥೆಗೆ ಅನುಮೋದನೆ ನೀಡಿದ ನಂತರ, ಶೇ 12ರ ಸ್ಲ್ಯಾಬ್‌ನಲ್ಲಿರುವ ಶೇ 99ರಷ್ಟು ಸರಕುಗಳು ಶೇ 5ರ ತೆರಿಗೆ ವ್ಯಾಪ್ತಿಗೆ ಬರಲಿವೆ. ಅದೇ ರೀತಿ, ಶೇ 28ರ ಸ್ಲ್ಯಾಬ್‌ನಲ್ಲಿರುವ 90ರಷ್ಟು ಸರಕು ಮತ್ತು ಸೇವೆಗಳು ಶೇ 18ರ ತೆರಿಗೆ ವ್ಯಾಪ್ತಿಗೆ ಬರಲಿವೆ. ಕೇವಲ ಏಳು ವಸ್ತುಗಳ ಮೇಲೆ ಶೇ 40ರಷ್ಟು ವಿಶೇಷ ತೆರಿಗೆ ವಿಧಿಸಲಾಗುತ್ತದೆ. ತಂಬಾಕನ್ನು ಸಹ ಈ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ ಎಂದೂ ತಿಳಿಸಿವೆ.

ಜಿಎಸ್‌ಟಿ ಪರಿಷ್ಕರಣೆಯು ಖರೀದಿಗೆ ಗ್ರಾಹಕರಿಗೆ ಉತ್ತೇಜನ ನೀಡಲಿದೆ. ಕಳೆದ ಬಾರಿಯ ಜಿಎಸ್‌ಟಿ ಪರಿಷ್ಕರಣೆ ನಂತರ ಉಂಟಾದ ನಷ್ಟವನ್ನು ಇದು ಸರಿದೂಗಿಸಬಹುದು ಎಂಬ ನಿರೀಕ್ಷೆಯನ್ನೂ ಸರ್ಕಾರ ಹೊಂದಿದೆ. ವಜ್ರ ಮತ್ತು ಅಮೂಲ್ಯ ವಸ್ತುಗಳಂತಹ ರಫ್ತು ಆಧಾರಿತ ವಲಯಗಳು ಅಸ್ತಿತ್ವದಲ್ಲಿರುವ ತೆರಿಗೆ ವ್ಯಾಪ್ತಿಯಲ್ಲಿಯೇ ಮುಂದುವರಿಯಲಿವೆ.

ಸುಂಕ ಸಮರದ ಈ ಕಾಲಘಟ್ಟದಲ್ಲಿ ಹೊರಗಿನ ಹೊಡೆತಗಳನ್ನು ತಡೆದುಕೊಳ್ಳಲು ಆಂತರಿಕ ಮಾರಾಟ ಹೆಚ್ಚಳವು ನೆರವಿಗೆ ಬರಲಿದೆ. ಆ ನಿಟ್ಟಿನಲ್ಲಿ ಸರ್ಕಾರದ ಹೆಜ್ಜೆ ಸರಿಯಾಗಿದೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

ಮುಖ್ಯಾಂಶಗಳು
- ಶೇ 12ರ ಸ್ಲ್ಯಾಬ್‌ನಲ್ಲಿರುವ ಶೇ 99ರಷ್ಟು ಸರಕುಗಳು ಶೇ 5ರ ತೆರಿಗೆ ವ್ಯಾಪ್ತಿಗೆ
- ಶೇ 28ರ ಸ್ಲ್ಯಾಬ್‌ನಲ್ಲಿರುವ 90ರಷ್ಟು ಸರಕು, ಸೇವೆ ಶೇ 18ರ ತೆರಿಗೆ ವ್ಯಾಪ್ತಿಗೆ

ಪ್ರಸ್ತುತ ಜಿಎಸ್‌ಟಿ ಸ್ಲ್ಯಾಬ್‌ಗಳಡಿ ಸಂಗ್ರಹವಾಗುತ್ತಿರುವ ತೆರಿಗೆ ಪ್ರಮಾಣ (ಶೇ)

ಸ್ಲ್ಯಾಬ್	
ಶೇ 18	65
ಶೇ 28	11
ಶೇ 5	7
ಶೇ 12	5

ಸರಕು ಮತ್ತು ಸೇವಾ ತೆರಿಗೆ

ಪ್ರಸ್ತುತ ಸ್ಲ್ಯಾಬ್ (ಶೇ)

5	12	18	28

ಪ್ರಸ್ತಾವಿತ ಸ್ಲ್ಯಾಬ್ (ಶೇ)

5	18	40 (ಕೇವಲ 7 ಸರಕುಗಳಿಗೆ)

2.67 ಲಕ್ಷ ಟನ್ ಯೂರಿಯಾ ಪೂರೈಕೆ: ಮನವಿ

ಬೆಂಗಳೂರು: ಕರ್ನಾಟಕಕ್ಕೆ ಅಗತ್ಯವಿರುವ 2.67 ಲಕ್ಷ ಟನ್ ಯೂರಿಯಾ ಗೊಬ್ಬರವನ್ನು ಪೂರೈಕೆ ಮಾಡುವಂತೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ- ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ವರದಿ ಪುಟ 5



ಸ್ವಾತಂತ್ರ್ಯ ದಿನಾಚರಣೆ ಭಾಷಣದಲ್ಲಿ ಮಹತ್ವಾಕಾಂಕ್ಷೆಯ ಯೋಜನೆ ಘೋಷಿಸಿದ ಪ್ರಧಾನಿ

ದೇಶ ರಕ್ಷಣೆಗೆ 'ಸುದರ್ಶನ ಚಕ್ರ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ದೇಶದ ಪ್ರಮುಖ ಸೇನಾ ನೆಲೆಗಳನ್ನು ರಕ್ಷಿಸಲು ಮತ್ತು ಶತ್ರುವಿನ ಬೆದರಿಕೆಗೆ ನಿರ್ಣಾಯಕ ಪ್ರತ್ಯುತ್ತರ ನೀಡಲು ಸ್ವದೇಶಿ ತಂತ್ರಜ್ಞಾನ ಬಳಸಿ 'ಸುದರ್ಶನ ಚಕ್ರ' ಹೆಸರಿನ ವಾಯು ರಕ್ಷಣಾ ವ್ಯವಸ್ಥೆ ಅಭಿವೃದ್ಧಿಪಡಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಘೋಷಿಸಿದರು.

ನೆರೆ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಚೀನಾ ಒಡ್ಡಿರುವ ಭದ್ರತಾ ಸವಾಲುಗಳ ನಡುವೆಯೇ ಪ್ರಧಾನಿ ಈ ಮಹತ್ವದ ಹೇಳಿಕೆ ನೀಡಿದ್ದಾರೆ. ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನವದೆಹಲಿಯ ಕೆಂಪುಕೋಟೆಯಿಂದ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಅವರು, 'ಸುದರ್ಶನ ಚಕ್ರ' ಯೋಜನೆ ಸೇರಿದಂತೆ ಹಲವು ಘೋಷಣೆಗಳನ್ನು ಮಾಡಿದರು.

ಭಾರತದಲ್ಲೇ ತಯಾರಾಗುವ ಯುದ್ಧ ವಿಮಾನಗಳಿಗೆ ಬೇಕಾದ ಜೆಟ್ ಎಂಜಿನ್‌ಗಳನ್ನು ಸ್ವದೇಶದಲ್ಲೇ ಅಭಿವೃದ್ಧಿಪಡಿಸಲು ಕರೆ ನೀಡಿದ ಅವರು, ಮಿಲಿಟರಿ ಸಲಕರಣೆಗಳಿಗೆ ವಿದೇಶಿ ತಂತ್ರಜ್ಞಾನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬೇಕೆಂದು ಸಲಹೆ ನೀಡಿದರು.

8

ಪ್ರಧಾನಿಯ ಪ್ರಮುಖ ಘೋಷಣೆಗಳು

ಸುದರ್ಶನ ಚಕ್ರ
ವಾಯು ರಕ್ಷಣಾ ವ್ಯವಸ್ಥೆಯನ್ನು 'ವಿಸ್ತರಿಸಲು, ಬಲಪಡಿಸಲು ಮತ್ತು ಆಧುನೀಕರಣಗೊಳಿಸಲು' ಭಾರತವು 'ಸುದರ್ಶನ ಚಕ್ರ' ಎಂಬ ಯೋಜನೆ ಪ್ರಾರಂಭಿಸಲಿದೆ ಎಂದು ಪ್ರಧಾನಿ ಪ್ರಕಟಿಸಿದರು. ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆಯ ಅಗತ್ಯವನ್ನು ಒತ್ತಿ ಹೇಳಿದ ಅವರು, '2035ರ ವೇಳೆಗೆ ರಾಷ್ಟ್ರವು ತನ್ನ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ಪ್ರಯತ್ನಿಸುತ್ತಿದೆ. ಅದಕ್ಕಾಗಿ ಭಗವಾನ್ ಶ್ರೀ ಕೃಷ್ಣನ ಸುದರ್ಶನ ಚಕ್ರದಿಂದ ಸ್ಫೂರ್ತಿ ಪಡೆಯುತ್ತಿದೆ' ಎಂದು ಹೇಳಿದರು.

'ಇಡೀ ಆಧುನಿಕ ವ್ಯವಸ್ಥೆಯ ಸಂಶೋಧನೆ, ಅಭಿವೃದ್ಧಿ ಮತ್ತು ತಯಾರಿಕೆ ಭಾರತದಲ್ಲೇ ನಡೆಯಬೇಕು. ನಮ್ಮ ಯುವಜನರ ಪ್ರತಿಭೆಯನ್ನು ಅದಕ್ಕಾಗಿ ಬಳಸಿಕೊಳ್ಳಬೇಕು. ಈ ಪ್ರಬಲ ವ್ಯವಸ್ಥೆಯು ಭಯೋತ್ಪಾದಕ ದಾಳಿಯನ್ನು ಎದುರಿಸುವುದು ಮಾತ್ರವಲ್ಲದೆ, ಭಯೋತ್ಪಾದಕರನ್ನು ಹುಡುಕಿ ಮಟ್ಟಹಾಕಲಿದೆ' ಎಂದರು.

'ಸುದರ್ಶನ ಚಕ್ರ' ಹೆಸರಿನ ವಾಯು ರಕ್ಷಣಾ ವ್ಯವಸ್ಥೆಯ ಬಗ್ಗೆ ಪ್ರಧಾನಿ ಹೆಚ್ಚಿನ ವಿವರಗಳನ್ನು ನೀಡದಿದ್ದರೂ, ಇದು ಇಸ್ರೇಲ್‌ನ 'ಐರನ್ ಡೋಮ್' ವಾಯು ರಕ್ಷಣಾ ವ್ಯವಸ್ಥೆಯ ಮಾದರಿಯಲ್ಲಿ ಇರಬಹುದು ಎಂದು ತಜ್ಞರು ಹೇಳಿದ್ದಾರೆ.

ಜಿಎಸ್‌ಟಿ ಸುಧಾರಣೆ
ಪ್ರಧಾನಿ ಅವರು ಸರಕು ಮತ್ತು ಸೇವಾ ತೆರಿಗೆಯಲ್ಲಿ (ಜಿಎಸ್‌ಟಿ) ಭಾರಿ ಪ್ರಮಾಣದ ಸುಧಾರಣೆ ತರುವುದಾಗಿ ಘೋಷಿಸಿದರಲ್ಲದೆ, ದೇಶದ ಜನರಿಗೆ ದೀಪಾವಳಿ ಕೊಡುಗೆಯ ಭರವಸೆ ನೀಡಿದರು.

'ಜಿಎಸ್‌ಟಿಗೆ ಸಂಬಂಧಿಸಿದ ಮಹತ್ವದ ಸುಧಾರಣೆಗಳನ್ನು ದೀಪಾವಳಿ ವೇಳೆ ಅನಾವರಣಗೊಳಿಸಲಾಗುವುದು. ಅಗತ್ಯ ವಸ್ತುಗಳ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡಲಾಗುವುದು ಮತ್ತು ಎಂಎಸ್‌ಎಂಇಗಳು, ಸಣ್ಣ ವ್ಯಾಪಾರಿಗಳು ಮತ್ತು ಗ್ರಾಹಕರ ಮೇಲಿನ ಹೊರೆ ಇಳಿಸಲಾಗುವುದು' ಎಂದರು.

8

ಆರ್‌ಎಸ್‌ಎಸ್ ಕಳೆದ 100 ವರ್ಷಗಳಿಂದ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಇದು ಒಂದು ರೀತಿ ವಿಶ್ವದ ಅತಿದೊಡ್ಡ ಎನ್‌ಜಿಒ
ನರೇಂದ್ರ ಮೋದಿ, ಪ್ರಧಾನಿ

'ಮೂವರಿಂದ ದೆಹಲಿಯಲ್ಲಿ ವ್ಯವಸ್ಥಿತ ಪಿತೂರಿ'

ಪ್ರಜಾವಾಣಿ ವಾರ್ತೆ

ಮಧುಗಿರಿ: 'ಸಚಿವ ಸ್ಥಾನದಿಂದ ನನ್ನನ್ನು ಇಳಿಸಲು ಮೂವರು ದೆಹಲಿಯಲ್ಲಿ ವ್ಯವಸ್ಥಿತವಾಗಿ ಪಿತೂರಿ ನಡೆಸಿದ್ದಾರೆ. ನನಗೂ ಪಿತೂರಿ ವಿದ್ಯೆ ಗೊತ್ತಿದೆ. ಈಗ ಬಳಸುವುದಿಲ್ಲ. ಮುಂದೆ ಕಾಲ ಬರುತ್ತದೆ' ಎಂದು ಸಚಿವ ಸ್ಥಾನದಿಂದ ವಜಾಗೊಂಡಿರುವ ಕೆ.ಎನ್.ರಾಜಣ್ಣ ನುಡಿದರು.

ಪಟ್ಟಣದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ರಾಜಣ್ಣ ಮಾತನಾಡಿದರು.

5

ಇದೇ ಅವಧಿಯಲ್ಲಿಯೇ ಹೈಕಮಾಂಡ್ ಒಪ್ಪಿಸಿ, ಸಚಿವನಾಗುತ್ತೇನೆ. ದೆಹಲಿಗೆ ಹೋಗಿ ಬಂದು,ಸಿಹಿ ಸುದ್ದಿ ಕೊಡುವೆ
ಕೆ.ಎನ್.ರಾಜಣ್ಣ, ಮಾಜಿ ಸಚಿವ

ಕೇಂದ್ರದ ವಿರುದ್ಧ ಸಿ.ಎಂ ಮತ್ತೆ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐ.ಟಿ, ಇ.ಡಿ, ಸಿಬಿಐ ಮತ್ತು ಕೆಲವು ಸಾಂವಿಧಾನಿಕ ಸಂಸ್ಥೆಗಳು ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ನೈಜ ಮೌಲ್ಯಗಳ ಉಳಿವಿಗಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಆಕ್ರೋಶ ವಿವಿಧ ವೇದಿಕೆಗಳಿಂದ ವ್ಯಕ್ತವಾಗುತ್ತಿದೆ. ಪ್ರಜಾಪ್ರಭುತ್ವ, ಸಂವಿಧಾನದ ನೈಜ ಮೌಲ್ಯಗಳ ಉಳಿವಿಗೆ ಜವಾಬ್ದಾರಿ ಯುತ ನಾಗರಿಕರು ಧ್ವನಿ ಎತ್ತಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಇಲ್ಲಿನ ಮಾಣೆಕ್ ಷಾ ಮೈದಾನದಲ್ಲಿ ಶುಕ್ರವಾರ ನಡೆದ 79ನೇ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹರಣ ನೆರವೇರಿಸಿ ಅವರು ಮಾತನಾಡಿದರು.

8

ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ತೆರೆದ ವಾಹನದಲ್ಲಿ ಗೌರವ ವಂದನೆ ಸ್ವೀಕರಿಸಿದರು ಚಿತ್ರ: ಪ್ರಶಾಂತ್ ಎಚ್.ಜಿ.

ಸ್ಫೋಟ: ಬಾಲಕ ಸಾವು, 9 ಮಂದಿಗೆ ಗಾಯ, 13 ಮನೆಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡುಗೋಡಿಯ ಚಿನ್ನಯ್ಯಪಾಳ್ಯದ ಶ್ರೀರಾಮ ಕಾಲೊನಿಯ ಮನೆಯೊಂದರಲ್ಲಿ ಶುಕ್ರವಾರ ಬೆಳಿಗ್ಗೆ ಸಂಭವಿಸಿದ ಸ್ಫೋಟದಿಂದಾಗಿ 13 ಮನೆಗಳಿಗೆ ಹಾನಿಯಾಗಿದ್ದು, ಬಾಲಕ ಮುಬಾರಕ್ (10) ಮೃತಪಟ್ಟಿದ್ದಾನೆ.

ಮನೆಗಳಲ್ಲಿದ್ದ ಇಬ್ಬರು ಮಕ್ಕಳೂ ಸೇರಿದಂತೆ ಒಂಬತ್ತು ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಕಸ್ತೂರಮ್ಮ ಅವರ ಮನೆಯಲ್ಲಿದ್ದ ಫ್ರಿಜ್‌ನಲ್ಲಿ ಶಾರ್ಟ್ ಸರ್ಕಿಟ್ ಸಂಭವಿಸಿ ಅವಘಡವಾಗಿದೆ ಎಂದು ಹೇಳಲಾಗಿದೆ. ಘಟನಾ ಸ್ಥಳದಲ್ಲಿ ಸ್ಫೋಟಕ ವಸ್ತುಗಳ ಮಾದರಿ ಪತ್ತೆಯಾಗಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮೃತ ಬಾಲಕನ ಕುಟುಂಬಕ್ಕೆ ₹5 ಲಕ್ಷ ಪರಿಹಾರ ಘೋಷಿಸಲಾಯಿತು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಪೊಟ್ಯಾಟೊ ಚಿಪ್ಸ್
Lay's ಎನ್ನುವುದು PepsiCo, Inc. ಕಂಪನಿಯ ನೋಂದಾಯಿತ ಟ್ರೇಡ್ ಮಾರ್ಕ್.
~ಹೇಳಿಕೆಗಳು ಆಂಧ್ರ ಪ್ರದೇಶ, ತೆಲಂಗಾಣ, ಕರ್ನಾಟಕ, ತಮಿಳುನಾಡು & ಕೇರಳಗಳಲ್ಲಿ ಆಯ್ದ Lay's ಪೊಟ್ಯಾಟೊ ಚಿಪ್ (ರೂ.10) ಗಳಲ್ಲಿ ಮಾತ್ರ ಲಭ್ಯವಿದೆ ಮತ್ತು Pecten & Pinna Insights Solutions Pvt Ltd 2025 ಮಾರ್ಚ್ 6ನೇ ಮತ್ತು 31ರ ನಡುವೆ (Lay's ಜೊತೆಗೆ ಹಂಚಿಕೊಂಡ 86% ಮಾರುಕಟ್ಟೆ ವ್ಯಾಪ್ತಿ) ನಡೆಸಿದ ಮಾರುಕಟ್ಟೆ ಸಮೀಕ್ಷೆಯನ್ನು ಆಧರಿಸಿ ನೀಡಲಾಗಿದೆ. ವಿವರಗಳಿಗಾಗಿ www.pepsnacks.com/lays/pos ನೋಡಿ.
#25g ಗ್ರಾಂಗೆ MRP ರೂ.10/- (ಎಲ್ಲಾ ತೆರಿಗೆಗಳನ್ನು ಒಳಗೊಂಡಿದೆ).

ಸೂರ್ಯೋದಯ: 6.07 ಸೂರ್ಯಾಸ್ತ : 6:41 | ಚಂದ್ರೋದಯ: ರಾ. 11:14 ಚಂದ್ರಾಸ್ತ: ಬೆ. 11:25 | ಶುಕ್ರವಾರದ ಉಷ್ಣಾಂಶ : ಗರಿಷ್ಠ 27° ಕನಿಷ್ಠ 19°

ಶನಿವಾರದ ಉಷ್ಣಾಂಶ 27° ಗರಿಷ್ಠ | 19° ಕನಿಷ್ಠ | ಭಾನುವಾರ 27° : 20° | ಸೋಮವಾರ 27° : 20° | ಮಂಗಳವಾರ 27° : 20°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ಹೂಡಿಕೆ ಆಕರ್ಷಣೆಗೆ ತಜ್ಞರ ಮೊರೆ

ಆರು ಕ್ಷೇತ್ರಗಳಿಗೆ ಪರಿಣತರು ● 1 ಟ್ರಿಲಿಯನ್ ಆರ್ಥಿಕತೆ ಗುರಿ ತಲುಪಲು ಸಂಕಲ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸ ತಲೆಮಾರಿನ ತಂತ್ರಜ್ಞಾನದ ಉದ್ಯಮ ಕ್ಷೇತ್ರದಲ್ಲಿ ಹೂಡಿಕೆಯನ್ನು ಆಕರ್ಷಿಸಲು ತಾಂತ್ರಿಕ ವೃತ್ತಿಪರರನ್ನು ನೇಮಕ ಮಾಡಿಕೊಳ್ಳಲು ಕೈಗಾರಿಕಾ ಇಲಾಖೆಯ ಅಧೀನ ಸಂಸ್ಥೆ 'ಇನ್ವೆಸ್ಟ್ ಕರ್ನಾಟಕ ಫೋರಂ' ಮುಂದಾಗಿದೆ.

ಒಟ್ಟು ಆರು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಆರು ಮಂದಿ ತಾಂತ್ರಿಕ ಪರಿಣತರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ. ಇವರನ್ನು ಮೂರು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗುವುದು. ಪ್ರತಿಯೊಬ್ಬರಿಗೂ ವರ್ಷಕ್ಕೆ ₹20 ಲಕ್ಷದಿಂದ ₹45 ಲಕ್ಷದವರೆಗೆ ಸಂಭಾವನೆ ನಿಗದಿ ಮಾಡಲಾಗಿದೆ. ಈ ಪ್ರಸ್ತಾವಕ್ಕೆ ಹಣಕಾಸು ಇಲಾಖೆಯೂ ಒಪ್ಪಿಗೆ ನೀಡಿದೆ.

ಆಯಾ ಕ್ಷೇತ್ರಗಳ ತಾಂತ್ರಿಕ ಪರಿಣಿತರು ದೇಶ–ವಿದೇಶಗಳ ಹೂಡಿಕೆದಾರರನ್ನು ಗುರುತಿಸಿ, ರಾಜ್ಯಕ್ಕೆ ಕರೆತಂದು ಹೂಡಿಕೆ ಮಾಡಿಸುವ ಜವಾಬ್ದಾರಿ ಹೊಂದಿರುತ್ತಾರೆ. ಇದಕ್ಕೆ ಪೂರಕವಾಗಿ ಸರ್ಕಾರಕ್ಕೆ ಅಗತ್ಯ ಸಲಹೆ ಸೂಚನೆಗಳನ್ನೂ ನೀಡುತ್ತಾರೆ.

ತಾಂತ್ರಿಕ ಪರಿಣತರ ನೇಮಕಕ್ಕಾಗಿ ಇನ್ವೆಸ್ಟ್ ಕರ್ನಾಟಕ ವೆಬ್‌ಸೈಟ್ ಮೂಲಕ ಬಯೋಡೇಟಾಗಳನ್ನು ಆಹ್ವಾನಿಸಲಾಗಿದೆ. ಈವರೆಗೆ ಒಟ್ಟು 69 ಮಂದಿ ಅರ್ಜಿ ಸಲ್ಲಿಸಿದ್ದು, ಅವುಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಒಟ್ಟು 18 ಅರ್ಜಿದಾರರ ಪಟ್ಟಿ ಸಿದ್ಧಪಡಿಸಲಾಗಿದೆ. ವಿವಿಧ ಹಂತಗಳ ಸಂದರ್ಶನ ನಡೆಸಿ, ಅಂತಿಮವಾಗಿ ಆರು ಮಂದಿಯನ್ನು ಆಯ್ಕೆ ಮಾಡಲಾಗುವುದು. ಈ ಪ್ರಕ್ರಿಯೆಯನ್ನು ಹೂಡಿಕೆ ಕ್ಷೇತ್ರದಲ್ಲಿ ಪಳಗಿರುವ ಏಜೆನ್ಸಿಯೊಂದು ನಡೆಸುತ್ತಿದೆ. ಸರ್ಕಾರದ ಹಸ್ತಕ್ಷೇಪವಿಲ್ಲದೆ ಎಲ್ಲವೂ ಪಾರದರ್ಶಕವಾಗಿ ನಡೆಯುತ್ತಿದೆ ಎಂದು ಕೈಗಾರಿಕಾ ಇಲಾಖೆ ಮೂಲಗಳು ತಿಳಿಸಿವೆ.

'ಕರ್ನಾಟಕವನ್ನು ಒಂದು ಟ್ರಿಲಿಯನ್ ಆರ್ಥಿಕತೆಯ ರಾಜ್ಯವಾಗಿಸುವ ಗುರಿ ಹೊಂದಿದ್ದೇವೆ. ಮುಖ್ಯವಾಗಿ ಮಾರ್ಕೆಟಿಂಗ್ ಇಂಟಲಿಜೆನ್ಸ್ ಮತ್ತು ಅನಾಲಿಟಿಕ್ಸ್, ಇಎಸ್‌ಡಿಎಂ–ಸೆಮಿಕಂಡಕ್ಟರ್, ಇ ಮೊಬಿಲಿಟಿ, ಆಟೊ, ಆಟೊ ಕಾಂಪೊನೆಂಟ್, ವೈಮಾನಿಕ ಮತ್ತು ರಕ್ಷಣಾ ಕ್ಷೇತ್ರಕ್ಕೆ ದೊಡ್ಡ ಮಟ್ಟದ ಉತ್ತೇಜನ ನೀಡಲು ತೀರ್ಮಾನಿಸಿದ್ದೇವೆ.

ಕ್ಷೇತ್ರಗಳು	ಸಂಭಾವನೆ ಮೊತ್ತ (ವರ್ಷಕ್ಕೆ ₹ ಲಕ್ಷಗಳಲ್ಲಿ)
ಇನ್ವೆಸ್ಟ್‌ಮೆಂಟ್ ಪ್ರಮೋಷನ್ ಹೆಡ್	35-45
ಮಾರ್ಕೆಟಿಂಗ್ ಇಂಟಲಿಜೆನ್ಸ್ ಆ್ಯಂಡ್ ಅನಾಲಿಟಿಕ್ಸ್ ಹೆಡ್	20-25
ಸೆಕ್ಟರ್ ಹೆಡ್ 1- ಇಎಸ್‌ಡಿಎಂ ಸೆಮಿಕಂಡಕ್ಟರ್	30-40
ಸೆಕ್ಟರ್ ಹೆಡ್ 2– ಇ ಮೊಬಿಲಿಟಿ, ಆಟೊ, ಆಟೊ ಕಾಂಪೊನೆಂಟ್, ಏರೋಸ್ಪೇಸ್ ಆ್ಯಂಡ್ ಡಿಫೆನ್ಸ್	30-40
ಸೆಕ್ಟರ್ ಹೆಡ್ 3– ಕೋರ್ ಮ್ಯಾನ್ಯುಫ್ಯಾಕ್ಚರಿಂಗ್, ಕ್ಯಾಪಿಟಲ್ ಗೂಡ್ಸ್ ಆ್ಯಂಡ್ ಮಷಿನ್ ಟೂಲ್ಸ್	30-40
ಸೆಕ್ಟರ್ ಹೆಡ್ 4– ಎಫ್‌ಎಂಸಿಜಿ, ಹೆಲ್ತ್‌ಕೇರ್, ಫಾರ್ಮಾ ಆ್ಯಂಡ್ ಬಯೋ ಟೆಕ್ನಾಲಜಿ	30-40

ನೆರೆಯ ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳು ಈ ಕ್ಷೇತ್ರಗಳಲ್ಲಿ ದಾಪುಗಾಲಿಡುತ್ತಿದ್ದು, ಕರ್ನಾಟಕ ಹಿಂದುಳಿಯಲು ಸಾಧ್ಯವಿಲ್ಲ. ಇದಕ್ಕಾಗಿ ಸೂಕ್ತ ಹೂಡಿಕೆದಾರರನ್ನು ಗುರುತಿಸಿ, ಹೂಡಿಕೆ ಮಾಡಿಸಲು ಪರಿಣಿತರ ಅಗತ್ಯವಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

'ಸೆಮಿಕಂಡಕ್ಟರ್, ಮ್ಯಾನ್ಯುಫ್ಯಾಕ್ಚರಿಂಗ್, ಇವಿ, ಕ್ವಾಂಟಂ ಕ್ಷೇತ್ರದಲ್ಲಿ ನೆರೆಯ ರಾಜ್ಯಗಳು ತೀವ್ರ ಪೈಪೋಟಿ ನೀಡುತ್ತಿವೆ. ಆ ರಾಜ್ಯಗಳನ್ನು ಹಿಂದಿಕ್ಕಿ ನಾವು ಮುನ್ನಡೆಯಬೇಕಾಗಿದೆ. ಸರ್ಕಾರ ನೇಮಿಸಿಕೊಳ್ಳುವ ತಾಂತ್ರಿಕ ಪರಿಣಿತರು ಕರ್ನಾಟಕದ ಉದ್ಯಮ ಕ್ಷೇತ್ರವನ್ನು ಅಧ್ಯಯನ ಮಾಡಿ, ಇಲ್ಲಿಗೆ ಸರಿ ಹೊಂದುವ ಉದ್ಯಮಗಳಲ್ಲಿ ಹೂಡಿಕೆ ಮಾಡಲು ಸರ್ಕಾರಕ್ಕೆ ಅಗತ್ಯ ಸಲಹೆಗಳನ್ನು ನೀಡುತ್ತಾರೆ. ಅದಕ್ಕೆ ಪೂರಕವಾಗಿ ಉದ್ಯಮ ನೀತಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಬೇಕಾಗುತ್ತದೆ' ಎಂದು ಅವರು ಹೇಳಿದರು.

'ಲ್ಯಾಟರಲ್ ಎಂಟ್ರಿ ವ್ಯವಸ್ಥೆಗೂ ನಮ್ಮ ವ್ಯವಸ್ಥೆಗೂ ಸಂಬಂಧವಿಲ್ಲ. ತಮಿಳುನಾಡಿನಲ್ಲೂ ನಮ್ಮ ರೀತಿಯಲ್ಲೇ ತಜ್ಞರನ್ನು ನೇಮಿಸಿಕೊಂಡು ಹೂಡಿಕೆ ಆಕರ್ಷಿಸುವ ವ್ಯವಸ್ಥೆ ಜಾರಿಯಲ್ಲಿದೆ. ಐಎಎಸ್ ಅಧಿಕಾರಿಗಳು ಸರ್ಕಾರದ ಇತರ ಕೆಲಸ ಮಾಡಬೇಕಾಗಿದೆ. ತಜ್ಞರ ಕೆಲಸವನ್ನು ಅವರು ಮಾಡಲು ಸಾಧ್ಯವಾಗದು' ಎಂದರು.

ಬೆಸ್ಕಾಂ ಕಾರ್ಪೊರೇಟ್ ಕಚೇರಿ ಆವರಣದಲ್ಲಿ ಸ್ಥಾಪಿಸಲಾಗಿರುವ ಬ್ಯಾಟರಿ ವಿನಿಮಯ ಕೇಂದ್ರಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಬ್ಯಾಟರಿ ವಿನಿಮಯ ಕೇಂದ್ರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ ಕಾರ್ಪೊರೇಟ್ ಕಚೇರಿ ಆವರಣದಲ್ಲಿ ಸ್ಥಾಪಿಸಲಾಗಿರುವ ಬ್ಯಾಟರಿ ವಿನಿಮಯ ಕೇಂದ್ರಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಬೆವಿಕಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್ ಅವರು ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಧ್ವಜಾರೋಹಣ ನೆರವೇರಿಸಿ, ಬ್ಯಾಟರಿ ವಿನಿಮಯ ಕೇಂದ್ರ ಉದ್ಘಾಟಿಸಿ ಮಾತನಾಡಿದರು.

'ಬೆಂಗಳೂರಿನ ಇವಿ ಬಳಕೆದಾರರಿಗೆ ತ್ವರಿತ ಹಾಗೂ ವಿಶ್ವಾಸಾರ್ಹ ಇವಿ ಚಾರ್ಜಿಂಗ್ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಇದು ಪ್ರಮುಖ ಮೈಲಿಗಲ್ಲು. ಸುಮಾರು 250 ಬ್ಯಾಟರಿ ವಿನಿಮಯ ಕೇಂದ್ರಗಳನ್ನು ನಿರ್ವಹಿಸುತ್ತಿರುವ ಇಂಡೋ ಫಾಸ್ಟ್ ಎನರ್ಜಿ ಕಂಪನಿಯ ಸಹಭಾಗಿತ್ವದಲ್ಲಿ ಇವಿ ಬ್ಯಾಟರಿ ವಿನಿಮಯ ಕೇಂದ್ರ ಸ್ಥಾಪಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ಇವಿ ವಾಹನಗಳಲ್ಲಿನ ಖಾಲಿಯಾದ ಬ್ಯಾಟರಿಗಳನ್ನು ಚಾರ್ಜ್ ಆದ ಬ್ಯಾಟರಿಗಳೊಂದಿಗೆ ಕೇವಲ 2 ನಿಮಿಷದಲ್ಲಿ ವಿನಿಮಯ ಮಾಡಿಕೊಳ್ಳಬಹುದು. ದ್ವಿಚಕ್ರ, ತ್ರಿಚಕ್ರ ಇವಿ ಬಳಕೆ ದಾರರಿಗೆ ಅನುಕೂಲವಾಗಲಿದೆ' ಎಂದರು.

ಬೆಸ್ಕಾಂನ ತಾಂತ್ರಿಕ ನಿರ್ದೇಶಕ ಎಚ್. ಜೆ. ರಮೇಶ್, ಡಿಎಸ್‌ಎಂ ವಿಭಾಗದ ಪ್ರಧಾನ ವ್ಯವಸ್ಥಾಪಕಿ ಉಮಾ ಎಚ್.ಎಂ, ಇಂಡೋಫಾಸ್ಟ್ ಎನರ್ಜಿ ಸಿಇಒ ಅನಂತ್ ಬಡ್ಜತ್ಯ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಅಟಲ್ ಬಿಹಾರಿ ವಾಜಪೇಯಿ ಜನ್ಮ ಶತಮಾನೋತ್ಸವ ಇಂದು

ಬೆಂಗಳೂರು: ಮಾಜಿ ಪ್ರಧಾನಿ ಅಟಲ್‌ಬಿಹಾರಿ ವಾಜಪೇಯಿ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮವನ್ನು ಶನಿವಾರ ನಗರದ ಪುರಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಅಟಲ್ ಅವರ ಜೀವನ ಮತ್ತು ಸಾಧನೆಯನ್ನು ಒಳಗೊಂಡ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಗುವುದು ಎಂದು ವಿಧಾನ ಪರಿಷತ್ತಿನ ಮಾಜಿ ಸದಸ್ಯ ಡಾ.ಎ.ಎಚ್.ಶಿವಯೋಗಿಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಮರಣ ಸಂಚಿಕೆಯನ್ನು ಎಲ್ಲ ಜನರಿಗೂ ಅದರಲ್ಲೂ ವಿಶೇಷವಾಗಿ ಯುವಜನರಿಗೆ ತಲುಪಿಸಲಾಗುವುದು ಎಂದು ಹೇಳಿದರು.

ಈ ಕಾರ್ಯಕ್ರಮದ ಅಂಗವಾಗಿ ಶನಿವಾರ ಚಿತ್ರನಮನ ಸ್ಪರ್ಧೆ ಮತ್ತು ಸ್ವರ ನಮನ ನಡೆಯಲಿದೆ. ಅಲ್ಲದೇ, ಈಗಾಗಲೇ ರಂಗೋಲಿ ನಮನ ಸ್ಪರ್ಧೆ, ನುಡಿ ನಮನ ಸ್ಪರ್ಧೆ, ಬರಹ ನಮನ ಸ್ಪರ್ಧೆಗಳು ನಡೆದಿದ್ದು, ಅದರಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ತೇಜಸ್ವಿನಿ ಅನಂತಕುಮಾರ್, ಬೆಂಗಳೂರಿನ ಎಲ್ಲ ಸಂಸದರು ಮತ್ತು ಶಾಸಕರು ಭಾಗವಹಿಸಲಿದ್ದಾರೆ ಎಂದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮುಖ್ಯಮಂತ್ರಿ ಮಾಲಾರ್ಪಣೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ 228ನೇ ಜಯಂತ್ಯುತ್ಸವ ಅಂಗವಾಗಿ ದೇವರಾಜ ಅರಸು ವೃತ್ತದಲ್ಲಿರುವ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ಜಾನಪದ ಕಲಾ ತಂಡಗಳು ನೃತ್ಯ ಪ್ರದರ್ಶಿಸಿದವು.

ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, ಬಿಬಿಎಂಪಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್, ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಪಶ್ಚಿಮ ವಲಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್, ಜಂಟಿ ಆಯುಕ್ತ ಸಂಗಪ್ಪ ಉಪಸ್ಥಿತರಿದ್ದರು.

ಚಿರತೆ ದಾಳಿ: ಜಾಲರಿ ಅಳವಡಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೀದರ್: ಬೆಂಗಳೂರು ಬಳಿಯ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಚಿರತೆ ಸಫಾರಿ ಅಂಗಳದಲ್ಲಿ ವಾಹನದ ಕಿಟಕಿ ಬಳಿ ಕೈ ಇಟ್ಟಿದ್ದ ಬಾಲಕನಿಗೆ ಚಿರತೆ ದಾಳಿ ಮಾಡಿ ಗಾಯಗೊಳಿಸಿರುವ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು, ಎಲ್ಲ ಸಫಾರಿ ವಾಹನಗಳ ಕಿಟಕಿ ಮತ್ತು ಛಾಯಾಗ್ರಹಣದ ರಂಧ್ರಗಳಿಗೆ ಕಡ್ಡಾಯವಾಗಿ ಜಾಲರಿ ಅಳವಡಿಸಲು ಸೂಚಿಸಿದ್ದಾರೆ.

ಸಫಾರಿಯ ವೇಳೆ ಎಲ್ಲ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಪ್ರವಾಸಿಗರಿಗೆ ಸೂಕ್ತ ಎಚ್ಚರಿಕೆ ನೀಡಲು ಹಾಗೂ ಸಫಾರಿ ಟಿಕೆಟ್‌ನಲ್ಲಿಯೇ ಎಚ್ಚರಿಕೆಯ ಸಂದೇಶ ಮುದ್ರಿಸಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬಾಲಕನ ಕೈ ಪರಚಿದ ಚಿರತೆ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಶುಕ್ರವಾರ ಸಫಾರಿಗೆ ತೆರಳಿದ್ದ ಬಾಲಕನೊಬ್ಬನ ಕೈಯನ್ನು ಚಿರತೆಯೊಂದು ಪರಚಿ ಗಾಯಗೊಳಿಸಿದೆ.

ಗಾಯಗೊಂಡ ಬಾಲಕ

12 ವರ್ಷ ಬಾಲಕ ಸಫಾರಿಗೆ ಕುಟುಂಬದೊಂದಿಗೆ ಬಂದಿದ್ದ. ಸಫಾರಿ ವಾಹನದಲ್ಲಿ ತೆರಳುತ್ತಿದ್ದಾಗ ಚಿರತೆಯೊಂದು ವಾಹನದ ಮೆಸ್‌ನೊಳಗೆ ಕಾಲಿಟ್ಟಿದೆ. ಬಾಲಕನ ಕೈ ಸಿಕ್ಕಿದ್ದರಿಂದ ಪರಚಿದೆ. ಇದರಿಂದ ಗಾಯವಾಗಿದ್ದು ಬಾಲಕನಿಗೆ ಕೂಡಲೇ ಪ್ರಥಮ ಚಿಕಿತ್ಸೆ ನೀಡಲಾಯಿತು ಎಂದು ಉದ್ಯಾನದ ಮೂಲಗಳು ತಿಳಿಸಿವೆ.

ಸಫಾರಿ ವಾಹನದಲ್ಲಿ ಎಲ್ಲ ಜಾಲರಿಗಳನ್ನು ಸರಿಯಾಗಿ ಮುಚ್ಚಲು ಅಗತ್ಯ ಕ್ರಮ ವಹಿಸಲಾಗಿದೆ ಎಂದು ಜೈವಿಕ ಉದ್ಯಾನದ ಅಧಿಕಾರಿಗಳು ತಿಳಿಸಿದ್ದಾರೆ.

· 10 am to 8 pm · Open All Days · Master / Visa Card Accepted

INNERWEAR · LEISUREWEAR · ACTIVEWEAR · KIDSWEAR · SOCKS

Venues In Bangalore

Infantry Road: Safina Plaza
Jayanagar: Srinivasa Sagar Kalyan Mahal, 2nd block, (Near Ashoka Pillar)
Banshankari: Sri Hari Kalyana Mantap, 30th Main, B.S.K. 3rd Stage, Near K.I.M.S. Hospital.
JP Nagar, 7th Phase: Shubh Convention, 6th Main, Kothnur Main Road, Opp. Brigade Millenium Road, Puttenahalli.
Bannerghatta: Billava Bhavana, No. 63, Opp. Meenakshi Temple.
R. R Nagar: Vasavi Mahal Kalyana Mantapa, Next To Reliance Digital,Ideal Homes I Phase.
Vijay Nagar: Five O Gallery 17th Cross, M.C. Road, Near Vijay Nagar Bus Stop.
Rajajinagar: Raja Rajeshwari Kalyana Mantapa, Dr. Rajkumar Road, 2nd Block, Next to Blue Hyundai Showroom.
Malleswaram: The Canara Union, No.42, 8th Main, Canara Union Road.
Koramangala: Apoorva International, #35A,Raheja Arcade, Opp Star Box, Bangalore -95
Basavanagudi: Amolak Apparels, 7/3, 1st Floor, Opp Karnataka Bank, Bangaluru 560004

Org. by: Surya Agency Pvt. Ltd.

ಶ್ರಾವಣ ಮಾಸದ ಪ್ರಯುಕ್ತ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ

ಬೆಂಗಳೂರಿನಲ್ಲಿ ಮಹಾ ರುದ್ರಾಕ್ಷ ಭವ್ಯ ಪ್ರದರ್ಶನ ಮತ್ತು ಮಾರಾಟ | ಆ. 10 ರಿಂದ ಆ. 18ರ ವರೆಗೆ ಮಾತ್ರ

ಬೆಂಗಳೂರು: ನಗರದ ಹೊಟೇಲ್ Hotel Le Foliage By TGI, ಮೆಟ್ರೋ ಪಿಲ್ಲರ್ EP-No.08 ಎದುರಿಗೆ, # 51, 46ನೇ ಕ್ರಾಸ್ 8 ಬ್ಲಾಕ್, ಸಿಆರ್ ಲೇಔಟ್, 1ನೇ ಹಂತ, ಜೆ.ಪಿ. ನಗರ, (sangeetha gadgets ಪಕ್ಕದಲ್ಲಿ) ಬೆಂಗಳೂರು, ಆಗಸ್ಟ್ 10 ರಿಂದ 18 ರವರೆಗೆ ಶ್ರಾವಣ ಮಾಸದ ಪ್ರಯುಕ್ತ ಪ್ರದರ್ಶನ ಹಾಗೂ ಮಾರಾಟ, ಈ ಶ್ರಾವಣ ಮಾಸದಲ್ಲಿ ರುದ್ರಾಕ್ಷಿಯನ್ನು ಧರಿಸುವ ಅವಕಾಶವನ್ನು ಕಳೆದುಕೊಳ್ಳಬೇಡಿ.

ಹೈದ್ರಾಬಾದ್ ಮೂಲದ ಇಂಡಸ್-ನೇಪಾಳ ರುದ್ರಾಕ್ಷ ಸಂಸ್ಥೆ ಆಯೋಜಿಸಿರುವ ನೇಪಾಳದ ರುದ್ರಾಕ್ಷಿಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಸಸ್ಯಾಹಾರಿ ಹಾಗೂ ಮಾಂಸಹಾರಿಗಳು ಧರಿಸಬಹುದು. ಮಳಿಗೆಯು ಬೆಳಗ್ಗೆ 10.30 ರಿಂದ ರಾತ್ರಿ 9 ರವರೆಗೆ ತೆರೆದಿರುತ್ತದೆ ಎಂದು ತಿಳಿಸಿದ್ದಾರೆ. ಸಂಪರ್ಕಿಸಿ: **7097296666**

ಕೊನೆಯ 3 ದಿನಗಳು ಮಾತ್ರ

ADVT

ಸಿಂಗಾಪುರ್ – ಹಾಂಗ್ ಕಾಂಗ್‌ನ ಅತಿ ದೊಡ್ಡ ಉಡುಪುಗಳ ಮಾರಾಟ

ಭಾರತದಲ್ಲಿಯೆ ಮೊದಲ ಬಾರಿಗೆ ಬೆಂಗಳೂರಿನ ತಾಜ್ ಯಶವಂತಪುರ – ತುಮಕೂರು ರಸ್ತೆ ಮತ್ತು ರಾಡಿಸನ್ ಬ್ಲೂ – ಮಾರತಹಳ್ಳಿ

ಪ್ರೀಮಿಯಂ ಬ್ರಾಂಡ್‌ನ ಸಂಗ್ರಹ | ನಂಬಲಾಗದ ಬೆಲೆಗಳು

ಬೃಹತ್ ಶ್ರೇಣಿಯ ಆರಂಭಿಕ ಬೆಲೆ ಕೇವಲ ರೂ. 99/-

ಲ್ಯಾಕೋಸ್ಟ್ – ಅರ್ಮಾನಿ ಎಕ್ಸ್‌ಚೇಂಜ್ – ಆಲ್‌ಸೇಂಟ್–ಕಾರ್ಲ್ ಲಾಗರ್‌ಫೀಲ್ಡ್ – ಝ್ಯಾರಾ – ಡೀಸೆಲ್ – ಅಮಿ ಪ್ಯಾರಿಸ್ – ಕೋಚ್

80% ವರೆಗೆ ರಿಯಾಯಿತಿ

ನೇರವಾಗಿ ಸಿಂಗಾಪುರ ಮತ್ತು ಹಾಂಗ್‌ಕಾಂಗ್‌ನಿಂದ

ಟ್ರೆಂಡಿ ಮಹಿಳಾ ಉಡುಪುಗಳು–ಸ್ಮಾರ್ಟ್ ಪುರುಷರ ಉಡುಪು – ಫಾರ್ಮಲ್ ಮತ್ತು ಕ್ಯಾಶುಯಲ್ ಸಂಗ್ರಹಗಳು–ಮಹಿಳೆಯರ ಹ್ಯಾಂಡ್‌ಬ್ಯಾಗ್ ಮತ್ತು ಸುಗಂಧ ದ್ರವ್ಯ – ಅಕ್ಸೆಸರಿಗಳು

ಬ್ರಾಂಡೆಡ್ ಉಡುಪುಗಳು, ಶೂಗಳು ಮತ್ತು ಅಕ್ಸೆಸರಿಗಳು

- ಪುರುಷರ ಪ್ರೀಮಿಯಂ ಜೀನ್ಸ್–ಶರ್ಟ್–ಟಿ–ಶರ್ಟ್–ಟ್ರೌಸರ್ – ಟ್ರ್ಯಾಕ್ – ಲೋವರ್
- ಲೇಡೀಸ್ ಪಾರ್ಟಿ ವೇರ್ ಕುರ್ತಿ – ವೆಸ್ಟರ್ನ್ ಟಾಪ್ – ಟ್ಯೂನಿಕ್ಸ್ – ಜೀನ್ಸ್ – ಕ್ಯಾಪ್ರಿ

ಬ್ರಾಂಡೆಡ್ ಸ್ಪೋರ್ಟ್ಸ್ ಶೂಗಳು – ಲೆದರ್ ಶೂಗಳು – ಸ್ಯಾಂಡಲ್‌ಗಳು – ಚಪ್ಪಲಿಗಳು 80% ವರೆಗೆ ರಿಯಾಯಿತಿ

ಶನಿವಾರ–ಭಾನುವಾರ 16 17 ಆಗಸ್ಟ್–25

ಬೆಳಗ್ಗೆ 10 ರಿಂದ ರಾತ್ರಿ 10 ರವರೆಗೆ

ಉಚಿತ ಪ್ರವೇಶ–ಪಾರ್ಕಿಂಗ್

ಸ್ಥಳ:1 TAJ YESHWANTPUR
ತುಮಕೂರು ರಸ್ತೆ, ಯಶವಂತಪುರ, ಬೆಂಗಳೂರು

ಉಚಿತ ಪ್ರವೇಶ–ಪಾರ್ಕಿಂಗ್

ಸ್ಥಳ:2 Radisson BLU
90 /4, ಹೊರ ವರ್ತುಲ ರಸ್ತೆ, ಮಾರತಹಳ್ಳಿ ಗ್ರಾಮ, ಬೆಂಗಳೂರು

ಕಾರ್ಯಕ್ರಮದಲ್ಲಿ ಎಂ.ಎಸ್‌. ಆಶಾದೇವಿ, ಹಂಪ ನಾಗರಾಜಯ್ಯ, ಪುರುಷೋತ್ತಮ ಬಿಳಿಮಲೆ, ಜೋಗಿ ಮತ್ತು ನಾಗತಿಹಳ್ಳಿ ಚಂದ್ರಶೇಖರ್ ಉಪಸ್ಥಿತರಿದ್ದರು
—ಪ್ರಜಾವಾಣಿ ಚಿತ್ರ

ನಾಗತಿಹಳ್ಳಿ ಗುರುತಿಸದ ಸಾಹಿತ್ಯ ಲೋಕ: ಬಿಳಿಮಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನಪ್ರಿಯ ಸಂಸ್ಕೃತಿಯನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಎಂಬುದನ್ನು ಕನ್ನಡ ವಿಮರ್ಶೆ ತಿಳಿಸದ ಕಾರಣ, ನಾಗತಿಹಳ್ಳಿ ಚಂದ್ರಶೇಖರ ಅವರನ್ನು ಸಾಹಿತ್ಯಲೋಕ ಸರಿಯಾಗಿ ಗುರುತಿಸಿಲ್ಲ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

ವೀರಲೋಕ ಮತ್ತು ಅಭಿವ್ಯಕ್ತಿ ಸಂಸ್ಥೆ ಜಂಟಿಯಾಗಿ ಶುಕ್ರವಾರ ಹಮ್ಮಿಕೊಂಡಿದ್ದ 'ನಾಗತಿಹಳ್ಳಿ ಚಂದ್ರಶೇಖರ ಅಕ್ಷರ ಮೀಮಾಂಸೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನವ್ಯದವರು ಜನಪ್ರಿಯ ಸಂಸ್ಕೃತಿಯನ್ನು ಕಳಪೆಯೆಂದು ಹೇಳಿಕೊಂಡು ಬಂದರು. ಕೆ.ಎಸ್.ನರಸಿಂಹಸ್ವಾಮಿ ಅವರನ್ನೂ ತಮಾಷೆ ಮಾಡಿದ್ದರು. ಜನಪ್ರಿಯ ಸಂಸ್ಕೃತಿಗೆ ನರಸಿಂಹಸ್ವಾಮಿ ಅವರ ಕೊಡುಗೆ ದೊಡ್ಡದು. ಅವರ ಜತೆಗೆ ನಾಗತಿಹಳ್ಳಿಯಂತಹವರು ಸಾಮಾಜಿಕ ಚಿಂತನಾ ಕ್ರಮವನ್ನು ದೊಡ್ಡಮಟ್ಟದಲ್ಲಿ ರೂಪಿಸಿದ್ದಾರೆ' ಎಂದರು.

ಕನ್ನಡಪ್ರಭ ಪುರವಣಿ ಸಂಪಾದಕ ಜೋಗಿ (ಗಿರೀಶ್ ರಾವ್ ಹತ್ವಾರ್), 'ನಾಗತಿಹಳ್ಳಿ ಚಂದ್ರಶೇಖರ ಅವರು ಪ್ರತಿಯೊಂದು ಕಥೆಯನ್ನು ಆಕರ್ಷಕ ಮತ್ತು ರೋಚಕವಾಗಿ ಬರೆಯುತ್ತಾರೆ. ಗ್ರಾಮೀಣ ಪ್ರದೇಶದ ಕೀಳರಿಮೆ ಮೀರಿ, ಸಾಧಿಸಲು ಸಾಧ್ಯ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ' ಎಂದು ಶ್ಲಾಘಿಸಿದರು.

ವೀರಲೋಕ ಪುಸ್ತಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ್, 'ಕನ್ನಡ ಸಾಹಿತ್ಯ ಲೋಕದಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ಅವರಿಗೆ ಸಿಗಬೇಕಾದ ಮನ್ನಣೆ ಸಿಗದಿರುವುದು ಬೇಸರದ ಸಂಗತಿ' ಎಂದು ತಿಳಿಸಿದರು. ವಿಮರ್ಶಕಿ ಎಂ.ಎಸ್‌. ಆಶಾದೇವಿ, ಸಾಹಿತಿ ಹಂಪ ನಾಗರಾಜಯ್ಯ, ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ ಉಪಸ್ಥಿತರಿದ್ದರು.

'ಆನೇಕಲ್‌ನಲ್ಲಿ ಅಂತರರಾಷ್ಟ್ರೀಯ ಕ್ರೀಡಾಂಗಣ'

ಆನೇಕಲ್: ತಾಲ್ಲೂಕಿನಲ್ಲಿ ಅಂತರ-ರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣ ಸೇರಿ ಹಲವು ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿವೆ. ಅತ್ತಿಬೆಲೆವರೆಗೆ ಮೆಟ್ರೊ ವಿಸ್ತರಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ಶಾಸಕ ಬಿ.ಶಿವಣ್ಣ ತಿಳಿಸಿದರು.

ಪಟ್ಟಣದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾತನಾಡಿದ ಅವರು, ₹1,650 ಕೋಟಿ ವೆಚ್ಚದ ಕ್ರೀಡಾಂಗಣ ನಿರ್ಮಾಣಕ್ಕೆ ಸರ್ಕಾರ ಅನುಮತಿ ನೀಡಿದೆ. ಶೀಘ್ರದಲ್ಲಿ ಭೂಮಿ ಪೂಜೆ ನೆರವೇರಲಿದೆ ಎಂದರು.

ಉಪರಾಷ್ಟ್ರಪತಿ ಚುನಾವಣೆ: ಬಿಜೆಪಿ ಸಭೆ ನಾಳೆ

ನವದೆಹಲಿ (ಪಿಟಿಐ): ಉಪ ರಾಷ್ಟ್ರಪತಿ ಚುನಾವಣೆಗೆ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯನ್ನು ಅಂತಿಮಗೊಳಿಸುವ ಸಂಬಂಧ ಬಿಜೆಪಿ ಸಂಸದೀಯ ಮಂಡಳಿ ಭಾನುವಾರ ಸಭೆ ಸೇರುವ ಸಾಧ್ಯತೆ ಇದೆ. ಬಿಜೆಪಿ ಮತ್ತು ಎನ್‌ಡಿಎ ಮೈತ್ರಿ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು ಸಭೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆಗಳಿವೆ.

ಜಗದೀಪ್ ಧನಕರ್ ಅವರ ರಾಜೀನಾಮೆಯಿಂದ ಉಪರಾಷ್ಟ್ರಪತಿ ಸ್ಥಾನ ತೆರವಾಗಿದ್ದು, ಸೆಪ್ಟೆಂಬರ್ 9ರಂದು ಚುನಾವಣೆ ನಿಗದಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಎನ್‌ಡಿಎ ಅಭ್ಯರ್ಥಿ ಆಯ್ಕೆ ಮಾಡುವ ಅಧಿಕಾರ ನೀಡಲಾಗಿದೆ.

ಮುಂಬೈನಲ್ಲಿ 5ರಂದು ಬಂಧನಕ್ಕೆ ಒಳಗಾಗಿದ್ದ ಗರ್ಭಿಣಿ

ಆಸ್ಪತ್ರೆಯಿಂದ ಬಾಂಗ್ಲಾದೇಶ ಮಹಿಳೆ ಪರಾರಿ

ಮುಂಬೈ (ಪಿಟಿಐ): 'ಭಾರತದಲ್ಲಿ ಅಕ್ರಮವಾಗಿ ನೆಲಸಿದ್ದ ಆರೋಪದಡಿ ಬಂಧನಕ್ಕೊಳಗಾಗಿದ್ದ, ಬಾಂಗ್ಲಾದೇಶದ ರುಬಿನಾ ಇರ್ಷದ್ ಶೇಖ್ (21) ಎಂಬ ಮಹಿಳೆ, ವೈದ್ಯಕೀಯ ಚಿಕಿತ್ಸೆಗಾಗಿ ಜೆಜೆ ಆಸ್ಪತ್ರೆಗೆ ಕರೆತಂದಾಗ ತಪ್ಪಿಸಿಕೊಂಡಿದ್ದಾಳೆ' ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

'ಐದು ತಿಂಗಳ ಗರ್ಭಿಣಿಯಾಗಿದ್ದ ರುಬಿನಾ ಆಸ್ಪತ್ರೆಯಲ್ಲಿ ಗುರುವಾರ ಕಾನ್‌ಸ್ಟೆಬಲ್ ಅವರನ್ನು ತಳ್ಳಿ ಪರಾರಿಯಾಗಿದ್ದಾಳೆ' ಎಂದು ತಿಳಿಸಿದ್ದಾರೆ.

ಆಕೆಯನ್ನು ನವಿ ಮುಂಬೈನಲ್ಲಿ ಆಗಸ್ಟ್ 5ರಂದು ಬಂಧಿಸಿ, ಬೈಕುಲ್ಲಾ ಮಹಿಳಾ ಕಾರಾಗೃಹದಲ್ಲಿ ಇರಿಸಲಾಗಿತ್ತು. ಜ್ವರ, ಚರ್ಮದ ಸೋಂಕು ಸೇರಿದಂತೆ ವಿವಿಧ ಕಾಯಿಲೆಗಳ ಚಿಕಿತ್ಸೆಗಾಗಿ ಆಕೆಯನ್ನು ಜೆಜೆ ಆಸ್ಪತ್ರೆಗೆ ಕರೆತರಲಾಗಿತ್ತು.

ರುಬಿನಾ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯಡಿ ಪ್ರಕರಣ ದಾಖಲಿಸಲಾಗಿದೆ. ಆಕೆ ವಿರುದ್ಧ ಈಗಾಗಲೇ ಪಾಸ್‌ಪೋರ್ಟ್ ಕಾಯ್ದೆ ಹಾಗೂ ವಿದೇಶಿಯರ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಆಕೆಯನ್ನು ಪತ್ತೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ
ಶನಿವಾರ
ಆಗಸ್ಟ್ 16, 2025

ಭೂಮಿಕಾ

ಮಹಿಳೆಯರ ಆಪ್ತ ಸಂಗಾತಿ

ಈಗಿನ ರಾಧೆ ಪ್ರೇಮಿಸುವುದು ಸಹ ತನ್ನ ವ್ಯಕ್ತಿತ್ವ ವೃದ್ಧಿಗೆ ಸಹಕರಿಸುವ ಕೃಷ್ಣನನ್ನು ಮಾತ್ರ

ಕೇಳು ರಾಧೆ... ಇಂದಿನ ಪ್ರೇಮದ ಪರಿಯ

ರಾಧಾ–ಕೃಷ್ಣ ಅಮರಪ್ರೇಮದ ಸಂಕೇತ. ಆದರೆ ಅನುಗಾಲವೂ ಜೀವಜೀವದ ನಂಟನ್ನು ಬೆಸೆಯುತ್ತಲೇ ಬಂದಿರುವ ಪ್ರೀತಿಯೂ ಕಾಲನ ಮಹಿಮೆಗೆ ಸಿಲುಕಿದೆಯೇ? ಮೋಹನ ಮುರಳಿಗೆ ಮನಸೋತು, ಆ ಸಮರ್ಪಣೆಯಲ್ಲೇ ತನ್ನಿರವನ್ನು ಕಂಡುಕೊಂಡ ಅಂದಿನ ರಾಧೆಗೂ ಸಂಗಾತಿಯ ಸಂಪ್ರೀತಿಯ ಒಡಲಲ್ಲೂ ತನ್ನ ಅಸ್ಮಿತೆಗಾಗಿ ಹಂಬಲಿಸುವ ಇಂದಿನ ರಾಧೆಗೂ ಒಲಿದದ್ದು ಪ್ರೇಮವೇ ಹೌದಾದರೂ ಅದರ ವ್ಯಾಖ್ಯೆ ಮಾತ್ರ ಬದಲಾದಂತೆ ಕಾಣುತ್ತಿರುವುದೇಕೆ?

• ರಂಜನಿ ರಾಘವನ್

ಪ್ರೀತಿ– ಪ್ರೇಮದ ಬಗ್ಗೆ ಬಂದಿರುವ ಕಥೆ, ಕವಿತೆ, ಲೇಖನಗಳಿಗೆ ಲೆಕ್ಕವಿಲ್ಲ. ಆದರೆ ನಾನು ನನ್ನ ಕಾಲದ, ನಾನು ನಂಬುವ ಪ್ರೀತಿಯ ಬಗ್ಗೆ ಅಷ್ಟೇ ಪ್ರೀತಿಯಿಂದ ಪ್ರತಿಪಾದಿಸಬಲ್ಲೆ.

ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಗೆ ಹೆಚ್ಚು ಒತ್ತುಕೊಡುವ ಈಗಿನ ನವಪೀಳಿಗೆಯಲ್ಲಿ 'ನಾನು ಸ್ವತಂತ್ರವಾಗಿ ಬದುಕಬಲ್ಲೆ; ಹೀಗಿರುವಾಗ, ಲವ್, ರಿಲೇಷನ್‌ಷಿಪ್, ಕಮಿಟ್‌ಮೆಂಟ್, ಖರ್ಚು, ನೋವು ಇವೆಲ್ಲವುಗಳ ಹಂಗೇಕೆ' ಅನ್ನುವ ಮನೋಭಾವ ಹೆಚ್ಚಾಗುತ್ತಿದೆ. ಇದೆಲ್ಲದರ ಹೊರತಾಗಿ ನಿಜವಾಗಿಯೂ ನಾವು ಪ್ರೀತಿಸಿದಾಗ, ನಮ್ಮ ವ್ಯಕ್ತಿತ್ವವನ್ನು ನಾವು ಅರಿತುಕೊಳ್ಳಬಲ್ಲೆವು. ಅದೇ ರೀತಿ, ನಿಜವಾಗಿಯೂ ನಾವು ಪ್ರೀತಿಸಲ್ಪಟ್ಟಾಗ, ನಮ್ಮ ಸಾಮರ್ಥ್ಯದ ಅರಿವು ನಮಗಾಗುತ್ತದೆ.

ಪ್ರೀತಿಯು ಒಂದು ಯೂನಿವರ್ಸಲ್ ಭಾವನೆ. ಅದರ ಅಭಿವ್ಯಕ್ತಿ ಮತ್ತು ತಿಳಿವಳಿಕೆಯು ಕಾಲಕಾಲಕ್ಕೆ ಗಮನಾರ್ಹವಾಗಿ ವಿಕಸನಗೊಂಡಿವೆ. ಜಗತ್ತು ಎಷ್ಟೇ ಮುಂದುವರಿದರೂ ನಮ್ಮ ರಾಧಾ–ಕೃಷ್ಣರ ಪ್ರೇಮಕಥೆಯು ಪ್ರೇಮಕ್ಕೆ ಎಂದೆಂದಿಗೂ ಒಂದು ಉಪಮೆಯಾಗಿ ನಿಲ್ಲುತ್ತದೆ. ಏಕೆಂದರೆ, ಅವರ ಪ್ರೀತಿಯು ದೈವಿಕ ಒಗ್ಗೂಡುವಿಕೆಯ ಕಥೆ. ಅದು, ದೈಹಿಕ ಗಡಿಗಳನ್ನು ಮತ್ತು ಸಾಮಾಜಿಕ ಸಂಕೋಲೆಗಳನ್ನು ಮೀರಿದ ಆಧ್ಯಾತ್ಮಿಕ ಬಂಧ. ಅವರ ಪ್ರೀತಿಯು ಮೆಟೀರಿಯಲಿಸ್ಟಿಕ್ ಅಥವಾ ವೈಯಕ್ತಿಕ ಲಾಭವನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಸೃಷ್ಟಿಯಾದದ್ದೂ ಅಲ್ಲ. ಅದು ನಿಸ್ವಾರ್ಥವಾದ ಭಕ್ತಿ, ಸಂಪೂರ್ಣವಾದ ಸಮರ್ಪಣೆ. ಪರಸ್ಪರರ ಸಂತೋಷ ಮತ್ತು ಆಧ್ಯಾತ್ಮಿಕ ಬೆಳವಣಿಗೆಯೆಡೆಗೆ ಇದ್ದ ಅಚಲವಾದ ಬದ್ಧತೆಯೇ ಅಲ್ಲಿ ಪ್ರೇಮಕ್ಕೆ ಬುನಾದಿಯಾಗಿದೆ.

ಕೃಷ್ಣನ ಮೇಲಿನ ರಾಧೆಯ ಪ್ರೀತಿಯು 'ಭಕ್ತಿ'ಯ ಸಂಕೇತವೂ ಹೌದು. ಅವಳು ಅವನನ್ನು ಒಬ್ಬ ದೈವಿಕ ವ್ಯಕ್ತಿಯಾಗಿ ಪ್ರೀತಿಸಿದಳು ಮತ್ತು ಆ ಪ್ರೀತಿಯು ಆಧ್ಯಾತ್ಮಿಕ ಜ್ಞಾನೋದಯವನ್ನು ಪಡೆಯುವ ಸಾಧನವಾಗಿತ್ತು. ಕೃಷ್ಣನೂ ರಾಧೆಯನ್ನು ಅಷ್ಟೇ ತೀವ್ರತೆಯಿಂದ ಪ್ರೀತಿಸಿದ. ಅವಳೊಂದಿಗಿನ ಅವನ ಪ್ರೇಮವು ಆತ್ಮಗಳ ಮಿಲನವನ್ನು ಸಂಕೇತಿಸುತ್ತದೆ. ಅವರ ವಿಭಜನೆ ಕೂಡ ವಿಫಲ ಸಂಬಂಧದ ಸಂಕೇತವಾಗಲಿಲ್ಲ, ಅಚಲ ನಂಬಿಕೆಯ ಪರೀಕ್ಷೆಯಾಗಿದೆ ಮತ್ತು ಅವರ ನಡುವಿನ ಗಹನವಾದ ಆಧ್ಯಾತ್ಮಿಕ ಸಂಪರ್ಕಕ್ಕೆ ಒಂದು ಸಾಕ್ಷಿಯಾಗಿದೆ. ಇದು ಪ್ರೀತಿಯ ವಿಚಾರದಲ್ಲಿ ಇಂದಿನ ಆಧುನಿಕ ಸಂಬಂಧಗಳಿಗೆ ಆಳವಾದ ದೃಷ್ಟಿಕೋನವೊಂದನ್ನು ಒದಗಿಸುತ್ತದೆ.



ಇಂದಿನ ಕಾಲಘಟ್ಟದಲ್ಲಿ ಪ್ರೀತಿಯನ್ನು ಸಾಮಾನ್ಯವಾಗಿ ಒಂದು ವ್ಯಾವಹಾರಿಕ ಸಂಬಂಧವೆಂದು ಚಿತ್ರಿಸಲಾಗುತ್ತಿದೆ. ಇದು ಪರಸ್ಪರ ಪ್ರಯೋಜನಗಳು, ದೈಹಿಕ ಆಕರ್ಷಣೆ ಮತ್ತು ಒಬ್ಬ ಸಂಗಾತಿಯು ಹೊಂದಿರಬೇಕಾದ ಸದ್ಗುಣಗಳ ಚೆಕ್‌ಲಿಸ್ಟನ್ನು ಆಧರಿಸಿರುತ್ತದೆ. ಹೀಗಾಗಿ, 'ಆತ್ಮಸಂಗಾತಿ' ಎಂಬ ಪರಿಕಲ್ಪನೆಯು ನಮ್ಮನ್ನು ಪೂರ್ಣಗೊಳಿಸಬಲ್ಲ, ನಮ್ಮ ಜೀವನದ ಕೊರತೆಗಳನ್ನು ನೀಗಿಸಬಲ್ಲ ಒಬ್ಬ ವ್ಯಕ್ತಿಗಾಗಿ ನಾವು ನಡೆಸುವ ಹುಡುಕಾಟವಾಗುತ್ತಿದೆ. ಈ ರೀತಿಯ ಸಂಬಂಧಗಳಲ್ಲಿ 'ಇದು ನನ್ನ ಹಕ್ಕು' ಅನ್ನುವ ಭಾವನೆ ಬಂದಾಗ ಅಥವಾ ಸವಾಲುಗಳು ಎದುರಾದ ಸಂದರ್ಭಗಳಲ್ಲಿ ಇದು ತಾಳ್ಮೆಯ ಕೊರತೆಗೆ ಕಾರಣವಾಗಬಹುದು. ಸಾಮಾಜಿಕ ಮಾಧ್ಯಮಗಳು ತಮ್ಮ ಹೈಲೈಟ್ ರೀಲ್ಸ್‌ಗಳೊಂದಿಗೆ, ಪ್ರೀತಿಯ ಈ ವಹಿವಾಟಿನ ದೃಷ್ಟಿಕೋನವನ್ನು ಇನ್ನಷ್ಟು ಹೆಚ್ಚಿಸುತ್ತವೆ. ಇಲ್ಲಿ ಸಂಬಂಧಗಳನ್ನು ಅವುಗಳ ಆಂತರಿಕ ಶಕ್ತಿ ಮತ್ತು ಆಧ್ಯಾತ್ಮಿಕ ಆಳಕ್ಕಿಂತ ಹೆಚ್ಚಾಗಿ ಅವುಗಳ ಬಾಹ್ಯನೋಟ ಮತ್ತು ಸಾರ್ವಜನಿಕ ಪ್ರೀತಿಯ ಪ್ರದರ್ಶನದಿಂದ ನಿರ್ಣಯಿಸಲಾಗುತ್ತದೆ.

> ನಿಜವಾದ ಪ್ರೀತಿಯೆಂದರೆ ಪರಿಪೂರ್ಣ ಸಂಗಾತಿಯನ್ನು ಕಂಡುಹಿಡಿಯುವುದಲ್ಲ; ಬದಲಿಗೆ, ಅಪೂರ್ಣ ವ್ಯಕ್ತಿಯನ್ನು ಸಂಪೂರ್ಣವಾಗಿ ಪ್ರೀತಿಸುವುದು

ನಿಜವಾದ ಪ್ರೀತಿ ಎಂದರೆ ಪರಿಪೂರ್ಣ ಸಂಗಾತಿಯನ್ನು ಕಂಡುಹಿಡಿಯುವುದಲ್ಲ; ಆದರೆ ಅಪೂರ್ಣ ವ್ಯಕ್ತಿಯನ್ನು ಸಂಪೂರ್ಣವಾಗಿ ಪ್ರೀತಿಸುವುದು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ನಾವಿಂದು ನಮ್ಮ ಸಂಗಾತಿಯ ದೌರ್ಬಲ್ಯಗಳನ್ನು ಸ್ವೀಕರಿಸುವುದನ್ನು, ತಪ್ಪುಗಳನ್ನು ಕ್ಷಮಿಸುವುದನ್ನು ರೂಢಿಸಿಕೊಳ್ಳುವುದು ಮುಖ್ಯ.

ಸಕಾರಾತ್ಮಕವಾಗಿ ನೋಡುವುದಾದರೆ, ರಾಧಾ–ಕೃಷ್ಣರ ಪ್ರೇಮವು ದೈವಿಕ ಆದರ್ಶದ ಮಾದರಿಯಂತೆ ಕಂಡುಬಂದರೆ, ಆಧುನಿಕ ಪ್ರೇಮಕ್ಕೆ ತನ್ನದೇ ಆದ ವಿಶಿಷ್ಟ ಸೌಂದರ್ಯ ಮತ್ತು ಶಕ್ತಿ ಇದೆ. ವೈಯಕ್ತಿಕ ಮಹತ್ವಾಕಾಂಕ್ಷೆ ಮತ್ತು ಆತ್ಮಶೋಧನೆಗೆ ಪ್ರಾಮುಖ್ಯ ನೀಡುವ ಇಂದಿನ ಜಗತ್ತಿನಲ್ಲಿ, ಸಂಗಾತಿಗಳು ಒಟ್ಟಾಗಿ ನಡೆಯಲು ತಮ್ಮದೇ ಆದ ವೈಯಕ್ತಿಕ ಹೆಜ್ಜೆ ಗುರುತನ್ನು ಕಾಯ್ದುಕೊಳ್ಳುವುದಷ್ಟೇ ಅಲ್ಲ, ಪರಸ್ಪರ ಬೆಂಬಲಿಸುವುದನ್ನೂ ಆದ್ಯತೆ ಆಗಿಸಿಕೊಳ್ಳುತ್ತಾರೆ. ಈ ಕಾಲದ ರಾಧೆಗೆ ತನ್ನದೇ ಆದ ಗುರಿ, ಮಹತ್ವಾಕಾಂಕ್ಷೆಗಳಿವೆ. ಆಕೆ ಹೊರ ಜಗತ್ತಿನಲ್ಲಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಲು, ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಬಯಸುತ್ತಾಳೆ. ಅದಕ್ಕೆ ಸಹಕಾರ ಕೊಡುವ ಕೃಷ್ಣನನ್ನು ಮಾತ್ರ ಅವಳು ಪ್ರೇಮಿಸಲು ಸಾಧ್ಯ.

ಪ್ರೀತಿ ಮತ್ತು ಸ್ವಂತಿಕೆಯ ನಡುವಿನ ಸಮತೋಲನವು ಇಂದಿನ ಪ್ರೇಮದಲ್ಲಿ ಒಂದು ನಿರ್ಣಾಯಕವಾದ ಅಂಶವಾಗಿದೆ. ಇಲ್ಲಿ ಪ್ರೀತಿಯು ಒಟ್ಟಾಗಿ ಬೆಳೆಯುವುದರ ಜೊತೆಗೆ, ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ 'ಸ್ಪೇಸ್' ಅನ್ನು, ತನ್ನದೇ ಆದ ಆಸಕ್ತಿಗಳನ್ನು ಮತ್ತು ವೈಯಕ್ತಿಕ ಬೆಳವಣಿಗೆಯ ಸಮಯವನ್ನು ಹೊಂದಿರುವುದು ಅವಶ್ಯಕ. ಆದರೆ ಈ 'ಸ್ಪೇಸ್' ನೀಡಿದ ಮಾತ್ರಕ್ಕೆ ಪ್ರೀತಿಯಲ್ಲಿ ಕೊರತೆಯಾಗಿದೆ ಎಂದರ್ಥವಲ್ಲ, ಬದಲಾಗಿ ವ್ಯಕ್ತಿತ್ವಕ್ಕೆ ಪರಸ್ಪರ ಗೌರವ ಕೊಡುವುದನ್ನು ಇದು ತೋರಿಸುತ್ತದೆ. ಇಂತಹ ಭಾವನೆಯು ಆರೋಗ್ಯಕರ ಸಂಬಂಧಕ್ಕೆ ಆಮ್ಲಜನಕವಿದ್ದಂತೆ. ಅದು ಪ್ರೀತಿಯೆಂಬ ಹೂ ಬಿಡಲು ಮತ್ತು ದೀರ್ಘಕಾಲ ಉಳಿಯಲು ಸಹಾಯ ಮಾಡುತ್ತದೆ. ಇಂತಹ ಪ್ರೀತಿಯು ಒಡೆತನದ ಭಾವನೆಯನ್ನು ಧಿಕ್ಕರಿಸಿ ಸಂಪೂರ್ಣವಾದ ನಂಬಿಕೆಯನ್ನು ಆಧರಿಸಿರುತ್ತದೆ.

ಪ್ರೇಮವು ಪ್ರತಿದಿನವೂ ಮಾಡುವ ಒಂದು ಪ್ರಜ್ಞಾಪೂರ್ವಕ ಆಯ್ಕೆ. ಅದು ಒಟ್ಟಾಗಿ ಜೀವನವನ್ನು ಕಟ್ಟಿಕೊಳ್ಳುವುದು, ಒಂದು ಟೀಮ್ ಆಗಿ ಸವಾಲುಗಳನ್ನು ಎದುರಿಸುವುದು ಮತ್ತು ಒಬ್ಬರ ಯಶಸ್ಸನ್ನು ಇನ್ನೊಬ್ಬರು ಸಂಭ್ರಮಿಸುವುದು. ಇಂದಿನ ಕಪಲ್‌ಗಳು ತಮ್ಮ ಸಂಬಂಧವನ್ನು ಒಂದು ಸಹಭಾಗಿತ್ವವೆಂದು ಪರಿಗಣಿಸುತ್ತಾರೆ, ಅಲ್ಲಿ ಇಬ್ಬರೂ ಭಾವನಾತ್ಮಕವಾಗಿ, ಆರ್ಥಿಕವಾಗಿ ಅಥವಾ ದೈನಂದಿನ ಜೀವನದಲ್ಲಿ ಸಮಾನವಾಗಿ ಕೊಡುಗೆ ನೀಡುತ್ತಾರೆ. ಆಧುನಿಕ ಪ್ರೇಮದ ಈ ಆದರ್ಶವು ರಾಧಾ ಮತ್ತು ಕೃಷ್ಣನ ನಿಸ್ವಾರ್ಥ ಭಕ್ತಿಗಿಂತ ಭಿನ್ನವಾಗಿದ್ದರೂ ಅಷ್ಟೇ ಸುಂದರವಾಗಿದೆ. ಇದು ಮಾನವ ಸಂಬಂಧದ ಶಕ್ತಿಗೆ ಸಾಕ್ಷಿಯಾಗಿದೆ. ಇಲ್ಲಿ ಇಬ್ಬರು ವ್ಯಕ್ತಿಗಳು ಒಬ್ಬರನ್ನೊಬ್ಬರು ಪೂರ್ಣಗೊಳಿಸುವ ಬದಲಿಗೆ ಒಬ್ಬರ ಜೀವನವನ್ನು ಇನ್ನೊಬ್ಬರು ಸಮೃದ್ಧಗೊಳಿಸಲು ಒಗ್ಗೂಡುತ್ತಾರೆ. ಸಮಾನತೆ, ಸಂವಹನ ಮತ್ತು ಒಟ್ಟಾಗಿ ಭವಿಷ್ಯವನ್ನು ಕಟ್ಟುವ ಸಂತೋಷದಲ್ಲಿ ಈ ಪ್ರೇಮವು ತನ್ನ ಶಕ್ತಿಯನ್ನು ಕಂಡುಕೊಳ್ಳುತ್ತದೆ. ಹಾಗಾಗಿಯೇ ಪ್ರೇಮವು ಸರ್ವವ್ಯಾಪಿ ಮಾತ್ರವಲ್ಲ ಸಾರ್ವಕಾಲಿಕವಾದ ಸತ್ಯವೂ ಆಗಿದೆ.

ಲೇಖಕಿ: ಚಿತ್ರನಟಿ, ನಿರ್ದೇಶಕಿ

ತಿಂಡಿಪ್ರಿಯನಿಗೆ ತರಹೇವಾರಿ ನೈವೇದ್ಯ

ವಿಷ್ಣುವಿನ ಎಂಟನೇ ಅವತಾರವಾದ ಕೃಷ್ಣನ ಜನ್ಮಾಷ್ಟಮಿಯ ಸಂಭ್ರಮ ಎಲ್ಲೆಲ್ಲೂ ಕಳೆಗಟ್ಟಿದೆ. ಹಿಂದೆಲ್ಲ ಕೆಲವು ಸಮುದಾಯಗಳಿಗಷ್ಟೇ ಸೀಮಿತವಾಗಿದ್ದ ಗೋಕುಲಾಷ್ಟಮಿ ಇಂದು ಸರ್ವರಿಗೂ ಪ್ರಿಯವಾದ ಹಬ್ಬವಾಗಿದೆ. ಅಷ್ಟಮಿಯ ದಿನ ಎಲ್ಲರ ಮನೆ–ಮನಗಳಲ್ಲೂ ಬಾಲಕೃಷ್ಣರ ರಂಗು, ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸುತ್ತದೆ. ತಮ್ಮ ಕಂದಮ್ಮನಿಗೆ ಕೃಷ್ಣವೇಷ ತೊಡಿಸಿ 'ಗೋಪಾಲಕ'ನ ಅಂದವನ್ನು ಕಣ್ತುಂಬಿಕೊಳ್ಳುವ ಪಾಲಕರು, ಮೊಬೈಲ್‌ನಲ್ಲಿ ಆ ದೃಶ್ಯಗಳನ್ನು ಸೆರೆಹಿಡಿದು ಸಂಭ್ರಮಿಸುತ್ತಾರೆ.

ಪ್ರೀತಿ, ಸಹಾನುಭೂತಿ, ಜ್ಞಾನದ ಸಂಕೇತವಾಗಿರುವ ಮುರಾರಿಯು ತಿಂಡಿಪ್ರಿಯನೂ ಹೌದು. ಭಾದ್ರಪದ (ಶ್ರಾವಣ) ಮಾಸದ ಕತ್ತಲೆಯ ಹದಿನೈದು ದಿನಗಳಲ್ಲಿ ಬರುವ (ಕೃಷ್ಣಪಕ್ಷ) ಎಂಟನೇ ದಿನ ರೋಹಿಣಿ ನಕ್ಷತ್ರದಲ್ಲಿ ಕೃಷ್ಣನ ಜನನವಾಗುತ್ತದೆ. ಆ ದಿನದಂದು ಜನ್ಮಾಷ್ಟಮಿಯನ್ನು ಎಲ್ಲೆಡೆ ಆಚರಿಸಲಾಗುತ್ತದೆ. ಸಂಪ್ರದಾಯಬದ್ಧವಾಗಿ ಹಬ್ಬವನ್ನು ಆಚರಿಸುವ ಕುಟುಂಬಗಳಲ್ಲಿ ತರಹೇವಾರಿ ಭಕ್ಷ್ಯಗಳನ್ನು ತಯಾರಿಸಿ ನೈವೇದ್ಯಕ್ಕೆ ಇಡಲಾಗುತ್ತದೆ. ಮಾಧವನಿಗೆ ಅನ್ನ, ಈರುಳ್ಳಿ, ಬೆಳ್ಳುಳ್ಳಿ ವರ್ಜ್ಯ. ಅವಲಕ್ಕಿ, ಬೆಣ್ಣೆ, ಬೆಲ್ಲ ಎಂದರೆ ಅಚ್ಚುಮೆಚ್ಚು. ಅಂದು ತಯಾರಿಸುವ ಬಹುತೇಕ ಖಾದ್ಯಗಳಲ್ಲಿ ಅವಲಕ್ಕಿ, ಬೆಣ್ಣೆ ಸಮ್ಮಿಳಿತಗೊಂಡಿರುತ್ತವೆ. ವಾಸುದೇವನಿಗೆ ಪ್ರಿಯವಾದ ಸಿಹಿ, ಖಾರ, ಕುರುಕಲು ತಿಂಡಿಗಳು ಮನೆ–ಮನೆಗಳಲ್ಲಿ ತಯಾರಾಗುತ್ತವೆ. ನೈವೇದ್ಯಕ್ಕೆ ಏನಿಲ್ಲವೆಂದರೂ ಅವಲಕ್ಕಿ, ಬೆಣ್ಣೆ, ಬೆಲ್ಲದ ಹಾಜರಿ ಇದ್ದೇ ಇರುತ್ತದೆ.

'ಅನಾದಿ ಕಾಲದಿಂದಲೂ ಕೃಷ್ಣಜನ್ಮಾಷ್ಟಮಿ ಆಚರಣೆಯಲ್ಲಿದ್ದು, ಆತನಿಗೆ ಪ್ರಿಯವಾದ 60 ಬಗೆಯ ತಿನಿಸುಗಳನ್ನು ನಮ್ಮ ಅಜ್ಜಿ, ಅಮ್ಮ ತಯಾರಿಸುತ್ತಿದ್ದರು' ಎಂದು ನೆನಪಿಸಿಕೊಳ್ಳುತ್ತಾರೆ ಬೆಂಗಳೂರಿನಲ್ಲಿ ಕೇಟರಿಂಗ್ ನಡೆಸುವ ರೂಪಾ ಚಕ್ರಪಾಣಿ. ಜನ್ಮಾಷ್ಟಮಿಯ ದಿನಗಳಲ್ಲಿ ಸಾಂಪ್ರದಾಯಿಕ ತಿನಿಸುಗಳನ್ನು ಮಾಡಿ ಮಾರಾಟ ಮಾಡುವ ಅವರು, ಒಂದೂವರೆ ತಿಂಗಳ ಮುಂಚಿತವಾಗಿಯೇ ಖಾದ್ಯಗಳ ತಯಾರಿಯಲ್ಲಿ ತೊಡಗುತ್ತಾರೆ.

'ಪ್ರತಿ ತಿಂಡಿಯನ್ನೂ ಮಡಿ, ಶುಚಿಯಿಂದಲೇ ಮಾಡಬೇಕು. ಅದಕ್ಕಾಗಿ ಶ್ರಮ, ಸಮಯ ತುಸು ಹೆಚ್ಚೇ ಬೇಕು. ಕೃಷ್ಣನಿಗಾಗಿ ಅಜ್ಜಿ, ಅಮ್ಮ ಮಾಡುತ್ತಿದ್ದಷ್ಟು ತಿನಿಸುಗಳನ್ನು ಈಗ ಮಾಡಲಾಗದಿದ್ದರೂ ಒಂದಷ್ಟು ರೂಢಿಸಿಕೊಂಡಿರುವೆ. ಇಂದಿನ ಒತ್ತಡದ ಬದುಕಿನಲ್ಲಿ ಬಹುತೇಕರಿಗೆ ತಾವೇ ತಯಾರಿಸುವಷ್ಟು ಸಮಯ ಇರುವುದಿಲ್ಲ. ಹಾಗಾಗಿ, ರೆಡಿಮೇಡ್ ತಿಂಡಿಗಳಿಗೆ ಹೆಚ್ಚು ಬೇಡಿಕೆ ಇದೆ. ಏನೇ ಆದರೂ ಅಂದಿನ ಬಹುತೇಕ ಖಾದ್ಯಗಳು ಇಂದು ತೆರೆಮರೆಗೆ ಸರಿದಿವೆ' ಎನ್ನುತ್ತಾ ಅಕ್ಕಿ ಹುರಿಯುವುದರಲ್ಲಿ ತಲ್ಲೀನರಾದರು ರೂಪಾ ಚಕ್ರಪಾಣಿ.

ಸುಮಾ ಬಿ.

ಮಾಡಿ ಸವಿಯಿರಿ ಮಾವುಂಡೆ

ಅಯ್ಯಂಗಾರ್ ಸಮುದಾಯದವರ ಸಾಂಪ್ರದಾಯಿಕ ಖಾದ್ಯಗಳಲ್ಲಿ ಮಾವುಂಡೆ ಸಹ ಒಂದು. ಇದರೊಂದಿಗೆ ಕಲ್ಮಾವುಂಡೆ ಕೂಡ ಜನಪ್ರಿಯ. ಬೆಲ್ಲದ ಗಟ್ಟಿ ಪಾಕದಲ್ಲಿ ತಯಾರಿಸುವ ಕಲ್ಮಾವುಂಡೆ ಸುಲಭಕ್ಕೆ ಚೂರಾಗದು. ಕಲ್ಲಿನಂತೆ ಗಟ್ಟಿಯಾದ, ತಿನ್ನಲು ಸಾಹಸವನ್ನೇ ಮಾಡಬೇಕಾದ ಕಲ್ಮಾವುಂಡೆ ಈಗ ತೆರೆಮರೆಗೆ ಸರಿದಿದೆ. ಈ ಉಂಡೆಯ ಗುಣಕ್ಕೆ ತದ್ವಿರುದ್ಧವಾದ ಮಾವುಂಡೆ ಮೃದುವಾಗಿರುತ್ತದೆ. ಹೆಚ್ಚು ಜನರಿಗೆ ತಿಳಿದಿಲ್ಲದ, ಅಪರೂಪದ ಮಾವುಂಡೆ ತಯಾರಿಸುವ ವಿಧಾನ ಇಲ್ಲಿದೆ:

ಬೇಕಾಗುವ ಸಾಮಗ್ರಿ

ಒಂದು ಕಪ್ ಹೆಸರುಬೇಳೆ, ಒಂದು ಕಪ್ ಕಡಲೆಬೇಳೆ, ಒಂದೂವರೆ ಕಪ್ ಬೂರಾ ಸಕ್ಕರೆ, ಮುಕ್ಕಾಲು ಕಪ್ ಸಣ್ಣದಾಗಿ ತುರಿದ ಒಣಕೊಬ್ಬರಿ, ಉಂಡೆ ಕಟ್ಟಲು ಬೇಕಾಗುವಷ್ಟು ತುಪ್ಪ, ಗೋಡಂಬಿ, ದ್ರಾಕ್ಷಿ, ಸ್ವಲ್ಪ ಏಲಕ್ಕಿ ಪುಡಿ.

ಹೀಗೆ ಮಾಡಿ

ಹೆಸರುಬೇಳೆ ಹಾಗೂ ಕಡಲೆಬೇಳೆಯನ್ನು ಕೆಂಪಗಾಗುವವರೆಗೆ ಹುರಿದು ತಣ್ಣಗಾದ ಬಳಿಕ ಗಿರಣಿಯಲ್ಲಿ ಹಿಟ್ಟು ಮಾಡಿಸಬೇಕು. ನಂತರ ಈ ಹಿಟ್ಟಿಗೆ ಬೂರಾ ಸಕ್ಕರೆ, ಒಣಕೊಬ್ಬರಿ, ಏಲಕ್ಕಿ ಪುಡಿ, ತುಪ್ಪದಲ್ಲಿ ಕರಿದ ಗೋಡಂಬಿ, ದ್ರಾಕ್ಷಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಬೇಕು. ಬಳಿಕ ಉಳಿದ ತುಪ್ಪವನ್ನು ಬಿಸಿ ಮಾಡಿ ಈ ಮಿಶ್ರಣಕ್ಕೆ ಸೇರಿಸಬೇಕು. ಉಂಡೆ ಕಟ್ಟುವ ಹದಕ್ಕೆ ತುಪ್ಪ ಹಾಕಿಕೊಂಡು ಉಂಡೆ ಕಟ್ಟಬೇಕು.

ಹಿಟ್ಟು ಮಾಡಿಸಿಟ್ಟುಕೊಂಡರೆ ಬೇಕೆಂದಾಗ ಸುಲಭದಲ್ಲಿ ಮಾಡಿಕೊಳ್ಳಬಹುದಾದ ಮಾವುಂಡೆ, ಮಕ್ಕಳಿಗೆ ಇಷ್ಟವಾಗುವುದರಲ್ಲಿ ಅನುಮಾನವಿಲ್ಲ. ಬಿಸಿಯಾಗಿ ಇದ್ದಾಗಲೇ ಕಟ್ಟಬೇಕು, ಪಾಕ ಹಿಡಿಯಬೇಕು ಎಂಬ ಗೋಜಲಿಲ್ಲ.

ರಸಾಲಯ

ಹೀಗಿರುತ್ತದೆ ಆಚರಣೆ

ರೂಪಾ ಚಕ್ರಪಾಣಿ

ಬಾಳೆಕಂದುಗಳಿಂದ ಸಿಂಗರಿಸಿದ ಮಂಟಪದಲ್ಲಿ ಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಮಗ್ಗುಲಲ್ಲೇ ಪುಟ್ಟದೊಂದು ತೊಟ್ಟಿಲನ್ನೂ ಕಟ್ಟಲಾಗುತ್ತದೆ. ಮಂಟಪದ ಸುತ್ತ ಹಣ್ಣು, ತರಕಾರಿ, ಚಕ್ಕುಲಿ, ನಿಪ್ಪಟ್ಟು, ಕರ್ಜಿಕಾಯಿಯಂತಹ ತಿಂಡಿಗಳನ್ನು ದಾರದಲ್ಲಿ ತೂಗು ಹಾಕಲಾಗುತ್ತದೆ. ಆ ದಿನ ಮನೆಯವರೆಲ್ಲರೂ ಉಪವಾಸವಿದ್ದು, ರಾತ್ರಿ 11 ಗಂಟೆಯ ಬಳಿಕ ಕೃಷ್ಣನಿಗೆ ಮಹಾಮಂಗಳಾರತಿ, ನೈವೇದ್ಯ ಅರ್ಪಿಸಿದ ಬಳಿಕ ಮೃಷ್ಟಾನ್ನ ಭೋಜನವನ್ನು ಸವಿಯುತ್ತಾರೆ. ಕೃಷ್ಣನು ಮಧ್ಯರಾತ್ರಿ ಜನಿಸಿದ ಎಂಬ ಪ್ರತೀತಿ ಇದ್ದು, ಬಹುತೇಕ ಕುಟುಂಬಗಳು ಆ ಸಮಯದಲ್ಲೇ ಜನ್ಮಾಷ್ಟಮಿ ಆಚರಣೆ ಮಾಡುತ್ತವೆ.

ಮಾರನೇ ದಿನ 'ಆರತಿ' ಬೆಳಗಲಾಗುತ್ತದೆ. ಮುತ್ತೈದೆಯರನ್ನು ಮನೆಗೆ ಕರೆದು, ಮನೆಯಲ್ಲಿ ತಯಾರಿಸಿದ ಚಕ್ಕುಲಿ, ಪುರಿಯುಂಡೆ, ಚುಂಡುಲು, ಪುಳಿಯೋಗರೆಯಂತಹ ತಿನಿಸುಗಳನ್ನು ಬಾಗಿನದೊಂದಿಗೆ ಕೊಡುವ ಸಂಪ್ರದಾಯ ಅನೂಚಾನವಾಗಿ ನಡೆದುಬಂದಿದೆ. ಹಬ್ಬ ಆಗಿ ಎರಡು ಅಥವಾ ಮೂರು ದಿನಗಳ ನಂತರ ಬರುವ ದ್ವಾದಶಿಯಂದು ಮಂಟಪವನ್ನು ಕದಲಿಸಲಾಗುತ್ತದೆ.

'ಮನ್ನಾರ್ ಸಂಪ್ರದಾಯ ಪಾಲಿಸುವ ಕುಟುಂಬಗಳಲ್ಲಿ ರೋಹಿಣಿ ನಕ್ಷತ್ರದಂದು ಕೃಷ್ಣಜನ್ಮಾಷ್ಟಮಿಯನ್ನು ಆಚರಿಸುತ್ತಾರೆ. ತೋಳಪ್ಪರ್ ಸಂಪ್ರದಾಯದವರು ಅಷ್ಟಮಿ ತಿಥಿಯಂದು ಆಚರಿಸುತ್ತಾರೆ. ಈ ಆಚರಣೆ ಕೆಲವೊಮ್ಮೆ ಒಂದೇ ದಿನ ಬರುತ್ತದೆ. ಇನ್ನು ಕೆಲವೇಳೆ ಕೆಲವು ದಿನಗಳ ವ್ಯತ್ಯಾಸದಲ್ಲಿ ಬರುತ್ತದೆ' ಎನ್ನುವ ರೂಪಾ, ಆಚರಣೆಯ ವಿವಿಧ ಮಜಲುಗಳನ್ನು ವಿವರಿಸಿದರು.

ಸ್ಪಂದನ

ಡಾ. ವೀಣಾ ಎಸ್. ಭಟ್

ಕೂದಲು ಅತಿಯಾಗಿ ಉದುರುವುದೇಕೆ?

• ಹೆರಿಗೆಯಾಗಿ ಮೂರು ತಿಂಗಳಾಗಿದೆ. ಅತಿಯಾಗಿ ಕೂದಲು ಉದುರುತ್ತದೆ. ತಲೆಗೆ ಬಾಚಣಿಗೆ ಹಾಕಿದರೆ ಸಾಕು ಇಡಿ ಇಡಿಯಾಗಿಯೇ ಕೂದಲು ಬುಡದಿಂದ ಹೊರಬರುತ್ತದೆ. ತಲೆ ಬೋಳಾಗುವ ಆತಂಕ ಎದುರಾಗಿದೆ. ಬಾಣಂತನದಲ್ಲಿ ಕೂದಲು ಉದುರುವುದು ಸಹಜವೇ? ಪರಿಹಾರವೇನು?

ಗಾಯತ್ರಿ, ಸೀಗೆಬಾಗಿ

ಹೆರಿಗೆಯಲ್ಲಿ ಹೆಚ್ಚಿನ ರಕ್ತಸ್ರಾವದಿಂದ ತಾಯಂದಿರಲ್ಲಿ ಕಬ್ಬಿಣಾಂಶದ ಕೊರತೆ ಉಂಟಾಗುತ್ತದೆ. ಎದೆಹಾಲು ಉಣಿಸುವುದು, ನಿದ್ರೆಗೆಡುವುದು, ಪಥ್ಯ ಮಾಡುತ್ತಾ ಸರಿಯಾದ ಪೌಷ್ಟಿಕ ಆಹಾರ ಸೇವನೆ ಮಾಡದೇ ಇರುವುದು, ಥೈರಾಯ್ಡ್ ಹಾರ್ಮೋನ್‌ನಲ್ಲಿನ ವ್ಯತ್ಯಯ, ವಿಟಮಿನ್ ಡಿ ಕೊರತೆ ಸೇರಿದಂತೆ ಹಲವು ಕಾರಣಗಳಿಂದ ಕೂದಲು ಉದುರುತ್ತದೆ.

ಹೆರಿಗೆಯ ನಂತರ ಪ್ರತಿದಿನ 50ರಿಂದ 100 ಕೂದಲು ಉದುರಿದರೆ ಅದು ಸಾಮಾನ್ಯ. ಇನ್ನೂರರಿಂದ ಮುನ್ನೂರು ಕೂದಲು ಉದುರಿದರೆ ಆಗ ಚಿಂತಿಸಬೇಕು. ರಕ್ತಹೀನತೆ ಇದ್ದರೆ ಅದನ್ನು ಸರಿಪಡಿಸಿಕೊಳ್ಳಿ. ಬಾಣಂತಿಯೆಂದು ಸದಾ ಮಲಗಿಕೊಂಡೇ ಇರಬೇಡಿ. ಗಾಳಿ ಹೋಗಬಾರದೆಂದು ತಲೆಗೆ ಬಿಗಿಯಾದ ಮಫ್ಲರ್ ಕಟ್ಟಿಕೊಂಡು ಬೆವರಿರುತ್ತೀರಿ, ಕೆಲವೊಮ್ಮೆ ತುಂಬಾ ಸೆಕೆ ಇರುತ್ತದೆ. ವಾರದಲ್ಲಿ ಎರಡು ಬಾರಿಯಾದರೂ ತಲೆಸ್ನಾನ ಮಾಡದೇ ಇರಬಾರದು. ಹೆರಿಗೆಯಾಗಿ ಆರು ವಾರಗಳಾದ ಮೇಲೆ, ಸುಲಭವಾಗಿ ಜೀರ್ಣವಾಗುವ ಪೌಷ್ಟಿಕ ಆಹಾರ ಸೇವನೆ ಮಾಡಬೇಕು.

ಶುದ್ಧ ಕೊಬ್ಬರಿ ಎಣ್ಣೆ ಅಥವಾ ಎಳ್ಳೆಣ್ಣೆಯನ್ನು ವಾರಕ್ಕೆ ಎರಡು, ಮೂರು ಬಾರಿ ತಲೆಗೆ ಹಾಕಿ ಮಸಾಜ್ ಮಾಡಿಕೊಳ್ಳಿ. ಸೀಗೆಕಾಯಿ ಅಥವಾ ಸಲ್ಫೇಟ್‌ರಹಿತ ಶ್ಯಾಂಪೂ ಬಳಸಿ ತಲೆಸ್ನಾನ ಮಾಡಿ. ಕೂದಲನ್ನು ಒರಟಾಗಿ ಒರೆಸಬೇಡಿ. ಗಟ್ಟಿಯಾಗಿ ಜಡೆ ಹಾಕಿಕೊಳ್ಳಬೇಡಿ. ಹೆಚ್ಚು ಹಸಿರುಸೊಪ್ಪು, ತರಕಾರಿಗಳನ್ನು ಸೇವಿಸಿ. ಒಣಹಣ್ಣುಗಳನ್ನು ಹಾಕಿ ಮಾಡುವ ಅಂಟುಂಡೆಯನ್ನು ನಿಯಮಿತವಾಗಿ ಸೇವಿಸಿ.

ಪ್ರೋಟೀನ್‌ಯುಕ್ತ ಆಹಾರ, ಒಮೆಗಾ–3 ಇರುವ ಆಹಾರದ ಜತೆಗೆ ದಿನಕ್ಕೆ ಕನಿಷ್ಠ ಮೂರರಿಂದ ಮೂರೂವರೆ ಲೀಟರ್ ನೀರು ಕುಡಿಯುವುದು ಅಗತ್ಯ. ಸರಳವಾದ ವ್ಯಾಯಾಮವನ್ನು ನಿಯಮಿತವಾಗಿ ಮಾಡಬೇಕು. ವೈದ್ಯರು ಕೊಡುವ ಕ್ಯಾಲ್ಸಿಯಂ ಮತ್ತು ಕಬ್ಬಿಣಾಂಶದ ಮಾತ್ರೆಗಳನ್ನು ಕನಿಷ್ಠ 6 ತಿಂಗಳವರೆಗೆ ಸೇವಿಸಲೇಬೇಕು. ಜೊತೆಗೆ ಜಿಂಕ್ (ಸತು) ಇರುವ ಮಾತ್ರೆಗಳು, ವಿಟಮಿನ್ ಡಿ ಮಾತ್ರೆಗಳನ್ನು ಸೇವಿಸುವುದನ್ನು ಮರೆಯಬೇಡಿ.

'ಸಿರಿ'ದೇವಿಯರಿಗೆ ವಿಶ್ವಮನ್ನಣೆ

• ಗೋವರ್ಧನ ಎಸ್.ಎನ್.

ಹೆಚ್ಚು ಶಿಕ್ಷಣ ಪಡೆಯದ, ಹೊಲ–ಮನೆ ಕೆಲಸಗಳಲ್ಲೇ ನಿರತರಾಗಿದ್ದ 14 ಮಹಿಳೆಯರು ಸೇರಿ ಕಟ್ಟಿದ ಸಂಘವೊಂದು ಇದೀಗ ವಿಶ್ವಮಟ್ಟದ ಹಿರಿಮೆಗೆ ಪಾತ್ರವಾಗಿದೆ. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ತೀರ್ಥ ಎಂಬ ಪುಟ್ಟ ಗ್ರಾಮದ ಈ ಮಹಿಳೆಯರು ಪರಿಶ್ರಮ, ಬದ್ಧತೆಯಿಂದ ನಡೆಸುತ್ತಿರುವ ನೈಸರ್ಗಿಕ ಕೃಷಿ ಹಾಗೂ ಪರಿಸರ ಪ್ರೇಮವನ್ನು ಪಸರಿಸುವ ಕಾಯಕಕ್ಕೆ ವಿಶ್ವಸಂಸ್ಥೆಯ ಮನ್ನಣೆ ದೊರೆತಿದೆ.

'ಸಹಜ ಸಮೃದ್ಧ' ಸಂಸ್ಥೆಯ ಮಾರ್ಗದರ್ಶನದಲ್ಲಿ 2018ರಲ್ಲಿ ಸ್ಥಾಪನೆಯಾದದ್ದು 'ಬೀಬಿ ಫಾತಿಮಾ ಮಹಿಳಾ ಸಂಘ'. ಸಿರಿಧಾನ್ಯ ಪುನರುತ್ಥಾನದಲ್ಲಿ ಗುರುತರ ಪಾತ್ರ ನಿರ್ವಹಿಸಿದ್ದಕ್ಕಾಗಿ 2025ರ ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮದ (ಯುಎನ್‌ಡಿಪಿ) 'ಈಕ್ವೇಟರ್ ಇನಿಷಿಯೇಟಿವ್' ಪ್ರಶಸ್ತಿಗೆ ಸಂಘ ಭಾಜನವಾಗಿದೆ.

ಕುಂದಗೋಳ, ಶಿಗ್ಗಾವಿ ಭಾಗದಲ್ಲಿ ಈ ಮೊದಲು ಹತ್ತಿ, ಭತ್ತ, ಮೆಕ್ಕೆಜೋಳವನ್ನು ಹೆಚ್ಚಾಗಿ ಬೆಳೆಯಲಾಗುತ್ತಿತ್ತು. ಸಿರಿಧಾನ್ಯ ಬೆಳೆಯುವಂತೆ ಸಂಘದ ಸದಸ್ಯರು ಅರಿವು ಮೂಡಿಸಲು ಮುಂದಾದಾಗ ಬಹುತೇಕರು ಒಪ್ಪಲಿಲ್ಲ. ಸತತ ಪ್ರಯತ್ನದ ಫಲವಾಗಿ ಇದೀಗ ಈ ಭಾಗದ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯ ನಳನಳಿಸುತ್ತಿದೆ. ರೈತರು ಉತ್ತಮ ಆದಾಯ ಗಳಿಸುವಂತಾಗಿದೆ.

'ಸಿರಿಧಾನ್ಯ ಬೆಳೆಯಲು ಹೆಚ್ಚು ಖರ್ಚು ಮಾಡಬೇಕಿಲ್ಲ. ಜಾನುವಾರುಗಳಿಗೆ ಮೇವು ಸಹ ಸಿಗುತ್ತದೆ. ಸಂಘದ್ದೇ ಸಂಸ್ಕರಣಾ ಘಟಕ ಇರುವುದರಿಂದ, ಸಿರಿಧಾನ್ಯಗಳ ಅಕ್ಕಿ ಮಾಡುತ್ತೇವೆ. ದೇವಧಾನ್ಯ ರೈತ ಉತ್ಪಾದಕ ಸಂಘದ ಮೂಲಕ ಮಾರುಕಟ್ಟೆಯನ್ನೂ ಸೃಷ್ಟಿಸಿಕೊಂಡಿದ್ದೇವೆ. ಸಾವಯವ ಮಳಿಗೆ, ಮೇಳಗಳಲ್ಲಿ ಬಿತ್ತನೆ ಬೀಜಗಳೊಂದಿಗೆ, ಸಿರಿಧಾನ್ಯಗಳ ರೊಟ್ಟಿ, ಪುಡಿ, ಮಾಲ್ಟ್ ತಯಾರಿಸಿ ಮಾರಾಟ ಮಾಡುತ್ತೇವೆ' ಎನ್ನುತ್ತಾರೆ ಸಂಘದ ಅಧ್ಯಕ್ಷೆ ಬೀಬಿಜಾನ್ ಮೌಲಾಸಾಬ್ ಹಳೇಮನಿ.

'ನಮ್ಮ ಘಟಕಕ್ಕೆ ದಕ್ಷಿಣ ಆಫ್ರಿಕಾ, ಅಮೆರಿಕ, ಸ್ವಿಟ್ಜರ್‌ಲೆಂಡ್, ಜರ್ಮನಿಯ ಪ್ರತಿನಿಧಿಗಳು ಭೇಟಿ ನೀಡಿ, ಮೆಚ್ಚುಗೆ ಸೂಚಿಸಿದ್ದಾರೆ. ಮುಂದಿನ ದಿನಗಳಲ್ಲಿ ಸಹಕಾರ ಸಂಘ ಸ್ಥಾಪಿಸಿ, ಹೆಚ್ಚಿನ ಸಂಘಟನೆಗಳನ್ನು ನಮ್ಮೊಂದಿಗೆ ಸೇರಿಸಿಕೊಳ್ಳುವ ಆಲೋಚನೆ ಇದೆ. ಸಂಸ್ಕರಣಾ ಕೇಂದ್ರದಲ್ಲಿ ಎಲಿವೇಟರ್ ವ್ಯವಸ್ಥೆ ಆಗಬೇಕಿದೆ. ಬೀಜ ಬ್ಯಾಂಕ್‌ಗೆ ಸರ್ಕಾರ ಜಾಗ ನೀಡಿ, ಶಾಶ್ವತ ವ್ಯವಸ್ಥೆ ಕಲ್ಪಿಸಬೇಕಿದೆ' ಎಂಬ ಬೇಡಿಕೆಯನ್ನು ಅವರು ಮುಂದಿಡುತ್ತಾರೆ.

> ಗ್ರಾಮೀಣ ಮಟ್ಟದ ಸಂಘವು ನಮ್ಮ ಸಂಸ್ಥೆಯ ನೆರವು ಪಡೆದು ವಿಶ್ವಮಟ್ಟದಲ್ಲಿ ಸಾಧನೆ ಮಾಡಿರುವುದು ಹೆಮ್ಮೆ ತರಿಸಿದೆ. ಅಕ್ಟೋಬರ್‌ನಲ್ಲಿ ಪ್ರಶಸ್ತಿ ಪ್ರದಾನ ಮಾಡುವ ಮಾಹಿತಿ ದೊರೆತಿದೆ
> **ಜಿ. ಕೃಷ್ಣಪ್ರಸಾದ್,** ನಿರ್ದೇಶಕ, ಸಹಜ ಸಮೃದ್ಧ ಸಂಸ್ಥೆ

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ತೀರ್ಥ ಗ್ರಾಮದ 'ಬೀಬಿ ಫಾತಿಮಾ ಮಹಿಳಾ ಸಂಘ'ದ ಸದಸ್ಯೆಯರು

ಪ್ರಶಸ್ತಿ ಕುರಿತು...

ಜೀವವೈವಿಧ್ಯ ಸಂರಕ್ಷಣಾ ಕ್ಷೇತ್ರದ ನೊಬೆಲ್ ಪುರಸ್ಕಾರ ಎಂದೇ 'ಈಕ್ವೇಟರ್ ಇನಿಷಿಯೇಟಿವ್' ಪ್ರಶಸ್ತಿಯನ್ನು ಪರಿಗಣಿಸಲಾಗುತ್ತದೆ. 'ನಿಸರ್ಗ ಆಧಾರಿತ ತಾಪಮಾನ ನಿಯಂತ್ರಣಕ್ಕೆ ಮಹಿಳೆ ಹಾಗೂ ಯುವಜನರ ನಾಯಕತ್ವ' ಎಂಬ ವಿಷಯ ಆಧರಿಸಿ ಈ ವರ್ಷದ ಪ್ರಶಸ್ತಿ ಆಯ್ಕೆ ಪ್ರಕ್ರಿಯೆ ನಡೆಯಿತು. 103 ದೇಶಗಳ ಸುಮಾರು 700 ಸ್ಪರ್ಧಿಗಳು ಪಾಲ್ಗೊಂಡಿದ್ದರು. ಪ್ರಶಸ್ತಿಯು 10,000 ಅಮೆರಿಕನ್ ಡಾಲರ್ (ಸುಮಾರು ₹ 8.5 ಲಕ್ಷ) ನಗದು ಬಹುಮಾನ ಒಳಗೊಂಡಿದೆ.

ವಿಶೇಷ ನಿಯಮ

2020ರಲ್ಲಿ ಸ್ಥಾಪನೆಯಾದ ದೇಸಿ ಬೀಜ ಬ್ಯಾಂಕ್ ಮೂಲಕ ಸಿರಿಧಾನ್ಯದೊಂದಿಗೆ ವಿವಿಧ ಕಾಳು, ತರಕಾರಿಯ 300 ವಿಧದ ಬಿತ್ತನೆ ಬೀಜಗಳನ್ನು ಸಂಘದ ವತಿಯಿಂದ ಆಸಕ್ತ ರೈತರಿಗೆ ವಿತರಿಸಲಾಗುತ್ತಿದೆ. ಅಪರೂಪದ ಧಾನ್ಯಗಳನ್ನು ಸಂಗ್ರಹಿಸಲಾಗಿದೆ. ಸಿರಿಧಾನ್ಯ ಬೆಳೆ ಉತ್ತೇಜಿಸಲು ಒಂದು ಎಕರೆಗಾಗುವಷ್ಟು ಬಿತ್ತನೆ ಬೀಜಗಳಿರುವ ಕಿಟ್‌ಗಳನ್ನು ರೈತರಿಗೆ ಉಚಿತವಾಗಿ ನೀಡಲಾಗುತ್ತದೆ. ಆನಂತರ, ಒಂದು ಪೊಟ್ಟಣ ಬೀಜ ಖರೀದಿಸಿದರೆ, ಅದಕ್ಕೆ ಪ್ರತಿಯಾಗಿ, ಉತ್ತಮ ಫಸಲು ಬಂದ ನಂತರ ಬೀಜದ ಎರಡು ಪೊಟ್ಟಣ ನೀಡಬೇಕೆಂಬುದು ಬೀಜ ಬ್ಯಾಂಕ್‌ನ ನಿಯಮ.

ಚಿಟಿಕೆ ಸುದ್ದಿ

ವಂಚನೆ: 10 ಬ್ಯೂಟಿ ಪಾರ್ಲರ್ ಜಪ್ತಿ

ಬೆಳಗಾವಿ: ಸೌಂದರ್ಯವರ್ಧನೆ ಹೆಸರಿನಲ್ಲಿ ವಂಚನೆ ಮಾಡುತ್ತಿದ್ದ 10 ಬ್ಯೂಟಿ ಪಾರ್ಲರ್‌ಗಳನ್ನು ಶುಕ್ರವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಪ್ತಿ ಮಾಡಿದೆ. ಏಳು ಪಾರ್ಲರ್‌ಗಳಿಗೆ ನೋಟಿಸ್ ನೀಡಿದೆ.

'30 ಬ್ಯೂಟಿ ಪಾರ್ಲರ್‌ಗಳ ಮೇಲೆ ದಾಳಿ ನಡೆಸಲಾಗಿತ್ತು. ನಿಯಮ ಉಲ್ಲಂಘನೆ ಮತ್ತು ಹಾನಿಕಾರಕ ಸಾಮಗ್ರಿಗಳ ಬಳಕೆ ಆರೋಪದಡಿ 10 ಪಾರ್ಲರ್ ಬಂದ್ ಮಾಡಿದೆವು. ಇಲ್ಲಿ ಕೂದಲು ಕಸಿ, ಕೆಮಿಕಲ್ ಬ್ಲೀಚಿಂಗ್ ಮಾಡಿ, ಚರ್ಮರೋಗಕ್ಕೆ ಚಿಕಿತ್ಸೆ ನೀಡಲಾಗುತ್ತಿತ್ತು. ಅಧಿಕ ಸ್ಟಿರಾಯಿಡ್ ಬಳಕೆಯಿಂದ ಗ್ರಾಹಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿತ್ತು' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಈಶ್ವರ ಗಡಾದ ತಿಳಿಸಿದರು.

'ಡಿಸಿಎಂ ಹೇಳಿಕೆಗೆ ಸಹಮತವಿದೆ'

ಉಡುಪಿ: 'ಧರ್ಮಸ್ಥಳ ಪ್ರಕರಣದ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸದನದ ಒಳಗೆ ಮತ್ತು ಹೊರಗೆ ನೀಡಿರುವ ಹೇಳಿಕೆಗೆ ನನ್ನ ಸಹಮತವಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಶುಕ್ರವಾರ ಹೇಳಿದರು.

ಸುದ್ದಿಗಾರರ ಜೊತೆ ಇಲ್ಲಿ ಮಾತನಾಡಿದ ಅವರು, 'ನಾವೆಲ್ಲರೂ ಧರ್ಮಸ್ಥಳ ಮಂಜುನಾಥನ ಭಕ್ತರು. ವೀರೇಂದ್ರ ಹೆಗ್ಗಡೆ ಅವರು ಸಾಮಾಜಿಕ ಕಾರ್ಯ ಮಾಡುತ್ತಿದ್ದಾರೆ. ಅನ್ನ ಪ್ರಸಾದ ನೀಡುತ್ತಿದ್ದಾರೆ. ಅದು ನಿಜವಾಗಿಯೂ ನಮ್ಮೆಲ್ಲರ ಆದರ್ಶ' ಎಂದರು.

ಮತ್ತೆ ಕಾಡುತ್ತಿರುವ ಸಂಚಾರ ದಟ್ಟಣೆ

40ಕ್ಕೂ ಹೆಚ್ಚು ಸ್ಥಳಗಳಲ್ಲಿ ಸಮಸ್ಯೆ: ವಾಹನ ಚಾಲಕರು ಹೈರಾಣ

• ಆದಿತ್ಯ ಕೆ.ಎ.

ಬೆಂಗಳೂರು: ನಗರದ 40ಕ್ಕೂ ಹೆಚ್ಚು ಸ್ಥಳಗಳಲ್ಲಿ ವಾಹನ ದಟ್ಟಣೆಯ ಸಮಸ್ಯೆ ಮತ್ತಷ್ಟು ತೀವ್ರಗೊಂಡಿದೆ. ಕಳೆದ ಎರಡು ತಿಂಗಳಿಂದ ಹಲವು ಮಾರ್ಗಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ವೇಳೆ ವಾಹನಗಳು ಮುಂದಕ್ಕೆ ಸಾಗಲು ಸಾಧ್ಯ ಆಗುತ್ತಿಲ್ಲ. ವಾರಾಂತ್ಯದಲ್ಲಿ ಈ ಸಮಸ್ಯೆ ಇನ್ನಷ್ಟು ಉಲ್ಬಣಿಸುತ್ತಿದೆ. ಕಳೆದ ಮೂರು ತಿಂಗಳಲ್ಲಿ ವಾಹನ ದಟ್ಟಣೆ ಸಮಸ್ಯೆ ಶೇ 10ರಿಂದ 15ರಷ್ಟು ಹೆಚ್ಚಳವಾಗಿದ್ದು, ವಾಹನ ಚಾಲಕರು ಹೈರಾಣಾಗಿದ್ದಾರೆ.

ಪ್ರತಿನಿತ್ಯ ಬೆಳಿಗ್ಗೆ 8 ರಿಂದ 11 ಹಾಗೂ ಸಂಜೆ 4 ರಿಂದ ರಾತ್ರಿ 9ರವರೆಗೆ ಹೊರ ವರ್ತುಲ ರಸ್ತೆಗಳು, ಮೈಸೂರು ರಸ್ತೆ, ಸರ್ಜಾಪುರ ರಸ್ತೆ, ಹೆಬ್ಬಾಳ ಹಾಗೂ ತುಮಕೂರು ರಸ್ತೆಯಲ್ಲಿ ವಾಹನ ಚಾಲಕರಿಗೆ ದಟ್ಟಣೆಯ ಸಮಸ್ಯೆ ಕಾಡಲಾರಂಭಿಸಿದೆ.

ಉದ್ಯೋಗ, ಶಿಕ್ಷಣ ಹಾಗೂ ವ್ಯಾಪಾರಕ್ಕೆಂದು ನಗರಕ್ಕೆ ವಲಸೆ ಬರುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಹೊರ ರಾಜ್ಯದ ಯುವಕರು, ನಗರದ ಐಟಿ-ಬಿಟಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಹೆಚ್ಚಿನವರು ಸ್ವಂತ ವಾಹನಗಳನ್ನೇ ಬಳಸುತ್ತಿರುವ ಪರಿಣಾಮ ಜನರು ದಟ್ಟಣೆಯಲ್ಲಿ ಸಿಲುಕಿ ಪರದಾಡುವಂತಾಗಿದೆ.

ಕಿರಿದಾದ ರಸ್ತೆಗಳಲ್ಲಿ ವಾಹನ ನಿಲುಗಡೆಗೆ ನಿರ್ಬಂಧವಿದ್ದರೂ ಅದೇ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಲಾಗುತ್ತಿದೆ. ಇದು ಸಹ ಸಮಸ್ಯೆ ಬಿಗಡಾಯಿಸಲು ಕಾರಣವಾಗಿದೆ. ನಗರದ ಹೃದಯ ಭಾಗವಾದ ಗಾಂಧಿನಗರದ ಸುತ್ತಮುತ್ತಲ ರಸ್ತೆಗಳಲ್ಲಿ ಈ ದೃಶ್ಯವನ್ನು ಕಾಣಬಹುದಾಗಿದೆ.

'ಸುಧಾರಣೆಗೆ ನಿರಂತರ ಪ್ರಯತ್ನ'

'ನಗರದಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು 1.20 ಕೋಟಿ ವಾಹನಗಳಿವೆ. ಆ ಪೈಕಿ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳದ್ದೇ ಸಿಂಹಪಾಲು. ತೀವ್ರ ಸಮಸ್ಯೆ ಇರುವ ಸ್ಥಳಗಳನ್ನು ಗುರುತಿಸಲಾಗಿದೆ. ಅಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ನಿರಂತರ ಪ್ರಯತ್ನ ಮಾಡಲಾಗುತ್ತಿದೆ' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ತಿಳಿಸಿದರು.

'ಸಿಲ್ಕ್‌ಬೋರ್ಡ್‌ನಿಂದ ಸರ್ಜಾಪುರ ಹಾಗೂ ಹೆಬ್ಬಾಳ ರಸ್ತೆಯಲ್ಲಿ ಉಂಟಾಗುತ್ತಿರುವ ದಟ್ಟಣೆ ಸಮಸ್ಯೆ ಬಗೆಹರಿಸಲು ಬಿಬಿಎಂಪಿ, ಬಿಎಂಆರ್‌ಸಿಎಲ್ ಹಾಗೂ ಜಲಮಂಡಳಿ ನೆರವು ಪಡೆದು ಯೋಜನೆ ರೂಪಿಸಲಾಗುತ್ತಿದೆ. ಟೆಕ್‌ಪಾರ್ಕ್ ಬಳಿ ಪ್ರತಿನಿತ್ಯ 1.50 ಲಕ್ಷ ವಾಹನಗಳು ಸಂಚರಿಸುತ್ತಿವೆ. ಸುಗಮ ಸಂಚಾರಕ್ಕಾಗಿ ಪರ್ಯಾಯ ವ್ಯವಸ್ಥೆ ಬಗ್ಗೆಯೂ ಆಲೋಚಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ದಟ್ಟಣೆಗೆ ಕಾರಣ ಏನು?

- ಸಾರ್ವಜನಿಕ ಸಾರಿಗೆಗಳಾದ 'ನಮ್ಮ ಮೆಟ್ರೊ', ಬಿಎಂಟಿಸಿ ಬಸ್‌ಗಳಿದ್ದರೂ ಜನರು ಸ್ವಂತ ವಾಹನಗಳನ್ನೇ ಬಳಸುತ್ತಿದ್ದಾರೆ
- ದಿನದಿಂದ ದಿನಕ್ಕೆ ನಗರಕ್ಕೆ ಬಂದು ಹೋಗುವ ವಾಹನಗಳ ಸಂಖ್ಯೆ ಹೆಚ್ಚಾಗಿದೆ
- ನಗರದಿಂದ ಹೊರ ರಾಜ್ಯ ಹಾಗೂ ವಿದೇಶಕ್ಕೆ ಹೋಗುವವರ ಸಂಖ್ಯೆಯಲ್ಲೂ ಏರಿಕೆಯಾಗಿದ್ದು, ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ 'ನಮ್ಮ ಮೆಟ್ರೊ' ಸೇವೆ ಇಲ್ಲದ ಪರಿಣಾಮ ಕ್ಯಾಬ್ ಹಾಗೂ ಸ್ವಂತ ವಾಹನಗಳಲ್ಲಿ ಪ್ರಯಾಣಿಕರು ತೆರಳುತ್ತಿದ್ದಾರೆ. ಇದರಿಂದ ಹೆಬ್ಬಾಳ ರಸ್ತೆಯಲ್ಲಿ ನಿತ್ಯ ಸಮಸ್ಯೆಯಾಗುತ್ತಿದೆ
- ನಗರದ ಅನೇಕ ರಸ್ತೆಗಳು ಕಡಿಮೆ ಜನಸಂಖ್ಯೆಯಿದ್ದ ಅವಧಿಯಲ್ಲಿ ವಿನ್ಯಾಸಗೊಂಡಿದ್ದು, ಅವುಗಳು ಕಿರಿದಾಗಿವೆ. ಈಗ ಆ ರಸ್ತೆಗಳ ವಿಸ್ತರಣೆ ಹಾಗೂ ಭೂಸ್ವಾಧೀನ ಸವಾಲಾಗಿದೆ

ಹೊಸೂರು ರಸ್ತೆಯಲ್ಲಿನ ವಾಹನ ದಟ್ಟಣೆ

ಎಲೆಕ್ಟ್ರಾನಿಕ್ ಸಿಟಿ: ತಗ್ಗುವುದೇ ಸಮಸ್ಯೆ?

ವಿಪರೀತ ದಟ್ಟಣೆ ಆಗುತ್ತಿರುವ ಪ್ರದೇಶಗಳ ಪೈಕಿ ಎಲೆಕ್ಟ್ರಾನಿಕ್ ಸಿಟಿಯೂ ಒಂದು. ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಐ.ಟಿ- ಬಿ.ಟಿ ಕಂಪನಿಗಳಿವೆ. ಬೆಳಿಗ್ಗೆ ಹಾಗೂ ಸಂಜೆಯ ವೇಳೆ ವಾಹನಗಳು ರಸ್ತೆಯಲ್ಲೇ ಸಾಲುಗಟ್ಟಿ ನಿಲ್ಲುತ್ತಿವೆ. ಸದ್ಯ, ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರದ ನಡುವೆ ನಿರ್ಮಾಣ ಆಗಿರುವ ನಮ್ಮ ಮೆಟ್ರೊದ ಹಳದಿ ಮಾರ್ಗವು ಉದ್ಘಾಟನೆಗೊಂಡಿದ್ದು, ಹೊಂಗಸಂದ್ರ, ಕೂಡ್ಲುಗೇಟ್, ಎಲೆಕ್ಟ್ರಾನಿಕ್ ಸಿಟಿ ಭಾಗದಲ್ಲಿ ವಾಹನ ದಟ್ಟಣೆ ತುಸು ತಗ್ಗುವ ಸಾಧ್ಯತೆಯಿದೆ ಎಂದು ಸಂಚಾರ ಪೊಲೀಸರು ಹೇಳುತ್ತಾರೆ.

ಹಳದಿ ಮಾರ್ಗದಲ್ಲಿ ಸೋಮವಾರದಿಂದಲೇ ವಾಣಿಜ್ಯ ಸಂಚಾರ ಆರಂಭವಾಗಿದೆ. ಸದ್ಯ ರೈಲುಗಳ ಸಂಖ್ಯೆ ಕಡಿಮೆಯಿದ್ದು, 25 ನಿಮಿಷಕ್ಕೆ ಒಂದರಂತೆ ಒಟ್ಟು ಮೂರು ರೈಲುಗಳು ಸಂಚರಿಸುತ್ತಿವೆ. ರೈಲುಗಳ ಸಂಖ್ಯೆಯನ್ನು ಹೆಚ್ಚಿಸಿದರೆ ಈ ಭಾಗದಲ್ಲಿ ದಟ್ಟಣೆ ಬಹುತೇಕ ಕಡಿಮೆ ಆಗುವ ಸಾಧ್ಯತೆಯಿದೆ ಎಂದು ಪ್ರಯಾಣಿಕ ರಮೇಶ್ ಹೇಳಿದರು.

'ನಿರ್ಬಂಧಿತ ಸ್ಥಳಗಳಲ್ಲಿ ವಾಹನಗಳ ನಿಲುಗಡೆ ಮಾಡುವವರ ಸಂಖ್ಯೆ ಹೆಚ್ಚಾಗಿದ್ದು, ಅಂತಹ ವಾಹನಗಳ ಟೋಯಿಂಗ್ ಮಾಡಲು ಸರ್ಕಾರ ಅನುಮತಿ ನೀಡಿದೆ. ಶೀಘ್ರದಲ್ಲೇ ಪ್ರಮುಖ ಸ್ಥಳಗಳಲ್ಲಿ ಟೋಯಿಂಗ್ ವ್ಯವಸ್ಥೆ ಜಾರಿಗೆ ತರಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು. ವಾಹನ ಸವಾರರಿಗೆ ಸದ್ಯದಲ್ಲೇ ಟೋಯಿಂಗ್ ಬಿಸಿ ತಟ್ಟುವ ಸಾಧ್ಯತೆಯಿದೆ.

ಕೆಟ್ಟು ನಿಂತ ವಾಹನಗಳಿಂದಲೂ ಅಡಚಣೆ: ನಗರದಲ್ಲಿ ದಟ್ಟಣೆ ಸಮಸ್ಯೆಗೆ ನಾನಾ ಕಾರಣಗಳಿವೆ. ರಸ್ತೆಯ ಅಕ್ಕಪಕ್ಕದಲ್ಲಿ ಕೆಟ್ಟು ನಿಂತ ವಾಹನಗಳೂ ಕಾರಣವಾಗುತ್ತಿವೆ. ವರ್ಷಾನುಗಟ್ಟಲೇ ಈ ವಾಹನಗಳು ನಿಂತಲ್ಲೇ ಇರುತ್ತಿವೆ. ವಾಹನಗಳ ಮಾಲೀಕರು ಯಾರು ಎಂಬುದು ಗೊತ್ತಿಲ್ಲ. ಇದರಿಂದ ಹಲವು ಪ್ರದೇಶಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದೆ ಎಂದು ಸ್ಥಳೀಯರು ದೂರಿದರು.

2024ರಿಂದ ಇದುವರೆಗೆ ವಾರಸುದಾರರಿಲ್ಲದ ಒಟ್ಟು 2,700 ವಾಹನಗಳನ್ನು ಪತ್ತೆಹಚ್ಚಿ, 2,601 ವಾಹನಗಳನ್ನು ಆ ಸ್ಥಳದಿಂದ ಬೇರೆಡೆಗೆ ಸ್ಥಳಾಂತರ ಮಾಡಲಾಗಿದೆ. ಉಳಿದ 99 ವಾಹನಗಳ ಮಾಲೀಕರ ಪತ್ತೆ ಕಾರ್ಯ ಪ್ರಗತಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಮನೆಯಿಂದಲೇ ಕೆಲಸ (ವರ್ಕ್ ಫ್ರಂ ಹೋಮ್) ಮಾಡುತ್ತಿದ್ದ ಉದ್ಯೋಗಿಗಳು ಕಚೇರಿಗೆ ಕೆಲಸಕ್ಕೆ ಬರಲು ಆರಂಭಿಸಿದ್ದಾರೆ. ಅದರಲ್ಲೂ ಕಂಪನಿಗೆ ಹೋಗುವ ಟೆಕಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ. ಕಂಪನಿಗಳಿರುವ ಹೊರವರ್ತುಲ ರಸ್ತೆಗಳಲ್ಲಿ ವಿಪರೀತ ದಟ್ಟಣೆ ಆಗುತ್ತಿದೆ. ಜೂನ್‌ನಿಂದ ಐ.ಟಿ ಕಂಪನಿಗಳ ಕಚೇರಿಗೆ ಬಂದು ಕೆಲಸ ಮಾಡುವವರ ಸಂಖ್ಯೆಯಲ್ಲಿ ಶೇ 45ರಷ್ಟು ಏರಿಕೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಟಿಡಿಆರ್ ಹಗರಣ: ₹4 ಕೋಟಿ ಮೌಲ್ಯದ ಸ್ಥಿರಾಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೀಡುವ ಟಿಡಿಆರ್ (ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು) ಹಗರಣಕ್ಕೆ ಸಂಬಂಧಿಸಿದಂತೆ ಟಿಡಿಎಆರ್ ಬ್ರೋಕರ್‌ಗಳು ಮತ್ತು ನಕಲಿ ಮಾಲೀಕರಿಗೆ ಸೇರಿದ ₹4.06 ಕೋಟಿ ಮೌಲ್ಯದ ಜಮೀನು ಮತ್ತು ಫ್ಲ್ಯಾಟ್‌ಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ತಾತ್ಕಾಲಿಕವಾಗಿ ಜಪ್ತಿ ಮಾಡಿದೆ.

ಟಿಡಿಆರ್ ಹಗರಣ ಸಂಬಂಧ ಮೇ 23ರಂದು ಇ.ಡಿ. ಅಧಿಕಾರಿಗಳು ನಗರದ ವಾಲ್ಮಾರ್ಕ್ ರಿಯಾಲ್ಟಿ ಹೋಲ್ಡಿಂಗ್ಸ್ ಪ್ರೈ.ಲಿ. (ವಿಆರ್‌ಎಚ್‌ಪಿಎಲ್) ಕಚೇರಿ, ಅದರ ನಿರ್ದೇಶಕರು ಮತ್ತು ಕೆಲ ಬಿಲ್ಡರ್‌ಗಳು, ಬ್ರೋಕರ್‌ಗಳು, ನಕಲಿ ಟಿಡಿಆರ್ ಅರ್ಜಿದಾರರ ಮನೆಗಳು ಸೇರಿ 9 ಕಡೆ ಏಕಕಾಲಕ್ಕೆ ದಾಳಿ ನಡೆಸಿ, ಶೋಧ ಕೈಗೊಂಡು ಮಹತ್ವದ ದಾಖಲೆಗಳನ್ನು ಜಪ್ತಿ ಮಾಡಿದ್ದರು. ಇದೀಗ ಆರೋಪಿಗಳ ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿದ್ದಾರೆ.

2009–15ರ ಅವಧಿಯಲ್ಲಿ ಬಿಬಿಎಂಪಿ/ಬಿಡಿಎ ವ್ಯಾಪ್ತಿಯಲ್ಲಿ ನಡೆದಿದ್ದ ಟಿಡಿಆರ್ ಹಗರಣ ಸಂಬಂಧ ಈ ಹಿಂದೆ ಇದ್ದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ದಲ್ಲಿ ಎಫ್‌ಐಆರ್ ದಾಖಲಾಗಿತ್ತು. ವಿಆರ್‌ಎಚ್‌ಪಿಎಲ್ ಕಂಪನಿಯು ಟಿಡಿಆರ್ ಪಡೆದು ಬಳಿಕ ಅದನ್ನು ರಿಯಲ್ ಎಸ್ಟೇಟ್ ಕಂಪನಿಗಳು ಮತ್ತು ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿ ಸುಮಾರು ₹27.68 ಕೋಟಿ ಲಾಭ ಮಾಡಿಕೊಂಡಿದ್ದು ಎಸಿಬಿ ತನಿಖೆ ವೇಳೆ ಗೊತ್ತಾಗಿತ್ತು.

ಈ ಪ್ರಕರಣ ಆಧರಿಸಿ ಇ.ಡಿ ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದರು. ಹಗರಣದಲ್ಲಿ ಬಿಬಿಎಂಪಿ ಅಧಿಕಾರಿಗಳು, ಡೆವಲಪರ್‌ಗಳು, ಬ್ರೋಕರ್‌ಗಳು ಭಾಗಿಯಾಗಿರುವುದು ತನಿಖೆಯಲ್ಲಿ ಬಯಲಾಗಿತ್ತು. ಇದರ ಆಧಾರದ ಮೇಲೆ ಇ.ಡಿ. ಅಧಿಕಾರಿಗಳು ನಗರದ ವಿವಿಧೆಡೆ ದಾಳಿ ನಡೆಸಿದ್ದರು.

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ತನ್ನ ಕಾರ್ಪೊರೇಟ್ ಪ್ರಧಾನ ಕಚೇರಿಯಲ್ಲಿ 'ಗೋ ಗ್ರೀನ್' ಅಡಿ ಎಲೆಕ್ಟ್ರಿಕ್ ವಾಹನಗಳನ್ನು (ಇ.ವಿ) ಬಿಡುಗಡೆ ಮಾಡಿತು. ಎಚ್‌ಎಎಲ್ ಸಿಎಂಡಿ ಡಿ.ಕೆ.ಸುನಿಲ್, ಸಂಸ್ಥೆಯ ನಿರ್ದೇಶಕ (ಹಣಕಾಸು) ಬಾರೆನ್ಯಾ ಸೇನಾಪತಿ, ನಿರ್ದೇಶಕ (ಕಾರ್ಯಾಚರಣೆ) ಕೆ.ರವಿ ಇದ್ದಾರೆ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಆದೇಶ

ಮೂಲಸೌಕರ್ಯ: ಬಿಲ್ಡರ್, ಭೂಮಾಲೀಕರ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಸತಿ ಯೋಜನೆಗಳಲ್ಲಿ ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವುದು ಬಿಲ್ಡರ್‌ಗಳು ಮತ್ತು ಭೂಮಾಲೀಕರ ಜಂಟಿ ಹೊಣೆಗಾರಿಕೆಯಾಗಿದ್ದು, ಈ ಯೋಜನೆಯಲ್ಲಿ ಡೆವಲಪರ್‌ಗಳು ವಿಫಲವಾದರೆ, ಭೂಮಾಲೀಕರು ಸಹ ಜವಾಬ್ದಾರರು ಎಂದು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ-ರೇರಾ) ಆದೇಶ ನೀಡಿದೆ.

ಅಲ್ಲದೆ, ಎಲ್ಲಾ ಮೂಲ ಯೋಜನಾ ದಾಖಲೆಗಳನ್ನು ಗೃಹ ಖರೀದಿದಾರರ ಸಂಘಕ್ಕೆ ಹಸ್ತಾಂತರಿಸಬೇಕು ಎಂದು ನಿರ್ದೇಶಿಸಿದೆ.

'ಮನೆ ಖರೀದಿದಾರರಿಗೆ ನೀರು ಮತ್ತು ಒಳಚರಂಡಿ ಸಂಪರ್ಕ ಒದಗಿಸುವುದು ಸೇರಿ ಶಾಸನಬದ್ಧ ನಿಯಮಗಳ ಪಾಲನೆಗೆ ವಸತಿ ಯೋಜನೆ ನಿರ್ಮಾಣಕ್ಕೆ ಜಂಟಿ ಒಪ್ಪಂದ ಮಾಡಿಕೊಂಡಿರುವ ಬಿಲ್ಡರ್‌ಗಳು ಮತ್ತು ಭೂ ಮಾಲೀಕರು ಬಾಧ್ಯಸ್ಥರು. ಡೆವಲಪರ್, ಭೂಮಾಲೀಕರು ಮತ್ತು ಗೃಹ ಖರೀದಿದಾರರ ಸಂಘವು ಜಲಮಂಡಳಿ ಅಧಿಕಾರಿಗಳೊಂದಿಗೆ ಸಮನ್ವಯದಿಂದ ನೀರು ಮತ್ತು ಒಳಚರಂಡಿ ಸಂಪರ್ಕಗಳನ್ನು ಪಡೆಯಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಆದೇಶದಲ್ಲಿ ತಿಳಿಸಿದೆ.

ಆದಿ ಡೆವಲಪರ್ಸ್ ವಿರುದ್ಧ ಎಲ್. ಅರುಣ್ ಸೇರಿ ಮೂವತ್ತು ನಿವಾಸಿಗಳು ಸಲ್ಲಿಸಿದ್ದ ದೂರನ್ನು ಆಲಿಸಿದ ಕೆ-ರೇರಾ ಅಧ್ಯಕ್ಷ ರಾಕೇಶ್ ಸಿಂಗ್ ಮತ್ತು ಸದಸ್ಯ ಜಿ.ಆರ್.ರೆಡ್ಡಿ ಅವರಿದ್ದ ಪೀಠ ಆದೇಶ ನೀಡಿದೆ.

ವಾದ-ಪ್ರತಿವಾದ ಆಲಿಸಿದ ಬಳಿಕ ಪೀಠ, 'ಮೂಲಸೌಕರ್ಯ ಖಾತ್ರಿಪಡಿಸಿಕೊಳ್ಳುವ ಜವಾಬ್ದಾರಿ ಡೆವಲಪರ್‌ಗೆ ಮಾತ್ರ ಸೀಮಿತವಾಗಿರಬಾರದು. ಮನೆ ಖರೀದಿದಾರರ ಮೂಲ ಸೇವೆಗಳ ಲಭ್ಯತೆ ಮೇಲೆ ನೇರ ಪರಿಣಾಮ ಬೀರುವ ಜವಾಬ್ದಾರಿ ಪೂರೈಸಲು ಭೂಮಾಲೀಕರು ಸಹ ಸಮಾನ ಜವಾಬ್ದಾರರು' ಎಂದು ಸ್ಪಷ್ಟಪಡಿಸಿದೆ.

ಅಲ್ಲದೆ, ಡೆವಲಪರ್ ಮತ್ತು ಭೂಮಾಲೀಕರು ಹಕ್ಕು ಪತ್ರಗಳು, ಜಂಟಿ ಅಭಿವೃದ್ಧಿ ಒಪ್ಪಂದ, ಅನುಮೋದಿತ ಯೋಜನೆಗಳು, ಸ್ವಾಧೀನಾನುಭವ ಪ್ರಮಾಣಪತ್ರ ಮತ್ತು ಶಾಸನಬದ್ಧ ಅನುಮೋದನೆಗಳು ಸೇರಿದಂತೆ ಎಲ್ಲಾ ಮೂಲ ಯೋಜನಾ ದಾಖಲೆಗಳನ್ನು ಗೃಹ ಖರೀದಿದಾರರ ಕಲ್ಯಾಣ ಸಂಘಕ್ಕೆ ಹಸ್ತಾಂತರಿಸಬೇಕು ಎಂದು ಕೆ-ರೇರಾ ತಿಳಿಸಿದೆ.

ಪ್ರಕರಣದ ಹಿನ್ನೆಲೆ: ಆದಿ ಡೆವಲಪರ್ಸ್ ಬೆಂಗಳೂರು ಉತ್ತರ ತಾಲ್ಲೂಕಿನ ಅಗ್ರಹಾರ ಗ್ರಾಮದ ಸರ್ವೆ ನಂಬರ್ 1/2 ಮತ್ತು 18/2 ನಲ್ಲಿ ಆದಿ ನಾರ್ತ್ ಲೇಕ್ ಅನ್ನು ಅಭಿವೃದ್ಧಿಪಡಿಸಲು ಮುಂದಾಗಿ, ಆ ಸಂಬಂಧ ಭೂ ಮಾಲೀಕ ಬಿ.ಎ.ರಾಜಗೋಪಾಲ್ ಅವರೊಂದಿಗೆ ಜಂಟಿ ಅಭಿವೃದ್ಧಿ ಒಪ್ಪಂದ (ಜೆಡಿಎ) ಮಾಡಿಕೊಂಡಿತ್ತು. ಅಲ್ಲಿ ದೂರುದಾರ ಅರುಣ್ ಸೇರಿ ಮೂವತ್ತಕ್ಕೂ ಅಧಿಕ ಮಂದಿ ಹಣ ಹೂಡಿ ಫ್ಲ್ಯಾಟ್‌ಗಳನ್ನು ಖರೀದಿಸಿದ್ದರು.

ಡೆವಲಪರ್ ಮತ್ತು ಭೂ ಮಾಲೀಕರ ನಡುವೆ ಕ್ರಮವಾಗಿ ಶೇ 58 ಮತ್ತು ಶೇ 42ರಷ್ಟು ಹೂಡಿಕೆಗೆ ಒಪ್ಪಂದವಾಗಿತ್ತು. ಕಟ್ಟಡ ನಿರ್ಮಾಣ ಕಾರ್ಯವು ಪೂರ್ಣಗೊಂಡಿತ್ತು. ಬಹುತೇಕ ಮಂದಿಗೆ ಫ್ಲ್ಯಾಟ್‌ಗಳನ್ನು ಹಸ್ತಾಂತರ ಮಾಡಲಾಗಿತ್ತು. ಆದರೆ, ಜಲಮಂಡಳಿಯಿಂದ ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸಿರಲಿಲ್ಲ.

ಜಲಮಂಡಳಿಯು ಹಲವು ಬಾರಿ ನೋಟಿಸ್ ನೀಡಿ, ಎಸ್‌ಟಿಪಿ ಸಂಪರ್ಕವನ್ನು ಸ್ಥಗಿತಗೊಳಿಸುವುದಾಗಿ ತಿಳಿಸಿತ್ತು. ಕಾವೇರಿ ನೀರಿನ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿ ಅದನ್ನು ಪಡೆಯುವ ಜತೆಗೆ ಒಳಚರಂಡಿ ಸಂಪರ್ಕ ಪಡೆದುಕೊಳ್ಳುವಂತೆ ಸೂಚನೆ ನೀಡಿತ್ತು. ಆದರೂ ಡೆವಲಪರ್ ಕ್ರಮ ಕೈಗೊಂಡಿರಲಿಲ್ಲ. ನೀರು ಮತ್ತು ಒಳಚರಂಡಿ ಕಾಮಗಾರಿಗಳನ್ನೂ ಪೂರ್ಣಗೊಳಿಸಿರಲಿಲ್ಲ. ಹಾಗಾಗಿ ದೂರುದಾರರು ಕೆ-ರೇರಾ ಮೊರೆ ಹೋಗಿದ್ದರು.

'ಕೋರ್ಟ್‌ನಲ್ಲಿ ಕನ್ನಡ ಬಳಕೆಗೆ ನಿರ್ಬಂಧವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂವಿಧಾನಿಕ ಅವಕಾಶಗಳಂತೆ ನ್ಯಾಯಾಲಯಗಳಲ್ಲಿ ಆಂಗ್ಲ ಭಾಷೆ ಬಳಸಬೇಕೆಂಬ ಸೂಚನೆಗಳಿದ್ದರೂ, ಸ್ಥಳೀಯ ಭಾಷೆಯ ಬಳಕೆಗೆ ಯಾವುದೇ ನಿರ್ಬಂಧವಿಲ್ಲ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ನಗರದಲ್ಲಿ ಹಮ್ಮಿಕೊಂಡಿದ್ದ 'ಕನ್ನಡೇತರ ವಕೀಲರಿಗೆ ಕನ್ನಡ ಕಲಿಕಾ ಅಭಿಯಾನ' ಉದ್ಘಾಟಿಸಿ, ಮಾತನಾಡಿದರು.

'ವಕೀಲರಿಗೆ ಕಕ್ಷಿದಾರ ಮುಖ್ಯನಾಗಬೇಕು. ನ್ಯಾಯಾಲಯದ ಪ್ರಕ್ರಿಯೆ ಅವನಿಗೆ ಅರ್ಥವಾಗುವಂತೆ ನಡೆದಾಗ ಮಾತ್ರ ನ್ಯಾಯದಾನ ಒದಗಲು ಸಾಧ್ಯ. ಹೀಗಾಗಿ, ಎಲ್ಲ ವಕೀಲರು ಕನ್ನಡ ಕಲಿತು, ಕಕ್ಷಿದಾರರೊಂದಿಗೆ ಕನ್ನಡದಲ್ಲಿ ವ್ಯವಹರಿಸಬೇಕು. ನ್ಯಾಯಾಲಯಗಳಲ್ಲಿ ವಾದ ಮಂಡನೆ ವೇಳೆ ಕನ್ನಡ ಬಳಕೆಗೆ ಮುಂದಾಗಬೇಕು' ಎಂದು ಹೇಳಿದರು.

ಮುಖ್ಯಾಂಶಗಳು

- ಕನ್ನಡ ಕಲಿಕೆಯಿಂದ ಸಾಂಸ್ಕೃತಿಕ ಸಂಘರ್ಷ ನಿವಾರಣೆ ಸಾಧ್ಯ
- ವಾದ ಮಂಡನೆ ವೇಳೆ ಕನ್ನಡ ಬಳಕೆಗೆ ಮುಂದಾಗಿ: ವಕೀಲರಿಗೆ ಸಲಹೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, 'ರಾಜ್ಯದಲ್ಲಿ ವಾಸಿಸುತ್ತಿರುವ ಕನ್ನಡೇತರರಿಗೆ ಕನ್ನಡ ಕಲಿಸಲು ಮಹತ್ವಾಕಾಂಕ್ಷಿ ಯೋಜನೆಯನ್ನು ಪ್ರಾಧಿಕಾರ ರೂಪಿಸಿದೆ. ರಾಜ್ಯದಾದ್ಯಂತ ಕನ್ನಡ ಕಲಿಕಾ ಕೇಂದ್ರಗಳನ್ನು ವಿಸ್ತರಿಸುವ ಕೆಲಸವನ್ನೂ ನಿರ್ವಹಿಸುತ್ತಿದೆ. ಪ್ರಾಧಿಕಾರದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕನ್ನಡೇತರ ವಕೀಲರಿಗೆ ಕನ್ನಡ ಕಲಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. 180 ಮದರಸಾಗಳಲ್ಲಿ ಕನ್ನಡ ಕಲಿಕಾ ಕೇಂದ್ರಗಳನ್ನು ಆರಂಭಿಸಲಾಗಿದೆ' ಎಂದರು.

'ಸ್ಥಳೀಯರೊಂದಿಗೆ ವ್ಯವಹರಿಸಬೇಕಾದರೆ ಕನ್ನಡೇತರರು ಕನ್ನಡವನ್ನು ಕಲಿಯುವುದು ಮುಖ್ಯ. ಇದರಿಂದ ವಿವಿಧ ರೀತಿಯ ಸಾಂಸ್ಕೃತಿಕ ಸಂಘರ್ಷಗಳನ್ನು ನಿವಾರಿಸಲು ಸಾಧ್ಯ. ಸೌಹಾರ್ದ ಸಮಾಜ ನಿರ್ಮಾಣದಲ್ಲಿ ಭಾಷೆಯ ಪ್ರಾಮುಖ್ಯ ಹಿರಿದು. ಕನ್ನಡೇತರರು ಹೆಮ್ಮೆಯಿಂದ ಕನ್ನಡವನ್ನು ಕಲಿತಾಗ ಮಾತ್ರ ಈ ಆಶಯ ಈಡೇರಲು ಸಾಧ್ಯ' ಎಂದು ಅಭಿಪ್ರಾಯಪಟ್ಟರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ಬೆಂಗಳೂರು ವಕೀಲರ ಸಾಹಿತ್ಯ ಕೂಟದ ಅಧ್ಯಕ್ಷ ಮಂಜುನಾಥ ಬಿ. ಗೌಡ ಉಪಸ್ಥಿತರಿದ್ದರು.

ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ನಟಿ ಅಮೃತಾ ಪ್ರೇಮ್ (ಎಡದಿಂದ ಮೂರನೆಯವರು) ಉದ್ಘಾಟಿಸಿದರು

ಆಭರಣ ಪ್ರದರ್ಶನ ಮೇಳ

ಬೆಂಗಳೂರು: ನಗರದ ಶೆರ್ಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ಆಯೋಜಿಸಿರುವ ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ನಟಿ ಅಮೃತಾ ಪ್ರೇಮ್ ಶುಕ್ರವಾರ ಉದ್ಘಾಟಿಸಿದರು.

ಗೋಲ್ಡನ್ ಕ್ರೀಪರ್ ಸಂಸ್ಥೆ ಸಂಸ್ಥಾಪಕರಾದ ಬಿ.ಎನ್. ಜಗದೀಶ್ ಮತ್ತು ಹೇಮಲತಾ ಜಗದೀಶ್ ಆಯೋಜಿಸಿರುವ ಈ ಮೇಳವು ಆಗಸ್ಟ್ 17ರವರೆಗೆ ನಡೆಯಲಿದೆ.

ಅಮೃತಾ ಪ್ರೇಮ್ ಮಾತನಾಡಿ, 'ಗ್ರಾಹಕರ ಅಭಿರುಚಿ ಮತ್ತು ಬಜೆಟ್‌ಗೆ ತಕ್ಕಂತೆ ಬಗೆ ಬಗೆಯ ವಿನ್ಯಾಸದ ಚಿನ್ನ ಮತ್ತು ವಜ್ರದ ಆಭರಣಗಳು ಆಕರ್ಷಿಸುತ್ತವೆ' ಎಂದರು.

ಆಯೋಜಕ ಬಿ.ಎನ್.ಜಗದೀಶ್, 'ಮದುವೆ ಹಾಗೂ ಶುಭ ಸಮಾರಂಭಗಳಿಗೆ ಆಕರ್ಷಕ ವಿನ್ಯಾಸಗಳ ಆಭರಣಗಳನ್ನು ಗ್ರಾಹಕರು ಖರೀದಿಸಬಹುದು' ಎಂದು ಹೇಳಿದರು.

ಬಿ. ಎನ್. ಆರ್. (ಬೆಂಗಳೂರು), ಗಜರಾಜ್, ಎಂ. ಆರ್. ಕೆ. ಜೇವರ್, ಪ್ರಕಾಶ್ ಜ್ಯುವೆಲ್ಲರ್ಸ್, ಸಿಮ್ಹಾ ಜ್ಯುವೆಲ್ಲರ್ಸ್, ಶ್ರೀಗಣೇಶ್ ಡೈಮಂಡ್ಸ್, ಎಂ. ಪಿ. ಜ್ಯುವೆಲ್ಲರ್ಸ್, ನವರತನ್, ನವರತನ್ ಆ್ಯಂಡ್ ಸನ್ಸ್, ಪಂಚಕೇಸರಿ ಬದೇರಾ, ಡೈಮ್ಸ್, ನಿರ್ಮಲ್ ಜ್ಯುವೆಲ್ಲರ್ಸ್, ಆರ್ಟ್ ಇಂಡಿಯಾ, ವರಶ್ರೀ, ರಾಜಿ ಜ್ಯುವೆಲ್ಲರಿ, ಸಂಕೇಶ್ ಸುರಾನಾ, ಸಪ್ರೋಶಿ, ವಿಟ್ರಾಗ್ ಜ್ಯುವೆಲ್ಲರ್ಸ್, ತ್ರಿದಿಯಾ, ವಂಡರ್ ಡೈಮಂಡ್ಸ್, ಇಮ್ಮಡಿ ಸಿಲ್ವರ್, ಐರಾ ಬೈ ನವರತಾನ್, ರೂಪಮ್ ಸಿಲ್ವರ್, ಸಾಂಚೀಸ್, ಎಸ್ಮಾ ಸಿಲ್ವರ್, ಸ್ಟೀಲ್ ಔರಾ, ಮದನ್ ಜೆಮ್ಸ್, ಪ್ಯಾಶನ್ ಜ್ಯುವೆಲ್ಲರಿ, ಅರಹಾಂ (ಕೋಲ್ಕತ್ತ), ಸುರಾನಾ ಅವರ ಔರಾ, ಶ್ರೀ ಪರಮಣಿ, ಶ್ರೀಹರಿ ದಿಯೆಜೆಮ್, ಶ್ರಿಯಾನ್ಸ್ (ದೆಹಲಿ), ಸುವರ್ಣರಾಜ್ (ಮುಂಬೈ), ಸೋನಾ (ಸೂರತ್), ಸುನಿಲ್ ಜ್ಯುವೆಲ್ಲರ್ಸ್ ಮೇಳದಲ್ಲಿ ಭಾಗವಹಿಸಿವೆ.

ಅವ್ಯವಸ್ಥೆಯ ಆಗರ ವ್ಯಾಯಾಮ ಕೇಂದ್ರ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಸೈಕಲ್ ಪೆಡಲ್‌ಗಳು ಮುರಿದು ಹೋಗಿವೆ, ವಿದ್ಯುತ್ ದೀಪಗಳು ಹಾಳಾಗಿವೆ, ವ್ಯಾಯಾಮ ಮಾಡುವ ಪರಿಕರಗಳು ಹಾಳಾಗಿವೆ. ಕುಡುಕರ ಹಾವಳಿಯಿಂದ ಜನರು ವಿಹರಿಸುವುದೇ ಕಷ್ಟವಾಗಿದೆ..!

ಉದ್ಯಾನದ ಒಳಗೆ ಬಿದ್ದಿರುವ ಒಣಗಿದ ಮರದ ಕೊಂಬೆಯ ಎಲೆಗಳು

ವ್ಯಾಯಾಮ ಪರಿಕರಗಳು ಹಾಳಾಗಿರುವುದು

ಜ್ಞಾನಭಾರತಿ ಬಡಾವಣೆಯ 4ನೇ ಹಂತದಲ್ಲಿರುವ ಉದ್ಯಾನದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಳವಡಿಸಿರುವ ತೆರೆದ ವ್ಯಾಯಾಮ ಕೇಂದ್ರದ (ಓಪನ್ ಜಿಮ್) ಸ್ಥಿತಿ ಇದು.

ನಾಗದೇವನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಂತಿರುವ ಸೈಕಲ್‌ನ ಪೆಡಲ್‌ಗಳು ಮುರಿದು ಹೋಗಿವೆ. ವಿವಿಧ ರೀತಿಯ ವ್ಯಾಯಾಮ ಮಾಡುವ ಪರಿಕರಗಳು ಹಾಳಾಗಿವೆ. ವಿದ್ಯುತ್ ಸಂಪರ್ಕ ಕಲ್ಪಿಸುವ ಸ್ವಿಚ್ ಬಾಕ್ಸ್ ಕಿತ್ತುಹೋಗಿದೆ. ಕಿಡಿಗೇಡಿಗಳು ಸ್ವಿಚ್ ಬಾಕ್ಸ್‌ನಲ್ಲಿನ ಫ್ಯೂಸ್‌ಗಳನ್ನು ಕಳ್ಳತನ ಮಾಡಿದ್ದಾರೆ. ಮಕ್ಕಳು ಆಟವಾಡುವಾಗ ವಿದ್ಯುತ್ ತಗುಲಿದರೆ ಅಪಾಯ ಗ್ಯಾರಂಟಿ ಎಂದು ವಾಯು ವಿಹಾರಿಗಳು ಆತಂಕ ವ್ಯಕ್ತಪಡಿಸುತ್ತಾರೆ.

ವಿದ್ಯುತ್ ಸ್ವಿಚ್ ಬಾಕ್ಸ್‌ನಿಂದ ಫ್ಯೂಸ್ ಕಿತ್ತುಕೊಂಡು ಹೋಗಿರುವುದು

'ಪಾರ್ಕ್‌ನಲ್ಲಿ ದೀಪಗಳಿಲ್ಲ. ಮುಂಜಾನೆ ಹಾಗೂ ಇಳಿ ಸಂಜೆಯಲ್ಲಿ ವಿಹಾರ ಮಾಡುವುದಕ್ಕೆ ಭಯವಾಗುತ್ತದೆ. ಕೆಲವು ಪುಂಡರು ಇಲ್ಲಿಗೆ ಬಂದು ಮದ್ಯ ಸೇವನೆ ಮಾಡುತ್ತಾರೆ. ಕೂಗಾಡುತ್ತಾರೆ. ಅವರನ್ನು ಪ್ರಶ್ನಿಸಿದರೆ ಬಾಯಿಗೆ ಬಂದಂತೆ ಬೈಯ್ಯುತ್ತಾರೆ' ಎಂದು ಸ್ಥಳೀಯ ನಿವಾಸಿ ನಾಗರತ್ನಾ ಬೇಸರ ವ್ಯಕ್ತಪಡಿಸಿದರು.

'ವ್ಯಾಯಾಮ ಮಾಡುವ ಉಪಕರಣಗಳು ಮುರಿದು ಹೋಗಿ 10 ತಿಂಗಳಾದರೂ, ಬಿಬಿಎಂಪಿ ಅಧಿಕಾರಿಗಳು ಇವುಗಳನ್ನು ಸರಿಪಡಿಸುವ ಪ್ರಯತ್ನ ಮಾಡಿಲ್ಲ. ಮತ್ತೊಂದೆಡೆ ಉದ್ಯಾನದಲ್ಲಿ ಗಿಡ–ಗಂಟಿಗಳು ಹರಡಿಕೊಂಡಿವೆ. ಒಣಗಿದ ಕೊಂಬೆ, ತರಗೆಲೆ ಬಿದ್ದು ಕಸ ತುಂಬಿಕೊಂಡಿದೆ. ಆದರೂ ಇವುಗಳನ್ನು ತೆರವುಗೊಳಿಸಿಲ್ಲ' ಎಂದು ಸ್ಥಳೀಯರು ದೂರಿದರು.

'ಬಿಬಿಎಂ ಮುಖ್ಯ ಆಯುಕ್ತರು, ಸಂಬಂಧಪಟ್ಟ ಅಧಿಕಾರಿಗಳು ಉದ್ಯಾನಕ್ಕೆ ಭೇಟಿ ನೀಡಿ ಜಿಮ್ ಪರಿಕರಗಳನ್ನು ಪರಿಶೀಲಿಸಬೇಕು. ಹಾಳಾಗಿರುವ ಪರಿಕರಗಳನ್ನು ದುರಸ್ತಿಗೊಳಿಸಬೇಕು. ಉದ್ಯಾನದಲ್ಲಿ ಗಲಾಟೆ ಮಾಡುವವರನ್ನು ನಿಯಂತ್ರಿಸಬೇಕು' ಎಂದು ಸ್ಥಳೀಯರು ಆಗ್ರಹಿಸಿದರು.

ಕೇಂದ್ರಿಯ ವಿದ್ಯುತ್ ಸಂಶೋಧನಾ ಸಂಸ್ಥೆ

(ಭಾರತ ಸರ್ಕಾರದ ಸೊಸೈಟಿ, ವಿದ್ಯುತ್ ಸಚಿವಾಲಯ)
ಅಂಚೆ ಪೆಟ್ಟಿಗೆ ಸಂಖ್ಯೆ. 8066, ಪ್ರೊ. ಸರ್. ಸಿ.ವಿ.ರಾಮನ್ ರಸ್ತೆ
ಸದಾಶಿವನಗರ ಅಂಚೆ ಕಚೇರಿ, ಬೆಂಗಳೂರು – 560080

ಜಾಹೀರಾತು ಸಂ. ಸಿಪಿಆರ್‌ಐ/09/2025

ಸಿಪಿಆರ್‌ಐ ಇವರು ನೇರ ನೇಮಕಾತಿ ವಿಧಾನದಲ್ಲಿ ಕೆಳಕಂಡ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದ್ದಾರೆ:

ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	7ನೇ ಸಿಪಿಸಿ ಮೇರೆಗಿನ ಪೇ ಲೆವೆಲ್ ವೇತನ ಶ್ರೇಡಿ	ಗರಿಷ್ಠ ವಯೋಮಿತಿ
ನಿರ್ದೇಶಕ	1	ಲೆವೆಲ್ 14	55 ವರ್ಷ

ಅರ್ಹತಾ ಮಾನದಂಡ, ಶೈಕ್ಷಣಿಕ ವಿದ್ಯಾರ್ಹತೆ, ಅನುಭವ, ಅರ್ಜಿ ನಮೂನೆ, ಪ್ರಮುಖ ಸೂಚನೆ ಮುಂತಾದವುಗಳಿಗಾಗಿ, ದಯವಿಟ್ಟು ಸಿಪಿಆರ್‌ಐ'ನ https://cpri.res.in ವೆಬ್‌ಸೈಟ್‌ನಲ್ಲಿ ಕರಿಯರ್ ಪುಟದಲ್ಲಿ ಇರುವ ವಿವರವಾದ ಜಾಹೀರಾತನ್ನು ಪರಿಶೀಲಿಸಿರಿ.

CBC 34104/12/0006/2526
ಮುಖ್ಯ ಆಡಳಿತಾಧಿಕಾರಿ

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ನಂ.1, 1ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034.
Ph: 080–25526266/25526288. website: www.csbank.in

ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆ

ನಮ್ಮ ಬ್ಯಾಂಕಿನ 2024–25ನೇ ಸಾಲಿನ 25ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ ರಜತ ಮಹೋತ್ಸವ (Silver Jubilee)ವನ್ನು ದಿನಾಂಕ: 17/08/2025ನೇ ಭಾನುವಾರ ಬೆಳಿಗ್ಗೆ 10:30 ಘಂಟೆಗೆ ಸೈಂಟ್ ಜಾನ್ಸ್ ಆಡಿಟೋರಿಯಂ, ಮಹಾಯೋಗಿ ವೇಮನ ರಸ್ತೆ, ಬಿಡಿಎ ಕಾಂಪ್ಲೆಕ್ಸ್ ಎದುರು, ಕೋರಮಂಗಲ, ಬೆಂಗಳೂರು–560034 ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರು ಈ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಸಭೆಯ ಸೂಚನಾ ಪತ್ರವನ್ನು ಸದಸ್ಯರಿಗೆ ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ತಲುಪದೇ ಇದ್ದಲ್ಲಿ, ಈ ಪ್ರಕಟಣೆಯನ್ನೇ ಸೂಚನಾ ಪತ್ರವೆಂದು ತಿಳಿದು ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ವಾರ್ಷಿಕ ವರದಿಯು ಬ್ಯಾಂಕಿನ ವೆಬ್‌ಸೈಟ್ (www.csbank.in) ಲಿಂಕ್‌ನಲ್ಲಿ ಲಭ್ಯವಿರುತ್ತದೆ.

ದಿನಾಂಕ: 14/08/2025
ಸ್ಥಳ: ಬೆಂಗಳೂರು

ಆಡಳಿತ ಮಂಡಳಿಯ ಪರವಾಗಿ,
ಸಹಿ/- (ಶಿವಣ್ಣ ಕೆ.ಬಿ.)
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಆಡಳಿತ ಮಂಡಳಿಯ ಸದಸ್ಯರು



ಎಂ. ಮುನಿರೆಡ್ಡಿ ಅಧ್ಯಕ್ಷರು; ನಾರಾಯಣ ಎಸ್. ಭಟ್ ಉಪಾಧ್ಯಕ್ಷರು; ಪಿ.ವಿ.ವೆಂಕಟೇಶ ಅಯ್ಯರ್ ನಿರ್ದೇಶಕರು; ಜಿ. ನಾಗೇಶ್ವರರಾವ್ ನಿರ್ದೇಶಕರು; ಕೆ. ರವೀಂದ್ರ ನಿರ್ದೇಶಕರು; ಜಿ.ಎನ್.ಮುನಿವೆಂಕಟಪ್ಪ ನಿರ್ದೇಶಕರು; ಗುರುಮೂರ್ತಿ ರೆಡ್ಡಿ ನಿರ್ದೇಶಕರು; ಎಂ. ಮುರಳೀಧರ್ ನಿರ್ದೇಶಕರು; ಡಿ. ಪೃಥ್ವಿರಾಜ್ ನಿರ್ದೇಶಕರು; ಗೋವಿಂದಪ್ಪ ಕೆ.ಜಿ. ನಿರ್ದೇಶಕರು; ನರಸಿಂಹಮೂರ್ತಿ ಎ.ಎಂ. ನಿರ್ದೇಶಕರು; ಕಿಶೋರ್ ಕುಮಾರ್ ಎಸ್.ಆರ್. ನಿರ್ದೇಶಕರು; ಪಿ. ವರಲಕ್ಷ್ಮಿ ನಿರ್ದೇಶಕರು; ಉಮಾದೇವಿ ಕೆ. ನಿರ್ದೇಶಕರು

ಪ್ರಾರಂಭಿಕ ಅಧ್ಯಕ್ಷರು: ಎಂ. ನಾಗರಾಜ

ವ್ಯವಸ್ಥಾಪನಾ ಮಂಡಳಿ (Board of Management) ಸದಸ್ಯರು: ಡಾ|| ಮುನಿರೆಡ್ಡಿ ಆರ್; ಭಾಸ್ಕರ್ ಕೃಷ್ಣ; ಯೋಗೇಶ್ ವಿ. ಕೃಷ್ಣ; ನರಸಿಂಹನ್ ಕೆ

INTEREST RATES ON LOAN

Type of Loan	Interest Rate
Housing Loan	7.75% - 8.25%
Vehicle Loan	8.25% - 8.75%
Education Loan (Under Mortgage)	8.50% - 9.00%
Mortgage Loan	10.00%
Overdraft	10.25%

ಪ್ರಜಾವಾಣಿ

‘ಸ್ವಾತಂತ್ರ್ಯ ಸಂಗ್ರಾಮದ ವೀರ ಕನ್ನಡತಿಯರ’ ಪ್ರದರ್ಶನ

ಹೇರೋಹಳ್ಳಿಯ ಬಿಬಿಎಂಪಿ ಸಂಯುಕ್ತ ಕಾಲೇಜಿನ ವಿದ್ಯಾರ್ಥಿಗಳು ಸ್ವಾತಂತ್ರ್ಯ ಸಂಗ್ರಾಮದ ವೀರ ಕನ್ನಡತಿಯರ ಸಮೂಹ ನೃತ್ಯ ಪ್ರಸ್ತುತಪಡಿಸಿದರು

ಸ್ವಾತಂತ್ರ್ಯೋತ್ಸವದಲ್ಲಿ ಆಕರ್ಷಕ ಪಥಸಂಚಲನ • ಗೋವಾ ಪೊಲೀಸರ ಆಕರ್ಷಣೆ

ಪೊಲೀಸ್ ಶ್ವಾನ ದಳದ ಪಥಸಂಚಲನ ನಡೆಯಿತು ಚಿತ್ರ: ಪ್ರಶಾಂತ್ ಎಚ್.ಜಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಬ್ಯಾಂಡ್‌ಗಳ ಕನ್ನಡ, ಹಿಂದಿಯ ದೇಶಭಕ್ತಿ ಗೀತೆಗಳ ಇಂಪು, 694 ಮಕ್ಕಳು ವೀರ ಮಹಿಳೆಯರ ರೂಪದಲ್ಲಿ ಹೆಜ್ಜೆ, ರಮಣಶ್ರೀ ಅಂಧರ ಶಾಲೆ ವಿದ್ಯಾರ್ಥಿಗಳ ನೃತ್ಯ, ಕರ್ನಾಟಕ ಜೊತೆಗೆ ಗೋವಾ ಪೊಲೀಸ್ ಪಡೆ ಪಥ ಸಂಚಲನಗಳು ಸ್ವಾತಂತ್ರ್ಯೋತ್ಸವ ಸಂಭ್ರಮವನ್ನು ಹೆಚ್ಚಿಸಿದವು.

79ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಬಿಬಿಎಂಪಿ ಹಾಗೂ ಶಾಲಾ ಶಿಕ್ಷಣ ಇಲಾಖೆ ಆಯೋಜಿಸಿದ್ದ ರಾಜ್ಯಮಟ್ಟದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ, ಪಥ ಸಂಚಲನ ಜನರನ್ನು ಆಕರ್ಷಿಸಿದವು. ಅಂಗವಿಕಲ ಹಾಗೂ ಅಂಧ ಮಕ್ಕಳು ಪಥಸಂಚಲನಕ್ಕೆ ಕಳೆ ತಂದರು. ಶ್ವಾನದಳದ ‘ವಿಶೇಷ ನಡಿಗೆ’ ಗಮನ ಸೆಳೆಯಿತು. ಭಾಗವಹಿಸಿದ್ದ ವಿದೇಶಿಯರು, ವಿವಿಧ ಕಲಾ ಪ್ರದರ್ಶನಗಳನ್ನು ಕಂಡು ಸಂತಸಗೊಂಡರು.

30 ನಿಮಿಷ ನಡೆದ ಪಥ ಸಂಚಲನದಲ್ಲಿ 36 ತಂಡಗಳು ಭಾಗಿಯಾಗಿದ್ದವು. ಬಿಎಸ್‌ಎಫ್, ಕೆಎಸ್‌ಆರ್‌ಪಿ, ಗೋವಾ ಪೊಲೀಸ್, ಮೀಸಲು ಕಡೆ, ಕರ್ನಾಟಕ ಕೈಗಾರಿಕಾ ಭದ್ರತೆ ಪಡೆ, ಸಂಚಾರ ವಿಭಾಗ, ಸಿವಿಲ್ ಡಿಫೆನ್ಸ್, ಎನ್‌ಸಿಸಿ, ಸ್ಕೌಟ್ಸ್, ಸೇವಾದಳ, ಶ್ವಾನದಳ, ಅಗ್ನಿಶಾಮಕ, ಅಬಕಾರಿ, ಗೃಹರಕ್ಷಕ ದಳದ ತಂಡಗಳು ಹೆಜ್ಜೆ ಹಾಕಿದವು. ತಂಡದ ನಾಯಕರ ನೇತೃತ್ವದಲ್ಲಿ ಮುಂದೆ ಸಾಗಿದ ಪಡೆಗಳಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಗೌರವ ವಂದನೆ ಸ್ವೀಕರಿಸಿದರು.

ಬೆಂಗಳೂರು ಮಿತ್ರ ಅಕಾಡೆಮಿ, ರಾಷ್ಟ್ರೀಯ ಮಿಲಿಟರಿ ಶಾಲೆ, ಕೋರಮಂಗಲ ಪೊಲೀಸ್ ಪಬ್ಲಿಕ್ ಶಾಲೆ, ಯಶವಂತಪುರ ಬಾಪು ಪ್ರೌಢಶಾಲೆ, ಕಾರ್ಮೆಲ್ ಮಾಡೆಲ್ ಶಾಲೆಯ ವಿದ್ಯಾರ್ಥಿಗಳು ಪಥಸಂಚಲನ ನಡೆಸಿದರು. ಸಮರ್ಥನಂ ಶಾಲೆಯ ಅಂಗವಿಕಲ ಮಕ್ಕಳು ಕೂಡ ಹೆಜ್ಜೆ ಹಾಕಿ ದೇಶ ಪ್ರೇಮ ಮೆರೆದರು. ರಮಣಶ್ರೀ ಅಂಧರ ಶಾಲೆ ವಿದ್ಯಾರ್ಥಿಗಳು ಭಾಗಿಯಾಗಿದ್ದು ವಿಶೇಷವಾಗಿತ್ತು. ವಿವಿಧ ವಿಭಾಗಗಳಲ್ಲಿ ವಿಜೇತರಾದ ತಂಡಗಳಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು. ಗೋವಾ ಪೊಲೀಸ್ ತಂಡಕ್ಕೂ ಬಹುಮಾನ ಲಭಿಸಿತು.

ಮಿತ್ರ ಅಕಾಡೆಮಿಯ ವಿದ್ಯಾರ್ಥಿಗಳಿಂದ ಆಕರ್ಷಕ ಪಥಸಂಚಲನ ನಡೆಯಿತು

ವೀರ ಕನ್ನಡತಿಯರು: ಬಿಬಿಎಂಪಿ ರೂಪಿಸಿದ್ದ ‘ಸ್ವಾತಂತ್ರ್ಯ ಸಂಗ್ರಾಮದ ವೀರ ಕನ್ನಡತಿಯರು’ ಎನ್ನುವ ನೃತ್ಯ ರೂಪಕವೂ ಗಮನ ಸೆಳೆಯಿತು. 694 ಮಕ್ಕಳು ವಿವಿಧ ವೀರ ಮಹಿಳೆಯರ ರೂಪದಲ್ಲಿ ಹೆಜ್ಜೆ ಹಾಕಿದರು. ರಾಣಿ ಅಬ್ಬಕ್ಕದೇವಿಯಿಂದ ಆರಂಭಗೊಂಡು ಕಿತ್ತೂರು ರಾಣಿ ಚನ್ನಮ್ಮ, ಬೆಳವಾಡಿ ಮಲ್ಲಮ್ಮ, ಒನಕೆ ಓಬವ್ವ, ಬಳ್ಳಾರಿ ಸಿದ್ದಮ್ಮ ಸಹಿತ ಹಲವರ ಶೌರ್ಯ ಹಾಗೂ ತ್ಯಾಗವನ್ನು ಸ್ಮರಿಸಲಾಯಿತು.

ಪೊಲೀಸ್ ಬ್ಯಾಂಡ್: ಮೂರನೇ ಕಾರ್ಯಕ್ರಮವಾಗಿ ವಿವಿಧ ಪೊಲೀಸ್ ಬ್ಯಾಂಡ್‌ಗಳು ನಾಡು ಹಾಗೂ ದೇಶಭಕ್ತಿ ಹಿನ್ನೆಲೆಯ ಹಾಡುಗಳನ್ನು ಪ್ರಸ್ತುತಪಡಿಸಿದವು. ‘ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು..’ ಎನ್ನುವ ಗೀತೆಯೊಂದಿಗೆ ಆರಂಭಗೊಂಡು, ‘ಇದೇ ನಾಡು ಇದೇ ಭಾಷೆ..’, ‘ಜೋಗದ ಸಿರಿ ಬೆಳಕಿನಲ್ಲಿ..’ ಹಾಡುಗಳು, ವೈಷ್ಣವ ಜನತೋ, ರಘುಪತಿ ರಾಘವ ರಾಜಾರಾಂ ಗೀತೆ ಗಳನ್ನು ಸಂಗೀತಗಾರರು ಪ್ರಸ್ತುತಪಡಿಸಿದರು. ‘ಸಾರೆ ಜಹಾಂ ಸೇ ಅಚ್ಛಾ..’ ಗೀತೆಯೊಂದಿಗೆ ಪಥ ಸಂಚಲನಕ್ಕೆ ತೆರೆ ಬಿತ್ತು.

ಗ್ಯಾರಂಟಿ ನೃತ್ಯ

ಸ್ವಾತಂತ್ರ್ಯೋತ್ಸವದಲ್ಲಿ ‘ಗ್ಯಾರಂಟಿ ನೃತ್ಯ’ ವಿಶೇಷವಾಗಿತ್ತು. ಗ್ಯಾರಂಟಿ ಯೋಜನೆಗಳನ್ನು ಮುಖ್ಯವಾಗಿಟ್ಟುಕೊಂಡು, ‘ಹೋಯಿತು ಅಂಧಕಾರ, ಉಚಿತ ಸಂಚಾರ, ಒಳ್ಳೆಯ ಆಹಾರವು 78ನೇ ವರ್ಷಕ್ಕೆ, ಮನೆ ಮನೆಗೂ ಸ್ವಾತಂತ್ರ್ಯವೂ’ ಎನ್ನುವ ಗೀತೆಗೆ ವಿದ್ಯಾರ್ಥಿಗಳು ಹೆಜ್ಜೆ ಹಾಕಿದರು.

ಒಟ್ಟು 450 ಮಕ್ಕಳು ಕೇಸರಿ, ಬಿಳಿ, ಹಸಿರು ಉಡುಗೆಯೊಂದಿಗೆ ಯೋಜನೆಯನ್ನು ಜನರ ಮುಂದೆ ಬಿಡಿಸಿಟ್ಟಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮೆಚ್ಚುಗೆಗೂ ಪಾತ್ರವಾಯಿತು.

ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕ ಪೊಲೀಸ್ ಬ್ಯಾಂಡ್‌ನ ಪ್ರದರ್ಶನ

ಚಿಟಿಕೆ ಸುದ್ದಿ

ಮತ ಕಳ್ಳತನದಿಂದ ದೇಶದ ಗೌರವಕ್ಕೆ ಧಕ್ಕೆ: ಡಿಕೆಶಿ

ಬೆಂಗಳೂರು: ಕೆಪಿಸಿಸಿ ಕಚೇರಿಯಲ್ಲಿ 79ನೇ ಸ್ವಾತಂತ್ರ್ಯ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರು, ಬಲಿದಾನ ಮಾಡಿದವರು ಕಾಂಗ್ರೆಸಿಗರು. ಇತಿಹಾಸವನ್ನು ಜನರಿಗೆ ತಲುಪಿಸಬೇಕು’ ಎಂದು ಹೇಳಿದರು.

‘ಕುತಂತ್ರಗಳ ಮೂಲಕ ಈ ಸ್ವಾತಂತ್ರ್ಯಕ್ಕೆ ಧಕ್ಕೆ ತರುವವರು ಸಂವಿಧಾನ ವಿರೋಧಿಗಳು ಮಾತ್ರವಲ್ಲ, ಜೀವ ವಿರೋಧಿಗಳು. ಸಮಾಜಘಾತುಕರು. ಮತ ಕಳ್ಳತನ ದೇಶದ ಗೌರವಕ್ಕೆ ಧಕ್ಕೆ ತರುತ್ತಿದೆ’ ಎಂದರು.

ಜೆಡಿಎಸ್ ಕಚೇರಿ: ಧ್ವಜಾರೋಹಣ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ಅವರ ಹನ್ನೊಂದು ವರ್ಷಗಳ ಆಡಳಿತದಲ್ಲಿ ಭಾರತದ ಶತ್ರುಗಳು ಕಂಗಾಲಾಗಿದ್ದಾರೆ. ಆಪರೇಷನ್ ಸಿಂಧೂರ ಹೆಮ್ಮೆಯ ಕಾರ್ಯಾಚರಣೆ ಆಗಿದ್ದು, ಪಾಕಿಸ್ತಾನದಲ್ಲಿ ಅಡಗಿ ಕುಳಿತಿದ್ದ ಭಯೋತ್ಪಾದಕರ ಮೇಲೆ ನಿರ್ದಿಷ್ಟ ದಾಳಿ ನಡೆಸಿದ ಸೇನೆಯ ಪರಾಕ್ರಮವನ್ನು ನಾವು ಸ್ಮರಿಸಬೇಕು’ ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ ಹೇಳಿದರು.

ಜೆಡಿಎಸ್ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಮಾಜಿ ಶಾಸಕರಾದ ಎಂ.ಎಸ್. ನಾರಾಯಣರಾವ್, ಆರ್. ಚೌಡರೆಡ್ಡಿ ತೂಪಲ್ಲಿ, ಕೆಎಸ್‌ಆರ್‌ಟಿಸಿ ಮಾಜಿ ಅಧ್ಯಕ್ಷ ಟಿ.ಪ್ರಭಾಕರ್, ಬೆಂಗಳೂರು ನಗರ ಉಸ್ತುವಾರಿ ಜಗದೀಶ್ ನಾಗರಾಜಯ್ಯ, ಬೆಂಗಳೂರು ಮಹಿಳಾ ಘಟಕದ ಅಧ್ಯಕ್ಷೆ ಶೈಲಾ ಸಂತೋಜಿ ರಾವ್ ಭಾಗವಹಿಸಿದ್ದರು.

‘ಮೋದಿಯಿಂದ ಸ್ವಾತಂತ್ರ್ಯದ ಮನವರಿಕೆ’

ಬೆಂಗಳೂರು: ‘ತ್ರಿವರ್ಣ ಧ್ವಜವನ್ನು ಮನೆ ಮನೆಗೆ ತಲುಪಿಸಿ ಯುವಜನರಿಗೆ ಸ್ವಾತಂತ್ರ್ಯದ ಮಹತ್ವವನ್ನು ಪ್ರಧಾನಿ ನರೇಂದ್ರ ಮೋದಿ ಮನವರಿಕೆ ಮಾಡಿದ್ದಾರೆ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಧ್ವಜಾರೋಹಣ ಮಾಡಿ ಅವರು ಮಾತನಾಡಿದರು.

‘ಆರ್‌ಎಸ್‌ಎಸ್ ಇಲ್ಲದೇ ಹೋಗಿದ್ದರೆ ನಾವು ಪಾಕಿಸ್ತಾನ ಅಥವಾ ಬಾಂಗ್ಲಾದೇಶ ಆಗಿರುತ್ತಿದ್ದೆವೋ ಏನೋ’ ಎಂದರು.

ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಮಾತನಾಡಿ, ‘ಜಾತಿ, ಧರ್ಮ, ಭಾಷೆ ಮೊದಲು ದೇಶ ನಂತರ ಎಂಬುದು ಸರಿಯಲ್ಲ. ಇದರಿಂದ ದೇಶ ಏಕತೆಯಿಂದ ಉಳಿಯಲು ಸಾಧ್ಯವಾಗದು’ ಎಂದರು.

ಸಂಸದ ಪಿ.ಸಿ. ಮೋಹನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ, ರಾಜ್ಯ ಕಾರ್ಯದರ್ಶಿ ಲಕ್ಷ್ಮೀ ಅಶ್ವಿನ್ ಗೌಡ, ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್, ವಿಧಾನಪರಿಷತ್ ಮಾಜಿ ಸದಸ್ಯ ಎ.ಎಚ್. ಶಿವಯೋಗಿಸ್ವಾಮಿ, ರಾಜ್ಯ ಬಿಜೆಪಿ ಮಾಜಿ ಕಾರ್ಯದರ್ಶಿ ಜಗದೀಶ್ ಹಿರೇಮನಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್ ಉಪಸ್ಥಿತರಿದ್ದರು.

ಕಸಾಪ, ನಗರ ವಿ.ವಿ, ಬಿಬಿಎಂಪಿ, ವಿವಿಧ ಶಾಲಾ ಕಾಲೇಜುಗಳಲ್ಲಿ ಸಡಗರ

ವಿವಿಧೆಡೆ ಸಂಭ್ರಮದ ಸ್ವಾತಂತ್ರ್ಯೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬಿಬಿಎಂಪಿ ಸೇರಿದಂತೆ ನಗರದ ವಿವಿಧೆಡೆ ಸಂಭ್ರಮದಿಂದ 79ನೇ ಸ್ವಾತಂತ್ರ್ಯ ದಿನಾಚರಣೆ ನಡೆಯಿತು.

ಕಸಾಪ: ‘ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಎಲ್ಲ ಸ್ತರದ ಜನರು ಸಕ್ರಿಯವಾಗಿ ಕೊಡುಗೆಗಳನ್ನು ನೀಡಿದ್ದರು. ಇತಿಹಾಸ ಪುಟಗಳಲ್ಲಿ ದಾಖಲಾಗದೆ ಹೋದ ಸಾವಿರಾರು ಅಜ್ಞಾತ ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ, ಮಾಸಾಶನ, ತಾಮ್ರಪಟದ ಗೌರವವನ್ನು ನಿರಾಕರಿಸಿದ ಸ್ವಾಭಿಮಾನಿಗಳಿದ್ದಾರೆ’ ಇವರೆಲ್ಲರನ್ನೂ ನಾವು ಸ್ಮರಿಸಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಬಿ.ಎಂ.ಪಟೇಲ್ ಪಾಂಡು, ಎಚ್.ಬಿ. ಮದನ ಗೌಡ, ಗೌರವ ಕೋಶಾಧ್ಯಕ್ಷ ಡಿ.ಆರ್. ವಿಜಯ ಕುಮಾರ್ ಭಾಗವಹಿಸಿದ್ದರು.

ನಗರ ವಿವಿ: ‘ದೇಶದಲ್ಲಿ ಬಡತನದ ಸಂಪೂರ್ಣ ನಿವಾರಣೆ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಸುಧಾರಣೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ’ ಎಂದು ಸೈನಿಕ ಕಲ್ಯಾಣ ಇಲಾಖೆಯ ನಿವೃತ್ತ ನಿರ್ದೇಶಕ ಬ್ರಿಗೇಡಿಯರ್ ಎಂ.ಬಿ.ಶಶಿಧರ್ ಪ್ರತಿಪಾದಿಸಿದರು.

ಬೆಂಗಳೂರು ನಗರ ವಿಶ್ವ ವಿದ್ಯಾಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಭಾರ ಕುಲಪತಿ ಕೆ.ಆರ್. ಜಲಜಾ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ ಎ. ನವೀನ್ ಜೋಸೆಫ್, ಕುಲಸಚಿವ (ಮೌಲ್ಯಮಾಪನ) ಬಿ.ರಮೇಶ್, ಬಿಸಿಯು ಸಿಂಡಿಕೇಟ್ ಸದಸ್ಯ ಎಚ್. ಕೃಷ್ಣರಾಮ್, ರಾಷ್ಟ್ರೀಯ ಹಬ್ಬಗಳ ಸಂಚಾಲಕ ಕೆ.ಶಿವಶಂಕರ್ ಉಪಸ್ಥಿತರಿದ್ದರು.

ಬಿಬಿಎಂಪಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಚೇರಿಯ ಆವರಣದಲ್ಲಿ ಬಿಬಿಎಂಪಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಹಾಗೂ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಧ್ವಜಾರೋಹಣ ನೆರವೇರಿಸಿದರು. ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ. ಹರೀಶ್ ಕುಮಾರ್, ಪ್ರೀತಿ ಗೆಹಲೋತ್, ಹೆಚ್ಚುವರಿ ಆಯುಕ್ತ ಅಜಿತ್ ಹೆಗ್ಡೆ, ಮುಖ್ಯ ಲೆಕ್ಕಾಧಿಕಾರಿ ಬೀನಾ ಉಪಸ್ಥಿತರಿದ್ದರು.

ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ನಿವೃತ್ತ ಸೇನಾಧಿಕಾರಿ ಕರ್ನಲ್ ಪಿ.ವಿ.ಹರಿ, ಇಸ್ರೊ ಉಪ ನಿಯಂತ್ರಣಾಧಿಕಾರಿ ನಾಗಲಕ್ಷ್ಮಿ, ಮುಖಂಡರಾದ ಕೆ.ಸಿ.ಜಗನ್ನಾಥ ರೆಡ್ಡಿ, ಬಿ.ಗೋವಿಂದರಾಜು, ಎಚ್.ಎ.ಪುಲಕೇಶಿ ಭಾಗವಹಿಸಿದ್ದರು

ಜಾಥಾ: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಕಾಲ್ನಡಿಗೆ ಜಾಥಾಗೆ ತುಷಾರ್ ಗಿರಿನಾಥ್ ಹಾಗೂ ಮಹೇಶ್ವರ್ ರಾವ್ ಚಾಲನೆ ನೀಡಿದರು. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಸಂಘದ ವತಿಯಿಂದ ನವೆಂಬರ್‌ನಲ್ಲಿ ಆಯೋಜಿಸಿರುವ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಮತ್ತು ಉಗ್ರರ ದಾಳಿಯಲ್ಲಿ ಮಡಿದವರಿಗೆ ನುಡಿನಮನ ಕಾರ್ಯಕ್ರಮದ ಲಾಂಛನವನ್ನು ಕೂಡ ಇದೇ ವೇಳೆ ಬಿಡುಗಡೆ ಮಾಡಲಾಯಿತು.

ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ನೇತೃತ್ವದಲ್ಲಿ ಬಿಬಿಎಂಪಿ ಕೇಂದ್ರ ಕಚೇರಿಯಿಂದ ಎಂ.ಜಿ. ರಸ್ತೆಯ ಗಾಂಧಿ ಪ್ರತಿಮೆವರೆಗೆ ಬಿಬಿಎಂಪಿ ಸಿಬ್ಬಂದಿ ಕಾಲ್ನಡಿಗೆ ಜಾಥಾ ಮೂಲಕ ಸಾಗಿ, ಮಹಾತ್ಮ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಕೆಇಎ ಕಚೇರಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕಚೇರಿಯಲ್ಲಿ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಧ್ವಜಾರೋಹಣ ಮಾಡಿದರು. ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಹಾಜರಿದ್ದರು.

ಕೇಂದ್ರೀಯ ವಿದ್ಯಾಲಯ: ಮಲ್ಲೇಶ್ವರದಲ್ಲಿರುವ ಪ್ರಧಾನ ಮಂತ್ರಿ ಕೇಂದ್ರೀಯ ವಿದ್ಯಾಲಯದ ಎನ್‌ಸಿಸಿ, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಕಾಲ್ನಡಿಗೆ ಜಾಥಾಕ್ಕೆ ತುಷಾರ್ ಗಿರಿನಾಥ್ ಹಾಗೂ ಮಹೇಶ್ವರ್ ರಾವ್ ಚಾಲನೆ ನೀಡಿದರು

ಅಹಮದಾಬಾದ್‌ನಲ್ಲಿ ಸ್ವಿಮ್ಮಿಂಗ್ ಫೆಡರೇಶನ್ ಆಫ್ ಇಂಡಿಯಾ (ಎಸ್‌ಎಫ್‌ಐ) ಆಯೋಜಿಸಿದ್ದ 51ನೇ ಜೂನಿಯರ್ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ, ವಿವಿಧ ಸ್ಪರ್ಧೆಗಳಲ್ಲಿ ಮೂರು ಚಿನ್ನ, ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕ ಪಡೆದ ಒಂಬತ್ತನೇ ತರಗತಿ ವಿದ್ಯಾರ್ಥಿ ಸುಬ್ರಹ್ಮಣ್ಯ ಜೀವನ್ ಅವರನ್ನು ಪ್ರಾಂಶುಪಾಲ ಅನಿಲ್ ಕುಮಾರ್ ಈ ಸಂದರ್ಭದಲ್ಲಿ ಗೌರವಿಸಿದರು.

ಜೈನ್ ವಿವಿ: ಜೈನ್ ವಿಶ್ವವಿದ್ಯಾಲಯದಲ್ಲಿ (ಡೀಮ್ಡ್-ಟು-ಬಿ ಯೂನಿವರ್ಸಿಟಿ) ಭಾರತೀಯ ವಾಯುಪಡೆಯ ಮಾಜಿ ಉಪ ಮುಖ್ಯಸ್ಥ, ನಿವೃತ್ತ ಏರ್ ಮಾರ್ಷಲ್ ಅನಿಲ್ ಖೋಸ್ಲಾ ಅವರ ನೇತೃತ್ವದಲ್ಲಿ ಧ್ವಜಾರೋಹಣ ನೆರವೇರಿತು. ಸಹಕುಲಾಧಿಪತಿ ದಿನೇಶ್ ನೀಲಕಂಠ್, ಪ್ರಭಾರ ಕುಲಪತಿ ಜಿತೇಂದ್ರಕುಮಾರ್ ಮಿಶ್ರಾ ಭಾಗವಹಿಸಿದ್ದರು.

ಕೆವಿಡಿಆರ್‌ಡಿಒ: ಸಿ.ವಿ. ರಾಮನ್ ನಗರದ ಕೇಂದ್ರೀಯ ವಿದ್ಯಾಲಯ ಡಿಆರ್‌ಡಿಒ ವತಿಯಿಂದ ತಿರಂಗ ರ‍್ಯಾಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 170 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಥಣಿಸಂದ್ರ: ಅಂಬೇಡ್ಕರ್ ಅಲ್ಪಸಂಖ್ಯಾತರ ಸಂಘದ ವತಿಯಿಂದ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ಸಂಘದ ಅಧ್ಯಕ್ಷ ಅಬ್ದುಲ್ ಸುಬಾನ್, ಪದಾಧಿಕಾರಿಗಳಾದ ಇಕ್ರಂ ವಸೀಂ, ದಾದಾವಲಿ ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಧ್ವಜಾರೋಹಣ ನೆರವೇರಿಸಿ, ಮಹಾತ್ಮ ಗಾಂಧೀಜಿ, ಬಿ.ಆರ್.ಅಂಬೇಡ್ಕರ್, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಭಾವಚಿತ್ರಗಳಿಗೆ ನಮನ ಸಲ್ಲಿಸಿದರು. ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ನಂದಿನಿದೇವಿ ಕೆ., ನಿರ್ದೇಶಕ (ಮಾಹಿತಿ ಮತ್ತು ತಂತ್ರಜ್ಞಾನ) ಇಬ್ರಾಹಿಂ ಮೈಗೂರ ಮತ್ತು ನೌಕರರು ಉಪಸ್ಥಿತರಿದ್ದರು

ರೈಲು ಗಾಲಿ ಕಾರ್ಖಾನೆ: ವಿದ್ಯಾರ್ಥಿಗಳ ಪಥಸಂಚಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ರೈಲ್ವೆ ವಿಭಾಗ, ರೈಲು ಗಾಲಿ ಕಾರ್ಖಾನೆಗಳಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು.

ರೈಲು ಗಾಲಿ ಕಾರ್ಖಾನೆ: ಯಲಹಂಕದಲ್ಲಿರುವ ರೈಲು ಗಾಲಿ ಕಾರ್ಖಾನೆಯಲ್ಲಿ ಕಾರ್ಖಾನೆಯ ಪ್ರಧಾನ ಪ್ರಬಂಧಕ ಚಂದ್ರವೀರ್ ರಮಣ ಧ್ವಜಾರೋಹಣ ಮಾಡಿದರು.

ರೈಲ್ವೆ ರಕ್ಷಣಾ ದಳ, ಎನ್‌ಸಿಸಿ ಬಾಲಕರು ಮತ್ತು ಬಾಲಕಿಯರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಂದ ಪಥಸಂಚಲ ನಡೆಯಿತು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ರೈಲು ಗಾಲಿ ಕಾರ್ಖಾನೆಯ ಮಹಿಳಾ ಕಲ್ಯಾಣ ಸಂಸ್ಥೆಯ ಶಿವಾನಿ ಸಿಂಗ್ ಮತ್ತು ಇತರ ಪದಾಧಿಕಾರಿಗಳು ರೈಲ್ವೆ ಆಸ್ಪತ್ರೆಗೆ ಭೇಟಿ ನೀಡಿ, ಹಣ್ಣುಗಳನ್ನು ಹಂಚಿದರು.

ರೈಲ್ವೆ ವಿಭಾಗ: ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ವ್ಯವಸ್ಥಾಪಕ ಆಶುತೋಷ್ ಕುಮಾರ್ ಸಿಂಗ್ ಧ್ವಜಾರೋಹಣ ನೆರವೇರಿಸಿದರು.

ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕರಾದ ಪರೀಕ್ಷಿತ್ ಮೋಹನ್ ಪುರಿಯಾ, ಪ್ರವೀಣ್ ಕಾತರಕಿ, ಹಿರಿಯ ವಿಭಾಗೀಯ ಭದ್ರತಾ ಆಯುಕ್ತ ಶ್ರೇಯಾನ್ಸ್ ಚಿಂಚ್ವಾಡೆ, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮಾ, ನೈರುತ್ಯ ರೈಲ್ವೆ ಮಹಿಳಾ ಕ್ಷೇಮಾಭಿವೃದ್ಧಿ ಸಂಘಟನೆಯ ಬೆಂಗಳೂರು ವಿಭಾಗದ ಅಧ್ಯಕ್ಷೆ ರೀನಾ ಸಿಂಗ್ ಉಪಸ್ಥಿತರಿದ್ದರು.

ನೀರು ಶುದ್ಧೀಕರಣ ಯಂತ್ರ: ಸ್ವಾತಂತ್ರ್ಯೋತ್ಸವದ ಅಂಗವಾಗಿ ಬೆಂಗಳೂರು ವಿಭಾಗದ ನೈಋತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಘಟನೆಯು ವಿಭಾಗೀಯ ರೈಲ್ವೆ ಆಸ್ಪತ್ರೆಗೆ ನೀರು ಶುದ್ಧೀಕರಣದ ಎರಡು ಯಂತ್ರಗಳನ್ನು ನೀಡಿತು. ರೈಲ್ವೆ ಮಹಿಳಾ ಕಲ್ಯಾಣ ಸಂಘಟನೆಯ ಅಧ್ಯಕ್ಷೆ ರೀನಾ ಸಿಂಗ್, ಕಾರ್ಯದರ್ಶಿ ನಿಧಿ ಶರ್ಮಾ, ಖಜಾಂಚಿ ಭಾಗ್ಯಶ್ರೀ, ಮುಖ್ಯ ವೈದ್ಯಕೀಯ ಅಧೀಕ್ಷಕಿ ಪ್ರಭಾವತಿ ಗಜಲಕ್ಷ್ಮಿ ಉಪಸ್ಥಿತರಿದ್ದರು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್.ಶಿವಣ್ಣ ಮಳವಳ್ಳಿ ಅವರು ನಗರದಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವ ಹನ್ನೆರಡು ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಶುಕ್ರವಾರ ಲ್ಯಾಪ್‌ಟಾಪ್ ವಿತರಿಸಿದರು

ಧ್ವಜಾರೋಹಣ

ನಗರದ ಕೇಂದ್ರ ಕಚೇರಿಯಲ್ಲಿ ಶುಕ್ರವಾರ ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಸತ್ಯನಾರಾಯಣ ರಾಜು ಅವರು ಧ್ವಜಾರೋಹಣ ನೆರವೇರಿಸಿದರು

ಸ್ವಾತಂತ್ರ್ಯೋತ್ಸವ ದಿನ ಲಾಲ್‌ಬಾಗ್‌ಗೆ 1.79 ಲಕ್ಷ ಜನರ ಭೇಟಿ

ಫಲಪುಷ್ಪ ಪ್ರದರ್ಶನದಲ್ಲಿ ಜನಸಾಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ‘ವೀರರಾಣಿ ಕಿತ್ತೂರು ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ’ ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನ’ಕ್ಕೆ ಶುಕ್ರವಾರ 1.79 ಲಕ್ಷ ಮಂದಿ ಭೇಟಿ ನೀಡಿದ್ದರು.

1,45,720 ವಯಸ್ಕರು, 33,370 ಮಕ್ಕಳು ಭೇಟಿ ನೀಡಿದ್ದು, ಪ್ರವೇಶ ಶುಲ್ಕ ₹ 85 ಲಕ್ಷ ಸಂಗ್ರಹವಾಗಿದೆ ಎಂದು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಎಂ. ಜಗದೀಶ್ ತಿಳಿಸಿದ್ದಾರೆ.

ಸ್ವಚ್ಛತಾ ಸಿಬ್ಬಂದಿ ಮತ್ತು ವಿವಿಧ ಪರಿಸರ ಸಂಘಟನೆಗಳ ಸ್ವಯಂಸೇವಕರ ನೆರವಿನಿಂದ ಪ್ಲಾಸ್ಟಿಕ್ ಮುಕ್ತ ಫಲಪುಷ್ಪ ಪ್ರದರ್ಶನ ಮಾಡಿರುವುದು ಜನರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸ್ವಾತಂತ್ರ್ಯ ದಿನವನ್ನು ಆಚರಿಸಿದ ಬಳಿಕ ಬಹುತೇಕರು ಲಾಲ್‌ಬಾಗ್‌ಗೆ ಭಾರಿ ಸಂಖ್ಯೆಯಲ್ಲಿ ಭೇಟಿ ನೀಡಿದರು. ಬಂಡೆ, ಕೆರೆ ಏರಿ, ಬೋನ್ಸಾಯ್, ತರಕಾರಿ ಉದ್ಯಾನ, ಮಾರಾಟ ಮಳಿಗೆಗಳ ಬಳಿ ಕಿಕ್ಕಿರಿದ ಜನಸಂದಣಿ ಇತ್ತು. ಗಾಜಿನ ಮನೆಯಲ್ಲಿ ಜನದಟ್ಟಣೆ ಉಂಟಾಗಿ, ಸಾಲುಗಳನ್ನು ನಿಯಂತ್ರಿಸಲು ತೋಟಗಾರಿಕೆ ಇಲಾಖೆ ಸಿಬ್ಬಂದಿ ಮತ್ತು ಪೊಲೀಸರು ಹರಸಾಹಸಪಟ್ಟರು.

ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದ ವೀಕ್ಷಣೆಗೆ ಶುಕ್ರವಾರ ಅಪಾರ ಸಂಖ್ಯೆಯಲ್ಲಿ ಜನರು ಬಂದಿದ್ದರು

ಎಕ್ಸಾಟಿಕ್ ಆರ್ಕಿಡ್ಸ್ ಜಾತಿಯ ಪೆಲನಾಪ್ಸಿಸ್, ಡೆಂಡ್ರೊಬಿಯಂ, ವಾಂಡಾ, ಮೊಕಾರಾ, ಕ್ಯಾಟ್ಲಿಯಾ, ಆನ್ಸಿಡಿಯಂ ಹಾಗೂ ಕ್ಯಾಲಾಲಿಲ್ಲಿ, ವೈವಿಧ್ಯಮಯ ಜಿರೇನಿಯಂ ಜಾತಿಯ ಹೂವು ಮತ್ತು ಎಲೆ ಜಾತಿಯ ಗಿಡಗಳನ್ನು ಜನರು ಕುತೂಹಲದಿಂದ ವೀಕ್ಷಿಸಿದರು.

ಟಿಕೆಟ್ ಪಡೆಯಲು ಜನರು ಸಾಲಿನಲ್ಲಿ ನಿಂತು ಕಾಯಬೇಕಾಯಿತು. ಲಾಲ್‌ಬಾಗ್ ಮುಖ್ಯ ಗೇಟಿನ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರೂ ಸಂಚಾರ ದಟ್ಟಣೆ ಉಂಟಾಗಿತ್ತು. ಉದ್ಯಾನದ ನಾಲ್ಕು ಪ್ರವೇಶ ದ್ವಾರಗಳ ಪಾದಚಾರಿ ಮಾರ್ಗದಲ್ಲಿ ಕಿರು ಮಾರುಕಟ್ಟೆಗಳೇ ಸೃಷ್ಟಿಯಾಗಿದ್ದವು. ಆಗಾಗ ಜಿಟಿಜಿಟಿ ಮಳೆ ಬಂದರೂ ಲೆಕ್ಕಿಸದೇ ಫಲಪುಷ್ಪ ಪ್ರದರ್ಶನ ನೋಡಿ ಸಂಭ್ರಮಪಟ್ಟರು.

ಜೋರು ಶಬ್ದಕ್ಕೆ ಬೆಚ್ಚಿಬಿದ್ದ ನಿವಾಸಿಗಳು

ಅಡುಗೆ ಅನಿಲ ಸೋರಿಕೆ ಶಂಕೆ • ಬಾಲಕ ಸಾವು, 9 ಮಂದಿಗೆ ಗಾಯ, 13 ಮನೆಗಳಿಗೆ ಹಾನಿ • ಅವಶೇಷಗಳ ತೆರವು

ಪ್ರಜಾವಾಣಿ ವಾರ್ತೆ

ಮುಬಾರಕ್

ಬೆಂಗಳೂರು: ಚಿನ್ನಯ್ಯಪಾಳ್ಯದ ಶ್ರೀರಾಮ ಕಾಲೊನಿಯ ಮನೆಯೊಂದರಲ್ಲಿ ಶುಕ್ರವಾರ ಬೆಳಿಗ್ಗೆ ಸಂಭವಿಸಿದ ಸ್ಫೋಟ ಪ್ರಕರಣದಲ್ಲಿ ಬಾಲಕ ಮೃತಪಟ್ಟು, ಇಬ್ಬರು ಮಕ್ಕಳೂ ಸೇರಿದಂತೆ 9 ಮಂದಿ ಗಾಯಗೊಂಡಿದ್ದಾರೆ.

ಮುಬಾರಕ್(10) ಮೃತ ಬಾಲಕ. ಕಸ್ತೂರಮ್ಮ (35), ಸರಸಮ್ಮ(50), ಶಬ್ರಿನಾ ಬಾನು (35), ಫಾತಿಮಾ(8), ಕಯಾಲ (8), ಸುಬ್ರಮಣಿ (62), ಶೇಖ್ ನಜೀಬ್ ಉಲ್ಲಾ (37), ಪ್ರಮೀಳಾ ಹಾಗೂ ರಾಜೇಶ್ ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ವಿಕ್ಟೋರಿಯಾ, ಸಂಜಯ್ ಗಾಂಧಿ, ಇಂದಿರಾ ಗಾಂಧಿ, ನಿಮ್ಹಾನ್ಸ್ ಹಾಗೂ ವಿಲ್ಸನ್ ಗಾರ್ಡನ್‌ನ ಅಗಡಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

‘ಕಾಲೊನಿಯಲ್ಲಿ ಅಕ್ಕಪಕ್ಕದಲ್ಲೇ ಮನೆಗಳಿದ್ದವು. ಮನೆಯೊಂದರ ಮೊದಲ ಮಹಡಿಯಲ್ಲಿ ಕಸ್ತೂರಮ್ಮ ಕುಟುಂಬಸ್ಥರು ವಾಸ ಮಾಡುತ್ತಿದ್ದರು. ಅವರ ಮನೆಯಲ್ಲಿ ಬೆಳಿಗ್ಗೆ 8ರ ಸುಮಾರಿಗೆ ಸ್ಫೋಟ ಸಂಭವಿಸಿದೆ. ಸ್ಫೋಟದ ತೀವ್ರತೆಗೆ ಅಕ್ಕಪಕ್ಕದ 13 ಮನೆಗಳಿಗೆ ಹಾನಿಯಾಗಿದೆ. ಕೆಲವು ಮನೆಗಳು ಸಂಪೂರ್ಣ ಹಾನಿಗೆ ಒಳಗಾದರೆ, ಇನ್ನು ಕೆಲವು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಸ್ಫೋಟದ ತೀವ್ರತೆಗೆ ಸಿಮೆಂಟ್ ಶೀಟ್‌ಗಳು ಛಿದ್ರಗೊಂಡಿವೆ. ಗೋಡೆಗಳು ಬಿರುಕು ಬಿಟ್ಟಿವೆ. ಪೀಠೋಪಕರಣಗಳು, ಮನೆಯಲ್ಲಿದ್ದ ಸಾಮಗ್ರಿಗಳಿಗೆ ಹಾನಿಯಾಗಿದೆ. ಬೆಂಕಿಯಿಂದ ಬಟ್ಟೆಗಳು ಸುಟ್ಟು ಹೋಗಿವೆ’ ಎಂದು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಸಿಬ್ಬಂದಿ ತಿಳಿಸಿದರು.

ಮಾಹಿತಿ ತಿಳಿದ ತಕ್ಷಣವೇ ಸ್ಥಳಕ್ಕೆ ದೌಡಾಯಿಸಿದ ರಕ್ಷಣಾ ಸಿಬ್ಬಂದಿ ಗಾಯಾಳುಗಳನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದರು.

ಘಟನೆಗೆ ಕಾರಣವೇನು?: ‘ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಕಸ್ತೂರಮ್ಮ ಅವರ ಮನೆಯಲ್ಲಿದ್ದ ಫ್ರಿಜ್‌ನಲ್ಲಿ ಶಾರ್ಟ್ ಸರ್ಕಿಟ್ ಸಂಭವಿಸಿದ್ದರಿಂದ ಅವಘಡ ಸಂಭವಿಸಿದೆ ಎಂದು ಹೇಳಲಾಗಿದೆ. ತನಿಖೆ ಪೂರ್ಣಗೊಂಡ ಬಳಿಕವೇ ಘಟನೆಗೆ ನಿಖರ ಕಾರಣ ಏನು ಎಂಬುದು ಪತ್ತೆಯಾಗಲಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಕಸ್ತೂರಮ್ಮ ಅವರ ಮನೆಯಲ್ಲಿ ಅಡುಗೆ ಅನಿಲ ಖಾಲಿ ಆಗಿತ್ತು. ಸಿಲಿಂಡರ್ ಕೊಡುವಂತೆ ಅಕ್ಕಪಕ್ಕದ ಮನೆಯವರ ಬಳಿ ಕಸ್ತೂರಮ್ಮ ಕೇಳಿದ್ದರು. ಯಾರೂ ಸಿಲಿಂಡರ್ ಕೊಟ್ಟಿರಲಿಲ್ಲ. ಕಸ್ತೂರಮ್ಮ ಅವರ ಪತಿ ಐದು ಕೆ.ಜಿ ತೂಕದ ಚಿಕ್ಕ ಸಿಲಿಂಡರ್‌ವೊಂದನ್ನು ಗುರುವಾರ ರಾತ್ರಿ ಮನೆಗೆ ತಂದಿದ್ದರು ಎಂದು ಹೇಳಲಾಗಿದೆ. ಅದರಿಂದ ಅನಿಲ ಸೋರಿಕೆಯಾಗಿ ಅವಘಡ ಸಂಭವಿಸಿರುವ ಸಾಧ್ಯತೆಯೂ ಇದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ವಿವಿಧ ತಂಡಗಳಿಂದ ಪರಿಶೀಲನೆ: ಘಟನೆ ಸಂಭವಿಸಿದ ಸ್ಥಳಕ್ಕೆ ಬಾಂಬ್ ಪತ್ತೆದಳ, ಶ್ವಾನದಳ, ಅಗ್ನಿಶಾಮಕ ದಳದ ಸಿಬ್ಬಂದಿ ತೆರಳಿ ಪರಿಶೀಲನೆ ನಡೆಸಿದರು. ಆರಂಭದಲ್ಲಿ ಯಾವುದೋ ಸ್ಫೋಟಕ ವಸ್ತುವಿನಿಂದ ಅನಾಹುತ ಸಂಭವಿಸಿರುವಂತೆ ಕಂಡುಬಂದಿತ್ತು.

ಬಾಂಬ್ ಪತ್ತೆದಳದ ಸಿಬ್ಬಂದಿ ಎಲ್ಲ ಕಡೆ ಶೋಧ ನಡೆಸಿದರೂ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಲಿಲ್ಲ. ಇದುವರೆಗೂ ನಡೆದಿರುವ ತನಿಖೆಯಿಂದ ಅಡುಗೆ ಅನಿಲ ಸೋರಿಕೆಯಿಂದ ಅವಘಡ ಸಂಭವಿಸಿರುವ ಸಾಧ್ಯತೆ ಇದೆ’ ಎಂದು ಪೊಲೀಸರು ಹೇಳಿದರು.

ವಠಾರ ಮಾದರಿಯ ಕಾಲೊನಿ: ವಸತಿ ಪ್ರದೇಶವಾಗಿರುವ ಶ್ರೀರಾಮ ಕಾಲೊನಿಯು ವಠಾರದ ಮಾದರಿಯಲ್ಲಿದ್ದು, ಅಕ್ಕಪಕ್ಕವೇ ಸಣ್ಣ ಸಣ್ಣ ಮನೆಗಳನ್ನು ನಿರ್ಮಿಸಲಾಗಿದೆ. ಬಡಾವಣೆಯ ಸಾಕಷ್ಟು ಜನರು ಲಾಲ್‌ಬಾಗ್‌ನಲ್ಲಿ ಕೂಲಿ ಕೆಲಸ ಮಾಡುತ್ತಾರೆ.

ಸ್ಫೋಟದಿಂದ ಮನೆ ಕಳೆದುಕೊಂಡು ಬೀದಿಗೆ ಬಿದ್ದಿರುವ ಕುಟುಂಬಗಳು ತಾತ್ಕಾಲಿಕವಾಗಿ ಸಂಬಂಧಿಕರು ಹಾಗೂ ಸ್ನೇಹಿತರ ಮನೆಯಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ.

ಆಡುಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನಾ ಸ್ಥಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೇಟಿ ನೀಡಿ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರಿಂದ ಮಾಹಿತಿ ಪಡೆದರು

> **ಏಕಾಏಕಿ ಜೋರು ಶಬ್ದ ಕೇಳಿಬಂತು. ಸ್ಥಳದಲ್ಲಿದ್ದ ನನ್ನ ತಲೆಗೆ ಕಬ್ಬಿಣದ ರಾಡು ತಗುಲಿ ಗಾಯವಾಗಿದೆ**
> **ಸುಬ್ರಮಣಿ,** ಗಾಯಾಳು

ಸ್ಫೋಟಕ ಬಳಕೆ ಆಗಿಲ್ಲ

ಘಟನಾ ಸ್ಥಳದಲ್ಲಿ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಸ್ಫೋಟದಲ್ಲಿ ಯಾವುದೇ ಕಚ್ಚಾಬಾಂಬ್ ಬಳಕೆಯಾಗಿಲ್ಲ ಎಂದು ಪೊಲೀಸರು ದೃಢಪಡಿಸಿದ್ದಾರೆ. ಘಟನೆ ನಡೆದ ಅಕ್ಕಪಕ್ಕದ ಮನೆಗಳಲ್ಲಿ ಒಟ್ಟಾರೆ 9 ಗ್ಯಾಸ್ ಸಿಲಿಂಡರ್‌ಗಳು ಸಿಕ್ಕಿವೆ. ಘಟನೆ ಹಿಂದೆ ಸ್ಫೋಟಕದ ಷಡ್ಯಂತ್ರ ಇಲ್ಲ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಫೋಟ ಸಂಭವಿಸಿದ ಸ್ಥಳದಲ್ಲಿ ಅವಶೇಷಗಳನ್ನು ಅಗ್ನಿಶಾಮಕ, ಎಸ್‌ಡಿಆರ್‌ಎಫ್ ಸಿಬ್ಬಂದಿ ತೆರವು ಮಾಡಿದರು ಚಿತ್ರ: ವಿ.ಪುಷ್ಕರ್

ಮೃತ ಬಾಲಕನ ಕುಟುಂಬಕ್ಕೆ ₹5 ಲಕ್ಷ ಪರಿಹಾರ

ಘಟನೆಯಲ್ಲಿ ಮೃತಪಟ್ಟ ಬಾಲಕನ ಕುಟುಂಬಕ್ಕೆ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸ್ಥಳಕ್ಕೆ ಭೇಟಿ ನೀಡಿದ ಪರಿಶೀಲಿಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿ, ‘ಗಾಯಗೊಂಡಿರುವ 9 ಮಂದಿಗೆ ಸರ್ಕಾರದಿಂದಲೇ ಚಿಕಿತ್ಸೆ ನೀಡಲಾಗುವುದು. ದುರ್ಘಟನೆಯಲ್ಲಿ 13 ಮನೆಗಳಿಗೆ ಹಾನಿಯಾಗಿವೆ. ಸರ್ಕಾರದಿಂದಲೇ ಮನೆಗಳನ್ನು ನಿರ್ಮಿಸಿಕೊಡಲಾಗುವುದು’ ಎಂದು ಹೇಳಿದರು.

‘ಕಸ್ತೂರಮ್ಮ ಎಂಬುವರಿಗೆ ಶೇ 30ರಷ್ಟು ಸುಟ್ಟ ಗಾಯವಾಗಿದ್ದು, ಅವರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಉಳಿದ ಗಾಯಾಳು ಬೇರೆ ಬೇರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ತಿಳಿಸಿದರು.

‘ದುರದೃಷ್ಟಕರ ಘಟನೆ ನಡೆದಿದೆ. ಮೇಲ್ನೋಟಕ್ಕೆ ಸಿಲಿಂಡರ್‌ನಿಂದ ಅನಿಲ ಸೋರಿಕೆಯಗಿ ಸ್ಫೋಟವಾಗಿರಬಹುದು ಎಂದು ಕಂಡುಬಂದಿದೆ. ಪೊಲೀಸರು ಹಾಗೂ ಬಿಬಿಎಂಪಿಯವರ ವರದಿಯೂ ಕೂಡ ಅದೇ ಹೇಳಿದೆ. ಇಲ್ಲಿನ ಜನ ಸಣ್ಣಸಣ್ಣ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಕಸ್ತೂರಮ್ಮ ಅವರಿಗೆ ಸುಟ್ಟ ಗಾಯಗಳಾಗಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ’ ಎಂದು ಅವರು ಹೇಳಿದರು.

ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಮಾತನಾಡಿ, ‘ಘಟನಾ ಸ್ಥಳದಲ್ಲಿ ಸೋಕೊ ತಂಡ, ಎಫ್‌ಎಸ್‌ಎಲ್ ತಂಡಗಳು ಪರಿಶೀಲನೆ ನಡೆಸಿವೆ. ಮನೆಯ ಗ್ಲಾಸ್, ಕಿಟಕಿಗಳು ಪುಡಿಪುಡಿಯಾಗಿವೆ. ಗಾಯಾಳುಗಳಿಗೆ ಬೇರೆ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಪೊಲೀಸ್ ತಾಂತ್ರಿಕ ತಂಡ ನೀಡುವ ಮಾಹಿತಿ ಆಧರಿಸಿ ತನಿಖೆ ನಡೆಸಲಾಗುವುದು’ ಎಂದು ಹೇಳಿದರು.

ಪೊಲೀಸ್ ಕರ್ತವ್ಯಕ್ಕೆ ಅಡ್ಡಿ ಮಹಿಳೆ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಪಡಿಸಿ ನಿಂದಿಸಿದ ಆರೋಪಿ

ಬೆಂಗಳೂರು: ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಮಹಿಳೆ ಸೇರಿ ಇಬ್ಬರನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಂಚಾರ ಠಾಣೆ ಪೊಲೀಸರ ದೂರಿನ ಮೇರೆಗೆ ಯಲಹಂಕ ನ್ಯೂ ಟೌನ್ ನಿವಾಸಿಗಳಾದ ಮಹಮದ್ ಸರ್ಬಾಸ್ ಹಾಗೂ ಹೀರಲ್‌ವ್ಯಾಸಾ ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ.

ನಿರ್ಬಂಧಿತ ಸ್ಥಳದಲ್ಲಿ ನಿಲುಗಡೆ ಮಾಡಿದ್ದ ವಾಹನಗಳನ್ನು ಯಲಹಂಕ ಸಂಚಾರ ಠಾಣೆಯ ಪೊಲೀಸರು ಪತ್ತೆಹಚ್ಚಿ ಆ ವಾಹನಗಳಿಗೆ ವ್ಹೀಲ್ ಕ್ಯಾಪ್ ಹಾಕುತ್ತಿದ್ದರು. ಆರೋಪಿ ಮಹಮದ್ ಸರ್ಬಾಸ್ ಸಹ ನಿರ್ಬಂಧಿತ ಸ್ಥಳದಲ್ಲಿ ಬೈಕ್ ನಿಲುಗಡೆ ಮಾಡಿದ್ದರು. ವ್ಹೀಲ್ ಕ್ಯಾಪ್ ಹಾಕಲು ಮುಂದಾಗಿದ್ದ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ, ಅವಾಚ್ಯ ಶಬ್ದಗಳಿಂದ ಆರೋಪಿಗಳು ನಿಂದಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಆರೋಪಿಗಳು ಪೊಲೀಸರಿಗೆ ನಿಂದಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

‘ಪೊಲೀಸರ ಮೇಲೆ ಕೂಗಾಡುವುದರಿಂದ ನೀವು ವೀರರಾಗುವುದಿಲ್ಲ. ಅಸಭ್ಯ ಪದಗಳು ಮತ್ತು ಬೆದರಿಕೆಗಳು ನಿಮಗೆ ವಿಶೇಷ ವ್ಯಕ್ತಿಯಂತೆ ‘ವಿಶೇಷ ಉಪಚಾರದ ಪಾಸ್’ಗೆ ಕಾರಣವಾಗಬಹುದು. ಅದುವೇ ನೇರ ಪೊಲೀಸ್ ಠಾಣೆಗೆ. ಎಚ್ಚರಿಕೆ! ಬೆಂಗಳೂರು ನಗರ ಪೊಲೀಸರು ನಿಮ್ಮನ್ನು ಗಮನಿಸುತ್ತಿದ್ದಾರೆ’ ಎಂದು ‘ಎಕ್ಸ್’ ಖಾತೆಯಲ್ಲಿ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಟಾರ್ಪಾಲ್ ವಿಚಾರಕ್ಕೆ ಜಗಳ ಕೊಲೆಯಲ್ಲಿ ಅಂತ್ಯ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಟಾರ್ಪಾಲ್ ವಿಚಾರಕ್ಕೆ ಗಲಾಟೆ ನಡೆದು, ಕಾರ್ಮಿಕರೊಬ್ಬರನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ಜೆ.ಪಿ. ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಸಾರಕ್ಕಿ ಮಾರುಕಟ್ಟೆಯಲ್ಲಿ ಶುಕ್ರವಾರ ಬೆಳಿಗ್ಗೆ ನಡೆದಿದೆ.

ರಾಮನಗರ ತಾಲ್ಲೂಕಿನ ನಿವಾಸಿ ಚಿಕ್ಕಣ್ಣ (60) ಕೊಲೆಯಾದ ಕಾರ್ಮಿಕ.

ಬನಶಂಕರಿಯ ಸಾರಕ್ಕಿ ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡಿಕೊಂಡು ಎಲ್ಲೆಂದರಲ್ಲಿ ಮಲಗುತ್ತಿದ್ದರು. ಗುರುವಾರ ರಾತ್ರಿ ಮಳೆ ಬಂದ ಪರಿಣಾಮ, ಮಾರುಕಟ್ಟೆ ಸಮೀಪದಲ್ಲಿರುವ ನಿರ್ಮಾಣ ಹಂತದ ಕಟ್ಟಡಕ್ಕೆ ಹೋಗಿ ಅಲ್ಲಿದ್ದ ಟಾರ್ಪಾಲ್ ತೆಗೆದು ಕೊಂಡು ಹಾಸಿಕೊಂಡು ಮಲಗಿದ್ದರು.

ಮುಂಜಾನೆ ಬಂದ ಚಿಂದಿ ಆಯುವ ವ್ಯಕ್ತಿಯೊಬ್ಬ ‘ನಾನು ಹಾಸಿಕೊಂಡು ಮಲಗುವ ತಾಡಪಾಲ ಅನ್ನು ನೀನು ಏಕೆ ತೆಗೆದುಕೊಂಡು ಮಲಗಿದ್ದೀಯ’ ಎಂದು ಪ್ರಶ್ನಿಸಿ ಜಗಳ ಮಾಡಿದ್ದ. ಜಗಳ ವಿಕೋಪಕ್ಕೆ ಹೋದಾಗ ಕಟ್ಟಡದಲ್ಲಿದ್ದ ದೊಣ್ಣೆಯೊಂದನ್ನು ತೆಗೆದುಕೊಂಡು ಬಂದಿದ್ದ ಆರೋಪಿ, ಚಿಕ್ಕಣ್ಣ ಅವರ ತಲೆ ಹಾಗೂ ಇನ್ನಿತರ ಭಾಗಗಳ ಮೇಲೆ ಹಲ್ಲೆ ಮಾಡಿ ಪರಾರಿಯಾಗಿದ್ದಾನೆ. ಹಲ್ಲೆಯಿಂದ ತೀವ್ರ ಗಾಯಗೊಂಡ ಚಿಕ್ಕಣ್ಣ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಜೆ.ಪಿ. ನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಕೊಲೆ ಮಾಡಿ ಪರಾರಿಯಾಗಿರುವ ಆರೋಪಿಯ ಬಂಧನಕ್ಕಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಸ್ವಾತಂತ್ರ್ಯೋತ್ಸವದ ಅಂಗವಾಗಿ ನಗರದ ರಂಗೋಲಿ ಮೆಟ್ರೊ ಕಲಾ ಕೇಂದ್ರದಲ್ಲಿ ಶುಕ್ರವಾರ ಆರಂಭವಾದ ‘ಸವೆನ್ ಶೇಡ್ಸ್’ ಗುಂಪು ಛಾಯಾಚಿತ್ರ ಪ್ರದರ್ಶನದಲ್ಲಿ ಛಾಯಾಗ್ರಾಹಕ ನವೀನ್ ಕುಮಾರ್ ಆಸಕ್ತರಿಗೆ ಫೋಟೊಗಳ ವಿವರಣೆ ನೀಡಿದರು —ಪ್ರಜಾವಾಣಿ ಚಿತ್ರ

ಚಿಟಿಕೆ ಸುದ್ದಿ

‘ಕೋಮುಲ್ ಅವ್ಯವಹಾರ: ತನಿಖೆ ನಡೆಸೋಣ’

ಕೋಲಾರ: ‘ಕೋಲಾರ ಹಾಲು ಒಕ್ಕೂಟದ (ಕೋಮುಲ್) ಹಿಂದಿನ ಆಡಳಿತ ಮಂಡಳಿ ಹಾಗೂ ಆಡಳಿತಾಧಿಕಾರಿ ಅವಧಿಯಲ್ಲಿ ಅವ್ಯವಹಾರ ನಡೆದಿದೆ ಎಂಬುದಾಗಿ ಬಂಗಾರಪೇಟೆ ಶಾಸಕ ಎಸ್‌.ಎನ್‌. ನಾರಾಯಣಸ್ವಾಮಿ ಸದನದಲ್ಲಿ ಪ್ರಸ್ತಾಪಿಸಿದ್ದು, ಸರ್ಕಾರದಿಂದ ಆಂತರಿಕ ತನಿಖೆ ನಡೆಸೋಣ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಹೇಳಿದರು.

ನಗರದ ಸರ್‌.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೋಮುಲ್‌ನಿಂದ ನಿರ್ಮಿಸಿರುವ ಸೌರ ಘಟಕದಿಂದ ಹೆಚ್ಚಿನ ಅನುಕೂಲವಿದೆ. ಮೇವೂ ಬೆಳೆಸಬೇಕು, ವಿದ್ಯುತ್ ಉತ್ಪಾದನೆಯನ್ನೂ ಮಾಡಬೇಕು. ತಿಂಗಳಿಗೆ ₹2ಕೋಟಿ ವಿದ್ಯುತ್ ಶುಲ್ಕ ಉಳಿತಾಯವಾಗುತ್ತದೆ. ಏನಾದರೂ ಲೋಪವಿದ್ದರೆ ಸರಿಪಡಿಸೋಣ’ ಎಂದರು.

‘ಮಂತ್ರಿ ಸ್ಥಾನ ಕೋಲಾರ ಜಿಲ್ಲೆಗೆ ಸಿಗುವ ಕುರಿತು ಯಾರೂ ಬೇಡ ಅಂದಿಲ್ಲ. ಕೋಲಾರಕ್ಕೆ ಅವಕಾಶ ಸಿಕ್ಕರೆ ನನಗೂ ಸಂತೋಷ’ ಎಂದರು.

ವಾಹನಗಳ ವಿಸ್ತೀರ್ಣ ಕಡಿಮೆ ತೋರಿಸಿ ತೆರಿಗೆ ವಂಚನೆ • ವರದಿ ನೀಡಿದ್ದ ತನಿಖಾ ತಂಡ

ತಪ್ಪಿತಸ್ಥರ ಪತ್ತೆಗೆ ಮುಂದಾದ ಸಾರಿಗೆ ಇಲಾಖೆ

• ಬಾಲಕೃಷ್ಣ ಪಿ.ಎಚ್‌.

ಬೆಂಗಳೂರು: ಅಧಿಕಾರಿಗಳು, ಸಿಬ್ಬಂದಿ ಮತ್ತು ವಾಹನ ಮಾಲೀಕರು ಸೇರಿ ವಾಹನಗಳ ವಿಸ್ತೀರ್ಣವನ್ನು ಕಡಿಮೆ ತೋರಿಸಿ ಸರ್ಕಾರಕ್ಕೆ ತೆರಿಗೆ ವಂಚಿಸಿದ್ದಾರೆ ಎಂದು ತನಿಖಾ ತಂಡ ನೀಡಿದ್ದ ವರದಿ ಆಧರಿಸಿ ತಪ್ಪೆಸಗಿದ ಅಧಿಕಾರಿಗಳನ್ನು ಪತ್ತೆ ಹಚ್ಚಲು ಸಾರಿಗೆ ಇಲಾಖೆ ಮುಂದಾಗಿದೆ.

ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಖಾಸಗಿ ಸೇವಾ ವಾಹನಗಳು ಹಾಗೂ ಮ್ಯಾಕ್ಸಿಕ್ಯಾಬ್ ವಾಹನಗಳ ವಿಸ್ತೀರ್ಣವನ್ನು ಸರಿಯಾಗಿ ದಾಖಲಿಸುತ್ತಿಲ್ಲ ಎಂಬ ದೂರುಗಳು ಬಂದಿದ್ದವು. ಇದನ್ನು ಆಧರಿಸಿ ಸಾರಿಗೆ ಆಯುಕ್ತರು ಜಂಟಿ ಆಯುಕ್ತರ ನೇತೃತ್ವದ ತಪಾಸಣಾ ತಂಡವನ್ನು ರಚಿಸಿದ್ದರು. ಕಡತ ಪರಿಶೀಲನೆ, ವಾಹನ ತಪಾಸಣೆಗಳ ಬಳಿಕ ಈ ತಂಡವು ವರದಿಯನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರಿಗೆ 2023ರ ಜೂನ್‌ನಲ್ಲಿ ನೀಡಿತ್ತು. 24 ವಾಹನಗಳ ತಪಾಸಣೆ ನಡೆಸಿದಾಗ ₹21.12 ಲಕ್ಷ ವಂಚನೆ ಆಗಿರುವುದು ಗೊತ್ತಾಗಿದ್ದು, 3,240 ವಾಹನಗಳ ತಪಾಸಣೆ ನಡೆಯ ಬೇಕಿದೆ ಎಂದು ವರದಿಯಲ್ಲಿ ತಿಳಿಸಲಾಗಿತ್ತು.

‘ವರದಿ ಬಂದ ಬಳಿಕ ಲೆಕ್ಕ ಪರಿಶೋಧನೆ ನಡೆಸಬೇಕಿತ್ತು. ಆದರೆ, ನಮ್ಮಲ್ಲಿ ಲೆಕ್ಕ ಪರಿಶೋಧನಾ ತಂಡ ಇಲ್ಲದ ಕಾರಣ ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಗೆ ಒಪ್ಪಿಸಲಾಗಿತ್ತು. ಅವರು ಪರಿಶೋಧನೆ ಮಾಡಿ ವರದಿ ನೀಡಿದ್ದಾರೆ. ಆದರೆ, ತಪ್ಪಿತಸ್ಥ ಅಧಿಕಾರಿಗಳು ಯಾರು ಎಂಬುದು ತನಿಖಾ ತಂಡದ ವರದಿಯಲ್ಲಾಗಲಿ, ಲೆಕ್ಕ ಪರಿಶೋಧನಾ ಇಲಾಖೆಯ ವರದಿಯಲ್ಲಾಗಲಿ ಇಲ್ಲ. ಅದಕ್ಕಾಗಿ ತಪ್ಪಿತಸ್ಥ ಅಧಿಕಾರಿಗಳನ್ನು ಪತ್ತೆ ಮಾಡಲು ಬೆಂಗಳೂರು ನಗರ ಜಂಟಿ ಸಾರಿಗೆ ಆಯುಕ್ತರಿಗೆ ಜುಲೈ 8ರಂದು ಸೂಚಿಸಲಾಗಿದೆ’ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಹೆಚ್ಚುವರಿ ಆಯುಕ್ತ (ಆಡಳಿತ) ಬಿ.ಪಿ. ಉಮಾಶಂಕರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

2005ರಿಂದ ವಂಚನೆ ಮಾಡುತ್ತಾ ಬಂದಿರುವುದು ಗೊತ್ತಾಗಿದೆ. ನಿಖರ ತೆರಿಗೆಯನ್ನು ಲೆಕ್ಕ ಹಾಕಿ ನಷ್ಟವಾಗಿರುವುದನ್ನು ವಸೂಲಿ ಮಾಡಬಹುದು. ತಪ್ಪು ಮಾಡಿರುವ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬಹುದು ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ. 1,345 ಮ್ಯಾಕ್ಸಿಕ್ಯಾಬ್, 1,826 ಖಾಸಗಿ ಸೇವಾ ವಾಹನಗಳು ಸೇರಿ 3,271 ವಾಹನಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲು ಕಡತಗಳನ್ನು ನೀಡುವಂತೆ ತಪಾಸಣಾ ತಂಡ ಕೇಳಿಕೊಂಡಿತ್ತು. ಪ್ರಾದೇಶಿಕ ಅಧಿಕಾರಿಗಳು 628 ಮ್ಯಾಕ್ಸಿಕ್ಯಾಬ್ ಮತ್ತು 983 ಖಾಸಗಿ ಸೇವಾ ವಾಹನಗಳ ಕಡತಗಳನ್ನಷ್ಟೇ ಒದಗಿಸಿದ್ದರು. 1,660 ವಾಹನಗಳ ಕಡತಗಳನ್ನು ನೀಡಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ. ಪರಿಶೀಲನೆಗೆ ನೀಡದ ಕಡತಗಳ ಬಗ್ಗೆಯೂ ತನಿಖೆ ಆಗಬೇಕಿದೆ ಎಂದು ತಿಳಿಸಿದರು.

ಕೋಟ್ಯಂತರ ರೂಪಾಯಿ ತೆರಿಗೆ ವಂಚಿಸಿರುವ ಈ ಪ್ರಕರಣದ ಬಗ್ಗೆ ಕ್ರಮ ಕೈಗೊಳ್ಳಲು, ಶೀಘ್ರ ತನಿಖೆ ನಡೆಸಲು ಸಾರಿಗೆ ಇಲಾಖೆಯು ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಕೋಟ್ಯಂತರ ರೂಪಾಯಿ ವಂಚನೆ

ಜಂಟಿ ಆಯುಕ್ತರ ನೇತೃತ್ವದ ತನಿಖಾ ತಂಡವು ಲಭ್ಯವಾದ ವಾಹನಗಳಿಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿತ್ತು. ಅವುಗಳಿಂದ ₹21.12 ಲಕ್ಷ ತೆರಿಗೆ ವಂಚನೆ ಆಗಿರುವುದನ್ನು ಪತ್ತೆ ಹಚ್ಚಿತ್ತು. ಎಲ್ಲ ವಾಹನಗಳ ಕಡತ ಪರಿಶೀಲನೆ ನಡೆಸಿದರೆ ಕೋಟ್ಯಂತರ ರೂಪಾಯಿ ತೆರಿಗೆ ವಂಚಿಸಿರುವುದು ಬಯಲಾಗಲಿದೆ ಎಂದು ವರದಿಯಲ್ಲೇ ತಿಳಿಸಲಾಗಿದೆ.

628 ಮ್ಯಾಕ್ಸಿಕ್ಯಾಬ್‌ಗಳಿಗೆ ಸಂಬಂಧಿಸಿದಂತೆ ನಮೂನೆ 20ರಲ್ಲಿ 580 ವಾಹನಗಳ ವಿಸ್ತೀರ್ಣ ನಮೂದಿಸಲಾಗಿದೆ. 48 ವಾಹನಗಳ ವಿಸ್ತೀರ್ಣವೇ ದಾಖಲಾಗಿಲ್ಲ. ಅದೇ ರೀತಿ 981 ಇತರ ವಾಹನಗಳ ಪೈಕಿ 901 ವಾಹನಗಳ ವಿಸ್ತೀರ್ಣ ನಮೂದಿಸಲಾಗಿದೆ. 82 ವಾಹನಗಳ ವಿಸ್ತೀರ್ಣ ಇಲ್ಲ. ನಮೂದಾಗಿರುವ ವಿಸ್ತೀರ್ಣ ಕೂಡ ಒಂದೇ ಮಾದರಿಯ ವಾಹನಗಳಿಗೆ ಭಿನ್ನವಾಗಿರುವುದು ಕಂಡು ಬಂದಿದೆ.

ಮೊದಲ ಹಂತದಲ್ಲಿ ಕೆಲವು ವಾಹನಗಳನ್ನು ತಪಾಸಣೆ ನಡೆಸಲು ನಿರ್ಧರಿಸಲಾಗಿತ್ತು. 117 ವಾಹನಗಳನ್ನು ಹಾಜರು ಪಡಿಸಲು ಈ ತಂಡವು ಮೋಟಾರು ವಾಹನ ನಿರೀಕ್ಷಕರಿಗೆ ಸೂಚಿಸಿತ್ತು. ನಿರೀಕ್ಷಕರು ಕೇವಲ 31 ವಾಹನಗಳನ್ನು ಹಾಜರುಪಡಿಸಿದ್ದರು. ಅದರಲ್ಲಿ 7 ವಾಹನಗಳ ಮೂಲ ಕಡತಗಳನ್ನು ಹಾಜರುಪಡಿಸಿರಲಿಲ್ಲ. ಉಳಿದ 24 ವಾಹನಗಳನ್ನು ತಪಾಸಣೆ ನಡೆಸಿ ಕಡತ ಪರಿಶೀಲಿಸಿದಾಗ 1 ಚದರ ಅಡಿಯಿಂದ 6 ಚದರ ಅಡಿವರೆಗೆ ವಿಸ್ತೀರ್ಣದಲ್ಲಿ ವ್ಯತ್ಯಾಸ ಕಂಡು ಬಂದಿದೆ. 3,240 ವಾಹನಗಳ ಕಡತ ಪರಿಶೀಲನೆ ಮತ್ತು ಭೌತಿಕ ತಪಾಸಣೆ ನಡೆಸಲು ಸಾಧ್ಯವಾಗಿಲ್ಲ ಎಂದು ತಂಡವು ವರದಿಯಲ್ಲಿ ತಿಳಿಸಿದೆ

‘ತೆರಿಗೆ ವಸೂಲಿಗೆ ಕ್ರಮ’

ರಾಮಲಿಂಗಾ ರೆಡ್ಡಿ

ಸುಮಾರು 20 ವರ್ಷಗಳಿಂದ ನಡೆದ ವಂಚನೆ ಇದು. ತಪ್ಪಿತಸ್ಥರು ಯಾರು ಎಂದು ಪತ್ತೆ ಹಚ್ಚಲು ಸೂಚನೆ ನೀಡಲಾಗಿದೆ. ತಪ್ಪಿತಸ್ಥರ ವಿವರ ಪಡೆದು ಕ್ರಮ ಕೈಗೊಳ್ಳಲಾಗುವುದು. ವಾಹನ ಮಾಲೀಕರಿಗೂ ನೋಟಿಸ್ ಕಳುಹಿಸಲಾಗುವುದು. ವಂಚಿಸಿರುವ ತೆರಿಗೆಯನ್ನು ವಸೂಲಿ ಮಾಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಪುಣೆ ರೇಸ್

ಮನಿ ಬ್ಯಾಗ್ಸ್ ಗೆಲ್ಲುವ ನಿರೀಕ್ಷೆ

ಎಫ್‌.ಡಿ ವಾಡಿಯಾ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮನಿ ಬ್ಯಾಗ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಮಿರೆ 1, ವಿ ಸ್ಟಿಲ್ ಬಿಲೀವ್ 5, ನ್ಯೂ ಯಾರ್ಕರ್ 2
2ನೇ ರೇಸ್: ಥಲಸ್ಸ 3, ರೀಗಲ್ ಕಮಾಂಡ್ 4, ಗೋಲ್ಡನ್ ಕಿಂಗ್ಡಮ್ 2
3ನೇ ರೇಸ್: ಲಿಯಮ್ 2, ಬಿಲೀವ್ 3, ಫಿಂಚ್ 1
4ನೇ ರೇಸ್: ಎಲ್ ಮೊರನ್ 5, ಟೈಮ್‌ಲೆಸ್ ಫಾರ್ಚೂನ್ 2, ಮಿರಾಕಲ್ ಆಫ್ ಅನುಕಾ 1
5ನೇ ರೇಸ್: ಮನಿ ಬ್ಯಾಗ್ಸ್ 2, ಎನ್ಸಿಂಗ್ 6, ಮ್ಯಾಟಿಸ್ 1
6ನೇ ರೇಸ್: ಎನ್‌ಫೋರ್ಸರ್ 3, ಮರ್ಲೆಟ್ 8, ಎಂಬರ್ ಟವರ್ 2

ಉತ್ತಮ ಬೆಟ್: ಮಿರೆ

ಜಾಕ್‌ಪಾಟ್‌ಗೆ 3,4,5,6,7 | ಟ್ರಿಬಲ್ 4,5,6

ಹಲಸೂರು ಮುಖ್ಯರಸ್ತೆಗಳ ಬದಿ ಮೂಗುಮುಚ್ಚಿ ನಡೆದಾಡುವ ದುಃಸ್ಥಿತಿ

ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ

• ರಕ್ಷಿತಾ ಚಪ್ಪರಿಕೆ

ಬೆಂಗಳೂರು: ‘ಪಾದಚಾರಿ ಮಾರ್ಗ ಸ್ವಚ್ಛವಾಗಿರಬೇಕು, ನಾಗರಿಕರು ನಡೆದಾಡಲು ಯಾವುದೇ ಅಡೆತಡೆ ಇರಬಾರದು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಕಟ್ಟಪ್ಪಣೆ ಹೊರಡಿಸಿದ್ದಾರೆ. ಆದರೆ, ಹಲಸೂರಿನ ಮುಖ್ಯರಸ್ತೆಯ ಪಾದಚಾರಿ ಮಾರ್ಗಗಳ ತುಂಬ ಕಸವೇ ತುಂಬಿದೆ.

ಹಲಸೂರಿನ ಮುಖ್ಯರಸ್ತೆ ಪಾದಚಾರಿ ಮಾರ್ಗದಲ್ಲಿ ನಡೆಯಲು ಸಾಧ್ಯವಿಲ್ಲದಷ್ಟು ಕಸ ತುಂಬಿರುತ್ತದೆ. ಪಕ್ಕದಲ್ಲಿ ನಡೆಯಲೂ ಮೂಗುಮುಚ್ಚಿಕೊಳ್ಳಬೇಕಾದ ದುಃಸ್ಥಿತಿ ಇದೆ. ಇದೂ ಸಾಲದು ಎಂಬಂತೆ ಅಕ್ಕ ಪಕ್ಕದಲ್ಲಿರುವ ಖಾಲಿ ನಿವೇಶನಗಳೂ ಕಸದ ತೊಟ್ಟಿಗಳಾಗಿವೆ.

ಹಲಸೂರು ಮುಖ್ಯರಸ್ತೆಯ ಸುತ್ತಮುತ್ತಲಿನ ನಿವಾಸಿಗಳು ಕಸವನ್ನು ಖಾಲಿ ನಿವೇಶನ, ಪಾದಚಾರಿ ಮಾರ್ಗ, ಮುಖ್ಯರಸ್ತೆಯ ಬದಿಯಲ್ಲಿ ಎಸೆಯುತ್ತಿದ್ದಾರೆ. ಈ ಪ್ರದೇಶದಲ್ಲಿ ಎಲ್ಲಿ ನೋಡಿದರೂ ಕಸದ ರಾಶಿಯಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ.

ಕಸದಿಂದ ಸೊಳ್ಳೆಗಳು, ಕ್ರಿಮಿಕೀಟಗಳು ಉತ್ಪತ್ತಿಯಾಗುತ್ತಿದ್ದು, ಜನರಲ್ಲಿ ಸಾಂಕ್ರಾಮಿಕ ರೋಗ ಹರಡುವ ಭೀತಿ ಉಂಟಾಗಿದೆ. ದನ ಕರುಗಳು ಕಸದ ರಾಶಿಯಲ್ಲಿ ಸಿಗುವ ಪ್ಲಾಸ್ಟಿಕ್ ತಿನ್ನುತ್ತಿವೆ. ಖಾಲಿ ನಿವೇಶನಗಳಲ್ಲಿನ ಕಸವನ್ನು ನಾಯಿಗಳು ರಸ್ತೆಗೆ ತಂದು ಹಾಕುತ್ತಿವೆ. ಇದರಿಂದಾಗಿ ವಾಹನಗಳ ಸಂಚಾರಕ್ಕೂ ಧಕ್ಕೆಯಾಗುತ್ತಿರುವುದರಿಂದ ಟ್ರಾಫಿಕ್‌ನ ಸಮಸ್ಯೆ ಉಂಟಾಗುತ್ತಿದೆ. ಬಿಬಿಎಂಪಿ ಸಿಬ್ಬಂದಿ 15 ದಿನ ಅಥವಾ ತಿಂಗಳಿಗೊಮ್ಮೆ ಮಾತ್ರ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿದ್ದಾರೆ ಎಂದು ಸ್ಥಳೀಯ ನಾಗರಿಕರು ದೂರಿದರು.

‘ಕಸದ ವಾಸನೆಯಿಂದ ಅಂಗಡಿಯಲ್ಲಿ ಕುಳಿತುಕೊಳ್ಳುವುದು ತುಂಬಾ ಕಷ್ಟವಾಗಿದೆ. ದುರ್ವಾಸನೆಯಿಂದ ಗ್ರಾಹಕರ ಸಂಖ್ಯೆಯೂ ಕ್ಷೀಣಿಸುತ್ತಿದೆ. ಪಾದಚಾರಿಗಳ ಮಾರ್ಗದಲ್ಲಿ ಸಂಚರಿಸುವ ಜನರು ವಾಸನೆ ತಡೆಯಲಾರದೆ, ಕಸ ಏಕೆ ಇಲ್ಲಿದೆ ಎಂದು ನಮ್ಮನ್ನು ಕೇಳುತ್ತಿದ್ದಾರೆ’ ಎಂದು ಅಂಗಡಿ ಮಾಲೀಕ ಸೈಫುಲ್ಲಾ ಹೇಳಿದರು.

‘ಎಷ್ಟೇ ಸ್ವಚ್ಛಗೊಳಿಸಿದರೂ ಆಗಾಗ ಕಸ ಎಸೆದು ಹೋಗುತ್ತಿದ್ದಾರೆ. ಬಿಬಿಎಂಪಿ ಸಿಬ್ಬಂದಿ ಸರಿಯಾಗಿ ವಿಲೇವಾರಿ ಮಾಡುತ್ತಿಲ್ಲ. ಸುತ್ತಮುತ್ತಲಿನ ವಾತಾವರಣ ದುರ್ವಾಸನೆಯಿಂದ ಕೂಡಿರುವುದರಿಂದ ತಿನ್ನುವ ಪದಾರ್ಥಗಳನ್ನೂ ಮಾರಾಟ ಮಾಡುವುದು ಅತ್ಯಂತ ಕಷ್ಟವಾಗಿದೆ’ ಎಂದು ವ್ಯಾಪಾರಿಗಳಾದ ಲೆನಿನ್, ವೆಂಕಟೇಶ್ ಹೇಳಿದ್ದಾರೆ.

ನಗರದ ಹಲಸೂರು, ಲಕ್ಷ್ಮೀಪುರಂನ ಸಿಎಂಎಚ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಬಿದ್ದಿತ್ತು ಪ್ರಜಾವಾಣಿ ಚಿತ್ರ

ಹೆಚ್ಚಾದ ಸೊಳ್ಳೆ ಕಾಟ!

‘ರಾತ್ರೋರಾತ್ರಿ ಮನೆಯ ತ್ಯಾಜ್ಯವನ್ನು ಪಾದಚಾರಿಗಳ ಮಾರ್ಗದಲ್ಲಿ ಎಸೆದು ಹೋಗುತ್ತಿದ್ದಾರೆ. ಪರಿಸರದ ಜೊತೆಗೆ ಆರೋಗ್ಯಕ್ಕೂ ಸಂಕಷ್ಟ ಎದುರಾಗಿದೆ. ಸುತ್ತಮುತ್ತಲಿನ ಪ್ರದೇಶದಲ್ಲಿ ಸೊಳ್ಳೆ ಕಾಟ ವಿಪರೀತವಾಗಿದೆ. ಸೊಳ್ಳೆಗಳೂ ಹೆಚ್ಚಾಗಿದ್ದು, ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ’ ಎಂದು ಸ್ಥಳೀಯ ನಿವಾಸಿಗಳಾದ ಪ್ರದೀತ್, ಪ್ರಸನ್ನ ಆತಂಕ ವ್ಯಕ್ತಪಡಿಸಿದರು.

ಏಕಬಳಕೆ ಪ್ಲಾಸ್ಟಿಕ್ ಹೆಚ್ಚು!

ನಗರದಲ್ಲಿ ಪ್ಲಾಸ್ಟಿಕ್‌ನ ಬಳಕೆಗೆ ನಿಷೇಧವಿದ್ದರೂ, ಹಲಸೂರಿನ ಕೆಲವು ಅಂಗಡಿ, ಹೋಟೆಲ್‌ಗಳಲ್ಲಿ ಪಾರ್ಸಲ್‌ಗಳನ್ನು ಪ್ಲಾಸ್ಟಿಕ್‌ನಲ್ಲೇ ನೀಡಲಾಗುತ್ತಿದೆ. ಏಕ ಬಳಕೆಯ ಪ್ಲಾಸ್ಟಿಕ್ ಬಳಕೆ ಹೆಚ್ಚಿದ್ದು, ಅದರ ತ್ಯಾಜ್ಯ ಪಾದಚಾರಿ ಮಾರ್ಗದಲ್ಲೆಲ್ಲ ಹರಡಿಕೊಂಡಿರುತ್ತದೆ. ಗಾಳಿಗೆ ತೂರಿಕೊಂಡು ರಸ್ತೆ, ಅಂಗಡಿಗಳಿಗೆ ಹೋಗುತ್ತಿದೆ.

‘ಪ್ಲಾಸ್ಟಿಕ್ ಬಳಕೆ ನಿಯಂತ್ರಿಸಲು ಬಿಬಿಎಂಪಿಯವರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿಲ್ಲ. ಬೀದಿ ಬದಿ ಮಾರಾಟಗಾರರು, ಅಂಗಡಿ, ಹೋಟೆಲ್‌ನವರು ಪ್ಲಾಸ್ಟಿಕ್ ಬಳಕೆ ನಿಲ್ಲಿಸುತ್ತಿಲ್ಲ’ ಎಂದು ಸ್ಥಳೀಯ ನಿವಾಸಿ ಜಗದೀಶ್ ದೂರಿದರು.

ಅಪಘಾತ: 11 ವಿದ್ಯಾರ್ಥಿಗಳಿಗೆ ಗಾಯ

ಕೋಟಾ (ರಾಜಸ್ಥಾನ) (ಪಿಟಿಐ): ರಾಜಸ್ಥಾನದ ಕೋಟಾ ಜಿಲ್ಲೆಯ ಸಾಂಗೋದ್‌ನ ಖಾಸಗಿ ಶಾಲೆಯ ವಾಹನ ಕಾರಿಗೆ ಡಿಕ್ಕಿ ಹೊಡೆದು ಪಲ್ಟಿಯಾಗಿ ಚಾಲಕ ಸೇರಿದಂತೆ 11 ಮಕ್ಕಳು ಗಾಯಗೊಂಡಿದ್ದಾರೆ.

ನಗರದಲ್ಲಿ ಇಂದು

ವಚನ ಶ್ರಾವಣ: ವಚನ ಗಾಯನ: ಅನುರಾಗ ಗದ್ದಿ, ವಚನ ಚಿಂತನ: ಎಸ್‌. ಪಿನಾಕಪಾಣಿ, ಅತಿಥಿ: ಸುನಿಲ್ ಕಾಂಡೆ, ಅಧ್ಯಕ್ಷತೆ: ಶಂಭು ಹಿರೇಮಠ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಪ್ರಥಮ್ ಇಂಟರ್‌ನ್ಯಾಷನಲ್ ಸ್ಕೂಲ್ ಅಂಗಳ, ಮುಸಂದ್ರ ಮುಖ್ಯರಸ್ತೆ, ವಾಲೇಪುರ, ವರ್ತೂರು, ಬೆಳಿಗ್ಗೆ 10

‘ಚೇಸ್ ಬೈ ಪಂಚತಂತ್ರ’ ವೇದಿಕೆ ಅನಾವರಣ: ಆಯೋಜನೆ: ಭಾರತೀಯ ವಿದ್ಯಾಭವನ, ಆರ್‌.ವಿ. ವಿಶ್ವವಿದ್ಯಾಲಯ, ಸ್ಥಳ: ಭಾರತೀಯ ವಿದ್ಯಾ ಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನದ ಬಹುಮಾನ ವಿತರಣೆ: ಶಮ್ಲಾ ಇಕ್ಬಾಲ್, ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಡಾ.ಎಂ.ಎಚ್‌.ಮರಿಗೌಡ ಸ್ಮಾರಕ ಭವನ, ಲಾಲ್‌ಬಾಗ್, ಮಧ್ಯಾಹ್ನ 2.30

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ಕಾಳೇಗೌಡ ನಾಗವಾರ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ರಂಗಮಂದಿರ, ಜೆ ಸಿ. ರಸ್ತೆ, ಮಧ್ಯಾಹ್ನ 3

ಕಾಳೇಗೌಡ ನಾಗವಾರ

ಪ್ರಕಾಶ ಗ. ಖಾಡೆ ಅವರ ‘ಗ್ರಾಮ್ಯ’ ಪುಸ್ತಕ ಬಿಡುಗಡೆ: ಶಾಂತಿ ವಾಸು, ಉದ್ಘಾಟನೆ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ರಾಮಲಿಂಗೇಶ್ವರ (ಸಿಸಿರಾ), ಆಯೋಜನೆ: ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘ ಕಮತಗಿ, ಕನ್ನಡ ಜಾನಪದ ಪರಿಷತ್ತು ಶಾಂತಿನಗರ ವಿಧಾನಸಭಾ ಕ್ಷೇತ್ರ, ಸ್ಥಳ: ಪುನೀತ್ ರಾಜ್‌ಕುಮಾರ್ ಕನ್ನಡ ಭವನ, ರಿಚ್ಮಂಡ್ ಟೌನ್, ಮಧ್ಯಾಹ್ನ 3.30

ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮ ಶತಮಾನೋತ್ಸವ, ಸ್ಮರಣ ಸಂಚಿಕೆ ಬಿಡುಗಡೆ: ಬಿ.ಎಲ್‌. ಸಂತೋಷ, ಅಧ್ಯಕ್ಷತೆ: ಬಿ.ವೈ. ವಿಜಯೇಂದ್ರ, ಮುಖ್ಯ ಅತಿಥಿಗಳು: ಡಿ.ವಿ. ಸದಾನಂದಗೌಡ, ಆರ್‌. ಅಶೋಕ, ಛಲವಾದಿ ನಾರಾಯಣಸ್ವಾಮಿ, ತೇಜಸ್ವಿನಿ ಅನಂತಕುಮಾರ್, ಆಯೋಜನೆ: ಅಟಲ್‌ಜಿ ಜನ್ಮಶತಮಾನೋತ್ಸವ ಸಮಿತಿ, ಬಿಜೆಪಿ, ಸ್ಥಳ: ಪುಟ್ಟಣ್ಣಚೆಟ್ಟಿ ಪುರಭವನ (ಟೌನ್‌ಹಾಲ್), ಸಂಜೆ 4.30

ಅಟಲ್ ಬಿಹಾರಿ ವಾಜಪೇಯಿ

ನಮ್ರತಾ ನಾಯಕ್ ಅವರ ‘ಕಾಸ್ಮಿಕ್ ಲಾಂಗಿಂಗ್’ ಪುಸ್ತಕ ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ, ಅಧ್ಯಕ್ಷತೆ: ವೂಡೆ ಪಿ. ಕೃಷ್ಣ, ಪುಸ್ತಕದ ಬಗ್ಗೆ ಮಾತು: ಎಸ್‌. ವಿಶ್ವೇಶ್ವರಯ್ಯ, ಆಯೋಜನೆ: ವಿಶ್ವಮಾನವ ಸಂಗೀತ ಯಾನ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಸಂಜೆ 5.30

ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ದಾಸವಾಣಿ: ಆನಂದ್ ದೇಶಪಾಂಡೆ, ಆಯೋಜನೆ ಹಾಗೂ ಸ್ಥಳ: ಗೀತಾಮಂದಿರ ಟ್ರಸ್ಟ್, ಶ್ರೀರಾಮಪುರ, ಬೆಳಿಗ್ಗೆ 10.30ರಿಂದ

ಶ್ರೀಕೃಷ್ಣ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಯಾದವಾನಂದ ಸ್ವಾಮೀಜಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಉಪನ್ಯಾಸ: ಎಂ.ಎನ್‌. ವೆಂಕಟೇಶ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಭಜನೆ: ಆಯೋಜನೆ ಮತ್ತು ಸ್ಥಳ: ನಾರಾಯಣ ಸದನ ಭಜನೆ ಮಂದಿರ, ಚಾಮರಾಜಪೇಟೆ, ಸಂಜೆ 7

ಅಂಧ ಹೆಣ್ಣು ಮಕ್ಕಳ ಶಾಲೆಗೆ ಬೆಂಬಲ ನೀಡಲು ‘ಎ ವೆಲ್‌ನೆಸ್ ನೈಟ್– ಬಿಯಾಂಡ್ ದಿ ಬೀಟ್ಸ್’ ಕಾರ್ಯಕ್ರಮ: ಉಪಸ್ಥಿತಿ: ರೇಖಾ ಶ್ರೀಧರ್, ಉದಯ್ ಭಾಸ್ಕರ್, ನಿಲ್ ಗುಪ್ತ, ಆಯೋಜನೆ: ರೋಟರಿ ಬೆಂಗಳೂರು ಕನಕಪುರ ರೋಡ್ ಡಿಸ್ಟ್ರಿಕ್ಟ್ 3191, ಸ್ಥಳ: ದಿ ಕೃಷ್ಣ ಗ್ರ್ಯಾಂಡ್, ಬನಶಂಕರಿ 2ನೇ ಹಂತ, ಸಂಜೆ 5.30

‘ಕುಮಾರವ್ಯಾಸ ಭಾರತ’ ಗಮಕ ವಾಚನ ಮತ್ತು ವ್ಯಾಖ್ಯಾನ: ಪ್ರಸ್ತುತಿ: ನಿರ್ಮಲಾ ಪ್ರಸನ್ನ, ಎ.ವಿ. ಪ್ರಸನ್ನ, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 6

ತಿಂಗಳ ನಾಟಕ ಸಂಭ್ರಮ: ಎಸ್‌.ಆರ್‌. ರಮೇಶ್ ನಿರ್ದೇಶನದಲ್ಲಿ ಮೈಸೂರಿನ ಪರಿವರ್ತನ ರಂಗಸಮಾಜದ ವತಿಯಿಂದ ‘ಮೂರನೇ ಕಿವಿ’ ನಾಟಕ ಪ್ರದರ್ಶನ, ತಿಂಗಳ ಅತಿಥಿ: ರವೀಂದ್ರ ಭಟ್ಟ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

‘ಕಾಯ’ ನಾಟಕ ಪ್ರದರ್ಶನ: ನಿರ್ದೇಶನ: ವೀಣಾ ಬಸವರಾಜಯ್ಯ, ಆಯೋಜನೆ: ಕ್ರಿಯೇಟಿವ್ ಥಿಯೇಟರ್, ಸ್ಥಳ: ಶೂನ್ಯ ಸೆಂಟರ್ ಫಾರ್ ಆರ್ಟ್, ಲಾಲ್‌ಬಾಗ್ ರಸ್ತೆ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಚುಟುಕು ಸುದ್ದಿ

‘ಬೆಳಗಾವಿ ಜಿಲ್ಲೆ ವಿಭಜನೆ: ಶೀಘ್ರ ತೀರ್ಮಾನ ಅಗತ್ಯ’

ಸತೀಶ ಜಾರಕಿಹೊಳಿ

ಬೆಳಗಾವಿ: ‘ಬೆಳಗಾವಿ ಜಿಲ್ಲೆ ವಿಭಜನೆಯಾಗಬೇಕು ಎಂಬ ಆಸೆ ನಮಗೂ ಇದೆ. ಯಾವಾಗ ಎಂದು ಹೇಳಲಾಗದು. 10 ವರ್ಷದ ನಂತರ ವಿಭಜಿಸುವ ಬದಲು ಈಗಲೇ ಕ್ರಮ ವಹಿಸುವುದು ಸೂಕ್ತ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

‘ಜೆ.ಎಚ್.ಪಟೇಲ್ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಜಿಲ್ಲೆ ವಿಭಜನೆಗೆ ಪ್ರಕ್ರಿಯೆ ನಡೆದಿತ್ತು. ಈಗ ಏಳೆಂಟು ಜಿಲ್ಲೆಗಳಲ್ಲಿ ತಲಾ ಐದಾರು ವಿಧಾನಸಭೆ ಕ್ಷೇತ್ರಗಳಷ್ಟೇ ಇವೆ. ಬೆಳಗಾವಿ ವಿಭಜಿಸಿ, 6 ಮತ ಕ್ಷೇತ್ರದಂತೆ ಜಿಲ್ಲೆ ರಚಿಸುವುದು ಸೂಕ್ತ’ ಎಂದು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ದಸರಾ ದರ್ಬಾರ್: ದೂರವಿರಲು ಹಾರಕೂಡ ಶ್ರೀ ನಿರ್ಧಾರ

ಬಸವಕಲ್ಯಾಣ (ಬೀದರ್ ಜಿಲ್ಲೆ): ವಿಜಯದಶಮಿ ದಿನ ‘ದಸರಾ ದರ್ಬಾರ್‌ನಲ್ಲಿ ಭಕ್ತರ ಹೆಗಲ ಮೇಲೆಯೇ ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮೆರವಣಿಗೆ ನಡೆಸುವ ನಿರ್ಧಾರ ಒಪ್ಪಿಗೆ ಆಗದ ಕಾರಣ ಕಾರ್ಯಕ್ರಮದಿಂದ ದೂರವಿರಲು ನಿರ್ಧರಿಸಿದ್ದೇನೆ’ ಎಂದು ಹಾರಕೂಡ ಹಿರೇಮಠ ಸಂಸ್ಥಾನದ ಚನ್ನವೀರ ಶಿವಚಾರ್ಯರು ಹೇಳಿದ್ದಾರೆ.



ಚನ್ನವೀರ ಶಿವಾಚಾರ್ಯರು

‘ಶಾಸಕ ಶರಣು ಸಲಗರ ಸಮ್ಮುಖದಲ್ಲಿ ಅಲಂಕೃತ ವಾಹನದಲ್ಲಿ ಅಡ್ಡಪಲ್ಲಕ್ಕಿ ಮೆರವಣಿಗೆ ನಡೆಸಲು ತೀರ್ಮಾನಿಸಲಾಗಿತ್ತು. ಎರಡು ದಿನದ ಹಿಂದೆ ತಡೋಳಾ ರಾಜೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ ಹಾರಕೂಡದ ಮಠಕ್ಕೆ ಬಂದಿದ್ದ 20 ಮಠಾಧೀಶರು ಭಕ್ತರ ಹೆಗಲ ಮೇಲೆಯೇ ಅಡ್ಡಪಲ್ಲಕ್ಕಿ ಮೆರವಣಿಗೆ ನಡೆಸುವುದಾಗಿ ಪಟ್ಟು ಹಿಡಿದು ನಿರ್ಗಮಿಸಿದರು. ಈ ಮೊದಲು ತೆಗೆದುಕೊಂಡ ನಿರ್ಣಯ ಬದಲಿಸಿರುವುದಕ್ಕೆ ನನ್ನ ಒಪ್ಪಿಗೆ ಇಲ್ಲ’ ಎಂದು ಸ್ವಾಮೀಜಿ ಅವರು ಶುಕ್ರವಾರ ಪ್ರಕಟಣೆ ಮೂಲಕ ತಮ್ಮ ನಿರ್ಧಾರ ತಿಳಿಸಿದ್ದಾರೆ.

ತುಂಗಭದ್ರಾ: ಬಾಗಿದ ಆರು ಗೇಟ್‌ಗಳು

ಜಲಾಶಯಕ್ಕೆ ಮತ್ತೆ ಸಂಕಷ್ಟ; ವ್ಯರ್ಥವಾಗಿ ಹರಿದ 130 ಟಿಎಂಸಿ ಅಡಿ ನೀರು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಮಳೆಯಾಗಿ ಜಿಲ್ಲೆಯ ತುಂಗಭದ್ರಾ ಜಲಾಶಯಕ್ಕೆ ಉತ್ತಮ ಒಳಹರಿವು ಬರುತ್ತಿರುವುದು ಒಂದೆಡೆಯಾದರೆ, ಆರು ಕ್ರಸ್ಟ್‌ಗೇಟ್‌ಗಳಲ್ಲಿ ಕಾಣಿಸಿಕೊಂಡಿರುವ ದೋಷ ರೈತರನ್ನು ಮತ್ತೆ ಆತಂಕಕ್ಕೆ ಒಳಗಾಗುವಂತೆ ಮಾಡಿದೆ.

ವರ್ಷದ ಹಿಂದೆ 19ನೇ ಕ್ರಸ್ಟ್‌ಗೇಟ್ ಕೊಚ್ಚಿ ಹೋಗಿ ಅಪಾರ ಪ್ರಮಾಣದ ನೀರು ಪೋಲಾಗಿತ್ತು. ಒಂದು ವಾರದ ಬಳಿಕ ತಾತ್ಕಾಲಿಕವಾಗಿ ಗೇಟ್ ಅಳವಡಿಸಲಾಗಿತ್ತು. ಈಗ 11, 18, 20, 24, 27 ಮತ್ತು 28ನೇ ಕ್ರಸ್ಟ್‌ಗಳು ಬಾಗಿವೆ.

‘ಇವುಗಳ ಮೂಲಕ ಜಲಾಶಯದಿಂದ ನೀರು ಹರಿಸುವುದನ್ನು ಸ್ಥಗಿತಗೊಳಿಸಲಾಗಿದೆ. ನೀರು ಹರಿಸಲು ಪ್ರಯತ್ನಿಸಿದರೆ ಗೇಟ್ ತುಂಡಾಗುವ ಅಪಾಯ ಎದುರಾಗುವ ಆತಂಕವಿದೆ’ ಎಂದು ಅಧಿಕಾರಿಗಳು ಹೇಳುತ್ತಾರೆ. ನಾಲ್ಕನೇ ಕ್ರಸ್ಟ್‌ಗೇಟ್‌ನಲ್ಲಿಯೂ ಇದೇ ರೀತಿಯ ಸಮಸ್ಯೆ ಕಾಣಿಸಿಕೊಂಡಿದ್ದು, ಗರಿಷ್ಠ ಎರಡು ಅಡಿ ಮಾತ್ರ ಗೇಟ್ ಎತ್ತಿ ನೀರು ಹರಿಸಲು ಸಾಧ್ಯವಿದೆ.

ಒಟ್ಟು 105.788 ಟಿಎಂಸಿ ಅಡಿ ಸಂಗ್ರಹಣಾ ಸಾಮರ್ಥ್ಯವುಳ್ಳ ಜಲಾಶಯದಲ್ಲಿ ಗೇಟ್‌ಗಳ ನಿರಂತರ ಸಮಸ್ಯೆಯಿಂದ ಈ ಸಲದ ಮುಂಗಾರಿನಿಂದ 80 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹಿಸಲಾಗಿದೆ. ಜುಲೈನಿಂದ ನೀರು ಹರಿಸಲು ಆರಂಭವಾಗಿದ್ದು ಇದುವರೆಗೆ ಅಂದಾಜು 130 ಟಿಎಂಸಿ ಅಡಿ ನೀರು ನದಿ ಪಾಲಾಗಿದೆ.

ಹಿಂದೆ ಗೇಟ್ ಕೊಚ್ಚಿಕೊಂಡು ಹೋದಾಗ ‘ಜಲಾಶಯದ ಎಲ್ಲ ಗೇಟ್‌ಗಳನ್ನು ಬದಲಿಸಬೇಕಿದೆ’ ಎಂದು ಜಲಾಶಯದ ಸುರಕ್ಷತಾ ತಜ್ಞರು ವರದಿ ನೀಡಿದ್ದರು. ಶುಕ್ರವಾರ ಜಲಾಶಯಕ್ಕೆ 23 ಸಾವಿರ ಕ್ಯೂಸೆಕ್ ಒಳಹರಿವು ಇದ್ದು, ಇಷ್ಟೇ ಪ್ರಮಾಣದಲ್ಲಿ ನೀರನ್ನು ಹೊರಬಿಡಲಾಗುತ್ತಿದೆ.



ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್‌ಗೇಟ್ ಕೆಳಭಾಗದಿಂದ ನೀರು ಪೋಲಾಗುತ್ತಿರುವುದು

ಈಗ ನೀರು ಇದ್ದರೂ ಸಂಗ್ರಹಿಸಿಕೊಳ್ಳಲು ಆಗದ ಸ್ಥಿತಿಯಿರುವ ಕಾರಣ ಒಂದು ಬೆಳೆಗೆ ಮಾತ್ರ ನೀರು ಸಿಗಲಿದೆ ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

19ನೇ ಗೇಟ್ ಸೋರಿಕೆ: ಒಂದು ವರ್ಷದ ಹಿಂದೆ ತಾತ್ಕಾಲಿಕವಾಗಿ ಅಳವಡಿಸಿರುವ 19ನೇ ಕ್ರಸ್ಟ್‌ಗೇಟ್‌ನಿಂದ ಕೆಲ ದಿನದಿಂದ ನೀರು ಸೋರಿಕೆಯಾಗುತ್ತಿದೆ.

ಅಧಿಕಾರಿಗಳ ಬದಲಾವಣೆಗೆ ಪತ್ರ

‘ಜಲಾಶಯ ಯೋಜನೆಯ ಲಾಭ ಪಡೆಯುವ ರಾಜ್ಯಗಳನ್ನು ಬಿಟ್ಟು ಬೇರೆಯವರು ಮಂಡಳಿಯ ಅಧಿಕಾರಿಗಳಾಗಿರಬೇಕು ಎಂಬ ನಿಯಮವಿದೆ. ಆದರೆ, ತುಂಗಭದ್ರಾ ಮಂಡಳಿಯಲ್ಲಿ ಆಂಧ್ರದ ಅಧಿಕಾರಿಗಳೇ ಇದ್ದಾರೆ. ಈ ಕುರಿತು ಅನೇಕ ಬಾರಿ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಜಲಾಶಯದ ನಿರ್ವಹಣೆ ಹಾಗೂ ಹೊಸ ಗೇಟ್‌ಗಳ ಅಳವಡಿಕೆ ವಿಚಾರದಲ್ಲಿ ಕೇಂದ್ರವೇ ನಿರ್ಧಾರ ಕೈಗೊಳ್ಳಬೇಕಿದೆ’ ಎಂದು ಶಿವರಾಜ ತಂಗಡಗಿ ತಿಳಿಸಿದರು.

ಬಾಗಿರುವ ಆರು ಗೇಟ್‌ಗಳ ಮೂಲಕ ನೀರು ಹೊರಬಿಡಲು ಸಾಧ್ಯವಿಲ್ಲ. ಉಳಿದ ಗೇಟ್‌ಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಲಾಗುತ್ತಿದೆ. ಎಲ್ಲ ಗೇಟ್ ಬದಲಾಯಿಸಲಾಗುತ್ತದೆ.
ಶಿವರಾಜ ತಂಗಡಗಿ, ಐಸಿಸಿ ನೀರಾವರಿ ಸಲಹಾ ಸಮಿತಿ ಅಧ್ಯಕ್ಷ

ಕಳೆದ ಬೇಸಿಗೆಯಲ್ಲಿಯೇ ಮುತುವರ್ಜಿ ವಹಿಸಿ ಸರ್ಕಾರ ಗೇಟ್ ಬದಲಿಸಿದ್ದರೆ ಸಮಸ್ಯೆ ಪರಿಹಾರವಾಗುತ್ತಿತ್ತು. ಈಗ ಆರು ಗೇಟ್ ಬಾಗಿರುವುದರಿಂದ ಜಲಾಶಯಕ್ಕೆ ಆಪತ್ತು ಎದುರಾಗಿದೆ.
ಜನಾರ್ದನ ರೆಡ್ಡಿ, ಶಾಸಕ

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ತುಂಗಭದ್ರಾ ಮಂಡಳಿಯ ತಾಂತ್ರಿಕ ಅಧಿಕಾರಿ ರಾಘವೇಂದ್ರ, ‘ನೀರಿನ ವೇಗ ಮತ್ತು ಅಲೆಗಳ ಪ್ರಮಾಣ ವ್ಯಾಪಕವಾಗಿರುವ ಕಾರಣ ಗೇಟ್ ಪೂರ್ಣವಾಗಿ ಮುಚ್ಚಲು ಆಗಿಲ್ಲ. 19ನೇ ಗೇಟ್‌ನಿಂದ ನೀರು ಸೋರಿಕೆ ಸಂಪೂರ್ಣ ನಿಲ್ಲಿಸುತ್ತೇವೆ’ ಎಂದರು.

ಸುದ್ದಿ 2 ನಿಮಿಷ

‘ಕಬ್ಬು ತ್ಯಾಜ್ಯ: ನಿಖರ ದೂರು ನೀಡಿದರೆ ₹5 ಲಕ್ಷ ಬಹುಮಾನ’

ಹಾವೇರಿ: ‘ರಾಜ್ಯದ ಕೆಲ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ಕಟಾವು ತ್ಯಾಜ್ಯದ ಹೆಸರಿನಲ್ಲಿ ಹೆಚ್ಚಿನ ಹಣ ಪಡೆಯುತ್ತಿರುವ ಬಗ್ಗೆ ಆರೋಪದ ಬದಲು ನಿಖರವಾಗಿ ದೂರು ನೀಡಿದಲ್ಲಿ ₹ 5 ಲಕ್ಷ ಬಹುಮಾನ ನೀಡಲಾಗುವುದು’ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿದರು.

‘ರಾಜ್ಯದಲ್ಲಿ 81 ಸಕ್ಕರೆ ಕಾರ್ಖಾನೆಗಳಿವೆ. ಕಬ್ಬು ಅರೆಯುವಲ್ಲಿ ರಾಜ್ಯ ಮೂರನೇ ಸ್ಥಾನದಲ್ಲಿದೆ. ಕಬ್ಬು ಅರೆಯಲು ಹಿಂದೆ 6 ತಿಂಗಳು ಸಮಯ ಬೇಕಾಗುತ್ತಿತ್ತು, ಈಗ ಮೂರೇ ತಿಂಗಳಲ್ಲಿ ಕಬ್ಬು ಖಾಲಿ ಆಗುತ್ತಿದೆ. ನಿಯಮಬಾಹಿರ ಪ್ರಕರಣಗಳ ಬಗ್ಗೆ ದೂರು ನೀಡಿದ್ದಲ್ಲಿ, ತನಿಖೆ ನಡೆಸುತ್ತೇವೆ. ಆರೋಪ ಸಾಬೀತಾದಲ್ಲಿ, ಕಾರ್ಖಾನೆಯ ಪರವಾನಗಿಯನ್ನು ರದ್ದುಪಡಿಸುತ್ತೇವೆ’ ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಸೈಲ್ ಮನೆಯಿಂದ ₹1.6 ಕೋಟಿ ನಗದು,6 ಕೆ.ಜಿ ಚಿನ್ನ ವಶ

ಕಾರವಾರ: ಶಾಸಕ ಸತೀಶ ಸೈಲ್ ಮನೆ ಮೇಲೆ ಈಚೆಗೆ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಕೋಟ್ಯಂತರ ರೂಪಾಯಿ ನಗದು, ಕೆ.ಜಿಗಟ್ಟಲೇ ಚಿನ್ನ, ಆಭರಣ ವಶಕ್ಕೆ ಪಡೆದಿದ್ದಾರೆ.

‘₹1.68 ಕೋಟಿ ನಗದು, 6.75 ಕೆ.ಜಿ ತೂಕದ ಚಿನ್ನಾಭರಣ ಮತ್ತು ಚಿನ್ನದ ಬಿಸ್ಕತ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಶಾಸಕ ಮತ್ತು ಬೇಲೆಕೇರಿ ಅದಿರು ಅಕ್ರಮ ಸಾಗಣೆ ಪ್ರಕರಣದಲ್ಲಿ ಭಾಗಿಯಾಗಿದ್ದವರ ಪೈಕಿ ಹಲವರ ಬ್ಯಾಂಕ್ ಖಾತೆಯಲ್ಲಿ ₹14.13 ಕೋಟಿ ಮೊತ್ತ ತಡೆ ಹಿಡಿಯಲಾಗಿದೆ’ ಎಂದು ಇ.ಡಿ ತನ್ನ ‘ಎಕ್ಸ್’ ಖಾತೆಯಲ್ಲಿ ಶುಕ್ರವಾರ ತಿಳಿಸಿದೆ.

‘ಕಬ್ಬಿಣದ ಅದಿರು ಕಳ್ಳ ಸಾಗಣೆಗೆ ಸಂಬಂಧಿಸಿದಂತೆ ನಡೆದ ಹಣಕಾಸು ವಹಿವಾಟು ಮಾಹಿತಿ ಆಧರಿಸಿ ಸತೀಶ ಸೈಲ್ ಅವರ ಮನೆ, ಇನ್ನಿತರರ ಮನೆ, ಕಚೇರಿಗಳಲ್ಲಿ ತಪಾಸಣೆ ನಡೆಸಲಾಗಿತ್ತು. ಇ.ಡಿ ಬೆಂಗಳೂರು ವಿಭಾಗದ ಅಧಿಕಾರಿಗಳು ಕಾರವಾರ, ದೆಹಲಿ, ಗೋವಾ, ಮುಂಬೈ ಸೇರಿ ವಿವಿಧೆಡೆ ಕಾರ್ಯಾಚರಣೆ ನಡೆಸಿದ್ದರು’ ಎಂದು ತಿಳಿಸಿದೆ.

‘ದಾಳಿಗೆ ಕಾಂಗ್ರೆಸ್ ಶಾಸಕರೇ ಗುರಿ ಆಗಿದ್ದು, ಇದರ ಹಿಂದೆ ರಾಜಕೀಯ ದುರುದ್ದೇಶವಿದೆ. ಅನಾರೋಗ್ಯದಿಂದ ದೆಹಲಿ ಆಸ್ಪತ್ರೆಯಲ್ಲಿ ಸತೀಶ ಸೈಲ್ ದಾಖಲಾಗಿದ್ದರಿಂದ ದಾಳಿ ವೇಳೆ ಮನೆಗೆ ಬಂದಿರಲಿಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಸುದ್ದಿಗಾರರಿಗೆ ತಿಳಿಸಿದರು.

‘ಜ್ಞಾನ ದಾಸೋಹಿ’ ವಿಭೂತಿಯಲ್ಲಿ ಲೀನ

• ಬಷೀರ ಅಹ್ಮದ್ ನಗಾರಿ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಆರಾಧ್ಯದೈವ ಶರಣ ಬಸವೇಶ್ವರರ ಮಹಾದಾಸೋಹ ಸಂಸ್ಥಾನದ 8ನೇ ಪೀಠಾಧಿಪತಿ ಶರಣಬಸವಪ್ಪ ಅಪ್ಪ (90) ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವ ಹಾಗೂ ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಶುಕ್ರವಾರ ನಡೆಯಿತು.

ಇಲ್ಲಿನ ಶರಣಬಸವೇಶ್ವರ ದೇವಸ್ಥಾನದ ಎದುರು ನಿರ್ಮಿಸಿದ್ದ ಸಮಾಧಿ ಬಳಿ ಗೋದೂಳಿ ಹೊತ್ತಿಗೆ ಶರಣಬಸವಪ್ಪ ಅಪ್ಪ ಅವರ ಅಂತ್ಯಕ್ರಿಯೆ ಕಾರ್ಯ ಆರಂಭಗೊಂಡವು. ಸಂಜೆ 4.30ಕ್ಕೆ ಪಾರ್ಥಿವ ಶರೀರವನ್ನು ಪುಷ್ಪಾಲಂಕೃತ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಯಿತು. ‘ಶರಣಬಸವೇಶ್ವರ ಮಹಾರಾಜ್ ಕೀ ಜೈ’, ‘ಓಂ ನಮಃ ಶಿವಾಯ’ ಘೋಷಣೆಗಳು, ವಿವಿಧ ವಾದ್ಯಗಳ ವಾದನದ ನಡುವೆ ಶರಣ ಬಸವೇಶ್ವರ ದೇವಸ್ಥಾನಕ್ಕೆ ಐದು ಸುತ್ತು ಹಾಕಲಾಯಿತು. ಸೂರ್ಯಾಸ್ತದ ವೇಳೆಗೆ ಭಕ್ತರ ಶೋಕದ ನಡುವೆ ಕ್ರಿಯಾವಿಧಿ ಕಾರ್ಯ ಸಮಾಪ್ತವಾಯಿತು.

ಸಂಸ್ಥಾನದ ಏಳನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಸಮಾಧಿ ಪಕ್ಕವೇ ಕಲ್ಯಾಣ ಭಾಗದ ‘ಜ್ಞಾನ ದಾಸೋಹಿ’ ವಿಭೂತಿ, ಬಿಲ್ವಪತ್ರೆಯಲ್ಲಿ ಲೀನವಾದರು. ಕುಟುಂಬದವರು ಹಾಗೂ ಭಕ್ತರ ಅಶ್ರುತರ್ಪಣ ನಡುವೆಯೇ ‘ಅಪ್ಪ’ ಅವರು ಸಮಾಧಿಸ್ಥರಾದರು.

ಶರಣಬಸವಪ್ಪ ಅಪ್ಪ ಅವರ ಪಾರ್ಥಿವ ಶರೀರವನ್ನು ಅಂತ್ಯಕ್ರಿಯೆಗೂ ಮುನ್ನ ಸುತ್ತ ಪಲ್ಲಕ್ಕಿಯಲ್ಲಿ ಕೂರಿಸಿ ಶರಣಬಸವೇಶ್ವರ ದೇವಸ್ಥಾನದ ಪ್ರದಕ್ಷಿಣೆ ಹಾಕಲಾಯಿತು– ಚಿತ್ರ: ತಾಜುದ್ದೀನ್ ಆಜಾದ್

ವೀರಶೈವ ಲಿಂಗಾಯತ ಸಂಪ್ರದಾಯದಂತೆ ನಾಡಿನ ವಿವಿಧ ಸ್ವಾಮೀಜಿಗಳ ನೇತೃತ್ವದಲ್ಲಿ 15 ಜನರ ತಂಡವು ಅಂತ್ಯಕ್ರಿಯೆ ವಿಧಿವಿಧಾನಗಳನ್ನು ನಡೆಸಿಕೊಟ್ಟಿತು. 50 ನಿಮಿಷ ನಡೆದ ಈ ಪ್ರಕ್ರಿಯೆಯಲ್ಲಿ ಕ್ರಿಯಾಸಮಾಧಿಗೆ 10 ಸಾವಿರಕ್ಕೂ ಅಧಿಕ ವಿಭೂತಿ ಗಟ್ಟಿ, 1 ಲಕ್ಷದಷ್ಟು ತ್ರಿದಳ ಬಿಲ್ವಪತ್ರೆ, ತರಹೇವಾರಿ ಪುಷ್ಪದಳಗಳನ್ನು ಬಳಸಲಾಯಿತು.

ಲಕ್ಷಾಂತರ ಭಕ್ತರು: ಶರಣಬಸವಪ್ಪ ಅಪ್ಪ ಅವರ ‘ಪ್ರಸಾದಿ ಶರೀರ’ದ ಸಾರ್ವಜನಿಕ ದರ್ಶನಕ್ಕೆ ಸಂಸ್ಥಾನದ ಮಹಾಮನೆ ಎದುರಿನ ಶಿವಾನುಭವ ಮಂಟಪದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಬೆಳಿಗ್ಗೆ 8ರಿಂದ ಮಧ್ಯಾಹ್ನ 3.30ರ ತನಕ ಲಕ್ಷಾಂತರ ಭಕ್ತರು ದರ್ಶನ ಪಡೆದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಪ್ರಿಯಾಂಕ್ ಖರ್ಗೆ, ಡಾ.ಶರಣಪ್ರಕಾಶ ಪಾಟೀಲ, ಈಶ್ವರ ಖಂಡ್ರೆ, ಶರಣಬಸಪ್ಪ ದರ್ಶನಾಪುರ, ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ನೂರಕ್ಕೂ ಅಧಿಕ ಗಣ್ಯರು ಅಂತಿಮ ದರ್ಶನ ಪಡೆದು, ನುಡಿನಮನ ಸಲ್ಲಿಸಿದರು. ಸಾರ್ವಜನಿಕ ದರ್ಶನ ಸ್ಥಳದಲ್ಲಿ ಭಜನೆ ಅನುರಣಿಸಿದರೆ, ವಚನಗಳು, ಭಕ್ತಿ ಗೀತೆಗಳ ಗಾಯನ ಮಾರ್ದನಿಸಿತು.

ಬಿಸಿಲಿಗೆ ಹೆಸರಾದ ಕಲಬುರಗಿಯಲ್ಲಿ ದಿನವಿಡೀ ಸೂರ್ಯ ಬಹುತೇಕ ಮೋಡಗಳ ಮಧ್ಯೆ ಅವಿತಿದ್ದ. ಆಗಸದಲ್ಲಿ ದಟ್ಟೈಸಿದ್ದ ಮೋಡಗಳು ಕ್ರಿಯಾಸಮಾಧಿಗೆ ಅರ್ಧ ಗಂಟೆ ಮೊದಲು ಮಳೆ ಸುರಿಸಿತು. ಇದು ‘ಶರಣರಿಗೆ ಮರಣವೇ ಮಹಾನವಮಿ’ ಎಂದು ಸಾರಿದಂತೆ ಭಾಸವಾಯಿತು.

ಲಿಂಗ, ಪೇಟ, ಪುಷ್ಪಹಾರ...

ಶರಣಬಸವಪ್ಪ ಅಪ್ಪ ಅವರ ಪಾರ್ಥಿವ ಶರೀರವನ್ನು ವೇದ, ಮಂತ್ರಗಳೊಂದಿಗೆ ಕ್ರಿಯಾಸಮಾಧಿಗೆ ಇಳಿಸಿದ ಬಳಿಕ ಪೂಜೆ ಸಲ್ಲಿಸಲಾಯಿತು. ನಂತರ ಅವರ ಕೊರಳಲ್ಲಿದ್ದ ಚಿನ್ನದ ಕರಡಿಕೆಯ ಲಿಂಗವನ್ನು ಶರಣ ಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ಹಾಗೂ ಪುತ್ರ ದೊಡ್ಡಪ್ಪ ಅಪ್ಪ ಕೊರಳಿಗೆ ಹಾರಕೂಡದ ಚನ್ನವೀರ ಶಿವಾಚಾರ್ಯ ಹಾಕಿದರು. ಬಳಿಕ ಪೇಟ ತೊಡಿಸಿ, ಪುಷ್ಪ ಹಾರ ಹಾಕಿದರು. ಈ ವೇಳೆ ಮತ್ತೆ ‘ಶರಣಬಸವೇಶ್ವರ ಮಹಾರಾಜ್ ಕೀ ಜೈ’ ಘೋಷಣೆ ಮೊಳಗಿತು.

ಕರ್ನಾಟಕ ನೀರಾವರಿ ನಿಗಮ ನಿಯಮಿತ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ. 3 ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು.
ಫೋನ್/ಫ್ಯಾಕ್ಸ್:08192–200255 Email:eeknnlmbr@gmail.com

ಕನೀನಿನಿ/ಭನಾವಿ3/ಮಬೆ/ಪಿ.ಬಿ/ಟೆಂಡರ್‌ಪ್ರಕಟಣೆ/661/2025–26 ದಿ: 13.08.2025

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.3 ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು ಇಂದ ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಲೆಕ್ಕ ಶೀರ್ಷಿಕೆ 2700 ಅಡಿಗಳಲ್ಲಿನ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಡಿ ಕೆಪಿಪಿಪಿ–ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಕೆಪಿಪಿಪಿ–ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ಮುಖಾಂತರವೇ ದಿನಾಂಕ: 14.08.2025 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ:26.08.2025ರ ಸಂಜೆ 4.30 ಗಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ಮತ್ತು ಪ್ರೀ ಬಿಡ್ ಸಭೆಯನ್ನು ದಿನಾಂಕ:19.08.2025 ರಂದು 12.00 ಘಂಟೆಗೆ ವಿಭಾಗ ಕಛೇರಿಯ ವಿಳಾಸದಲ್ಲಿ ಸಂಪರ್ಕಿಸ ಬಹುದಾಗಿರುತ್ತದೆ ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 28.08.2025 ರಂದು ಸಂಜೆ 4.35 ಘಂಟೆಗೆ ಆಗಿರುತ್ತದೆ. **ಒಟ್ಟು ಕಾಮಗಾರಿ ಸಂಖ್ಯೆ :– 03 ಸಂಖ್ಯೆಗಳು:–**
(1) **KNNL/2025-26/SE0188 ರೂ.136.82 ಲಕ್ಷಗಳು** (ಜಿ.ಎಸ್.ಟಿ. ಒಳಗೊಂಡಂತೆ)
(2) **KNNL/2025-26/SE0187 ರೂ.173.85 ಲಕ್ಷಗಳು** (ಜಿ.ಎಸ್.ಟಿ. ಒಳಗೊಂಡಂತೆ)
(3) **KNNL/2025-26/SE0183 ರೂ.80.60 ಲಕ್ಷಗಳು** (ಜಿ.ಎಸ್.ಟಿ. ಒಳಗೊಂಡಂತೆ)
ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ–ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/266/ ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.3, ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು.

ಸ್ವಾತಂತ್ರ್ಯ ದಿನದ ಸಂಭ್ರಮ...

ಪ್ರಜಾವಾಣಿ ಚಿತ್ರ

ಮೂಡುಬಿದಿರೆಯ ಆಳ್ವಾಸ್ ಕೆ.ವಿ.ಸುಬ್ಬಣ್ಣ ಬಯಲು ಸಭಾಂಗಣದಲ್ಲಿ ಶುಕ್ರವಾರ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಸುಮಾರು 15 ಸಾವಿರ ವಿದ್ಯಾರ್ಥಿಗಳು ಭಾಗವಹಿಸಿದ್ದರು

ಪ್ರವಾಹ: ಕಿತ್ತುಹೋದ ಸೇತುವೆ ರಸ್ತೆ

ಕಲಬುರಗಿ: ಕಾಗಿಣಾ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಚಿತ್ತಾಪುರ ತಾಲ್ಲೂಕಿನ ದಂಡೋತಿ ಗ್ರಾಮದ ಹತ್ತಿರದ ಕಾಗಿಣಾ ನದಿಗೆ ಕಟ್ಟಿರುವ ಸೇತುವೆಯ ಮೇಲಿನ ರಸ್ತೆ ಪ್ರವಾಹದಲ್ಲಿ ಶುಕ್ರವಾರ ಕಿತ್ತು ಹೋಗಿದೆ.

ಸೇತುವೆ ಮೇಲಿನ ಡಾಂಬರ್ ರಸ್ತೆ ಮತ್ತು ಸಿಮೆಂಟ್ ಕಾಂಕ್ರಿಟ್ ರಸ್ತೆ ಕಿತ್ತು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದೆ.

ಗುರುವಾರ ದಿನವಿಡೀ ಪ್ರವಾಹದಲ್ಲಿ ಸೇತುವೆ ಮುಳುಗಿತ್ತು. ಶುಕ್ರವಾರ ಬೆಳಿಗ್ಗೆ ಪ್ರವಾಹ ಕಡಿಮೆಯಾದಾಗ ಸೇತುವೆ ಮೇಲಿನ ರಸ್ತೆ ಕಿತ್ತು ಹೋಗಿರುವುದು ಬೆಳಕಿಗೆ ಬಂದಿದೆ.

ಸೇತುವೆ ಮೇಲಿನ ಅನೇಕ ಸಿಮೆಂಟ್ ಕಂಬಗಳು ಕೊಚ್ಚಿಕೊಂಡು ಹೋಗಿವೆ. ಸೇತುವೆ ಮೇಲೆ ಅಳವಡಿಸಿದ ಮೊಬೈಲ್ ನೆಟ್‌ವರ್ಕ್ ಕೇಬಲ್ ಕಿತ್ತು ಹೋಗಿದೆ.

ದಂಡೋತಿ ಸೇತುವೆ ಮೇಲಿನ ರಸ್ತೆ ಮಳೆ, ಪ್ರವಾಹಕ್ಕೆ ಕಿತ್ತು ಹೋಗಿದೆ

ಸೇತುವೆ ಹದಗೆಟ್ಟಿದ್ದರಿಂದ ದಂಡೋತಿ ಸೇತುವೆ ಮಾರ್ಗವಾಗಿ ಕಲಬುರಗಿ, ಸೇಡಂಗೆ ನಿತ್ಯ ಸಂಚರಿಸುತ್ತಿದ್ದ ಬಸ್‌ಗಳು ಶಹಾಬಾದ್ ಮತ್ತು ಮಳಖೇಡ ಮಾರ್ಗವಾಗಿ ಸಂಚರಿಸುತ್ತಿವೆ.

ಕಲಬುರಗಿ, ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಶುಕ್ರವಾರ ಸಾಧಾರಣ ಮಳೆಯಾಗಿದೆ.

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ

KSHIP

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಪಿಡಬ್ಲ್ಯೂಡಿ ಅನೆಕ್ಸ್ ಕಟ್ಟಡ, ಯೋಜನಾ ಅನುಷ್ಠಾನ ಘಟಕ, 1ನೇ ಮಹಡಿ, ಕೆ.ಆರ್.ವೃತ್ತ, ಬೆಂಗಳೂರು, ಕರ್ನಾಟಕ – 560 001

ಸಂ:PIU/KSHIP-IV/IFB/2025-26/09 ದಿನಾಂಕ: 16.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ) (2ನೇ ಕರೆ)

1. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯು (KSHIP) "KSHIP-IV ಪ್ಯಾಕೇಜ್‌ಗಳ ಅಡಿಯಲ್ಲಿ ಕೆಳಕಂಡ ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳಿಗೆ ವಿಸ್ತ್ರತಾ ಯೋಜನಾ ವರದಿ (ಡಿಪಿಆರ್) ತಯಾರಿಸಲು ಸಮಾಲೋಚಕರ ಸೇವೆಗಳನ್ನು ಮತ್ತು ಆರ್ಥಿಕ ಸಲಹಾ ಸೇವೆಗಳನ್ನು ಒದಗಿಸಲು" ಬಿಡ್‌ಗಳನ್ನು ಆಹ್ವಾನಿಸಿದೆ. ಗುಣಮಟ್ಟ & ವೆಚ್ಚ ಆಧಾರಿತ ಆಯ್ಕೆಯ (ಕ್ಯೂಸಿಬಿಎಸ್) ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಪ್ಯಾಕೇಜ್ ಸಂಖ್ಯೆ	ವಿವರಗಳು	ಇಎಂಡಿ (ರೂ ಲಕ್ಷಗಳಲ್ಲಿ)
ಪ್ಯಾಕೇಜ್ – 1	266 ಕಿಮೀಗಳ ಉದ್ದದ 3 ರಾಜ್ಯ ಹೆದ್ದಾರಿ ರಸ್ತೆಗಳಿಗೆ ಡಿಪಿಆರ್ ಮತ್ತು ಆರ್ಥಿಕ ಸಲಹಾ ಸೇವೆಗಳನ್ನು ಒದಗಿಸುವುದು	10 ಲಕ್ಷ
ಪ್ಯಾಕೇಜ್ – 2	253 ಕಿಮೀಗಳ ಉದ್ದದ 3 ರಾಜ್ಯ ಹೆದ್ದಾರಿ ರಸ್ತೆಗಳಿಗೆ ಡಿಪಿಆರ್ ಮತ್ತು ಆರ್ಥಿಕ ಸಲಹಾ ಸೇವೆಗಳನ್ನು ಒದಗಿಸುವುದು	10 ಲಕ್ಷ
ಪ್ಯಾಕೇಜ್ – 4	186 ಕಿಮೀಗಳ ಉದ್ದದ 3 ರಾಜ್ಯ ಹೆದ್ದಾರಿ ರಸ್ತೆಗಳಿಗೆ ಡಿಪಿಆರ್ ಮತ್ತು ಆರ್ಥಿಕ ಸಲಹಾ ಸೇವೆಗಳನ್ನು ಒದಗಿಸುವುದು	10 ಲಕ್ಷ

2. ಸಮಾಲೋಚಕರು ಈ ಪ್ರಸ್ತಾವನೆ ಭಾಗವಾಗಿ ಇಎಂಡಿ ರೂ.10,00,000/– (ರೂಪಾಯಿ ಹತ್ತು ಲಕ್ಷಗಳು ಮಾತ್ರ) ವನ್ನು ಪಾವತಿಸಬೇಕು. (1 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ ಮತ್ತು 9 ಲಕ್ಷ ಬಿಜಿ ರೂಪದಲ್ಲಿರಬೇಕು).
3. ಬಿಡ್ ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
4. ಬಿಡ್‌ಗಳನ್ನು **28.08.2025 ರಂದು (ಭಾರತೀಯ ಕಾಲಮಾನ 16:30 ಗಂಟೆಯವರೆಗೆ)** ಅಥವಾ ಮುಂಚಿತವಾಗಿ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿ) ಆನ್‌ಲೈನ್‌ನಲ್ಲಿ ಮಾತ್ರ ಸಲ್ಲಿಸಬೇಕು.
5. ಬಿಡ್ ಪೂರ್ವ ವಿಚಾರಣೆಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ / ಇ–ಮೇಲ್: piukship@gmail.com ಮೂಲಕ ಮಾತ್ರ **20.08.2025 11.00 ಗಂಟೆಗೆ** ಅಥವಾ ಮುಂಚಿತವಾಗಿ ಸಲ್ಲಿಸಬೇಕು.
6. ಬಿಡ್ ಪೂರ್ವ ಸಭೆಯನ್ನು KSHIP, ಪಿಡಬ್ಲ್ಯೂಡಿ ಅನೆಕ್ಸ್ ಕಟ್ಟಡ, ಯೋಜನಾ ಅನುಷ್ಠಾನ ಘಟಕ, 1ನೇ ಮಹಡಿ, ಕೆ.ಆರ್.ವೃತ್ತ, ಬೆಂಗಳೂರು, ಕರ್ನಾಟಕ – 560 001, ಕರ್ನಾಟಕ KSHIP ಕಛೇರಿಯಲ್ಲಿ **20.08.2025 ರಂದು, 15.00 ಗಂಟೆಗೆ** ಏರ್ಪಡಿಸಲಾಗಿದೆ.
7. ತಾಂತ್ರಿಕ ಬಿಡ್‌ಗಳನ್ನು **30.08.2025 ರಂದು 15:00 ಗಂಟೆಗೆ** ತೆರೆಯಲಾಗುವುದು.
8. ಬಿಡ್ ದಾಖಲಾತಿಗಳಲ್ಲಿ ತಿದ್ದುಪಡಿ/ಸ್ಪಷ್ಟತೆ/ವೇಳಾ ಪಟ್ಟಿಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿಪಿ) ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು ಎಂದು ಗಮನಿಸತಕ್ಕದ್ದು.
9. ಬೇರೆ ಯಾವುದೇ ವಿಧಾನದ ಮೂಲಕ ಸಲ್ಲಿಸಿದ ಬಿಡ್‌ಗಳನ್ನು ಪರಿಗಣಿಸಲಾಗುವುದಿಲ್ಲ.
10. ಬಿಡ್‌ಗಳನ್ನು ಯಾವುದೇ ಕಾರಣ ನೀಡದೇ ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿದೆ.
11. ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **18.08.2025**ರ ಬೆಳಿಗ್ಗೆ **11:00** ಗಂಟೆಯಿಂದ ಡೌನ್‌ಲೋಡ್ ಮಾಡಲು ಲಭ್ಯವಿದೆ.

ಸಹಿ/– ಯೋಜನಾ ನಿರ್ದೇಶಕರು, ಕ.ರಾ.ಹೆ.ಅ.ಯೋ., ಬೆಂಗಳೂರು.

ಡಿಐಪಿಆರ್/ಸಿಪಿ/2336/ಸಿಸಿಎಲ್/2025–26

ಧರ್ಮಸ್ಥಳ ಅಪಪ್ರಚಾರದ ವಿರುದ್ಧ ಕ್ರಮ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳ ಪ್ರಕರಣದಲ್ಲಿ ಸುಳ್ಳು ಹೇಳಿ, ಅಪಪ್ರಚಾರ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಚಿಂತನೆ ನಡೆಸಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕ್ಷೇತ್ರದ ಮೇಲೆ ನನಗೆ ನಂಬಿಕೆ, ವಿಶ್ವಾಸವಿದೆ. ತನಿಖೆಯಿಂದ ಅಲ್ಲಿ ನಡೆದಿರುವ ಷಡ್ಯಂತ್ರ ಹೊರಬರಲಿದೆ. ಗೃಹ ಸಚಿವರೂ ಅಧಿವೇಶನದಲ್ಲಿ ಉತ್ತರಿಸಿ ಜನರ ಮುಂದೆ ಸತ್ಯಾಂಶ ಇಡಲಿದ್ದಾರೆ’ ಎಂದರು.

‘ಇದು ಧರ್ಮಸ್ಥಳದ ಪರ ಅಥವಾ ವಿರುದ್ಧದ ವಿಚಾರವಲ್ಲ. ಪ್ರಕ್ರಿಯೆ ನ್ಯಾಯಬದ್ಧವಾಗಿ ನಡೆಯಬೇಕು. ಕ್ಷೇತ್ರವನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ’ ಎಂದರು.

‘ಸುಳ್ಳು ಆರೋಪ ಮಾಡಿದ್ದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸಿ.ಎಂ ಸೂಚಿಸಿದ್ದಾರೆ. ಕಾನೂನು ಎಲ್ಲರಿಗೂ ಒಂದೇ. ಅದನ್ನು ಕಾಪಾಡಬೇಕು. ಇಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆ ಇಲ್ಲ. ಅನಗತ್ಯವಾಗಿ ಯಾರ ತೇಜೋವಧೆಯನ್ನೂ ಮಾಡಬಾರದು’ ಎಂದರು.

ಎಸ್‌ಐಟಿಯವರು ನಿಷ್ಪಕ್ಷಪಾತವಾಗಿ ತನಿಖೆ ಮಾಡುತ್ತಿದ್ದಾರೆ. ದೇವಸ್ಥಾನದ ಪಾವಿತ್ರ್ಯಕ್ಕೆ ಎಲ್ಲೂ ಧಕ್ಕೆಯಾಗಿಲ್ಲ. ಬಿಜೆಪಿಯವರೇ ವಿಷಯ ತಿರುಚುತ್ತಿದ್ದು, ಕ್ಷೇತ್ರದ ಹೆಸರು ಹಾಳು ಮಾಡುತ್ತಿದ್ದಾರೆ
ದಿನೇಶ್ ಗುಂಡೂರಾವ್ ಆರೋಗ್ಯ ಸಚಿವ

ಧರ್ಮಸ್ಥಳ ವಿಚಾರದಲ್ಲಿ ಜನರ ತಾಳ್ಮೆ ಪರೀಕ್ಷಿಸುತ್ತಿದ್ದೀರಾ? ಸರ್ಕಾರ ಬದುಕಿದೆಯೇ, ಇಲ್ಲವೇ ಎಂದು ತಿಳಿಯಬೇಕಲ್ಲ? ಡಿಸಿಎಂ ಅವರೇ ಪಿತೂರಿ ಬಯಲಿಗೆಳೆಯಲಿ.
ಡಾ.ಅಶ್ವತ್ಥನಾರಾಯಣ, ಬಿಜೆಪಿ ಶಾಸಕ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

ಹೊಸಪೇಟೆ, ಧಾರವಾಡದಲ್ಲಿ ಮಳೆ

ಹೊಸಪೇಟೆ/ಹುಬ್ಬಳ್ಳಿ: ವಿಜಯನಗರ ಮತ್ತು ಧಾರವಾಡ ಜಿಲ್ಲೆಯ ವಿವಿಧೆಡೆ ಶುಕ್ರವಾರ ಧಾರಾಕಾರ ಮಳೆಯಾಯಿತು.

ಹೊಸಪೇಟೆ ನಗರ ಹಾಗೂ ಸುತ್ತಮುತ್ತ ಶುಕ್ರವಾರ ಸಂಜೆ ಬಿರುಸಿನ ಮಳೆಯಾಯಿತು. ಹಲವು ಕಡೆ ದ್ವಿಚಕ್ರ ವಾಹನಗಳು ಕೆಟ್ಟಿದ್ದು, ಸವಾರರು ತಳ್ಳಿಕೊಂಡು ಸಾಗಬೇಕಾಯಿತು.

ಹೊಸಪೇಟೆ ತಾಲ್ಲೂಕಿನ ಕಮಮಾಪುರ, ಹಂಪಿ, ಮರಿಯಮ್ಮನಹಳ್ಳಿ ಕಡೆ ಮಳೆಯಾಯಿತು. ಉತ್ತರ ಕನ್ನಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ತುಂತುರು ಮಳೆ ಮುಂದುವರೆಯಿತು.

ಕೊಡಗು– ಬಿರುಸಿನ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ಹಲವೆಡೆ ಶುಕ್ರವಾರ ಜೋರು ಮಳೆ ಬಿದ್ದಿತು.

ಕೋಟೆ ಆವರಣದಲ್ಲಿ ನಡೆದ ಸ್ವಾತಂತ್ರ್ಯೋತ್ಸವಕ್ಕೆ ಮಳೆ ಅಡ್ಡಿಯಾಯಿತು.

ಸಂಪಾಜೆಯಲ್ಲಿ 4.5 ಸೆಂ.ಮೀ, ಶಾಂತಳ್ಳಿ 4, ಭಾಗಮಂಡಲ 3.4, ಮಡಿಕೇರಿಯಲ್ಲಿ 3 ಸೆಂ.ಮೀ. ಮಳೆಯಾಗಿದೆ.

ಮೈಸೂರು ವರದಿ: ಮೈಸೂರು ನಗರವೂ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಶುಕ್ರವಾರ ಬಿಟ್ಟೂ ಬಿಟ್ಟು ಜೋರು ಮಳೆಯಾಯಿತು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.39	11,603	11,070
ಹಾರಂಗಿ	2,859	2,857.07	3,931	3,045
ಕಬಿನಿ	2,284.00	2,281.79	4,971	3,250
ಹೇಮಾವತಿ	2,922	2,921.75	6,378	5,650
ಲಿಂಗನಮಕ್ಕಿ	1,819	1,812.05	11,027	6,200
ಸೂಪಾ (ಮೀ)	564	551.96	7,831.46	2,553.01
ಮಾಣಿ	595	590.92	1,890	715
ತುಂಗಭದ್ರಾ	1,633	1,626.06	23,295	23,193
ಮಲಪ್ರಭಾ	2,079.5	2,076.95	2,485	194
ಘಟಪ್ರಭಾ	2175	2,172.21	3,784	686
ಭದ್ರಾ *	186	184.9	10,855	7,256
ಆಲಮಟ್ಟಿ (ಮೀ)	519.6	519.58	15,380	15,380
ನಾರಾಯಣಪುರ (ಮೀ)	492.25	492.21	20,000	19,920

* ನೆಲಮಟ್ಟದಿಂದ

ಚಿಟಿಕೆ ಸುದ್ದಿ

ಸ್ವಪ್ನ ಮಂಟಪ ಚಿತ್ರಯಾತ್ರೆ ಉದ್ಘಾಟನೆ ನಾಳೆ

ಬೆಂಗಳೂರು: ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಸ್ವಪ್ನ ಮಂಟಪ' ಚಿತ್ರಯಾತ್ರೆ ತುಮಕೂರು ಜಿಲ್ಲೆ ಶಿರಾ ಭಾಗ್ಯಲಕ್ಷ್ಮೀ ಚಿತ್ರಮಂದಿರದಲ್ಲಿ ಆ.17ರಂದು ಬೆಳಿಗ್ಗೆ 10ಕ್ಕೆ ಉದ್ಘಾಟನೆಗೊಳ್ಳಲಿದೆ.

ಶಿರಾ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಬರಗೂರು ಮೇಷ್ಟ್ರು ಬಳಗ ಹಮ್ಮಿಕೊಂಡಿರುವ 'ಸಮುದಾಯದತ್ತ ಸಿನಿಮಾ' ಪರಿಕಲ್ಪನೆಯ ಈ ಚಿತ್ರಯಾತ್ರೆಯನ್ನು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಉದ್ಘಾಟಿಸುವರು. 'ಸಮುದಾಯದತ್ತ ಸಿನಿಮಾ' ರೂವಾರಿ ಬರಗೂರು ರಾಮಚಂದ್ರಪ್ಪ ಆಶಯ ನುಡಿ ಆಡಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಚಿದಾನಂದ ಎಂ. ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಕಲಾವಿದ ಸುಂದರರಾಜ್, ಶಿರಾ ಮುಖಂಡ ಆರ್. ಉಗ್ರೇಶ್, ಚಿತ್ರ ನಿರ್ಮಾಪಕ ಎ.ಎಂ. ಬಾಬು, ಶಿರಾ ತಾಲ್ಲೂಕು ಕಸಾಪ ಅಧ್ಯಕ್ಷ ಬಿ.ಪಿ. ಪಾಂಡುರಂಗಯ್ಯ, ಬರಗೂರು ಮೇಷ್ಟ್ರು ಬಳಗದ ಅಧ್ಯಕ್ಷ ನರೇಶ್ ಬಾಬು ಭಾಗವಹಿಸಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

ಕಾದಾಟದಲ್ಲಿ ಗಾಯಗೊಂಡಿದ್ದ ಹುಲಿಯ ರಕ್ಷಣೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಗ್ಗವಾಡಿ ರಸ್ತೆಯಲ್ಲಿ ಶುಕ್ರವಾರ ಕಾದಾಟದಲ್ಲಿ ಗಂಭೀರವಾಗಿ ಗಾಯಗೊಂಡು ನಿತ್ರಾಣ ಸ್ಥಿತಿಯಲ್ಲಿದ್ದ ಹುಲಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ರಕ್ಷಿಸಿದ್ದಾರೆ.

11 ವರ್ಷದ ಹುಲಿ ಗಂಭೀರವಾಗಿ ಗಾಯಗೊಂಡು ಮಹದೇವ್ ಎಂಬ ರೈತರ ಜಮೀನಿನಲ್ಲಿ ಬಿದ್ದಿತ್ತು.

ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಕರನ್, ಎಸಿಎಫ್ ಸುರೇಶ್ ಹಾಗೂ ಕುಂದಕೆರೆ ಆರ್‌ಎಫ್‌ಒ ನಾಗೇಂದ್ರ ನಾಯಕ್ ಸ್ಥಳಕ್ಕೆ ಭೇಟಿ ನೀಡಿದ್ದರು. ವೈದ್ಯ ಡಾ.ವಾಸೀಂ ಮಿರ್ಜಾ ಅರಿವಳಿಕೆ ಲಸಿಕೆ ನೀಡಿದ್ದು, ಬಳಿಕ ಮೈಸೂರಿನ ಪುನರ್ವಸತಿ ಕೇಂದ್ರಕ್ಕೆ ಕಳುಹಿಸಿದರು.

'ಹುಲಿಯೊಂದಿಗೆ ಕಾದಾಡಿದ್ದ ಹುಲಿ ಸೆರೆ ಹಿಡಿಯಬೇಕು. ಅಲ್ಲಿಯವರೆಗೂ ಗಾಯಾಳು ಹುಲಿ ಸಾಗಿಸಬಾರದು' ಎಂದು ರೈತರು ಪಟ್ಟು ಹಿಡಿದಿದ್ದರು. ಅಧಿಕಾರಿಗಳು ಭರವಸೆ ನೀಡಿದ ಬಳಿಕ ಅವಕಾಶ ನೀಡಿದರು. ಕುನ್ನಮುಟ್ಟಿ ಗುಡ್ಡದಲ್ಲಿ ಹುಲಿ ಸೆರೆಗೆ ಕಾರ್ಯಾಚರಣೆ ನಡೆದಿದೆ.

'ಮೂವರಿಂದ ದೆಹಲಿಯಲ್ಲಿ ವ್ಯವಸ್ಥಿತ ಪಿತೂರಿ'

ಒಂದನೇ ಪುಟದಿಂದ...

'ವಿಧಾನಸಭೆ ಅಧಿವೇಶನ ಮುಗಿದ ನಂತರ ದೆಹಲಿಗೆ ಹೋಗಿ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಎಲ್ಲ ವಿಚಾರ ತಿಳಿಸುತ್ತೇನೆ. ಸಮಯ ಬಂದಾಗ ಸಚಿವ ಸ್ಥಾನ ಪಡೆಯುತ್ತೇನೆ' ಎಂದರು.

'ನಾನು ಸ್ವಾರ್ಥಕ್ಕಾಗಿ ಸುಳ್ಳು ಹೇಳಿಲ್ಲ. ಬೇರೆಯವರ ಅನುಕೂಲಕ್ಕಾಗಿ ಹೇಳಿದ್ದೇನೆ. ಹೆಚ್ಚುವರಿ ಡಿಸಿಎಂಗಳ ನೇಮಕ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ಹೇಳಿಕೆ ನೀಡಿದ್ದೆ. ನಾನು ಹೇಳಿದ್ದನ್ನೇ ದೆಹಲಿಗೆ ತಲುಪಿಸಿದ್ದಾರೆ. ನಾನು ಮುಚ್ಚುಮರೆ ಮಾಡಿಲ್ಲ. ಪಕ್ಷದ ವಿಚಾರವನ್ನು ಸಾರ್ವತ್ರಿಕವಾಗಿ ಮಾತನಾಡಬಾರದು. ವಾತಾವರಣ, ಪರಿಸ್ಥಿತಿ ಸತ್ಯವನ್ನು ಕಹಿ ಮಾಡುತ್ತದೆ' ಎಂದು ಅಭಿಪ್ರಾಯಪಟ್ಟರು.

'ಮತಕಳವು ನಡೆದಿರುವುದು ಸತ್ಯ. ಇದರಿಂದ ಇಂಡಿಯಾ ಕೂಟಕ್ಕೆ 20ಕ್ಕೂ ಹೆಚ್ಚು ಸೀಟು ಕಡಿಮೆಯಾಯಿತು. ಇಲ್ಲವಾದರೆ ರಾಹುಲ್ ಗಾಂಧಿ ಪ್ರಧಾನಿ ಆಗಿರುತ್ತಿದ್ದರು' ಎಂದರು.

'ತಲಾ ಆದಾಯ ಹೆಚ್ಚಿಸಿದ ಗ್ಯಾರಂಟಿ'

ಜನಕಲ್ಯಾಣಕ್ಕಾಗಿ ವಾರ್ಷಿಕ ₹1.12 ಲಕ್ಷ ಕೋಟಿ ವೆಚ್ಚ: ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಜನರ ತಲಾ ಆದಾಯ ಹೆಚ್ಚಿದ್ದು, ರಾಜ್ಯವು ತಲಾ ಆದಾಯದಲ್ಲಿ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಮಾಣೆಕ್ ಷಾ ಮೈದಾನದಲ್ಲಿ ಶುಕ್ರವಾರ ನಡೆದ 79ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹರಣ ನೆರವೇರಿಸಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆ, ಸರ್ಕಾರದ ನೀತಿಗಳು, ಅಭಿವೃದ್ಧಿ ಯೋಜನೆಗಳ ಜಾರಿ, ಆಶಯಗಳನ್ನು ಬಿಡಿಸಿಟ್ಟರು.

'ಕರ್ನಾಟಕವು ಈಗ ತಲಾ ಆದಾಯದ ವಿಚಾರದಲ್ಲಿ ಮೊದಲ ಸ್ಥಾನದಲ್ಲಿದೆ. ತಲಾ ಆದಾಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಶೇ 101ರಷ್ಟು ಪ್ರಗತಿಯನ್ನು ಸಾಧಿಸಿದ ರಾಜ್ಯ ನಮ್ಮ ಕರ್ನಾಟಕವಾಗಿದೆ. 2013-14ರಲ್ಲಿ ಸ್ಥಿರ ದರಗಳಲ್ಲಿ ₹ 1,01,858 ಗಳಷ್ಟಿದ್ದ ತಲಾದಾಯವು 2024-25ರ ವೇಳೆಗೆ ₹2,04,605ಗೆ ತಲುಪಿದೆ' ಎಂದು ತಿಳಿಸಿದರು.

'ಅನ್ನಭಾಗ್ಯ, ಶಕ್ತಿ, ಗೃಹಲಕ್ಷ್ಮಿ, ಗೃಹ ಜ್ಯೋತಿ, ಯುವನಿಧಿ ಯೋಜನೆಗಳಿಗೆ ಈವರೆಗೆ ₹96 ಸಾವಿರ ಕೋಟಿಗೂ ಹೆಚ್ಚಿನ ಮೊತ್ತವನ್ನು ವಿನಿಯೋಗಿಸಿದ್ದೇವೆ. ಮಧ್ಯವರ್ತಿಗಳ ಹಾವಳಿಯಿಲ್ಲದೆ ಜನರಿಗೆ ತಲುಪುವ ಯೋಜನೆಗಳು ರಾಜ್ಯದ ಜನರ ತಲಾ ಆದಾಯದ ಜತೆಗೆ ಕಾರ್ಮಿಕ ಶಕ್ತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಶೇ 23 ರಷ್ಟು ಹೆಚ್ಚಿಸಿವೆ ಎಂದು ಹಲವು ಅಧ್ಯಯನಗಳು ಹೇಳುತ್ತಿವೆ' ಎಂದು ಹೇಳಿದರು.

'ಗ್ಯಾರಂಟಿ ಯೋಜನೆಗಳಿಗೆ ಎರಡು ವರ್ಷದಲ್ಲಿ ನಮ್ಮ ಸರ್ಕಾರ ಬಲ ತುಂಬಿದೆ. ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಹೆಚ್ಚಿ, ತಲಾ ಆದಾಯದಲ್ಲೂ ಏರಿಕೆ ಕಂಡಿದೆ' ಎಂದು ಯೋಜನೆಗಳನ್ನು ಸಮರ್ಥಿಸಿಕೊಂಡರು.

'ನಮ್ಮ ಸರ್ಕಾರವು ಗ್ಯಾರಂಟಿ ಯೋಜನೆಗಳೂ ಸೇರಿದಂತೆ ಸಹಾಯಧನ, ಪ್ರೋತ್ಸಾಹಧನ, ವಿದ್ಯಾರ್ಥಿವೇತನ, ಸಾಮಾಜಿಕ ಯೋಜನೆಗಳಿಗಾಗಿ ವಿನಿಯೋಗಿಸುತ್ತಿರುವ ಪಿಂಚಣಿ ಮುಂತಾದವುಗಳಿಗಾಗಿ ₹1.12 ಲಕ್ಷ ಕೋಟಿಗಳಿಗೂ ಹೆಚ್ಚಿನ ಮೊತ್ತವನ್ನು ಜನ ಕಲ್ಯಾಣಕ್ಕಾಗಿ ಖರ್ಚು ಮಾಡುತ್ತಿದೆ. ಕಲ್ಯಾಣ ಕಾರ್ಯಕ್ರಮಗಳ ಜತೆ ಬಂಡವಾಳ ವೆಚ್ಚಗಳಿಗೆ ಈ ವರ್ಷ ₹83,200 ಕೋಟಿ ವಿನಿಯೋಗಿಸುತ್ತಿದ್ದೇವೆ' ಎಂದು ವಿವರಿಸಿದರು.

'ಬಸವಾದಿ ಶರಣರ ಧ್ಯೇಯದಲ್ಲಿ ನಂಬಿಕೆಯಿಟ್ಟು ರಾಜ್ಯವು ಅಭಿವೃದ್ಧಿ ಮಾದರಿಗಳನ್ನು ಹುಟ್ಟುಹಾಕಿದೆ. ಇದಕ್ಕೆ 'ಕರ್ನಾಟಕ ಅಭಿವೃದ್ಧಿ ಮಾದರಿ'ಎಂಬ ಹೆಸರಿನಲ್ಲಿ ಮನ್ನಣೆ ದೊರೆತಿದೆ. ವಿಶ್ವಸಂಸ್ಥೆ ಮುಖ್ಯಸ್ಥ ಫಿಲೆಮಾನ್ ಯಾಂಗ್ರ ಅವರು ಗ್ಯಾರಂಟಿ ಯೋಜನೆಗಳ ಬಗ್ಗೆ ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಈ ಮೂಲಕ ನಮ್ಮ ಯೋಜನೆಗಳು ವಿಶ್ವಮಾನ್ಯಗೊಂಡಿವೆ' ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

'ಬಲಾಢ್ಯರು ಮಾತ್ರ ಬದುಕಿ, ಉಳಿದವರು ಗುಲಾಮರಾಗಿ, ಬಲಾಢ್ಯರಿಗಾಗಿ ದುಡಿಯಬೇಕು ಎನ್ನುವ ಮನುವಾದಿ ಸಿದ್ಧಾಂತದ ಮಾದರಿಯೇ ಸಾಮಾಜಿಕ ಡಾರ್ವಿನ್‌ವಾದ. ಈ ಮೃಗೀಯ ಸಿದ್ಧಾಂತಕ್ಕೆ ಎದುರಾಗಿ ಅಸಹಾಯಕರಿಗೆ ಮೊದಲು ಆದ್ಯತೆ ಸಿಗಬೇಕು ಎನ್ನುವುದು ನಮ್ಮ ಸಂವಿಧಾನವಾದ. ಆದ್ದರಿಂದ ನಾವು ಸಂವಿಧಾನದ ಉಳಿವಿಗಾಗಿ ಪಣ ತೊಡೋಣ' ಎಂದು ಕರೆ ನೀಡಿದರು.

ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಹೇರೋಹಳ್ಳಿ ಬಿಬಿಎಂಪಿ ಪಿಯು ಕಾಲೇಜು ವಿದ್ಯಾರ್ಥಿಗಳು ಗ್ಯಾರಂಟಿ ಯೋಜನೆ ಬಗ್ಗೆ ನೃತ್ಯ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರಿಗೆ ₹ 1.35 ಲಕ್ಷ ಕೋಟಿ

ನಮ್ಮ ಸರ್ಕಾರವು ಎರಡು ವರ್ಷದಲ್ಲಿ ಬೆಂಗಳೂರು ನಗರಾಭಿವೃದ್ಧಿಗಾಗಿ ಸುಮಾರು ₹1.35 ಲಕ್ಷ ಕೋಟಿಗೂ ಹೆಚ್ಚಿನ ವೆಚ್ಚ ಮಾಡಲು ಮುಂದಾಗಿದೆ. ಮುಖ್ಯವಾಗಿ ಯೋಜನೆ, ಹೊಸ ಮೆಟ್ರೊ ರೈಲು ಮಾರ್ಗಗಳು, ಡಬಲ್ ಡೆಕ್ಕರ್ ರಸ್ತೆಗಳು, ಸುರಂಗ ರಸ್ತೆಗಳು, ಬೆಂಗಳೂರು ಬ್ಯುಸಿನೆಸ್ ಕಾರಿಡಾರ್, ವೈಟ್ ಟಾಪಿಂಗ್ ರಸ್ತೆಗಳು, 6ನೇ ಹಂತದ ಕಾವೇರಿ ನೀರು ಸರಬರಾಜು ಬಫರ್ ರಸ್ತೆ, ಮೇಲ್ಸೇತುವೆ, ಉತ್ತರ-ದಕ್ಷಿಣ ಹಾಗೂ ಪೂರ್ವ-ಪಶ್ಚಿಮ ಕಾರಿಡಾರ್, ಸಾರ್ವಜನಿಕ ಪಾರ್ಕಿಂಗ್ ವ್ಯವಸ್ಥೆ, ಶಿಕ್ಷಣ-ಆರೋಗ್ಯ ವ್ಯವಸ್ಥೆಯ ಸುಧಾರಣೆ, ಟ್ರಾಫಿಕ್ ನಿರ್ವಹಣೆ ಸೇರಿದ್ದು ಕೆಲವು ಚಾಲನೆಗೊಂಡಿವೆ ಎಂದು ಸಿದ್ದರಾಮಯ್ಯ ವಿವರಿಸಿದರು.

ಸಿ.ಎಂ ಹೇಳಿದ್ದೇನು?

- ಪ್ರೊ. ಥೋರಟ್ ಸಮಿತಿ ಸೂಚನೆಯಂತೆ ಕರ್ನಾಟಕಕ್ಕೆ ಪ್ರತ್ಯೇಕ ಶಿಕ್ಷಣ ನೀತಿ ಜಾರಿ
- ಮೊಬೈಲ್ ಬಿಡಿ - ಪುಸ್ತಕ ಹಿಡಿ ಮತ್ತು ಓದು ಕರ್ನಾಟಕ ಎಂಬ ಕಾರ್ಯಕ್ರಮ
- ಅಗತ್ಯ ಇರುವ ಕಡೆಗಳಲ್ಲಿ ಹೊಸದಾಗಿ ವಸತಿಶಾಲೆಗಳು, ವಸತಿ ನಿಲಯಗಳ ಸ್ಥಾಪನೆ
- ಕರ್ನಾಟಕ ಗೃಹ ಮಂಡಳಿಯಲ್ಲಿ ರಾಜ್ಯದಾದ್ಯಂತ 26 ವಸತಿ ಯೋಜನೆಗಳು ಪ್ರಗತಿ
- 2027ರ ವೇಳೆಗೆ ಎತ್ತಿನ ಹೊಳೆ ಯೋಜನೆಯನ್ನು ಪೂರ್ಣಗೊಳಿಸುವ ಗುರಿ

ಬಿಹಾರದಲ್ಲಿ 1 ಕೋಟಿ ಉದ್ಯೋಗದ ಗುರಿ: ನಿತೀಶ್

ಪಟ್ನಾ (ಪಿಟಿಐ): ಬಿಹಾರ ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳುಗಳು ಬಾಕಿ ಇರುವಂತೆ, ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ರಾಜ್ಯದಲ್ಲಿ ಹಲವಾರು ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ.

ಇಲ್ಲಿನ ಗಾಂಧಿ ಮೈದಾನದಲ್ಲಿ ಧ್ವಜಾರೋಹಣ ನೆರವೇರಿಸಿ, ಸ್ವಾತಂತ್ರ್ಯ ದಿನವನ್ನು ಆಚರಿಸಿದ ಬಳಿಕ ನಿತೀಶ್ ಅವರು ನೆರೆದಿದ್ದವರನ್ನು ಉದ್ದೇಶಿಸಿ ಮಾತನಾಡಿದರು.

'ಬಿಹಾರವು ಅಭಿವೃದ್ಧಿಯತ್ತ ಸಾಗುತ್ತಿದೆ. ಬರುವ ವರ್ಷಗಳಲ್ಲಿ ಸಮಗ್ರ ಅಭಿವೃದ್ಧಿಯೊಂದಿಗೆ ಸಾಗಲಿದೆ. 10 ಲಕ್ಷ ಯುವಕರಿಗೆ ಉದ್ಯೋಗ ನೀಡುವುದಾಗಿ ಈ ಹಿಂದೆ ಭರವಸೆ ನೀಡಿದ್ದೆವು. ಆದರೆ, ಇದೀಗ ರಾಜ್ಯದ ಒಂದು ಕೋಟಿ ಯುವಕರಿಗೆ ಉದ್ಯೋಗ ನೀಡಬೇಕೆನ್ನುವ ಹೊಸ ಗುರಿಯನ್ನು ನಿಗದಿಪಡಿಸಿದ್ದೇವೆ' ಎಂದು ಹೇಳಿದರು.

'ಉದ್ಯೋಗಾವಕಾಶ ನೀಡುವುದು ಆರಂಭದಿಂದಲೂ ನಮ್ಮ ಸರ್ಕಾರದ ಆದ್ಯತೆಯಾಗಿದೆ. ಎನ್‌ಡಿಎ ಸರ್ಕಾರದ ಅಡಿಯಲ್ಲಿ ಬಿಹಾರವು ಅಭಿವೃದ್ಧಿಗೆ ಸಾಕ್ಷಿಯಾಗಿದೆ' ಎಂದರು.

ರಾಜ್ಯಕ್ಕೆ ನಿತೀಶ್ ಘೋಷಣೆಗಳು

- ಬರುವ ವರ್ಷಗಳಲ್ಲಿ ರಾಜ್ಯದಲ್ಲಿ ಒಂದು ಕೋಟಿ ಯುವಕರಿಗೆ ಸರ್ಕಾರಿ ಉದ್ಯೋಗ ಮತ್ತು ಇತರ ಉದ್ಯೋಗಾವಕಾಶ
- ರಾಜ್ಯದ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಿಲಿಮಿನರಿ ಪರೀಕ್ಷೆ ಬರೆಯುವ ಎಲ್ಲ ಅಭ್ಯರ್ಥಿಗಳಿಗೂ ₹100 ಶುಲ್ಕ ನಿಗದಿ. ಮುಖ್ಯ ಪರೀಕ್ಷೆಗೆ ಹಾಜರಾಗಲು ಯಾವುದೇ ಶುಲ್ಕ ಇಲ್ಲ
- ಬಿಹಾರದಲ್ಲಿ ಬಂಡವಾಳ ಹೂಡಲು ಇಚ್ಛಿಸುವವರಿಗೆ ವಿಶೇಷ ರಿಯಾಯಿತಿ ನೀಡಲು ಸರ್ಕಾರ ನಿರ್ಧಾರ
- ಕಿಶನ್‌ಗಂಜ್, ಕಟಿಹಾರ, ರೊಹತಾಸ್, ಶಿವಹರ್, ಲಖೀಸರಾಯ್, ಅಲವರ್ ಹಾಗೂ ಶೇಖ್‌ಪುರದಲ್ಲಿ ವೈದ್ಯಕೀಯ ಕಾಲೇಜುಗಳ ನಿರ್ಮಾಣ

ಲೋಪ ಮುಚ್ಚಿಹಾಕುವ ಯತ್ನ: ಸಂತೋಷ ಲಾಡ್

ಧಾರವಾಡ: 'ಚುನಾವಣಾ ಆಯೋಗವು ಡಿಜಿಟಲ್ ರೂಪದಲ್ಲಿ ಮತದಾರರ ಪಟ್ಟಿ ನೀಡದೇ, ತನ್ನ ಲೋಪಗಳನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಎಸ್. ಲಾಡ್ ಆರೋಪಿಸಿದರು. 'ಮತದಾರರ ಪಟ್ಟಿಯಲ್ಲಿನ ಲೋಪಗಳ ಬಗ್ಗೆ ಚುನಾವಣಾ ಆಯೋಗವನ್ನು ರಾಹುಲ್ ಗಾಂಧಿ ಪ್ರಶ್ನಿಸಿದರೆ, ಬಿಜೆಪಿಯವರು ಯಾಕೆ ಮಾತನಾಡುತ್ತಾರೆ' ಎಂದು ಪ್ರಶ್ನಿಸಿದರು.

'ವರದಿ ಪರಿಷ್ಕರಿಸಿ ಇಲ್ಲವೇ ತಿರಸ್ಕರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ನೀಡುವ ಸಂಬಂಧ ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗದ ವರದಿ ಬಲಗೈ ಜಾತಿಗಳಿಗೆ ಮರಣ ಶಾಸನವಾಗಿದೆ. ಆಗಸ್ಟ್ 19ರ ಸಚಿವ ಸಂಪುಟ ಸಭೆಯಲ್ಲಿ ಈ ವರದಿಯನ್ನು ತಿರಸ್ಕರಿಸಬೇಕು ಇಲ್ಲವೇ ಪರಿಷ್ಕರಿಸಲೇಬೇಕು' ಎಂದು ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ಅಧ್ಯಕ್ಷರೂ ಆಗಿರುವ ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ ಆಗ್ರಹಿಸಿದರು.

'ವರದಿಯಲ್ಲಿ ಬಲಗೈ ಸಂಬಂಧಿತ ಸಣ್ಣ ಜಾತಿಗಳನ್ನು ಎಡಗೈ ಸಂಬಂಧಿತ ಜಾತಿಗೆ ಸೇರಿಸಲಾಗಿದೆ. ಇವರಿಗೆ ಅಧಿಕಾರ ಕೊಟ್ಟವರು ಯಾರು? ಎಡಗೈ ಸಮುದಾಯದ ಸೌಲಭ್ಯವನ್ನು ಬಲಗೈ ಸಮುದಾಯ ಕಿತ್ತುಕೊಂಡಿದೆ ಎಂದು ರಾಜ್ಯಕ್ಕೆ ತಪ್ಪು ಸಂದೇಶ ಕೊಡಬಾರದು. ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಯಾಕೆ? ಗೊಂದಲದ ಗೂಡಾಗಿರುವ ಈ ವರದಿ ತಿರಸ್ಕರಿಸಲು ಯೋಗ್ಯವಾಗಿದೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ನಾವು ಯಾರ ಹಕ್ಕನ್ನೂ ಕಿತ್ತುಕೊಂಡಿಲ್ಲ.ಯಾವುದೇ ಜಾತಿಗಳ ನಡುವೆ ಹೋರಾಟ ಮಾಡುತ್ತಿಲ್ಲ. ಆಯೋಗದ ವರದಿ ಮತ್ತು ಸರ್ಕಾರದ ವಿರುದ್ಧ ಹೋರಾಟ. ಸಮುದಾಯವನ್ನು ಪ್ರತಿನಿಧಿಸುವ ಸಚಿವರು ಇದ್ದಾರೆ. ಕಾಂಗ್ರೆಸ್ 135 ಸ್ಥಾನ ಪಡೆಯಲು ಈ ಸಮುದಾಯಗಳೇ ಕಾರಣ ಎಂಬುದನ್ನು ಮರೆಯಬಾರದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಸಂಚಾಲಕರಾದ ಸಿದ್ದಯ್ಯ, ವಾಣಿ ಶಿವರಾಂ, ಬಿಬಿಎಂಪಿ ಮಾಜಿ ಮಹಾಪೌರ ಸಂಪತ್‌ರಾಜ್, ಎಸ್‌ಸಿ-ಎಸ್‌ಟಿ ನೌಕರರ ಸಂಘದ ರಾಜ್ಯ ಅಧ್ಯಕ್ಷ ಚಂದ್ರಶೇಖರಯ್ಯ,ನಿವೃತ್ತ ಎಂಜಿನಿಯರ್ ಟಿ.ಆರ್.ಶಿವರಾಮು ಇದ್ದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಆದಿಜಾಂಬವ ಸಂಘದ ಸದಸ್ಯರು ಕೈಗೆ ಕಪ್ಪುಪಟ್ಟಿ ಧರಿಸಿ, ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ವರದಿ ಜಾರಿಗಾಗಿ ಉಪವಾಸ ಸತ್ಯಾಗ್ರಹ

ಆಯೋಗದ ವರದಿ ಜಾರಿಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿದೆ.

'ಯಾವುದೇ ಸಮೀಕ್ಷೆಗಳು ಪರಿಪೂರ್ಣವಲ್ಲ ಎಂಬುದನ್ನೂ ವರದಿಯಲ್ಲಿ ತಿಳಿಸಿದ್ದರೂ ಕೆಲ ಸಮುದಾಯಗಳು ದೋಷಗಳನ್ನು ಮುಂದಿಟ್ಟುಕೊಂಡು ನಾಗಮೋಹನ ದಾಸ್ ಆಯೋಗದ ವರದಿಯನ್ನು ವಿರೋಧಿಸಿ, ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ' ಎಂದು ಒಕ್ಕೂಟದ ಸದಸ್ಯರು ಬೇಸರ ವ್ಯಕ್ತಪಡಿಸಿದರು.

'ಕೆಲವು ದೋಷಗಳು ಉಳಿದುಕೊಂಡಿವೆ. ಇಂತಹ ಸಣ್ಣ ಲೋಪಗಳನ್ನು ಸರಿಪಡಿಸಿಕೊಂಡು ಒಳ ಮೀಸಲಾತಿ ಜಾರಿ ಮಾಡಲು ಸಹಕರಿಸಬೇಕು' ಎಂದು ಮನವಿ ಮಾಡಿದರು. ಒಕ್ಕೂಟದ ಪ್ರಧಾನ ಸಂಚಾಲಕ ಬಸವರಾಜ ಕೌತಾಳ್, ಮುಖಂಡರಾದ ಅಂಬಣ್ಣ ಅರೋಲಿಕರ್, ಕರಿಯಪ್ಪ ಗುಡಿಮನಿ, ಸಣ್ಣ ಮಾರೆಪ್ಪ ಮೊದಲಾದವರು ಪಾಲ್ಗೊಂಡಿದ್ದರು.

ಕಪ್ಪು ಪಟ್ಟಿ ಧರಿಸಿ ಮೌನ ಪ್ರತಿಭಟನೆ

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಾಜ್ಯ ಆದಿಜಾಂಬವ ಸಂಘದ ವತಿಯಿಂದ ಕಪ್ಪು ಪಟ್ಟಿ ಧರಿಸಿ ಮೌನ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಸಂಘದ ಕಾರ್ಯಾಧ್ಯಕ್ಷ ಜಂಬೂದ್ವೀಪ ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ಸಿ.ವಿ.ರಮೇಶ್ ಕುಮಾರ್ ಪಾಲ್ಗೊಂಡಿದ್ದರು.

'ಮತದಾನದ ಹಕ್ಕಿಗಾಗಿ ಬಿಹಾರಿಗರ ಹೋರಾಟ'

ಪಟ್ನಾ (ಪಿಟಿಐ): 'ದೇಶವು ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿದ್ದರೆ, ಬಿಹಾರಿಗರು ಮಾತ್ರ ತಮ್ಮ ಮತ ರಕ್ಷಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದಾರೆ' ಎಂದು ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಕಟಕಿಯಾಡಿದ್ದಾರೆ.

ರಾಹುಲ್ ಗಾಂಧಿ ಸಾರಥ್ಯದಲ್ಲಿ ಆ. 17ರಂದು ಆರಂಭಗೊಳ್ಳಲಿರುವ 'ಮತದಾತ ಅಧಿಕಾರ (ಮತದಾರರ ಹಕ್ಕು) ಯಾತ್ರೆ'ಯಲ್ಲಿ ಭಾಗಿಯಾಗುವಂತೆ ಬಿಹಾರಿಗರಿಗೆ ಮನವಿ ಮಾಡುವ ಬಹಿರಂಗ ಪತ್ರವನ್ನು ಬಿಡುಗಡೆ ಮಾಡಿ, ಅವರು ಮಾತನಾಡಿದರು.

'ನಮ್ಮ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳದಿದ್ದರೆ ಬಿಜೆಪಿ ಪ್ರಾಯೋಜಿತ ಸಂಚುಕೋರರು ಬಡವರ ಮತದಾನದ ಹಕ್ಕನ್ನು ಕಸಿದುಕೊಂಡು ಬಿಹಾರದಲ್ಲಿ ದಬ್ಬಾಳಿಕೆಯ, ಊಳಿಗಮಾನ್ಯ ಆಡಳಿತವನ್ನು ಪುನಃ ಸ್ಥಾಪಿಸುತ್ತಾರೆ' ಎಂದರು.

2.67 ಲಕ್ಷ ಟನ್ ಯೂರಿಯಾ ಪೂರೈಕೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕಕ್ಕೆ ಅಗತ್ಯವಿರುವ 2.67 ಲಕ್ಷ ಟನ್ ಯೂರಿಯಾ ಗೊಬ್ಬರವನ್ನು ಪೂರೈಕೆ ಮಾಡುವಂತೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರು ಎಲ್ಲ ರಾಜ್ಯಗಳ ಕೃಷಿ ಸಚಿವರ ಜತೆ ನಡೆಸಿದ ವಿಡಿಯೊ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ 2025-26ನೇ ಸಾಲಿನಲ್ಲಿ ಹಂಚಿಕೆ ಮಾಡಿರುವಷ್ಟು ಪ್ರಮಾಣದಲ್ಲಿ ರಸಗೊಬ್ಬರ ಬಾರದೆ ಕರ್ನಾಟಕದಲ್ಲಿ ಯೂರಿಯಾ ಕೊರತೆಯಾಗಿದೆ. ಬಾಕಿ ಇರುವ ಗೊಬ್ಬರವನ್ನು ತ್ವರಿತವಾಗಿ ಕಳುಹಿಸಿಕೊಡಬೇಕು ಎಂದರು.

ಕರ್ನಾಟಕದಲ್ಲಿ ಮುಂಗಾರು ವಿಕಸಿತ ಕೃಷಿ ಅಭಿಯಾನವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಜುಲೈ ತಿಂಗಳಿಗೆ 1.27 ಲಕ್ಷ ಟನ್ ಯೂರಿಯಾ ಮತ್ತು ಆಗಸ್ಟ್‌ಗೆ 1.40 ಲಕ್ಷ ಟನ್ ಯೂರಿಯಾ ಕೊರತೆ ಇದೆ. ಒಟ್ಟಾರೆ 2.67 ಲಕ್ಷ ಟನ್ ಯೂರಿಯಾ ಬೇಕಿದೆ. ಕೊರತೆ ವಿಚಾರದ ಬಗ್ಗೆ ಕರ್ನಾಟಕ ವಿಧಾನಸಭೆ, ವಿಧಾನಪರಿಷತ್ ಕಲಾಪಗಳಲ್ಲೂ ಗಂಭೀರ ಚರ್ಚೆಗಳು ನಡೆದಿವೆ. ಕೇಂದ್ರದ ಹಂಚಿಕೆ ಮತ್ತು ಪೂರೈಕೆ ಪ್ರಮಾಣದ ಬಗ್ಗೆ ಸದನಕ್ಕೂ ಮನವರಿಕೆ ಮಾಡಲಾಗಿದೆ ಎಂದು ವಿವರ ನೀಡಿದರು.

ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಿ ಬಿತ್ತನೆ ಕಾರ್ಯ ಹೆಚ್ಚಿನ ಪ್ರಮಾಣದಲ್ಲಿ ನಡೆದಿದೆ. ಬಹುತೇಕ ಬೆಳೆಗಳಿಗೆ ಮೇಲುಗೊಬ್ಬರವಾಗಿ ಯೂರಿಯಾ ಬಳಸುತ್ತಾರೆ. ರೈತರಿಗೆ ಅಗತ್ಯವಿರುವಷ್ಟು ಪ್ರಮಾಣದಲ್ಲಿ ರಸಗೊಬ್ಬರವನ್ನು ಪೂರೈಸಬೇಕಿದೆ. ವಿಳಂಬವಾದರೆ ಬೆಳೆಗೆ ಹಾನಿಯಾಗುವ ಸಂಭವವಿದೆ. ಹಿಂಗಾರಿಗೂ ಅಗತ್ಯವಿರುವ ಗೊಬ್ಬರ ಹಂಚಿಕೆ ಮಾಡಬೇಕು. ರಾಜ್ಯದಲ್ಲಿ ಯಶಸ್ವಿಯಾಗಿ ರಬಿ ವಿಕಸಿತ ಕೃಷಿ ಅಭಿಯಾನ ನಡೆಯುತ್ತಿದೆ. ಸೆ.15 ಮತ್ತು 16ರಂದು ನಡೆಯುವ ರಬಿ (ಹಿಂಗಾರು) ಸಮ್ಮೇಳನದಲ್ಲಿ ಭಾಗವಹಿಸಲಾಗುವುದು ಎಂದು ಹೇಳಿದರು.

'ರಸಗೊಬ್ಬರ ಇಲಾಖೆ ಕಾರ್ಯದರ್ಶಿ ಜತೆ ಮಾತನಾಡಿ ಕರ್ನಾಟಕಕ್ಕೆ ಬಾಕಿ ರಸಗೊಬ್ಬರ ಪೂರೈಕೆಯ ವ್ಯವಸ್ಥೆ ಮಾಡಲಾಗುವುದು' ಎಂದು ಶಿವರಾಜ್‌ಸಿಂಗ್ ಚವ್ಹಾಣ್ ಭರವಸೆ ನೀಡಿದರು.

ವಾಮಾಚಾರ: ವೈದ್ಯನಿಗೆ ದಂಡನೆ

ನವದೆಹಲಿ: ಪ್ರಕರಣವೊಂದರ ವಿಚಾರಣೆ ನಡೆಯುತ್ತಿದ್ದ ವೇಳೆಯೇ ನ್ಯಾಯಾಲಯದಲ್ಲಿ ವಾಮಾಚಾರ ಎಸಗಿ ಸರ್ಕಾರಿ ನೌಕರನಿಗೆ ಉದ್ದೇಶಪೂರ್ವಕವಾಗಿ ಅವಮಾನವೆಸಗಿದ ಆರೋಪಿ ವೈದ್ಯನಿಗೆ ಕಲಾಪ ಪೂರ್ಣಗೊಳಿಸುವವರೆಗೂ ನ್ಯಾಯಾಲಯದ ಕೊಠಡಿಯಲ್ಲಿ ಇರುವಂತೆ ತೀಜ್ ಹಜಾರಿ ನ್ಯಾಯಾಲಯವು ಸೂಚಿಸಿದೆ.

'ವೃತ್ತಿಯಲ್ಲಿ ವೈದ್ಯರಾಗಿರುವ ಆರೋಪಿ ಚಂದರ್ ವಿಭಾಸ್ ಅವರ ವರ್ತನೆಯು ಆಘಾತಕಾರಿಯಾಗಿದೆ' ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶೆ ಶೆಫಾಲಿ ಬರ್ನಾಲ ಟಂಡನ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

2025ರ ಆಗಸ್ಟ್ 11ರಂದು ನ್ಯಾಯಾಲಯದ ಕಲಾಪದ ವೇಳೆ ಆರೋಪಿಯು ತಮ್ಮ ಮೇಲೆ ಅಕ್ಕಿ ಚೆಲ್ಲಿದ್ದನ್ನು ಸಿಬ್ಬಂದಿಯು ನ್ಯಾಯಾಧೀಶರ ಗಮನಕ್ಕೆ ತಂದಿದ್ದರು. ಇದರಿಂದ 15ರಿಂದ 20 ನಿಮಿಷಗಳ ಕಲಾಪ ನಡೆದಿರಲಿಲ್ಲ. ಆರೋಪಿ ಪರ ಹಾಜರಾಗಿದ್ದ ವಕೀಲರು ಕೂಡ ವಾಮಾಚಾರದ ಶಂಕೆ ವ್ಯಕ್ತಪಡಿಸಿದ್ದರು.

ಕ್ಷಮೆಯಾಚನೆ–ದಂಡ: ತನ್ನ ನಡೆ ಕುರಿತು ಆರೋಪಿ ಪಶ್ಚಾತ್ತಾಪಪಟ್ಟಿದ್ದು, ಕ್ಷಮೆಯಾಚಿಸಿದ್ದಾರೆ. ಹೀಗಾಗಿ ಕಲಾಪ ಮುಗಿಯುವವರೆಗೂ ನಿಲ್ಲುವಂತೆ ಸೂಚಿಸಿ, ₹2 ಸಾವಿರ ದಂಡ ವಿಧಿಸಲಾಗಿದೆ.

ಶ್ರದ್ಧಾಂಜಲಿ



ಶ್ರೀ ಬಿ. ಬೈಲಪ್ಪ

ಅಧ್ಯಕ್ಷರು, ವಯನಾಮಕ್ ಶಿಕ್ಷಣ ಟ್ರಸ್ಟ್

10ನೇ ಅಕ್ಟೋಬರ್ 1947 - 15ನೇ ಆಗಸ್ಟ್ 2025

ನಮ್ಮ ಪ್ರೀತಿಯ ಅಧ್ಯಕ್ಷರಾದ ಶ್ರೀ ಬಿ. ಬೈಲಪ್ಪ ರವರು ಆಗಸ್ಟ್ 15, 2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

"ನಿಮ್ಮ ಮಾರ್ಗದರ್ಶನ ನಮಗೆ ಸ್ಫೂರ್ತಿಯ ಮೂಲವಾಗಿದ್ದು, ಸದಾ ಹಾಗೆಯೇ ಇರುತ್ತದೆ."

ಶ್ರೀಮತಿ ಎ. ಪ್ರಮೀಳಾ,
ಶ್ರೀ ಪಿ. ಬಿ. ಮಂಜುನಾಥ್, ಶ್ರೀ ರಾಘವ್ ಬೈಲಪ್ಪ, ಶ್ರೀಮತಿ ಬಿ. ಸುಜಾತಾ
ಶ್ರೀ ಬಿ. ವಿಜಯ್, ಶ್ರೀಮತಿ ಹರ್ಷಿತಾ, ಶ್ರೀಮತಿ ಅಮೂಲ್ಯ, ಮೊಮ್ಮಕ್ಕಳು,
ಕುಟುಂಬ ಸದಸ್ಯರು ಮತ್ತು ಸಿಬ್ಬಂದಿ

M/S.PRASHANTH CYLINDERS PRIVATE LIMITED
M/S.SHANTHI SERVICE STATION (IOCL RETAIL OUTLET)
DON BOSCO INSTITUTE OF TECHNOLOGY
DON BOSCO INSTITUTE OF MANAGEMENT STUDIES & COMPUTER APPLICATIONS
DON BOSCO INDEPENDENT PU COLLEGE
MYSORE ROAD, BENGALURU 560074

ವಿಚಾರಣಾಧೀನ ಬ್ಯಾರಕ್‌ಗೆ ಐವರು ಸ್ಥಳಾಂತರ ● ಮೌನಕ್ಕೆ ಜಾರಿದ ನಟ

ಪವಿತ್ರಾ ಕೈದಿ ನಂ. 7313, ದರ್ಶನ್ 7314

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ರೇಣುಕಸ್ವಾಮಿ ಕೊಲೆ ಪ್ರಕರಣ
- ವಿಶೇಷ ಆತಿಥ್ಯ ನೀಡದಂತೆ ಸಿಬ್ಬಂದಿಗೆ ಸೂಚನೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ರದ್ದುಗೊಂಡು ಮತ್ತೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಪವಿತ್ರಾಗೌಡ, ನಟ ದರ್ಶನ್ ಸೇರಿದಂತೆ ಐವರಿಗೆ ವಿಚಾರಣಾಧೀನ ಕೈದಿ ಸಂಖ್ಯೆಯನ್ನು ಜೈಲು ಅಧಿಕಾರಿಗಳು ನೀಡಿದ್ದಾರೆ.

ಪವಿತ್ರಾ ಅವರಿಗೆ ವಿಚಾರಣಾಧೀನ ಕೈದಿ 7313 (ಎ–1), ದರ್ಶನ್ ಅವರಿಗೆ 7314 (ಎ–2), ದರ್ಶನ್ ಅವರ ವ್ಯವಸ್ಥಾಪಕ ಆರ್.ನಾಗರಾಜ್‌ಗೆ 7315 (ಎ–11), ದರ್ಶನ್ ಕಾರು ಚಾಲಕ ಎಂ.ಲಕ್ಷ್ಮಣ್‌ಗೆ 7316 (ಎ–12), ಉದ್ಯಮಿ ಪ್ರದೂಷ್ ರಾವ್ ಅವರಿಗೆ 7317 (ಎ–14) ಸಂಖ್ಯೆ ಅನ್ನು ನೀಡಲಾಗಿದೆ.

ಇದೇ ಪ್ರಕರಣದಲ್ಲಿ ಕಳೆದ ವರ್ಷದ ಜೂನ್‌ನಲ್ಲಿ ಬಂಧಿಸಿದ್ದಾಗ, ದರ್ಶನ್ ಅವರಿಗೆ ವಿಚಾರಣಾಧೀನ ಕೈದಿ ಸಂಖ್ಯೆ 6106 ಅನ್ನು ನೀಡಲಾಗಿತ್ತು. ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರವಾದ ಮೇಲೆ ಅಲ್ಲಿನ ದರ್ಶನ್‌ಗೆ ಕೈದಿ ನಂ. 511 ಅನ್ನು ನೀಡಲಾಗಿತ್ತು.

ಚಿತ್ರದುರ್ಗದ ಆರೋಪಿಗಳೂ ಜೈಲಿಗೆ: ಇದೇ ಪ್ರಕರಣದಲ್ಲಿ ಆಟೊ ಚಾಲಕರಾದ ಅನುಕುಮಾರ್ ಹಾಗೂ ಜಗ್ಗ ಅಲಿಯಾಸ್ ಜಗದೀಶ್ ಅವರನ್ನು ಚಿತ್ರದುರ್ಗದಲ್ಲಿ ಪೊಲೀಸರು ಗುರುವಾರ ಮಧ್ಯಾಹ್ನ ಬಂಧಿಸಿದ್ದರು.

ಪವಿತ್ರಾ ಗೌಡ

ದರ್ಶನ್

ಇಬ್ಬರನ್ನೂ ಶುಕ್ರವಾರ ಬೆಳಿಗ್ಗೆ ನಗರಕ್ಕೆ ಕರೆತಂದು ಕೋರಮಂಗಲದ ನ್ಯಾಯಾಧೀಶರ ಮನೆಯಲ್ಲಿ ಹಾಜರುಪಡಿಸಿದರು. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರು ಆದೇಶಿಸಿದರು. ಅವರನ್ನೂ ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೌನಕ್ಕೆ ಜಾರಿದ ದರ್ಶನ್: 'ದರ್ಶನ್ ಸೇರಿ ಐವರನ್ನು ಗುರುವಾರ ರಾತ್ರಿ 'ಅಡ್ಮಿಷನ್ ಕ್ವಾರಂಟೈನ್ ಬ್ಯಾರಕ್'ನಲ್ಲಿ ಇರಿಸಲಾಗಿತ್ತು. ಶುಕ್ರವಾರ ಬೆಳಿಗ್ಗೆ ತಿಂಡಿ ನೀಡಿದ ಬಳಿಕ ವಿಚಾರಣಾಧೀನ ಕೈದಿಗಳಿರುವ ಬ್ಯಾರಕ್‌ಗೆ ಸ್ಥಳಾಂತರ ಮಾಡಲಾಗಿದೆ. ದರ್ಶನ್ ಅವರು ಮೌನಕ್ಕೆ ಜಾರಿದ್ದಾರೆ' ಎಂದು ಮೂಲಗಳು ಹೇಳಿವೆ.

'ಈ ಹಿಂದೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ದರ್ಶನ್ ಇದ್ದಾಗ, ರೌಡಿ ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ, ನಾಗರಾಜ್ ಅವರೊಂದಿಗೆ ಬ್ಯಾರಕ್ ಹೊರಗೆ ಕುರ್ಚಿಯಲ್ಲಿ ಕುಳಿತು ಟೀ ಕುಡಿಯುತ್ತಾ, ಸಿಗರೇಟ್ ಸೇದುತ್ತಾ ಹರಟೆ ಹೊಡೆಯುತ್ತಿದ್ದ ಫೋಟೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ಬಾರಿ ಆ ರೀತಿಯ ಲೋಪಗಳು ನಡೆಯದಂತೆ ಕ್ರಮ ಕೈಗೊಳ್ಳಲಾಗಿದೆ. ಎಲ್ಲ ಆರೋಪಿಗಳ ಮೇಲೆ ನಿಗಾ ವಹಿಸಲಾಗಿದೆ. ವಿಶೇಷ ಆತಿಥ್ಯ ಕೊಡಬಾರದೆಂದು ಸಿಬ್ಬಂದಿಗೆ ಸೂಚನೆ ನೀಡಲಾಗಿದೆ. ಲೋಪ ಕಂಡುಬಂದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಜೈಲಿನ ಅಧಿಕಾರಿಯೊಬ್ಬರು ತಿಳಿಸಿದರು.

ಸಂಪಾದಕೀಯ

ಆರೋಪಿಗಳಿಗೆ ಜಾಮೀನು ರದ್ದು ನ್ಯಾಯಾಂಗದ ವಿಶ್ವಾಸಾರ್ಹತೆ ಹೆಚ್ಚಳ

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಚಲನಚಿತ್ರ ನಟ ದರ್ಶನ್ ತೂಗುದೀಪ, ಪವಿತ್ರಾ ಗೌಡ ಸೇರಿದಂತೆ ಏಳು ಆರೋಪಿಗಳಿಗೆ ಕರ್ನಾಟಕ ಹೈಕೋರ್ಟ್ ಮಂಜೂರು ಮಾಡಿದ್ದ ಜಾಮೀನು ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸಿರುವ ನ್ಯಾಯಪೀಠದ ಆದೇಶಕ್ಕೆ ನಿರ್ದಿಷ್ಟ ಘಟನೆಯನ್ನು ಮೀರಿದ ಮಹತ್ವವಿದೆ. ಅಧಿಕಾರ, ಹಣ ಅಥವಾ ಜನಪ್ರಿಯತೆ ಸೇರಿದಂತೆ ಕಾನೂನಿನ ಎದುರು ಯಾವುದೂ ದೊಡ್ಡದಲ್ಲ ಎನ್ನುವುದನ್ನು ಈ ನಿರ್ದೇಶನ ದೃಢೀಕರಿಸುವಂತಿದೆ ಹಾಗೂ ಕಾನೂನಿನ ಮುಂದೆ ಎಲ್ಲರೂ ಸಮಾನರು ಎನ್ನುವ ನ್ಯಾಯಾಂಗದ ಮೂಲಭೂತ ತತ್ತ್ವವನ್ನು ಎತ್ತಿಹಿಡಿಯುವಂತಿದೆ. ಪವಿತ್ರಾ ಗೌಡ ಅವರಿಗೆ ಅವಹೇಳನಕಾರಿ ಸಂದೇಶಗಳನ್ನು ಕಳುಹಿಸುತ್ತಿದ್ದ ಎನ್ನುವ ಕಾರಣಕ್ಕೆ ರೇಣುಕಸ್ವಾಮಿಯನ್ನು ಅಪಹರಿಸಿ, ಶೆಡ್ ಒಂದರಲ್ಲಿ ಬಂಧನದಲ್ಲಿರಿಸಿ, ಚಿತ್ರಹಿಂಸೆ ನೀಡಿ ಕೊಲ್ಲಲಾಗಿದೆ; ಕೊಲೆಗೀಡಾದ ವ್ಯಕ್ತಿಯ ದೇಹವನ್ನು ಚರಂಡಿಗೆ ಎಸೆಯಲಾಗಿದೆ ಎನ್ನುವ ಗುರುತರ ಆರೋಪವನ್ನು ದರ್ಶನ್ ಹಾಗೂ ಆತನ ಸಹವರ್ತಿಗಳು ಎದುರಿಸುತ್ತಿದ್ದಾರೆ. ಮನೆಗೆಲಸದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ್ದ ಪ್ರಕರಣದಲ್ಲಿ ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಇತ್ತೀಚೆಗಷ್ಟೇ ಆಜೀವ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ. ಆ ಪ್ರಕರಣದ ನಂತರ, ಪೊಲೀಸ್ ತನಿಖೆ ಹಾಗೂ ಪ್ರಾಸಿಕ್ಯೂಷನ್ ವಾದಕ್ಕೆ ನ್ಯಾಯಾಂಗದ ಅನುಮೋದನೆ ದೊರೆತಿರುವ ಎರಡನೇ ಪ್ರಮುಖ ಪ್ರಕರಣ ಇದಾಗಿದೆ. ಜನರ ಗಮನಸೆಳೆದಿರುವ ಈ ಪ್ರಕರಣದಲ್ಲಿ ಆರೋಪಿಗಳಿಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದು ಮಾಡಿರುವ ಸುಪ್ರೀಂ ಕೋರ್ಟ್ ತೀರ್ಮಾನ ನ್ಯಾಯಾಂಗದ ವಿವೇಚನೆಯ ಬಗ್ಗೆ ಜನಸಾಮಾನ್ಯರಲ್ಲಿ ಗೌರವ ಮೂಡಿಸುವಂತಹದ್ದಾಗಿದೆ.

ರೇಣುಕಸ್ವಾಮಿ ಕೊಲೆ ಆರೋಪಿಗಳಿಗೆ ಜಾಮೀನು ರದ್ದುಪಡಿಸಿರುವ ಸುಪ್ರೀಂ ಕೋರ್ಟ್ ತೀರ್ಪು, ನ್ಯಾಯದ ಎದುರು ಎಲ್ಲರೂ ಸಮಾನರು ಎನ್ನುವ ನಂಬಿಕೆಯನ್ನು ಬಲಪಡಿಸುವಂತಿದೆ.

ನ್ಯಾಯಾಂಗ ಯಾರೊಬ್ಬರ ಪಕ್ಷಪಾತಿಯೂ ಆಗಿರದೆ– ವಿಶೇಷವಾಗಿ ಪ್ರಭಾವಿಗಳ ಒತ್ತಡಕ್ಕೆ ಮಣಿಯದೆ– ಕಾನೂನು ನಿಯಮಗಳನ್ನು ಎತ್ತಿಹಿಡಿಯಲು ನೀಡಿರುವ ಕರೆಯ ರೂಪದಲ್ಲಿಯೂ ಪ್ರಸಕ್ತ ತೀರ್ಪಿಗೆ ಮಹತ್ವವಿದೆ. ಆರೋಪಕ್ಕೆ ಗುರಿಯಾದ ವ್ಯಕ್ತಿ ಯಾರೇ ಆಗಿರಲಿ, ಎಷ್ಟೇ ಉನ್ನತ ಸ್ಥಾನದಲ್ಲಿರಲಿ, ಅವರು ಕಾನೂನಿನ ಚೌಕಟ್ಟಿಗಿಂತಲೂ ದೊಡ್ಡವರಲ್ಲ ಎನ್ನುವ ಸಂಗತಿಯನ್ನು ಸುಪ್ರೀಂ ಕೋರ್ಟ್ ನಿರ್ದೇಶನ ಅನುಮಾನಕ್ಕೆ ಆಸ್ಪದವಿಲ್ಲದಂತೆ ಸ್ಪಷ್ಟಪಡಿಸಿದೆ. ಸೆಲೆಬ್ರಿಟಿ ಸ್ಥಾನಮಾನ ಅಥವಾ ರಾಜಕೀಯ ಅಧಿಕಾರವು ನ್ಯಾಯಾಂಗ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರಬಲ್ಲದು ಎನ್ನುವ ಸಾರ್ವಜನಿಕ ಆತಂಕಕ್ಕೆ ನೀಡಿರುವ ಪ್ರತಿಕ್ರಿಯೆಯ ರೂಪದಲ್ಲೂ ಈ ತೀರ್ಪನ್ನು ಗಮನಿಸಬಹುದು. ಹೈಕೋರ್ಟ್‌ನಿಂದ ಜಾಮೀನು ದೊರೆಯುವ ಮೊದಲು ಜೈಲಿನಲ್ಲಿದ್ದಾಗ ದರ್ಶನ್ ಧೂಮಪಾನ ಮಾಡಿದ್ದನ್ನು ಉಲ್ಲೇಖಿಸಿರುವ ಕೋರ್ಟ್, ರಾಜಾತಿಥ್ಯ ಮುಂದುವರಿದಲ್ಲಿ ಬಂದೀಖಾನೆಯ ಅಧಿಕಾರಿಗಳನ್ನು ಅಮಾನತುಗೊಳಿಸುವುದಾಗಿ ಎಚ್ಚರಿಕೆ ನೀಡಿದೆ. ಕಾನೂನು ಎಲ್ಲರೂ ಪಾಲಿಸಬೇಕಾದ ಕರ್ತವ್ಯವಾಗಿದೆಯೇ ಹೊರತು, ಆಯ್ದ ಕೆಲವರಿಗೆ ಅನುಕೂಲ ದೊರಕಿಸಿಕೊಡುವ ಸವಲತ್ತು ಅಲ್ಲ ಎನ್ನುವುದನ್ನು ಕೋರ್ಟ್‌ನ ಎಚ್ಚರಿಕೆ ಧ್ವನಿಸುವಂತಿದೆ. ಕರ್ನಾಟಕ ಹೈಕೋರ್ಟ್ ಆದೇಶದ ಬಗ್ಗೆ ನ್ಯಾಯಪೀಠ ಅತ್ಯಂತ ಕಠಿಣವಾಗಿ ಪ್ರತಿಕ್ರಿಯಿಸಿದ್ದು, ಜಾಮೀನು ನೀಡಿರುವ ಆದೇಶವು ವಿವೇಚನಾ ಅಧಿಕಾರವನ್ನು ಯಾಂತ್ರಿಕವಾಗಿ ಬಳಸಿರುವುದರ ಫಲವಾಗಿದೆ ಎಂದು ಹೇಳಿದೆ. ಜಾಮೀನು ನೀಡುವ ಸಂದರ್ಭದಲ್ಲಿ ಸಾಕ್ಷಿಗಳ ಹೇಳಿಕೆಗಳನ್ನು ಸಮರ್ಪಕವಾಗಿ ಪರಿಗಣಿಸದಿರುವುದನ್ನೂ ನ್ಯಾಯಪೀಠ ಗುರ್ತಿಸಿದೆ.

ರೇಣುಕಸ್ವಾಮಿ ಕೊಲೆ ಆರೋಪಿಗಳಿಗೆ ಜಾಮೀನು ರದ್ದುಪಡಿಸಿರುವ ಸುಪ್ರೀಂ ಕೋರ್ಟ್ ಆದೇಶವು, ನ್ಯಾಯಾಂಗದ ಪ್ರಕ್ರಿಯೆಯಲ್ಲಿ ಆಗಿರುವ ಲೋಪವೊಂದರ ತಿದ್ದುಪಡಿಯಷ್ಟೇ ಆಗಿಲ್ಲ; ಅದು, ನ್ಯಾಯಾಂಗದ ಶಿಸ್ತಿನ ಬಲವರ್ಧನೆಯ ಪ್ರಯತ್ನವೂ ಆಗಿದೆ. ಫೊರೆನ್ಸಿಕ್ ಸಾಕ್ಷ್ಯಗಳ ಪ್ರಬಲ ಒತ್ತಾಸೆಯಿರುವುದನ್ನು ಪ್ರಕರಣದ ಸಂಕೀರ್ಣತೆಯ ಸೂಚನೆಯಾಗಿ ಪರಿಗಣಿಸಿರುವ ನ್ಯಾಯಪೀಠ, ಹೈಕೋರ್ಟ್ ಮಂಜೂರು ಮಾಡಿದ್ದ ಜಾಮೀನನ್ನು ರದ್ದುಗೊಳಿಸಿದೆ. ನ್ಯಾಯದಾನದ ಪ್ರಕ್ರಿಯೆಯಲ್ಲಿ ಯಾಂತ್ರಿಕ ತೀರ್ಮಾನಗಳಿಗೆ ಅವಕಾಶವಿಲ್ಲ; ತಪ್ಪಾದ ದಯೆ– ಅನುಕಂಪ ಅಥವಾ ಯಾವುದೇ ರೀತಿಯ ಪ್ರಭಾವಗಳಿಗೂ ಅವಕಾಶವಿಲ್ಲ ಎನ್ನುವ ಪ್ರಬಲ ಸಂದೇಶವನ್ನೂ ಸುಪ್ರೀಂ ಕೋರ್ಟ್ ತೀರ್ಪು ನೀಡುವಂತಿದೆ. ಸಾರ್ವಜನಿಕ ಜೀವನದ ಮೇಲೆ ಪ್ರಭಾವ ಬೀರುವ ಸಂಸ್ಥೆಗಳ ಕಾರ್ಯಾಚರಣೆಯ ಬಗ್ಗೆ ನಾಗರಿಕರು ವಿಶ್ವಾಸ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ, ನ್ಯಾಯಾಂಗದ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವಂತಹ ತೀರ್ಪನ್ನು ನ್ಯಾಯಪೀಠ ನೀಡಿದೆ.

ಚಾಟಿ

ಕುಳಿತು ಉಣ್ಣುವವರಿಗೊಂದು...

‘ಅಭಿಮಾನ ಸತ್ಯದ ಕಣ್ಣು ಮುಚ್ಚಬಾರದು’ ಎನ್ನುವ ಆಚಾರ್ಯ ತೀ.ನಂ. ಶ್ರೀಕಂಠಯ್ಯ ಅವರ ಸಾಲನ್ನು ಕಂಡಾಗಲೆಲ್ಲ ಅನಿಸುವುದು, ಅವರು ಎಷ್ಟು ನೇರ–ನಿಷ್ಠುರ ಇದ್ದರೆಂದು. ಇಂದಿನ ದಿನವೂ ಅದರ ಅಗತ್ಯವಿದೆ. ಸ್ವಾತಂತ್ರ್ಯವನ್ನು ತಂದು ಕೊಟ್ಟವರು ಇಂದಿಗೆ ಯಾರೂ ಇಲ್ಲ; ಅವರ ತಾಳ್ಮೆ, ತ್ಯಾಗ, ಬಲಿದಾನಗಳ ಫಲವನ್ನು ನಾವು ಮೂರನೆಯ ತಲೆಮಾರು ಕುಳಿತು ಉಣ್ಣುತ್ತಿದ್ದೇವೆಂಬ ಕನಿಷ್ಠ ಪರಿಜ್ಞಾನವೂ ಇಲ್ಲದ ಹಾಗೆ ನಾವೆಲ್ಲರೂ ಇದ್ದೇವೆ.

ಆರ್. ದಿಲೀಪ್ ಕುಮಾರ್, ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್ಐಟಿ ಕಾರ್ಯಾಚರಣೆಯ ಆರಂಭದ ಹತ್ತು ದಿನಗಳಲ್ಲಿ ಯಾರೂ ಬಾಯಿ ಬಿಚ್ಚಿಲ್ಲ. ಎಸ್ಐಟಿ ರಚಿಸಲಿ ಎಂದು ಬಿಜೆಪಿಯವರು ಹೇಳಿಕೆ ನೀಡಿದರು. ಈಗ ಎಲ್ಲ ಸಂಗತಿಗಳೂ ಹೊರಬಂದ ಮೇಲೆ ರಾಜಕೀಯ ಲಾಭಕ್ಕೆ ಹೇಗೆ ಬಳಸಿಕೊಳ್ಳಬಹುದು ಎಂದು ಲೆಕ್ಕಾಚಾರ ಹಾಕುತ್ತಿದ್ದಾರೆ. ಧಾರ್ಮಿಕ ವಿಚಾರ ಉಪಯೋಗಿಸಿಕೊಂಡು ರಾಜಕೀಯ ಲಾಭ ಪಡೆಯುವುದು ಬಿಜೆಪಿಯ ಹಳೆಯ ತಂತ್ರ.

ದಿನೇಶ್ ಗುಂಡೂರಾವ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ

25 ವರ್ಷಗಳ ಹಿಂದೆ

ಬುಧವಾರ, 16-8-2000

● **ಬಡವರಿಗೆ ಹಳದಿ ಪಡಿತರ ಚೀಟಿ ಯೋಜನೆ ಜಾರಿ: ಕೃಷ್ಣ**

ಬೆಂಗಳೂರು, ಆಗಸ್ಟ್ 15– ಕೇಂದ್ರ ಸರ್ಕಾರ ಸಾರ್ವಜನಿಕ ವಿತರಣೆ ವ್ಯವಸ್ಥೆಯಡಿ ನೀಡುವ ಆಹಾರ ಧಾನ್ಯದ ಬೆಲೆಯನ್ನು ಹೆಚ್ಚಿಸಿದ್ದರಿಂದ ಬಡ ಕುಟುಂಬಗಳಿಗೆ ಆಗಿರುವ ತೊಂದರೆ ನಿವಾರಿಸಲು 28 ಲಕ್ಷ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ ಆಹಾರಧಾನ್ಯ ಪೂರೈಸುವ ‘ಹಳದಿ ಪಡಿತರ ಚೀಟಿ’ ವಿತರಿಸುವ ಯೋಜನೆಯನ್ನು ರಾಜ್ಯ ಸರ್ಕಾರ ಇಂದು ಸ್ವಾತಂತ್ರ್ಯೋತ್ಸವದ ಕೊಡುಗೆಯಾಗಿ ಜಾರಿಗೊಳಿಸಿತು.

ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, 53ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ರಾಜಧಾನಿಯ ಮಾಣಿಕ್‌ಷಾ ಪರೇಡ್ ಮೈದಾನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ, ಈ ವಿಷಯ ಪ್ರಕಟಿಸಿದರು.

● **ಜೀಪ್ ಉರುಳಿ ಮೂರು ಸಾವು**

ಚಿಕ್ಕಮಗಳೂರು, ಆಗಸ್ಟ್ 15– ಕೊಪ್ಪ ಗಡಿಕಲ್ಲು ಬಳಿ ಸೋಮವಾರ ರಾತ್ರಿ ಜೀಪೊಂದು ಕೆರೆಗೆ ಉರುಳಿ ಮೂವರು ಸತ್ತಿದ್ದಾರೆ.

ರವಿಕುಮಾರ್ (48), ಗೀತಾ (25) ಮತ್ತು ಪುಷ್ಪಾ (28) ಎಂಬುವರು ಸತ್ತವರು. ಇತರ ಮೂವರಿಗೆ ಪೆಟ್ಟಾಗಿದೆ. ಜೀಪಲ್ಲಿ ಇದ್ದವರು ಸಾಗರ ಮತ್ತು ಶಿಕಾರಿಪುರದವರು. ಧರ್ಮಸ್ಥಳಕ್ಕೆ ಹೋಗಿ ವಾಪಸ್ಸಾಗುತ್ತಿದ್ದಾಗ ಅಪಘಾತ ಸಂಭವಿಸಿತು.

75 ವರ್ಷಗಳ ಹಿಂದೆ

● **ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ 15.8.1950ರ ಮಂಗಳವಾರ ‘ಪ್ರಜಾವಾಣಿ’ ಕಾರ್ಯಾಲಯಕ್ಕೆ ಬಿಡುವಿತ್ತು. ಹಾಗಾಗಿ, 16.8.1950ರ ಬುಧವಾರದ ಸಂಚಿಕೆ ಪ್ರಕಟವಾಗಿರಲಿಲ್ಲ.**

ಸಿ.ಎಂ ಕೋಟೆಗೆ ಹೈಕಮಾಂಡ್ ಲಗ್ಗೆ



ಗತಿಬಿಂಬ

ವೈ.ಗ. ಜಗದೀಶ್

2014ರ ಲೋಕಸಭೆ ಚುನಾವಣೆಯ ಹೀನಾಯ ಸೋಲಿನ ಬಳಿಕ ನಿಶ್ಶಕ್ತವಾಗಿದ್ದ ಕಾಂಗ್ರೆಸ್ ಹೈಕಮಾಂಡ್, 2024ರ ಚುನಾವಣೆ ನಂತರ ಬಲಿಷ್ಠಗೊಳ್ಳತೊಡಗಿದೆ. ತಮ್ಮ ಸಾಮರ್ಥ್ಯ, ಚಾಣಾಕ್ಷತೆಯಿಂದ ವರಿಷ್ಠರನ್ನೇ ಬಳುಕಿಸುತ್ತಿದ್ದ ಸಿದ್ದರಾಮಯ್ಯ ಅವರನ್ನು ಬಾಗಿಸುವತ್ತ ಆ ಪಕ್ಷದ ಹೈಕಮಾಂಡ್ ಮುನ್ನಡೆಯುತ್ತಿದ್ದು, ಇತ್ತೀಚಿನ ವಿದ್ಯಮಾನಗಳು ಇದನ್ನು ಪುಷ್ಟೀಕರಿಸುವಂತಿವೆ.

‘ಅಹಿಂದ’ ಸಮುದಾಯದ ಪ್ರಶ್ನಾತೀತ ನಾಯಕತ್ವ, ಯಾರನ್ನು ಬೇಕಾದರೂ ಮಣಿಸಬಹುದಾದ ವಿಶಿಷ್ಟ ಮಾತುಗಾರಿಕೆ ಹೊಂದಿರುವ ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಬಂದಾರಭ್ಯ ಯಾರಿಗೂ ಅಳುಕಿದವರಲ್ಲ. ತಾವು ನಡೆದದ್ದೇ ಹಾದಿ ಎಂದು ಮುಂದೆ ಸಾಗಿದವರು. ಅವಕಾಶಗಳ ದಾರಿ ತೆರೆದುಕೊಂಡಾಗ ಆ ಕಾಲಕ್ಕೆ ಬೇಕಾದ ಪಟ್ಟುಗಳನ್ನು ಹಾಕಿ, ಅದನ್ನು ದಕ್ಕಿಸಿಕೊಂಡವರು. ಈ ಅವಧಿಯಲ್ಲಿ, ತನ್ನದೇ ತಪ್ಪುಗಳಿಂದಾಗಿ ಕಾಂಗ್ರೆಸ್ ಹೈಕಮಾಂಡ್ ದುರ್ದಿನಗಳನ್ನು ಎದುರಿಸುತ್ತಲೇ ಹೋದದ್ದು, ಸಿದ್ದರಾಮಯ್ಯ ಅವರಿಗೆ ವರವಾಯಿತು. ಈಗ, ಮೈಸೆಟೆದು ಕುಳಿತಿರುವ ಕಾಂಗ್ರೆಸ್ ಹೈಕಮಾಂಡ್, ಸಿದ್ದರಾಮಯ್ಯ ಅವರ ಕೋಟೆಯೊಳಗೆ ಲಗ್ಗೆ ಇಡತೊಡಗಿದೆ.

2009ರಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಲೋಕಸಭೆ ಚುನಾವಣೆಗೆ ನಿಲ್ಲಿಸಿದ ಹೈಕಮಾಂಡ್, ಅವರನ್ನು ದೆಹಲಿಗೆ ಕರೆಯಿಸಿಕೊಂಡಿತು. ಗೆದ್ದ ಅವರು ಮಂತ್ರಿಯೂ ಆದರು. ಕಾಂಗ್ರೆಸ್‌ಗೆ ಬಂದು ಕೆಲವೇ ವರ್ಷ ಕಳೆದಿತ್ತು. ಖರ್ಗೆಯವರಿಂದ ತೆರವಾದ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಕಾಂಗ್ರೆಸ್‌ನಲ್ಲಿ ಹಲವು ಆಕಾಂಕ್ಷಿಗಳಿದ್ದರೂ ಸಿದ್ದರಾಮಯ್ಯ ತಮ್ಮದೇ ಪಟ್ಟುಗಳನ್ನು ಹಾಕಿ, ವಿಪಕ್ಷನಾಯಕ ಸ್ಥಾನ ಗಳಿಸಿಕೊಂಡರು. ಅದು ಕಾಂಗ್ರೆಸ್‌ನ ಅವರ ರಾಜಕೀಯದಲ್ಲಿ ಮಹತ್ವದ ತಿರುವು. ಅದೇ ವೇಳೆ, ವಿಧಾನ ಪರಿಷತ್ತಿನಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ತಮ್ಮ ಆಪ್ತ ಸಿ.ಎಂ. ಇಬ್ರಾಹಿಂ ಅವರನ್ನು ಅಭ್ಯರ್ಥಿಯಾಗಿಸಲು ಸಿದ್ದರಾಮಯ್ಯ ಪಣ ತೊಟ್ಟಿದ್ದರು. ಅದಕ್ಕೆ, ಅಡೆತಡೆಗಳು ಎದುರಾದಾಗ ಪ್ರತಿಪಕ್ಷ ನಾಯಕ ಸ್ಥಾನಕ್ಕೆ ರಾಜೀನಾಮೆ ಕೊಡುವ ಸಂದೇಶವನ್ನು ಹೈಕಮಾಂಡ್‌ಗೆ ರವಾನಿಸಿದ್ದರು.

ಅಕ್ರಮ ಗಣಿಗಾರಿಕೆಯ ವಿರುದ್ಧ ಬೆಂಗಳೂರಿನಿಂದ ಬಳ್ಳಾರಿಯವರೆಗೆ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಪಾದಯಾತ್ರೆ ಸಂಚಲನ ಸೃಷ್ಟಿಸಿತು. ಆಗ ಕೆಪಿಸಿಸಿ ಅಧ್ಯಕ್ಷರಾಗಿದ್ದವರು ಆರ್.ವಿ. ದೇಶಪಾಂಡೆ, ಕಾರ್ಯಾಧ್ಯಕ್ಷರಾಗಿದ್ದವರು ಡಿ.ಕೆ. ಶಿವಕುಮಾರ್. ಪಾದಯಾತ್ರೆಯ ಯಶಸ್ಸು ಸಿದ್ದರಾಮಯ್ಯನವರಿಗೆ ದಕ್ಕಿ, ಅವರ ವರ್ಚಸ್ಸು ಇಮ್ಮಡಿಗೊಂಡಿತು.

2013ರಲ್ಲಿ ಕಾಂಗ್ರೆಸ್‌ಗೆ ಬಹುಮತ ಬಂದಾಗ, ಮುಖ್ಯಮಂತ್ರಿ ಸ್ಥಾನಕ್ಕೆ ಸಹಜವಾಗಿಯೇ ಹೈಕಮಾಂಡ್ ಆಯ್ಕೆ ಸಿದ್ದರಾಮಯ್ಯ ಆಗಿದ್ದರು. 2014ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿದ್ದರಿಂದಾಗಿ, ಹೈಕಮಾಂಡ್ ತೀರಾ ದುರ್ಬಲವಾಯಿತು. ಆಗಲೂ ಕೆಲವೊಮ್ಮೆ ನಾಯಕತ್ವ ಬದಲಾವಣೆಯ ಪ್ರಶ್ನೆ ಎದುರಾಗಿದ್ದರೂ– ಸಿದ್ದರಾಮಯ್ಯ ವರ್ಚಸ್ಸು, ಪ್ರಭಾವಳಿ ಮುಂದೆ ಅದು ನಿಲ್ಲಲಿಲ್ಲ. 2019ರ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮತ್ತೆ ವಿರೋಧ ಪಕ್ಷದ ನಾಯಕತ್ವವನ್ನು ತಮ್ಮದಾಗಿಸಿಕೊಂಡರು.

2023ರ ವಿಧಾನಸಭೆ ಚುನಾವಣೆ ಹೊತ್ತಿಗೆ ಕಾಂಗ್ರೆಸ್‌ನಲ್ಲಿ ಪರಿಸ್ಥಿತಿ ಬದಲಾಗಿತ್ತು. ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಪಕ್ಷದಲ್ಲಿ ಹಿಡಿತ ಸಾಧಿಸಿದರು. ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿತು. ಶಿವಕುಮಾರ್ ಅವರ ಪೈಪೋಟಿ ಎದುರಿಸಿದ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಸ್ಥಾನವನ್ನು ತನ್ನದಾಗಿಸಿಕೊಂಡರು.

ವಾಲ್ಮೀಕಿ ನಿಗಮದ ಹಣ ವರ್ಗಾವಣೆಯ ಅಕ್ರಮ ಸರ್ಕಾರಕ್ಕೆ ಬರಸಿಡಿಲು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಯಲ್ಲಿ ಅಕ್ರಮದ ಆರೋಪವು ಸ್ವತಃ ಸಿದ್ದರಾಮಯ್ಯ ಅವರ ಮೇಲೆಯೇ ಬಂದಿತು. ಇದು, ಅವರ ರಾಜಕೀಯ ಜೀವನದಲ್ಲಿ ಬಲವಾದ ಹಿನ್ನಡೆ.

> ಕಾಂಗ್ರೆಸ್ ಹೈಕಮಾಂಡ್ ಎದುರು ನಿಷ್ಠುರವಾಗಿ ವರ್ತಿಸುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬದಲಾದ ರಾಜಕೀಯ ಸಂದರ್ಭದಲ್ಲಿ ಅಸಹಾಯಕರಂತೆ ಕಾಣಿಸುತ್ತಿದ್ದಾರೆ. ಆಪ್ತರ ತಲೆದಂಡಗಳನ್ನು ಪ್ರತಿರೋಧವಿಲ್ಲದೆ ಒಪ್ಪಿಕೊಳ್ಳುವ ಹಾಗೂ ಸರ್ಕಾರದ ವಿರುದ್ಧ ಸಚಿವರೇ ಮಾತನಾಡುತ್ತಿದ್ದರೂ ಮೌನವಾಗಿರುವ ಸ್ಥಿತಿ ಅವರದ್ದಾಗಿದೆ.

ಲೋಕಸಭೆಯಲ್ಲಿ 99 ಸ್ಥಾನ ಗಳಿಸಿದ ಕಾಂಗ್ರೆಸ್, ದೇಶದಲ್ಲಿ ಚೇತರಿಕೆ ಕಾಣತೊಡಗಿತು. 2018–2023ರಲ್ಲಿ ಸಿದ್ದರಾಮಯ್ಯ ಹೇಳಿದ್ದೆಲ್ಲವೂ ನಡೆಯುತ್ತಿತ್ತು. ಈಗ, ಪಕ್ಷದ ಮೇಲೆ ಹಿಡಿತ ಸಾಧಿಸಿರುವ ರಾಷ್ಟ್ರ ನಾಯಕರು, ಸರ್ಕಾರದ ನಡೆಯನ್ನು ನಿಕಶಕ್ಕೆ ಒಳಪಡಿಸುತ್ತಿದ್ದಾರೆ.

ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಅಂಗೀಕರಿಸಲು ಮುಂದಾಗಿದ್ದ ಸಿದ್ದರಾಮಯ್ಯ, ಸಚಿವ ಸಂಪುಟ ಸಭೆಗೆ ದಿನಾಂಕವನ್ನೂ ನಿಗದಿ ಮಾಡಿ, ಅಂದೇ ತೀರ್ಮಾನವನ್ನು ತೆಗೆದುಕೊಳ್ಳುವ ಛಲದಲ್ಲಿದ್ದರು. ‘ಹಳೆಯ ವರದಿ ಒಪ್ಪಲಾಗದು. ಅದನ್ನು ಕೈಬಿಟ್ಟು, ಹೊಸದಾಗಿ ಸಮೀಕ್ಷೆ ನಡೆಸಿ’ ಎಂದು ವರಿಷ್ಠರು ಕಟ್ಟಪ್ಪಣೆ ಮಾಡಿದರು. ಈ ನಡೆಗೆ ಒಕ್ಕಲಿಗ ಹಾಗೂ ಲಿಂಗಾಯತ ನಾಯಕರ ಒತ್ತಡವೇ ಕಾರಣವೆಂಬುದು ರಹಸ್ಯವಲ್ಲ. ‘ನೀವು ಅಂದುಕೊಂಡಂತೆ ನಡೆಯದು; ನಮ್ಮ ಸಮ್ಮತಿಯೂ ಬೇಕು’ ಎಂಬಂತೆ ಸಿದ್ದರಾಮಯ್ಯನವರಿಗೆ ಹೈಕಮಾಂಡ್ ತಡೆ ಹಾಕಿಯೇ ಬಿಟ್ಟಿತು.

ವಿಧಾನ ಪರಿಷತ್ತಿಗೆ ಯಾರನ್ನು ಆಯ್ಕೆ ಮಾಡಬೇಕು ಎಂಬ ವಿಷಯ, 10 ವರ್ಷ ಸಿದ್ದರಾಮಯ್ಯನವರ ಸಲಹೆಯಂತೆಯೇ ನಡೆಯುತ್ತಿತ್ತು. ಈ ಬಾರಿ, ಹೈಕಮಾಂಡ್ ಒಪ್ಪಿಗೆಯ ಮೇರೆಗೆ ಕಳುಹಿಸಲಾದ ನಾಲ್ವರ ನಾಮನಿರ್ದೇಶನದ ಪಟ್ಟಿಗೆ ವರಿಷ್ಠರೇ ಕೊನೆಗಳಿಗೆಯಲ್ಲಿ ತಡೆಯೊಡ್ಡಿದರು. ಈವರೆಗೂ ಇದಕ್ಕೆ ಒಪ್ಪಿಗೆ ಸಿಕ್ಕಿಲ್ಲ.

‘ಆರ್‌ಸಿಬಿ ವಿಜಯೋತ್ಸವ’ದ ವೇಳೆ ನಡೆದ ಕಾಲ್ತುಳಿತದ ದುರಂತ ಸರ್ಕಾರಕ್ಕೆ ದೊಡ್ಡ ಮುಖಭಂಗ. ಈ ಪ್ರಕರಣದಲ್ಲಿ ತಮ್ಮ ಅತ್ಯಾಪ್ತರಾಗಿದ್ದ, ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು ಅವರನ್ನು ಸ್ವತಃ ಸಿದ್ದರಾಮಯ್ಯ ಅವರೇ ಕಿತ್ತೊಗೆದರು. ಇದಕ್ಕೆ, ಹೈಕಮಾಂಡ್ ನಿರ್ದೇಶನ ಇತ್ತೋ ಇಲ್ಲವೋ ಬೇರೆ ಮಾತು. ಆದರೆ, ಆಪ್ತನನ್ನು ಉಳಿಸಿಕೊಳ್ಳಲಾಗದ ಸ್ಥಿತಿ ಅವರದ್ದಾಗಿತ್ತು.

ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡಿದ್ದು ಇದರ ಉತ್ತುಂಗ. ಸಂಪುಟದಲ್ಲಿ ಯಾರು ಇರಬೇಕು ಎಂಬುದು ಮುಖ್ಯಮಂತ್ರಿ ತೀರ್ಮಾನ. ಸಚಿವರ ಸೇರ್ಪಡೆ ಅಥವಾ ಕೈಬಿಡುವುದು ಹೈಕಮಾಂಡ್‌ನ ಅಂಕೆಗೆ ಒಳಪಟ್ಟಿರುವುದು ಎಲ್ಲ ಪಕ್ಷಗಳಲ್ಲೂ ಸಂಪ್ರದಾಯವಾಗಿದೆ. ಸಚಿವರನ್ನು ಹೊರದಬ್ಬಬೇಕಾದಾಗ ರಾಜೀನಾಮೆ ಪಡೆದು ಗೌರವಯುತವಾಗಿ ಕಳುಹಿಸಲಾಗುತ್ತದೆ. ಆದರೆ, ಅಧಿವೇಶನ ನಡೆಯುವಾಗಲೇ ತಮ್ಮ ಆಪ್ತ ಸಚಿವರೊಬ್ಬರನ್ನು ವಜಾಗೊಳಿಸುವ ಪರಿಸ್ಥಿತಿ ಮುಖ್ಯಮಂತ್ರಿಗೆ ಎದುರಾಗಿದ್ದು ಅಪರೂಪ.

ಮತ ಕಳವು ಮುಂದಿಟ್ಟು ರಾಹುಲ್ ಗಾಂಧಿ ನಡೆಸುತ್ತಿರುವ ಆಂದೋಲನದ ಬಗ್ಗೆಯೇ ವ್ಯತಿರಿಕ್ತವಾಗಿ ಮಾತನಾಡಿದ್ದ ರಾಜಣ್ಣ ಅವರನ್ನು ವಜಾಗೊಳಿಸದೇ ಅನ್ಯಮಾರ್ಗ ಆ ಪಕ್ಷಕ್ಕೆ ಇರಲಿಲ್ಲ. ಸಿದ್ದರಾಮಯ್ಯನವರನ್ನು ಸದಾ ಸಮರ್ಥಿಸುವ ಸೇನಾನಿಯಾಗಿದ್ದ ರಾಜಣ್ಣ ಅವರ ರಕ್ಷಾಕವಚದಂತಿದ್ದರು. ಡಿ.ಕೆ. ಶಿವಕುಮಾರ್ ಉರುಳಿಸುತ್ತಿದ್ದ ದಾಳಗಳಿಗೆ, ಪ್ರತಿದಾಳಗಳನ್ನು ಉರುಳಿಸುತ್ತಿದ್ದರು. ಅದೂ ಅವರ ಸಚಿವ ಸ್ಥಾನಕ್ಕೆ ಉರುಳಾಯಿತು. ರಾಜಣ್ಣ ತಮ್ಮ ಸ್ವಯಂಕೃತ ಪ್ರಮಾದದಿಂದ ವಜಾ ಆದರೂ, ತಮ್ಮ ಆಪ್ತ ಬಣದ ಒಬ್ಬೊಬ್ಬರನ್ನೇ ಹೀಗೆ ಕಳೆದುಕೊಳ್ಳಬೇಕಾದ ಸ್ಥಿತಿ ಸಿದ್ದರಾಮಯ್ಯನವರಿಗೆ ಮೇಲಿಂದ ಮೇಲೆ ಬರುತ್ತಿದೆ. ಹಿಂದಿನ ಅವಧಿಯಲ್ಲಿ ಇಂತಹ ಸನ್ನಿವೇಶ ಎದುರಾಗಿದ್ದರೆ ಸಡ್ಡು ಹೊಡೆಯುತ್ತಿದ್ದ ಅವರು, ಈಗ ಹೈಕಮಾಂಡ್‌ಗೆ ಮಣಿಯ ತೊಡಗಿರುವುದರ ಸೂಚನೆ ಇದು.

ಅನೇಕ ವಿಷಯಗಳಲ್ಲಿ ಸಚಿವ ಸಂಪುಟದಲ್ಲಿ ಭಿನ್ನಮತ ಇರುವುದು ಬಹಿರಂಗವಾಗುತ್ತಿದೆ. ವಿರೋಧ ಪಕ್ಷಗಳು ಸರ್ಕಾರವನ್ನು ಟೀಕಿಸಿ, ಬೀದಿಯಲ್ಲಿ ಮಾನ ಹರಾಜು ಹಾಕುವುದು ಸಾಮಾನ್ಯ. ಆದರೆ, ಇಲ್ಲಿ ಸರ್ಕಾರವೇ ಸರ್ಕಾರದ ವಿರುದ್ಧ ಮಾತನಾಡತೊಡಗಿದೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವಿರುದ್ಧ ಲಿಂಗಾಯತ, ಒಕ್ಕಲಿಗ ಸಚಿವರೇ ಮಾತನಾಡಿದ್ದರು. ಅದನ್ನು ಜಾರಿಗೊಳಿಸಲು ಬಿಡಲಿಲ್ಲ. ಒಳ ಮೀಸಲಾತಿಗಾಗಿ ನಡೆಸಿದ ಸಮೀಕ್ಷೆಯ ಬಗ್ಗೆ ಹೊರಗೆ ಯಾರು ಆಕ್ಷೇಪಿಸಿಲ್ಲ. ಅದರ ವಿರುದ್ಧ ಸಮುದಾಯವನ್ನು ಎತ್ತಿಕಟ್ಟುವ ಕೆಲಸವನ್ನು ಕೆಲವರು ಮಾಡುತ್ತಿರುವುದು ರಹಸ್ಯವೇನಲ್ಲ.

ಧರ್ಮಸ್ಥಳದ ಪ್ರಕರಣದಲ್ಲಿ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿದೆ. ಅಲ್ಲಿನ ತನಿಖೆಯ ಕುರಿತಾಗಿ ವಿರೋಧ ಪಕ್ಷ ಮತ್ತು ಸಾರ್ವಜನಿಕರು ಸಂಶಯಪಡುವುದು ತಪ್ಪೇನಲ್ಲ. ಸರ್ಕಾರವನ್ನು ಸಮರ್ಥಿಸಿಕೊಳ್ಳಬೇಕಾದವರು ತಮ್ಮದೇ ಸರ್ಕಾರದ ನಡೆಯ ಬಗ್ಗೆ ಸಂಶಯಪಟ್ಟರೆ ಜನರು ಯಾರನ್ನು ನಂಬಬೇಕು.

‘ಧರ್ಮಸ್ಥಳದ ವಿರುದ್ಧ ದೊಡ್ಡ ಷಡ್ಯಂತ್ರ’ ಎಂದು ಶಿವಕುಮಾರ್, ‘ದೊಡ್ಡ ಆರೋಪ ಬಂದಾಗ ತನಿಖೆ ನಡೆದು ಸತ್ಯ ಹೊರಬಂದು ಆರೋಪ ಮುಕ್ತ ಮಾಡಬೇಕಲ್ಲವೇ? ’ ಎಂದು ಗೃಹ ಸಚಿವ ಪರಮೇಶ್ವರ ಸದನದಲ್ಲಿ ಹೇಳಿದ್ದಾರೆ. ಧರ್ಮಸ್ಥಳದ ಮೇಲೆ ನಂಬಿಕೆ ಅವರ ಖಾಸಗಿ ವಿಷಯ. ಸರ್ಕಾರದ ತೀರ್ಮಾನಕ್ಕೆ ಸಚಿವ ಸಂಪುಟ ಸಭೆಯಲ್ಲಿ ಆಕ್ಷೇಪ ವ್ಯಕ್ತಪಡಿಸಬೇಕೇ ವಿನಾ, ಸದನದಲ್ಲಿ ಹೇಳುವುದು ಸಂಸದೀಯ ನಡೆಯಲ್ಲ. ಅದರಲ್ಲೂ ಸಂವಿಧಾನದ ಆಶಯ ಕಾಪಾಡುವ ಪವಿತ್ರ ವೇದಿಕೆಯಾದ ಶಾಸನ ಸಭೆಯಲ್ಲಿ ಸಚಿವರು ಹೀಗೆ ಮಾತನಾಡಿದರೆ, ಸರ್ಕಾರದ ನಡೆಯ ಬಗ್ಗೆಯೇ ಸಂಶಯಪಡುವ ಕಾಲ ಶುರುವಾಗುತ್ತದೆ.

ಪಕ್ಷದ ನಡೆಯ ವಿರುದ್ಧ ಮಾತನಾಡಿದ್ದಕ್ಕೆ ರಾಜಣ್ಣ ವಜಾಗೊಂಡರು. ಸರ್ಕಾರದ ವಿರುದ್ಧವೇ ಶಿವಕುಮಾರ್ ಧ್ವನಿ ಎತ್ತಿದ್ದಾರೆ. ಸದನದಲ್ಲೇ ಸಚಿವರು ಹೀಗೆ ಮಾತನಾಡುತ್ತಾರೆ ಎಂದರೆ, ಮುಖ್ಯಮಂತ್ರಿಗೆ ಸಚಿವರ ಮೇಲೆ ಹಿಡಿತವಿಲ್ಲ ಎಂಬುದು ಸ್ಪಷ್ಟ. ಸಿದ್ದರಾಮಯ್ಯನವರ ಕೈ ಸೋಲುತ್ತಿರುವುದಕ್ಕೆ ಇದಕ್ಕಿಂತ ನಿದರ್ಶನ ಬೇಕೆ?

ಸುಭಾಷಿತ

ಕಾಲದ ವಕಾಲತ್ತಿನೆದುರು ವಿಮರ್ಶಕರ ತಾಕತ್ತು ಏನೇನೂ ಅಲ್ಲ.

–ಕೆ.ಎಸ್. ನಿಸಾರ್ ಅಹಮದ್

ವಾಚಕರ ವಾಣಿ

ರೈತರ ವಿಷಯದಲ್ಲಿ ಚೆಲ್ಲಾಟ ಬೇಡ

ಮುಂಗಾರು ಬಿತ್ತನೆಗೆ ಯೂರಿಯಾ ರಸಗೊಬ್ಬರ ಪೂರೈಕೆ ಆಗದ ಕಾರಣ ರೈತ ಸಮುದಾಯ ಕೈಚೆಲ್ಲಿ ಕುಳಿತಿದೆ. ಹೀಗಿದ್ದರೂ ಸದನದಲ್ಲಿ ಆಡಳಿತರೂಢ ಮತ್ತು ಪ್ರತಿಪಕ್ಷದ ಶಾಸಕರು ಪರಸ್ಪರ ಆರೋಪ, ಪ್ರತ್ಯಾರೋಪದಲ್ಲಿಯೇ ಕಾಲಹರಣ ಮಾಡುವುದು ಸರಿಯಲ್ಲ. ರೈತರ ಬಗ್ಗೆ ರಾಜಕೀಯ ಮಾಡುವ ಮುಖಂಡರ ಧೋರಣೆ ಬದಲಾಗಬೇಕಿದೆ. ಅನ್ನದಾತರ ವಿಚಾರದಲ್ಲಿ ಚೆಲ್ಲಾಟ ಆಡುವುದು ಶೋಭೆ ತರುವುದಿಲ್ಲ. ಪಕ್ಷಭೇದ ಮರೆತು ರಸಗೊಬ್ಬರ ಹಂಚಿಕೆಯಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕಿದೆ. ಸಕಾಲದಲ್ಲಿ ರಸಗೊಬ್ಬರ, ಬಿತ್ತನೆಬೀಜ ಪೂರೈಸಿ ರೈತರ ಹಿತಕಾಯಬೇಕಿದೆ.

ಮಲ್ಲಿಕಾರ್ಜುನ್ ತೇಲಿ, ಜಮಖಂಡಿ

ಡಿಸಿಎಂ ಹೇಳಿಕೆಗೆ ಯಾವ ಅರ್ಥ?

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಇತರರಿಗೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿರುವುದಕ್ಕೆ ರಾಜ್ಯ ಸರ್ಕಾರದ ವಿಶೇಷ ಮುತುವರ್ಜಿ, ಜೊತೆಗೆ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ಹಾಗೂ ವಿಶೇಷ ಪ್ರಾಸಿಕ್ಯೂಟರ್ ಪಿ. ಪ್ರಸನ್ನಕುಮಾರ್ ಕಾರಣಕರ್ತರು. ಇಂಥ ತೀರ್ಪಿಗೆ ನ್ಯಾಯಪರರು ಒಂದೆಡೆ ಸಂಭ್ರಮಿಸುವಂತಾದರೆ, ಇನ್ನೊಂದೆಡೆ ಸರ್ಕಾರದ ಭಾಗವೇ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ‘ದರ್ಶನ್ ಜಾಮೀನು ರದ್ದಾದ ವಿಷಯ ಕೇಳಿ ಶಾಕ್ ಆಯಿತು’ (ಪ್ರ.ವಾ., ಆಗಸ್ಟ್ 15) ಎಂದು ಹೇಳಿರುವುದಕ್ಕೆ ಯಾವ ‘ಅರ್ಥ ವಿಶೇಷಣ’ ಕಲ್ಪಿಸಬೇಕು? ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವು, ಈ ಪ್ರಕರಣದಲ್ಲಿ ಹೈಕೋರ್ಟ್‌ಗೆ ಛೀಮಾರಿ ಹಾಕಿದ್ದನ್ನು ಉಪ ಮುಖ್ಯಮಂತ್ರಿ ಅವರು ಅಂದೇ ಅರ್ಥೈಸಿಕೊಂಡಿದ್ದರೆ ಈ ರೀತಿ ಉದ್ಧರಿಸುತ್ತಿರಲಿಲ್ಲವೇನೋ.

ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

‘ಆಶಾ’ ಹೋರಾಟ: ಅವಜ್ಞೆ ಏಕೆ?

ವಿವಿಧ ಬೇಡಿಕೆಗಳನ್ನು ಈಡೇರಿಕೆಗೆ ಆಗ್ರಹಿಸಿ ರಾಜ್ಯದಾದ್ಯಂತ ಆಶಾ ಕಾರ್ಯಕರ್ತೆಯರು ಹೋರಾಟ ನಡೆಸುತ್ತಿದ್ದಾರೆ. ರಾಜ್ಯ ಸರ್ಕಾರ ಇವರ ಬೇಡಿಕೆ ಈಡೇರಿಸುವ ಬದಲು ನಿರ್ಲಕ್ಷ್ಯ ಮಾಡುತ್ತಿರುವುದು ಸರಿಯಲ್ಲ. ಹಳ್ಳಿಗಳಲ್ಲಿ ಈ ಕಾರ್ಯಕರ್ತೆಯರು ಜವಾಬ್ದಾರಿ ಹೊತ್ತುಕೊಂಡು ಕೆಲಸ ನಿರ್ವಹಿಸುತ್ತಿ ದ್ದಾರೆ. ಕೋವಿಡ್ ಸಮಯದಲ್ಲಿ ಇವರು ಸಲ್ಲಿಸಿದ ಸೇವೆಯನ್ನು ಮರೆಯಲು ಸಾಧ್ಯವೇ? ಆಶಾ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಸುವುದಾಗಿ ರಾಜ್ಯ ಸರ್ಕಾರ ಭರವಸೆ ಕೊಟ್ಟಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾವೇ ನೀಡಿದ ಭರವಸೆಯನ್ನು ಈಡೇರಿಸುತ್ತಿಲ್ಲ ಏಕೆ? ಕಾರ್ಯಕರ್ತೆಯರು ಉತ್ತಮವಾಗಿ ಸೇವೆ ಸಲ್ಲಿಸುತ್ತಿರುವುದರಿಂದಲೇ ಗ್ರಾಮೀಣ ಪ್ರದೇಶದಲ್ಲಿ ಶಿಶು ಮತ್ತು ತಾಯಂದಿರ ಮರಣ ಪ್ರಮಾಣ ಕಡಿಮೆಯಾಗಿದೆ ಎಂಬುದನ್ನು ಆಳುವ ವರ್ಗ ಮರೆಯಬಾರದು.

ಕಳೆದ ಅಧಿವೇಶನದಲ್ಲಿ ಮುಖ್ಯಮಂತ್ರಿಯಾದಿಯಾಗಿ ಸಚಿವರು, ಶಾಸಕರು, ಸ್ಪೀಕರ್ ಅವರ ವೇತನ ಮತ್ತು ಭತ್ಯೆಯನ್ನು ಯಾವುದೇ ಚರ್ಚೆ ಇಲ್ಲದೆ ದುಪ್ಪಟ್ಟು ಹೆಚ್ಚಿಸಲಾಗಿದೆ. ಹೀಗಿದ್ದಾಗ ಕಾರ್ಯಕರ್ತೆಯರಿಗೆ ಕನಿಷ್ಠ ವೇತನ ನೀಡದಿರುವುದು ಯಾವ ನ್ಯಾಯ?

ನಬಿ ಆರ್.ಬಿ. ದೋಟಿಹಾಳ, ಕುಷ್ಟಗಿ

ಬೀದಿನಾಯಿಗಳಿಗೆ ಆಶ್ರಯವೇ ಪರಿಹಾರ

ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ‘ಸೇವ್ ಡಾಗ್ಸ್’ ಹ್ಯಾಷ್‌ಟ್ಯಾಗ್ ಬಳಸಿ ಪ್ರಾಣಿಪ್ರಿಯರು ಬೀದಿನಾಯಿಗಳ ರಕ್ಷಣೆಗೆ ಧ್ವನಿ ಎತ್ತುತ್ತಿದ್ದಾರೆ. ಈ ಕಾಳಜಿಯು ಕೇವಲ ಜಾಲತಾಣಗಳಿಗೆ ಸೀಮಿತವಾಗಬಾರದು. ಬೀದಿನಾಯಿಗಳ ಹಾವಳಿಯಿಂದ ವಯಸ್ಕರು, ಮಕ್ಕಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ರೇಬಿಸ್‌ನಿಂದ ಮೃತಪಡುವವರ ಸಂಖ್ಯೆಯೂ ಹೆಚ್ಚುತ್ತಿದೆ. ನಮ್ಮ ಸುತ್ತಮುತ್ತ ಅನೇಕ ಬೀದಿನಾಯಿಗಳು ನಿರಾಶ್ರಿತವಾಗಿ ಅಲೆದಾಡುತ್ತಿದ್ದು, ಅವುಗಳನ್ನು ದತ್ತು ತೆಗೆದುಕೊಳ್ಳಬೇಕು. ಅವುಗಳಿಗೆ ಸುರಕ್ಷಿತ ಸೂರು ನೀಡುವುದೇ ನಿಜವಾದ ಪರಿಹಾರ. ಜಾಲತಾಣದಲ್ಲಿ ಕೇವಲ ಪೋಸ್ಟ್ ಹರಿಬಿಟ್ಟರೆ ಸಮಸ್ಯೆ ಬಗೆಹರಿಯುವುದಿಲ್ಲ.

ಅನುಪಮಾ, ಶಿರಿಯಾರ

ಶಾಲಾಮಕ್ಕಳಲ್ಲಿ ಮೌಲ್ಯ ಬಿತ್ತಿ

ಇತ್ತೀಚಿನ ದಿನಗಳಲ್ಲಿ ಯುವಪೀಳಿಗೆ ಮೋಜಿನ ಬೆನ್ನು ಹತ್ತಿ, ಗಂಭೀರ ಸ್ವರೂಪದ ವ್ಯಸನಗಳಿಗೆ ತುತ್ತಾಗುತ್ತಿರುವುದು ವಿಷಾದನೀಯ. ಹದಿಹರೆಯದ ವಿದ್ಯಾರ್ಥಿಗಳು ಮೌಲ್ಯಗಳ ಬಗ್ಗೆ ಅರಿವಿಲ್ಲದೆ ಅನೇಕ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಪ್ರಸ್ತುತ ವಿದ್ಯಾರ್ಥಿಗಳಿಗೆ ಪೋಕ್ಸೊ ಕಾಯ್ದೆ, ನೈತಿಕತೆ, ಮಾದಕ ವಸ್ತುಗಳ ಸೇವನೆಯಿಂದಾಗುವ ಅಪಾಯ, ಪರೀಕ್ಷಾ ಭಯ, ಇತ್ಯಾದಿ ವಿಷಯಗಳ ಬಗ್ಗೆ ಅರಿವು ಮೂಡಿಸಬೇಕಿದೆ. ಶಿಕ್ಷಕರಿಗೆ ತರಬೇತಿ ನೀಡುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡುವುದು ನಮ್ಮೆಲ್ಲರ ಕರ್ತವ್ಯ. ಸರ್ಕಾರ ಹಾಗೂ ಶಿಕ್ಷಣ ಇಲಾಖೆಯು ಇತ್ತ ಗಮನಹರಿಸಿ ಎಚ್ಚೆತ್ತುಕೊಳ್ಳುವ ಅಗತ್ಯವಿದೆ.

ಎಚ್.ಎಸ್.ಟಿ. ಸ್ವಾಮಿ, ಚಿತ್ರದುರ್ಗ

ಮೌಢ್ಯತೆಗೆ ಕೊನೆ ಇಲ್ಲವೇ?

ಮಂಡ್ಯ ತಾಲ್ಲೂಕಿನ ಆಲಕೆರೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಮೊಟ್ಟೆ ನೀಡುವುದನ್ನು ವಿರೋಧಿಸಿದ ಪೋಷಕರು, ಮಕ್ಕಳ ವರ್ಗಾವಣೆ ಪತ್ರ ಪಡೆದಿದ್ದಾರೆ (ಪ್ರ.ವಾ., ಆಗಸ್ಟ್ 14). ಶಾಲೆಯ ಹತ್ತಿರ ದೇವಸ್ಥಾನ ಇರುವುದರಿಂದ ನಮ್ಮ ಆಚಾರ ವಿಚಾರಕ್ಕೆ ಧಕ್ಕೆಯಾಗಲಿದೆ ಎನ್ನುವುದು ಅವರ ವಾದ. ಮಕ್ಕಳ ಆರೋಗ್ಯಕ್ಕಿಂತ ಧಾರ್ಮಿಕ ಆಚಾರವೇ ಮುಖ್ಯವಾಗಿರುವ ಇಂಥ ಧೋರಣೆಗೆ ಏನು ಹೇಳಬೇಕೆಂದು ತಿಳಿಯದಾಗಿದೆ.

ನಂಜನಹಳ್ಳಿ ನಾರಾಯಣ, ಬೆಂಗಳೂರು

ಚುರುಮುರಿ

ಬುರುಡೆ ಉತ್ಖನನ!

● ತುರುವೇಕೆರೆ ಪ್ರಸಾದ್

ಮುಖಕ್ಕೆ ಮಾಸ್ಕ್ ಹಾಕಿಕೊಂಡು ರಸ್ತೆ ಅಗೆಸುತ್ತಿದ್ದ ವ್ಯಕ್ತಿ ಬಳಿ ಹೋಗಿ ಪರ್ಮೇಶಿ ಕೇಳಿದ, ‘ಏನ್ರಪ್ಪಾ ಅಗೀತಿದೀರಿ?’

‘ಅದು ಹಳೇ ನೀರಿನ್ ಪೈಪಿತ್ತು ಸರ್, ಒಂದು ವರ್ಷ ಆದ್ರೂ ಬಿಲ್ಲಾಗಿಲ್ಲ, ಪೈಪ್ ತೆಗೆದು ಹೋದಷ್ಟಕ್ಕೆ ಮಾರ್ಕಳಣ ಅಂತ. ಹಾಳಾದ್ದು ಪೈಪೇ ಸಿಕ್ತಿಲ್ಲ ಸರ್’.

‘ಅಲ್ಲಪ್ಪ, ಕ್ವಾಂಟಮ್ ಕಾಲದಲ್ಲಿ ನೀವ್ಯಾಕೆ ಫ್ಯಾಂಟಮ್ ತರ ಮುಸುಕು ಹಾಕ್ಕೊಂಡಿದೀರಿ?’

‘ಇವತ್ತು ಫ್ಯಾಂಟಮ್ಮು, ನಾಳೆ ಬ್ಯಾಟ್ಮನ್ನು, ನಾಡಿದ್ದು ಸೂಪರ್‌ಮ್ಯಾನ್ ಆದ್ರೇನೇ ಕಾಲ. ಇಲ್ಲ ಅಂದ್ರೆ, ದಿನಾ ಇದೇ ಕೆಲ್ಸವಾ ನಮ್ಗೆ? ಈಗಿರೋ ಗುಂಡೀಲೆ ಬಿದ್ ಸಾಯ್ತಿದೀವಿ’ ಅಂತ ಜನ ತದುಕ್ತಾರೆ ಸರ್’.

‘ಅಣ್ಣ, ಪೈಪ್ ಸಿಕ್ತಿಲ್ಲ’ ಅಂದ್ರು ಅಗೆಯೋರು.

‘ಹೌದಾ? ಈ ಗುಂಡಿಯಿಂದ ಹತ್ತಡಿ ದೂರಕ್ಕೆ ಎಲೆಕ್ಟ್ರಿಕ್ ಕೇಬಲ್ ಹಾಕಿದ್ರು... ಅದು ಸಿಕ್ರೆ ಹತ್ರದಲ್ಲೇ ಪೈಪಿರುತ್ತೆ’ ಅಂತ ರಸ್ತೆ ಇನ್ನೊಂದು ಬದಿಗೆ ಗುಂಡಿ ತೋಡುಸ್ದ.

‘ಅಣ್ಣಾವ್ರೇ, ಇಲ್ಲಿ ಎಲೆಕ್ಟ್ರಿಕ್ ಕೇಬಲ್ಲೇ ಇಲ್ವಲ್ಲ...’ ಕೆಲಸದೋರು ಕೂಗುದ್ರು.

‘ಅದೂ ಇಲ್ವಾ? ತಡಿ, ರಸ್ತೆ ಮಧ್ಯದಲ್ಲಿ ಡ್ರೈನೇಜ್ ಪೈಪ್ ಹೋಗಿರುತ್ತೆ. ಅದರಿಂದ ಮೂರು ಅಡಿ ಎಡಕ್ಕೆ ಅಗುದ್ರೆ ನಮ್ ಪೈಪ್ ಸಿಗುತ್ತೆ’ ಎಂದು ರಸ್ತೆ ಮಧ್ಯೆ ಅಗೆಸ್ದ.

‘ಅಣ್ಣ, ಅಗೆದು ಅಗೆದು ಕಣ್ಣಲ್ಲಿ ನೀರು ಬರ್ತಿದೆ. ಬಾವಿ ತೋಡಿದ್ರೆ ನೀರೇ ಬರೋದು’ ಅಂತ ಆಳಕ್ಕೆ ಅಗೆಯಕ್ ಶುರು ಹಚ್ಕಂಡ್ರು. ಕೆಲ ನಿಮಿಷದಲ್ಲೇ ಒಬ್ಬ ಕೂಗ್ದ: ‘ಅಣ್ಣ ಬುರುಡೆ ಸಿಕ್ತು’.

‘ಬುರುಡೇನಾ?’ ಗಾಬರಿಯಾದ ಪರ್ಮೇಶಿ!

‘ಹೆದರ್ಕಬೇಡಿ ಸರ್, ಎಳನೀರು ಬುರುಡೆ’ ಎಂದು ನಕ್ಕ ತೋಡುತ್ತಿದ್ದವ.

‘ಎಳನೀರು ಬುರುಡೆ ಅಂದ್ರೆ ಇದು ನೀರಾಂಬುಧಿ ಕೆರೆ ಲೇಔಟ್! ಇದಲ್ಲ ಕಣ್ರೋ, ನಾವು ನೊರಾಂಬುಧಿ ಕೆರೆ ಏರಿಯಾ ಹುಡುಕ್ಬೇಕು’ ಎಂದು ಗುಂಡಿ ಹಾಗೇ ಬಿಟ್ಟು ಹಾರೆ ಪಿಕಾಸಿ ಎತ್ತಿಕೊಂಡು ಹೊರಟರು.

ಪರ್ಮೇಶಿ ಕಣ್ ಕಣ್ ಬಿಟ್ಟ!

ಸಂಗತ

ಓದುತ್ತ ಓದುತ್ತ ಆರೋಗ್ಯಭಾಗ್ಯ!

ಜಿಮ್, ಬ್ಯೂಟಿ ಪಾರ್ಲರ್‌ಗಳು ಇಲ್ಲದ ಬಡಾವಣೆಗಳು ಅತಿ ವಿರಳ ಎನ್ನಬೇಕು. ಸಮಾಜದ ಸ್ವಾಸ್ಥ್ಯಕ್ಕೆ ಅಗತ್ಯವಾಗಿಬೇಕಾದ ಗ್ರಂಥಾಲಯಗಳು ಎಲ್ಲಿವೆ? ಎಷ್ಟಿವೆ?

● ಸತೀಶ್ ಜಿ.ಕೆ.

‘ಪ್ರತಿ ಮನೆಯಲ್ಲಿಯೂ ಸಂಜೆ ಆರರಿಂದ ಒಂಬತ್ತರವರೆಗೆ ಟಿ.ವಿ.ಯನ್ನು ಆಫ್ ಮಾಡಿಬಿಟ್ಟರೆ ಕುಟುಂಬಗಳಲ್ಲಿ ಅರ್ಧದಷ್ಟು ಸಮಸ್ಯೆಗಳು ತಾನೇತಾನಾಗಿ ಪರಿಹಾರ ಆಗುತ್ತವೆ...’ –ಗ್ರಂಥಾಲಯಗಳ ಮಹತ್ವದ ಬಗ್ಗೆ ಮಾತನಾಡುತ್ತಿದ್ದ ಹಿರಿಯರೊಬ್ಬರ ಮಾತಿನ ಸಾರವಿದು. ಅವರ ಮಾತಿನ ಮುಂದುವರಿಕೆ ಹೀಗಿದೆ:

‘ಕನ್ನಡ ನಾಡಿನ ಮನೆ ಮನೆಗಳಲ್ಲೂ ಸಂಜೆ ಹೊತ್ತು ಟಿ.ವಿ.ಗಳು ಸ್ವಿಚ್ ಆಫ್ ಆಗಿಬಿಡಬೇಕು. ಮನೆಯಲ್ಲಿ ದಿವ್ಯಮೌನವೊಂದು ಆವರಿಸಬೇಕು. ತಕ್ಕಮಟ್ಟಿನ ಆದಾಯ ಮೂಲವುಳ್ಳ ಪ್ರತಿ ಮನೆಗಳೂ ಪತ್ರಿಕೆ, ನಿಯತಕಾಲಿಕೆ, ಪುಸ್ತಕಗಳಿಗಿಷ್ಟು ಹಣವನ್ನು ಕಡ್ಡಾಯವಾಗಿ ಖರ್ಚು ಮಾಡಬೇಕು. ದೈವಾರಾಧನೆ ರೂಪದಲ್ಲಿ ಉತ್ತಮ ಸಾಹಿತ್ಯ ಗ್ರಂಥಗಳ ಓದು ಮನೆಯಲ್ಲಿ ಮೊಳಗಬೇಕು. ಮನೆಯಲ್ಲಿ ತಂದೆ–ತಾಯಿ ಸೇರಿದಂತೆ ಸಾಮಾನ್ಯವಾಗಿ ಎಲ್ಲರೂ ಕನಿಷ್ಠಮಟ್ಟದ ಶಾಲಾ ಶಿಕ್ಷಣವನ್ನಾದರೂ ಪಡೆದಿರುತ್ತಾರೆ. ಆದರೆ, ಅವರ ಓದು ಸದ್ಯದ ಸಂದರ್ಭದಲ್ಲಿ ನಿಂತಿರುತ್ತದೆ. ಓದು ಸ್ಥಗಿತಗೊಂಡಿರುವ ಕಾರಣದಿಂದಲೇ ಸಮಚಿತ್ತ, ನೆಮ್ಮದಿ, ನಿದ್ದೆ ಕಾಣೆಯಾಗಿವೆ. ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಸಿಯುತ್ತಿರುವುದಕ್ಕೂ ಸಾವಧಾನ, ಅಧ್ಯಯನ ಮತ್ತು ಧ್ಯಾನಗಳ ಅಭಾವವೇ ಕಾರಣವಾಗಿದೆ’.



ಓದಿಗೂ ಮಾನಸಿಕ ನೆಮ್ಮದಿಗೂ ಸಂಬಂಧವಿದೆ ಎನ್ನುವ ಮಾತಿನಲ್ಲಿ ಸತ್ಯವಿದೆ. ಒಮ್ಮೆ ಅಧ್ಯಯನಾಸಕ್ತಿ ಒಲಿಯಿತೆಂದರೆ, ಮನೆ ಮಂದಿಯ ಕೌಟುಂಬಿಕ ಕಲಹ, ಮುನಿಸುಗಳಿಗೆ ಔಷಧ ದೊರೆಯುತ್ತದೆ. ಇರುವುದರಲ್ಲಿ ತೃಪ್ತಿ ಹೊಂದುವ, ಆತ್ಮಸಂಯಮ ಮತ್ತು ವಿವೇಕದ ಮಾರ್ಗವು ನಿಚ್ಚಳವಾಗುತ್ತದೆ. ಸರಳ ಮತ್ತು ಸಹಜವಾದ ಬದುಕನ್ನು ಬಾಳಲು ಸಾಧ್ಯವಾಗುತ್ತದೆ. ಮೋಸದ ದುಡಿಮೆ ಹಾಗೂ ಅರ್ಥಹೀನ ಖರ್ಚನ್ನು ಮೀರುವುದು ಕೂಡ. ಮನೆಯಲ್ಲಿ ಓದಿನ ವಾತಾವರಣ ದಕ್ಕಿಸಿಕೊಡುವ ಅರಿವಿನ ಕೈದೀವಿಗೆಯಲ್ಲಿ ಕಾಲಾಂತರದ ಮೌಢ್ಯದ ಮಬ್ಬಿನಿಂದ ಪಾರಾಗುವುದೂ ಸಾಧ್ಯವಿದೆ.

ಬದುಕಿನ ಮೂಲಭೂತ ಅಗತ್ಯಗಳಾಚೆಗೆ ಭ್ರಾಂತಲೋಕವನ್ನು ಹಪಹಪಿಸುವ ಇರಾದೆ ಇವತ್ತಿನದು. ಕ್ರಿಕೆಟ್, ಸಿನಿಮಾ, ಧಾರಾವಾಹಿಗಳಿಗೆ ಮರುಳಾಗಿ ಹೆಚ್ಚಿನ ಸಂಖ್ಯೆಯ ನಾಗರಿಕರು ತಮ್ಮ ಅಮೂಲ್ಯ ಹಣ, ಸಮಯವನ್ನು ವ್ಯರ್ಥ ಮಾಡಿಕೊಳ್ಳುತ್ತಿರುವ ಬಡಭ್ರಾಂತ ದೇಶ ನಮ್ಮದು. ಸುಳ್ಳು, ಭ್ರಮೆ, ಕೃತಕತೆಯನ್ನು ಆರಾಧಿಸುವ ಮನಃಸ್ಥಿತಿಗೆ ವಾಸ್ತವ ಯಾವಾಗಲೂ ಕಹಿ. ಬದುಕಿಗೆ ಬೇಕಾದ ಮೌಲಿಕ ಸಂದೇಶವನ್ನೂ, ನೈಜ ಸಂತೋಷವನ್ನೂ ನೀಡದೆ ಕೇವಲ ಮೌಢ್ಯ, ದ್ವೇಷ, ಪೊಳ್ಳುಸಂಸ್ಕೃತಿಯನ್ನು ಉತ್ತೇಜಿಸುವ ದೃಶ್ಯಾವಳಿಗಳು ಶ್ರಮದ ದುಡಿಮೆಯನ್ನು ನಿರಾಕರಿಸುತ್ತವೆ; ಬದುಕಿನ ಸವಾಲಿಗೆ ಎದೆಗೊಡದೆ ಪಲಾಯನಗೈಯುವ ಆಲಸ್ಯ ಮಾರ್ಗವನ್ನು ಉತ್ತೇಜಿಸುತ್ತವೆ ಹಾಗೂ ಸಭ್ಯ ಬದುಕನ್ನೂ ವಿಡಂಬಿಸುತ್ತವೆ.

ಮನುಷ್ಯನದು, ಬದುಕನ್ನು ಸಮೃದ್ಧಗೊಳಿಸಿಕೊಳ್ಳುವ ಪ್ರಯತ್ನಗಳಿಗಿಂತ ಪುಕ್ಕಟೆ ಗೊಂದಲಗಳಲ್ಲಿ ಸಿಲುಕಿ ಹೊರಳಾಡಲು ಹಂಬಲಿಸುವ ವಿಕ್ಷಿಪ್ತ ಮಾನಸಿಕತೆ! ಅರಿವು–ಅನುಭವ, ಪರಿಶ್ರಮದ ಧ್ಯಾನಕ್ಕಿಂತ ಆಲಸ್ಯ, ಆಡಂಬರದ ಆಚರಣೆಗಳಿಗೆ ಹೆಚ್ಚು ಗಮನ. ಸಹಜ ಸುಖವನ್ನು ಮರೆತು ಯಾಂತ್ರಿಕ ಸುಖದೆಡೆಗೆ ನಿತ್ಯ ತುಡಿತ. ಸತ್ಯ– ಪ್ರಾಮಾಣಿಕತೆ ಎನ್ನುವ ನಿಜಮೌಲ್ಯಗಳು ಮರೆಯಾಗಿ ಸುಳ್ಳು, ಮೋಸ, ವಂಚನೆಗಳದೇ ಮೆರೆದಾಟ.

ಕೆಲವು ಹಿರಿಯರಿಗೆ ಓದು ಎನ್ನುವುದು ಬ್ಯಾಂಕ್ ಪಾಸ್ ಬುಕ್‌ನ ಓದಾಗಿದ್ದರೆ, ಎಳೆಯರು ಸಾಮಾಜಿಕ ಮಾಧ್ಯಮಗಳಲ್ಲಿ ತೊಡಗಿಸಿಕೊಳ್ಳುವುದನ್ನು ಓದು ಎಂದುಕೊಂಡಿರುವುದಿದೆ. ಹಿರಿಯರು ಟಿ.ವಿ.ಗಳಿಗೆ ಆತು ಕೂತರೆ, ಮಕ್ಕಳ ಮನಸು ರೀಲ್ಸ್‌ಗಳಲ್ಲಿ ಜಾರುತ್ತಿರುತ್ತದೆ. ಪೋಷಕರು ಹಣ, ಆಸ್ತಿ, ಅಧಿಕಾರಗಳ ಹಿಂದೆ ಓಡುವಾಗ, ಮಕ್ಕಳು ಮೊಬೈಲ್‌ಗಳಿಗೆ ತಮ್ಮನ್ನು ಒಪ್ಪಿಸಿಕೊಳ್ಳುತ್ತಿದ್ದಾರೆ. ಈ ವಿರೋಧಾಭಾಸದ ಬದುಕಿನಲ್ಲಿ ಅರಿವಿನ ಬೆಳಕು ಬಲುದೂರ. ಸುಳ್ಳುಗಳು ಸುಂದರ. ವಾಸ್ತವವೇ ಬೇಸರ.

ಸಮಾಜದಲ್ಲಿ ನೈತಿಕ ಮೌಲ್ಯಗಳು ಅಧಃಪತನಕ್ಕೆ ಇಳಿಯುತ್ತಿರುವ ಮತ್ತು ಸಾಮಾಜಿಕ ಸ್ವಾಸ್ಥ್ಯ ಹದಗೆಡುತ್ತಿರುವ ಇವತ್ತಿನ ದುರಿತ ಕಾಲಘಟ್ಟದಲ್ಲಿ, ಭವಿಷ್ಯದ ಭರವಸೆಯಾದ ಮಕ್ಕಳಲ್ಲಿ ಮೌಲ್ಯ ಬಿತ್ತನೆ ಜರೂರಾಗಿ ಆಗಬೇಕು. ಹಣಕ್ಕೆ ಇನ್ನಿಲ್ಲದ ಆದ್ಯತೆ ನೀಡುವ ಸಮಾಜವು ಮೌಲ್ಯಮರೆತ ಆತ್ಮಘಾತುಕ ಸಮಾಜ ಎನ್ನಿಸಿಕೊಳ್ಳುತ್ತದೆ; ಜೀವವಿರೋಧಿ ಆಗುತ್ತದೆ. ಇಂತಹ ರೋಗಕಾರಕ ಸ್ಥಿತಿಗೆ ಚಿಕಿತ್ಸೆಯ ರೂಪದಲ್ಲಿ ಒದಗಬೇಕಾದುದು ಮೌಲ್ಯ ಶಿಕ್ಷಣ. ಅದು ಕೇವಲ ಪಠ್ಯ ಶಿಕ್ಷಣ ಮಾತ್ರವಾಗಲಾರದು. ಮಕ್ಕಳೆದುರು ಸುಖ–ಸಂಪತ್ತುಗಳ ಬಗೆಗಿನ ವ್ಯಾಮೋಹ ಮತ್ತು ಜಾತಿ– ಧರ್ಮಗಳ ಬಗೆಗಿನ ಮಮಕಾರವನ್ನು ತೋರಗೊಡದಂತೆ ಜಾಗೃತಿ ವಹಿಸಬೇಕು. ಎಳೆಯರೆದುರು ಅರಿವು, ಪರಿಶ್ರಮ, ಮಾನವೀಯ ಕಾಳಜಿಯ ವ್ಯಾಖ್ಯಾನಗಳು ಗೋಚರಿಸಬೇಕು.

ಬಂಧು–ಮಿತ್ರರ ಕುಟುಂಬವನ್ನು ಮನೆಗೆ ಆಹ್ವಾನಿಸುವ ಮತ್ತು ಅವರಲ್ಲಿಗೆ ಕುಟುಂಬ ಸಮೇತರಾಗಿ ಹೋಗಿ ಕಾಲಕಳೆಯುವ ಪರಿಪಾಟ ಹೆಚ್ಚಬೇಕು. ಗದ್ದೆ–ತೋಟ, ಕಾಡು–ಕಣಿವೆಗಳಲ್ಲಿ ವಿಹರಿಸುವ ಹವ್ಯಾಸವನ್ನು ರೂಢಿಸಿಕೊಳ್ಳುವುದು ಉತ್ತಮ. ಸಮಾಜದಲ್ಲಿ ಹಣಗಳಿಸಿದವರಿಗಿಂತ ಜ್ಞಾನಾರ್ಜನೆಯುಳ್ಳವರನ್ನು ಆದರ್ಶವಾಗಿ ಮಕ್ಕಳಿಗೆ ಪರಿಚಯಿಸುವುದು ಮುಖ್ಯ.

ಶಾಲೆಗಳಲ್ಲಿ ನೈತಿಕ ಮೌಲ್ಯಗಳಿಗೆ ಸಂಬಂಧಿಸಿದ ಪಠ್ಯವು ವಿಜ್ಞಾನ– ಗಣಿತದಂತೆ ಕಡ್ಡಾಯಗೊಳ್ಳಬೇಕು. ಮಕ್ಕಳಿಗೆ ಪಾಠ– ಅಭ್ಯಾಸಗಳ ನಡುವೆ ಮನೆಗೆಲಸ, ಸಾಹಿತ್ಯ, ಸಂಗೀತ, ಕ್ರೀಡೆಯಂತಹ ಸಹಪಠ್ಯ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸಬೇಕು. ಸಾರ್ವಜನಿಕರಲ್ಲಿಯೂ ಮಂದಿರ, ಮಸೀದಿ, ಇಗರ್ಜಿಗಳನ್ನು ಸುತ್ತುವುದಕ್ಕಿಂತ ಗ್ರಂಥಾಲಯದಲ್ಲಿ ಕೂತು ಅಭ್ಯಸಿಸುವ ಪ್ರವೃತ್ತಿ ಹೆಚ್ಚಬೇಕು. ಜಿಮ್, ಬ್ಯೂಟಿ ಪಾರ್ಲರ್‌ಗಳಿಗಿಂತ ಗ್ರಂಥಾಲಯದ ಆಕರ್ಷಣೆ ಹೆಚ್ಚಬೇಕು. ಇದು ಸಾಧ್ಯವಾದಲ್ಲಿ, ನಮ್ಮ ನಾಳೆಗೊಂದು ಸಹ್ಯ ಬದುಕು ಉಳಿಯುವಂತಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೀದಿ ನಾಯಿಗಳಿಂದ ಜನರಿಗೆ ಯಾವ ರೀತಿಯ ಅಪಾಯವಿದೆ? ಅದಕ್ಕೆ ಹೊಣೆ ಯಾರು? ಈ ಕುರಿತು ಎರಡು ಅಭಿಪ್ರಾಯಗಳು

ಬೀದಿ ನಾಯಿಗಳೂ ಹುಸಿ ಅನುಕಂಪವೂ

• ಪ್ರೊ.ಎಂ.ಜಿ.ಚಂದ್ರಶೇಖರಯ್ಯ



ರೇಬಿಸ್ ತಗುಲಿ ಉತ್ತರ ಪ್ರದೇಶದ ಕಬಡ್ಡಿ ಆಟಗಾರ ಬ್ರಿಜೇಶ್ ಸೋಲಂಕಿ ಇದೇ ಜುಲೈ ಮೊದಲ ವಾರದಲ್ಲಿ ಸಾವಿಗೀಡಾದರು. ಕೊನೆಗಾಲದಲ್ಲಿ ಅವರು ನರಳುವ ವಿಡಿಯೊ ಎದೆ ನಡುಗಿಸುವಂತಿತ್ತು. ಚರಂಡಿಯಲ್ಲಿ ಬಿದ್ದಿದ್ದ ನಾಯಿಮರಿಯನ್ನು ರಕ್ಷಿಸಲು ಹೋದಾಗ ಅವರಿಗೆ ಅದು ಕಚ್ಚಿತ್ತು. ರಾಜ್ಯ ಮಟ್ಟದ ಆಟಗಾರರಾಗಿ, ಬಂಗಾರದ ಪದಕ ಗೆದ್ದಿದ್ದ ಅವರ ಜೀವನ ನಾಯಿಯಿಂದಾಗಿ ದಾರುಣ ಅಂತ್ಯಕಂಡಿತ್ತು. ರಾಷ್ಟ್ರ ಮಟ್ಟದ ಪ್ಯಾರಾ ಅಥ್ಲೀಟ್, ಒಡಿಶಾದ ಜೋಗೇಂದ್ರ ಛಾತ್ರಿಯಾ ಅವರು ನಾಯಿ ಕಚ್ಚಿದ್ದರಿಂದ ರೇಬಿಸ್‌ಗೆ ಗುರಿಯಾಗಿ ಆಗಸ್ಟ್ 10ರಂದು ಸಾವಿಗೀಡಾಗಿದ್ದಾರೆ.

ಬೆಂಗಳೂರಿನ ಕೊಡಿಗೇಹಳ್ಳಿಯಲ್ಲಿ ಕೆಲವೇ ದಿನಗಳ ಹಿಂದೆ ನಾಯಿಗಳು ಕಚ್ಚಿ ವೃದ್ಧರೊಬ್ಬರು ಅಸುನೀಗಿದ ಘಟನೆ ನಡೆದಿದೆ. ಇವು ಕೇವಲ ಉದಾಹರಣೆ ಅಷ್ಟೆ; ಶಾಲೆಗಳಿಂದ ಮನೆಗೆ ಹಿಂದಿರುಗುವ ಮಕ್ಕಳು, ರಾತ್ರಿ ಹೊತ್ತು ಕೆಲಸ ಮುಗಿಸಿ ಮನೆಗೆ ನಡೆದು ಹೋಗುವ ಜನರು ಪ್ರತಿ ತಿಂಗಳು ರಾಜ್ಯದಲ್ಲಿ ಬೀದಿನಾಯಿಗಳ ದಾಳಿಗೆ ತುತ್ತಾಗುತ್ತಲೇ ಇದ್ದಾರೆ.

ಅಂಕಿಅಂಶಗಳ ಪ್ರಕಾರ, 2025ರ ಜೂನ್ ತಿಂಗಳವರೆಗೆ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ 13 ಸಾವಿರಕ್ಕಿಂತ ಹೆಚ್ಚು ಜನರು ಮತ್ತು ರಾಜ್ಯದಲ್ಲಿ 2.80 ಲಕ್ಷ ಜನರು ನಾಯಿ ಕಡಿತಕ್ಕೆ ಒಳಗಾಗಿದ್ದಾರೆ. ನಾಯಿ ಕಡಿತದಿಂದ ಸತ್ತವರು ಹಲವರಾದರೆ, ಅವುಗಳ ದಾಳಿಯಿಂದ ತಪ್ಪಿಸಿಕೊಳ್ಳಲು ಹೋಗಿ ದ್ವಿಚಕ್ರ ವಾಹನಗಳಿಂದ ಬಿದ್ದು ಸಾವಿರಾರು ಜನ ಗಾಯಗೊಂಡಿದ್ದಾರೆ. ಈ ವರ್ಷದ ಮೊದಲ ಆರು ತಿಂಗಳಲ್ಲಿ ಕಳೆದ ವರ್ಷಗಳಿಗಿಂತ ಶೇ 37ರಷ್ಟು ಅಧಿಕ ನಾಯಿ ಕಡಿತ ಪ್ರಕರಣಗಳು ವರದಿಯಾಗಿವೆ. ಇವು ವರದಿಯಾಗಿರುವ ಪ್ರಕರಣಗಳು. ದಾಖಲೆಗೆ ಸಿಗದ ಪ್ರಕರಣಗಳು ಇನ್ನೂ ಅದೆಷ್ಟಿವೆಯೋ! 2024ರಲ್ಲಿ 3.6 ಲಕ್ಷ ಜನರು ಬೀದಿನಾಯಿಗಳ ದಾಳಿಗೆ ತುತ್ತಾಗಿದ್ದರು.

> ಅಪರರಾತ್ರಿಯಲ್ಲಿ, ನಸುಕಿನಲ್ಲಿ ಓಡಾಡುವ ವಿದ್ಯಾರ್ಥಿಗಳು, ದುಡಿಯುವ ವರ್ಗದವರೇ ಬೀದಿ ನಾಯಿಗಳ ಕಡಿತಕ್ಕೆ ಹೆಚ್ಚು ಒಳಗಾಗುತ್ತಿದ್ದಾರೆ. ಬೈಕ್, ಕಾರು ಇಲ್ಲದೇ ನಡೆದೇ ಸಾಗುವ ಬಡವರು ಈ ಪೈಕಿ ಹೆಚ್ಚಿದ್ದಾರೆ. ಮಕ್ಕಳು, ಮಹಿಳೆಯರು, ವೃದ್ಧರ ಮೇಲೆ ನಾಯಿಗಳ ಆಕ್ರಮಣದ ವಿಡಿಯೊಗಳನ್ನು, ರೇಬಿಸ್‌ನಿಂದ ನರಳಿ ಸಾಯುವವರನ್ನು ನೋಡಿದರೆ ಆತಂಕವಾಗುತ್ತದೆ. ಕೂಲಿನಾಲಿ ಮಾಡಿ ಜೀವನ ಕಟ್ಟಿಕೊಳ್ಳುತ್ತಿರುವ ಬಡವರು ಕೆಲಸ ಬಿಟ್ಟು ಆಸ್ಪತ್ರೆಗೆ ತಿರುಗುವಂತಾಗಿದೆ. ನಾಯಿ ಕಡಿತ ನಮ್ಮ ರಾಜ್ಯದ ಎಷ್ಟೋ ಸಾಂಕ್ರಾಮಿಕ ರೋಗಗಳಿಗಿಂತ ಅಧಿಕ ಪ್ರಮಾಣದಲ್ಲಿ ಜನರನ್ನು ಬಾಧಿಸುತ್ತಿರುವುದು ನಮ್ಮ ಕಣ್ಣು ತೆರೆಸಬೇಕಿದೆ

ಅಪರರಾತ್ರಿಯಲ್ಲಿ, ನಸುಕಿನಲ್ಲಿ ಓಡಾಡುವ ವಿದ್ಯಾರ್ಥಿಗಳು, ದುಡಿಯುವ ವರ್ಗದವರೇ ಬೀದಿ ನಾಯಿಗಳ ಕಡಿತಕ್ಕೆ ಹೆಚ್ಚು ಒಳಗಾಗುತ್ತಿದ್ದಾರೆ. ಬೈಕ್, ಕಾರು ಇಲ್ಲದೇ ನಡೆದೇ ಸಾಗುವ ಬಡವರು ಈ ಪೈಕಿ ಹೆಚ್ಚಿದ್ದಾರೆ. ಮಕ್ಕಳು, ಮಹಿಳೆಯರು, ವೃದ್ಧರ ಮೇಲೆ ನಾಯಿಗಳು ಆಕ್ರಮಣ ಮಾಡುವ ವಿಡಿಯೊಗಳನ್ನು, ರೇಬಿಸ್‌ನಿಂದ ನರಳಿ ಸಾಯುವವರನ್ನು ನೋಡಿದರೆ ಆತಂಕವಾಗುತ್ತದೆ. ಕೂಲಿನಾಲಿ ಮಾಡಿ ಜೀವನ ಕಟ್ಟಿಕೊಳ್ಳುತ್ತಿರುವ ಬಡವರು ಕೆಲಸ ಬಿಟ್ಟು ಆಸ್ಪತ್ರೆಗೆ ತಿರುಗುವಂತಾಗಿದೆ. ನಾಯಿ ಕಡಿತ ರಾಜ್ಯದ ಎಷ್ಟೋ ಸಾಂಕ್ರಾಮಿಕ ರೋಗಗಳಿಗಿಂತ ಅಧಿಕ ಪ್ರಮಾಣದಲ್ಲಿ ಜನರನ್ನು ಬಾಧಿಸುತ್ತಿರುವುದು ನಮ್ಮ ಕಣ್ಣು ತೆರೆಸಬೇಕಿದೆ.

ಸರ್ಕಾರ ಎಷ್ಟೇ ಹೇಳಿಕೊಂಡರೂ ಹೋಬಳಿ, ತಾಲ್ಲೂಕು, ಜಿಲ್ಲಾ ಮಟ್ಟದ ಆರೋಗ್ಯ ಕೇಂದ್ರಗಳಲ್ಲಿ ಬಹುತೇಕ ಸಂದರ್ಭಗಳಲ್ಲಿ ನಾಯಿ ಕಡಿತಕ್ಕೆ ನೀಡುವ ಚುಚ್ಚುಮದ್ದು ದೊರೆಯುವುದಿಲ್ಲ. ಖಾಸಗಿ ಆಸ್ಪತ್ರೆಗಳಿಗೆ ದುಬಾರಿ ಹಣ ತೆತ್ತು ಚಿಕಿತ್ಸೆ ಪಡೆಯಬೇಕು, ಇಲ್ಲವೇ ರೇಬಿಸ್ ರೋಗಕ್ಕೆ ಬಲಿಯಾಗಬೇಕು ಎನ್ನುವಂತಾಗಿದೆ ಜನರ ಸ್ಥಿತಿ.

ಕೆಲವು ಬೀದಿ ನಾಯಿಗಳು ರಸ್ತೆಯಲ್ಲಿ ಓಡಾಡುವವರ ಮೇಲೆ ಅಪ್ರಚೋದಿತವಾಗಿ ದಾಳಿ ಮಾಡುತ್ತವೆ. ಅವು ಹುಚ್ಚು ನಾಯಿ ಆಗಿದ್ದರೆ, ಅಪಾಯ ಕಟ್ಟಿಟ್ಟ ಬುತ್ತಿ. ಬೀದಿಗಳಲ್ಲಿ ಓಡಾಡಿಕೊಂಡಿರುವ ನಾಯಿಗಳ ಪೈಕಿ ಯಾವುದು ಹುಚ್ಚು ನಾಯಿ, ಯಾವುದು ಅಪ್ರಚೋದಿತವಾಗಿ ಎರಗುವ ಸ್ವಭಾವದ ನಾಯಿ ಎನ್ನುವುದನ್ನು ಕಂಡುಕೊಳ್ಳುವುದಾದರೂ ಹೇಗೆ? ನಾಯಿಗಳು ಭೂಮಿ ಮೇಲೆ ಇರಲೇಬಾರದು ಎಂದು ಯಾರೂ ಹೇಳುತ್ತಿಲ್ಲ. ಅವು ನಿಗದಿಪಡಿಸಲಾದ ಜಾಗದಲ್ಲಿರಲಿ ಎನ್ನುವುದಷ್ಟೇ ಕಾಳಜಿ.

ಇಷ್ಟಕ್ಕೂ, ನಾಯಿಗಳು ತಮ್ಮ ಬದುಕಿನ ಭಾಗ ಎಂದು ಭಾವಿಸುವವರಿಗೆ ಮನೆಯಲ್ಲಿ ನಾಯಿಗಳನ್ನು ಸಾಕಲು ಯಾರ ಅಡ್ಡಿ, ಅಭ್ಯಂತರವೂ ಇಲ್ಲ. ಆದರೆ, ಹಾಗೆ ನಾಯಿ ಸಾಕಿದವರೂ ಕೂಡ ಅನೇಕ ಬಾರಿ ಸಾರ್ವಜನಿಕ ಸ್ಥಳಗಳಲ್ಲಿ ಅವುಗಳ ಕಕ್ಕ ಮಾಡಿಸಿ ಗಲೀಜು ಮಾಡುವುದು, ಗದ್ದಲದಿಂದ ಅಕ್ಕಪಕ್ಕದ ಮನೆಗಳವರಿಗೆ ಕಿರಿಕಿರಿ ಮಾಡುವುದು, ಅದರಿಂದ ಜಗಳಗಳು ನಡೆದು ಪೊಲೀಸ್ ಠಾಣೆ ಮೆಟ್ಟಿಲೇರುವುದು ನಡೆದೇ ಇದೆ. ನಾಯಿ ಸಾಕಲಿ, ಏನೇ ಮಾಡಲಿ, ಬೇರೊಬ್ಬರಿಗೆ ತೊಂದರೆ ಕೊಡಬಾರದು ಎನ್ನುವುದು ಮನುಷ್ಯರೆಲ್ಲರೂ ಅರಿತಿರಬೇಕಾದ ಮೂಲಭೂತ ವಿಚಾರ.

ನಮ್ಮ ಸಮಾಜ ಪ್ರತಿಷ್ಠೆ ಬೆಳೆಸಿಕೊಳ್ಳುತ್ತಿದೆ, ಆದರೆ ಮಾನವೀಯತೆಯನ್ನು ಮರೆತಿದೆ. ಮಗುವಿಗೆ ಪಕ್ಕದ ಮನೆಯ ಸಾಕಿದ ನಾಯಿ ಕಚ್ಚಿ ₹80 ಸಾವಿರ ಖರ್ಚು ಮಾಡಬೇಕಾಗಿ ಬಂದದ್ದರ ಬಗ್ಗೆ ವರದಿಯಾಗಿದೆ. ಸಾಕಿದ ನಾಯಿಗಳ ದಾಳಿಗೆ ಒಳಗಾದ ವ್ಯಕ್ತಿಯ ಮನೆಯವರು ನಾಯಿಯ ಮಾಲೀಕರನ್ನು ಪ್ರಶ್ನೆ ಮಾಡಿದ್ದಕ್ಕೆ ಅವರ ಮೇಲೆ ಹಲ್ಲೆ ಮಾಡಿದ ಪ್ರಸಂಗವೂ ನಡೆದಿದೆ. ಇದೇ ವಿಚಾರಕ್ಕೆ ಕೊಲೆಗಲೂ ನಡೆದಿವೆ. ಹೀಗೆ ಜನರಿಗೆ ಉಪದ್ರವ ನೀಡುವ ಮೂಲಕ ನಾಗರಿಕ ಪ್ರಜ್ಞೆ ಮರೆಯಲಾಗುತ್ತಿದೆ.

ಬೀದಿನಾಯಿಗಳ ಸಂತಾನಶಕ್ತಿ ಹರಣ, ಲಸಿಕೆ ನೀಡಿಕೆ ಇತ್ಯಾದಿ ಕಾರ್ಯಕ್ರಮಗಳು ಇಲ್ಲಿಯವರೆಗೆ ಖಂಡಿತವಾಗಿಯೂ ಯಶಸ್ಸು ಕಂಡಿಲ್ಲ. ಅದರ ಹೆಸರಿನಲ್ಲಿ ಕೆಲವು ಸ್ವಯಂಸೇವಾ ಸಂಸ್ಥೆಗಳು, ಅಧಿಕಾರಿಗಳು ಹಣ ಕೊಳ್ಳೆ ಹೊಡೆದಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಬೀದಿನಾಯಿಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಅಂಕಿಅಂಶಗಳು ಹೇಳಿದರೂ ಬೀದಿನಾಯಿಗಳ ಕಡಿತಕ್ಕೆ ಒಳಗಾದವರ ಸಂಖ್ಯೆ ಪ್ರತಿವರ್ಷ ಗಮನಾರ್ಹವಾಗಿ ಹೆಚ್ಚುತ್ತಲೇ ಇದೆ.

ಬುದ್ಧನ ಮಾತೊಂದಿದೆ: ಬಾಣ ಮೂಲ ವಾದ, ಬಾಣ ಪರಿಣಾಮ ವಾದ- ಇವುಗಳಲ್ಲಿ ಆದ್ಯತೆ ಯಾವುದಕ್ಕೆ? ಕಚ್ಚಿಸಿಕೊಂಡ ಮನುಷ್ಯನಿಗಿಂತ ಕಚ್ಚಿದ ನಾಯಿ ಬಗ್ಗೆಯೇ ಹೆಚ್ಚು ಗಮನ ಹರಿಸಲಾಗುತ್ತಿದೆ. ಬೀದಿ ನಾಯಿಗಳು ಕಚ್ಚಿದರೆ, ಅದಕ್ಕೆ ಯಾರನ್ನು ಹೊಣೆ ಮಾಡುವುದು? ಜನರಿಗೆ ಕಚ್ಚಿದರೂ ಪರವಾಗಿಲ್ಲ, ಬೀದಿಯಲ್ಲಿ ನಾಯಿಗಳಿರಬೇಕು ಎನ್ನುವುದು ಸರಿ ಅಲ್ಲ. ಯಾರೋ ಕೆಲವರು ಅವಿವೇಕಿಗಳು, ಕ್ರೂರಿಗಳು ಬೀದಿನಾಯಿಗಳ ಮೇಲೆ ಕಾರು ಹತ್ತಿಸಿದರು, ಕೊಂದರು ಎಂಬ ವಿಷಯ ಬ್ರೇಕಿಂಗ್ ನ್ಯೂಸ್ ಆಗುತ್ತದೆ. ಆದರೆ, ನಾಯಿ ಕಡಿತದಿಂದ ಗಾಸಿಗೊಂಡವರಿಗೆ ಯಾರೊಬ್ಬರೂ ಯಾವುದೇ ರೀತಿಯ ನೆರವು ನೀಡುವುದಿಲ್ಲ. ಇಲ್ಲಿ ಮನುಷ್ಯರ ಪಾಡು ನಾಯಿಗಳಿಗಿಂತಲೂ ಕಡೆಯಾಗಿದೆ ಎನ್ನುವುದು ವಿಪರ್ಯಾಸ.

ವರ್ಷ ವರ್ಷ ಬೀದಿನಾಯಿಗಳಿಂದ ದಾಳಿಗೆ ಒಳಗಾಗುತ್ತಿರುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ ಸರ್ಕಾರ ಎಚ್ಚೆತ್ತುಕೊಂಡು ಅವುಗಳ ಹಾವಳಿ ತಡೆಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ದೆಹಲಿಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಸೂಕ್ತವಾಗಿಯೇ ಇದೆ. ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಅಗತ್ಯವಿರುವೆಡೆಯಲ್ಲಿ ಅದೇ ರೀತಿ ಬೀದಿ ನಾಯಿಗಳಿಗೆ ಪ್ರತ್ಯೇಕ ವಾಸಸ್ಥಳಗಳನ್ನು ನಿಗದಿಪಡಿಸಬೇಕು. ಕ್ರಮೇಣ ಅವುಗಳ ಸಂಖ್ಯೆ ಇಳಿಮುಖ ಆಗುವಂತಹ ಉಪಕ್ರಮಗಳನ್ನು ಕೈಗೊಳ್ಳಬೇಕು.

ಅದಕ್ಕೆ ವಿರುದ್ಧವಾಗಿ, ಬಿಬಿಎಂಪಿಯು ತನ್ನ ವ್ಯಾಪ್ತಿಯಲ್ಲಿರುವ ನಾಯಿಗಳಿಗೆ ಕೋಳಿ ಮಾಂಸ ಪೂರೈಸಲು ಹಾಕಿಕೊಂಡಿರುವ ಹತ್ತಾರು ಕೋಟಿ ರೂಪಾಯಿಗಳ ಅವಿವೇಕದ ಯೋಜನೆಯನ್ನು ತಕ್ಷಣವೇ ರದ್ದುಪಡಿಸಬೇಕು. ಇಂತಹ ಅನಾಹುತಕಾರಿ ನಡೆಗಳು ಜನರ ಕಷ್ಟವನ್ನು ಹೆಚ್ಚಿಸುತ್ತವೆ ಎಂಬುದನ್ನು ಮರೆಯಬಾರದು.

ಲೇಖಕ: ನಿವೃತ್ತ ಪ್ರಾಧ್ಯಾಪಕ

ಸೆಲೆಬ್ರಿಟಿಗಳ ನಾಯಿಪ್ರೀತಿ

ಒಂದು ಕಡೆ ಕೆಲವು ಸ್ವಯಂ ಸೇವಾ ಸಂಸ್ಥೆಗಳ ಹುಸಿ ಅನುಕಂಪ, ಪ್ರಾಣಿ ದಯಾಸಂಘಗಳ ಬಾಯಿ ಬೊಬ್ಬೆ; ಇನ್ನೊಂದು ಕಡೆ ನಟನಟಿಯರು, ಶ್ರೀಮಂತರು, 'ಸೆಲೆಬ್ರಿಟಿಗಳ' ಬಡಿವಾರದ ಹುಸಿ ನಾಯಿಪ್ರೀತಿ. ಇವರ ತೋರಿಕೆಯ ಪ್ರಾಣಿಪ್ರೀತಿಯಿಂದಾಗಿ, ಮನುಷ್ಯರ ಮೇಲೆ ದಾಳಿ ಮಾಡುವ ಆಕ್ರಮಣಕಾರಿ ನಾಯಿಗಳನ್ನು ನಿಯಂತ್ರಿಸುವುದಕ್ಕೆ ಸರ್ಕಾರಗಳು ಹಿಂದೇಟು ಹಾಕುತ್ತಿವೆ. ಇಂತಹ ಜನರ ತೋರಿಕೆಯ ಬಾಯುಪಚಾರಕ್ಕಿಂತ ನಮ್ಮ ಸಾಮಾನ್ಯ ಜನರ ಪ್ರಾಣಿಪ್ರೀತಿ ದೊಡ್ಡದು.

ಈ ಬೊಬ್ಬೆ ಹೊಡೆಯುವ, ಹುಸಿ ಪ್ರಾಣಿಪ್ರೀತಿಯ ಕೆಲವೇ ಜನರಿಂದ ಸಾವಿರಾರು ಮಂದಿ ನಾಯಿ ಕಡಿತಕ್ಕೆ ಒಳಗಾಗುತ್ತಿದ್ದಾರೆ. ಎಂದೆಂದೂ ಬೀದಿಯಲ್ಲಿ ನಡೆದುಹೋಗದ, ಬಡವರ ಕಷ್ಟ ಗೊತ್ತಿರದ, ಸಾಮಾನ್ಯ ಜನರ ಬದುಕು ಹೇಗಿದೆ ಎಂದು ಇಣುಕಿಯೂ ನೋಡದ ಜನ ಬೀದಿ ನಾಯಿಗಳ ಬಗ್ಗೆ ಪ್ರೀತಿ ತೋರುವುದು ಹಾಸ್ಯಾಸ್ಪದ. ನಾಯಿ ಕಡಿತಕ್ಕೆ ಒಳಗಾದ ಮನುಷ್ಯರ ಬಗ್ಗೆ ಕಾಳಜಿ ಮಾಡದೆ, ಕಚ್ಚುವ ನಾಯಿಗಳ ಬಗ್ಗೆ ದಯೆ ತೋರುವುದನ್ನು ಮಾನವೀಯತೆ ಎನ್ನಲಾಗದು.

ಒಟ್ಟಿಗೆ ಬಾಳಿದರೆ ಅಪಾಯ ಕಡಿಮೆ

• ಸಾಧನಾ ಹೆಗ್ಡೆ

ಭಾರತದಲ್ಲಿ ರೈತರು ತಮ್ಮ ಸಂಪೂರ್ಣ ಸಮಯವನ್ನು ಪ್ರಕೃತಿಯೊಂದಿಗೆ ಕಳೆಯುತ್ತಾ, ಕಾಡುಪ್ರಾಣಿಗಳು, ಹಾವುಗಳು, ವಿಷಯುಕ್ತ ರಾಸಾಯನಿಕಗಳು ಮತ್ತು ಬರದೊಂದಿಗೆ ಸೆಣಸುತ್ತಾ ನಮಗೆ ಆಹಾರಪದಾರ್ಥಗಳನ್ನು ಪೂರೈಸುತ್ತಿದ್ದಾರೆ. 'ದಿ ಗಾರ್ಡಿಯನ್' ವರದಿ ಪ್ರಕಾರ, 1800ರಿಂದ ಇದುವರೆಗೆ ಪ್ರಕೃತಿಯೊಂದಿಗಿನ ಜನರ ನಂಟು ಶೇ 60ರಷ್ಟು ಕುಸಿದಿದೆ. ಪ್ರಕೃತಿಗೆ ಸಂಬಂಧಿಸಿದ ನದಿ, ಪಾಚಿ, ಹೂವು ಅರಳುವುದು ಮುಂತಾದ ಪದಗಳು ಇಂದು ಪುಸ್ತಕಗಳಿಂದ ಕಣ್ಮರೆಯಾಗಿವೆ ಎಂದು ಅಧ್ಯಯನವೊಂದು ಹೇಳುತ್ತದೆ.

ಇಂಥ ಪರಿಸ್ಥಿತಿಯಿಂದಾಗಿಯೇ ನಗರಗಳ ಜನರು ಪರಿಸರ ವ್ಯವಸ್ಥೆಯನ್ನು ಗೌರವಿಸುವುದಿಲ್ಲ ಮತ್ತು ಜೀವ ವ್ಯವಸ್ಥೆಯ ಸಮತೋಲನದ ಮೌಲ್ಯವೇ ಅವರಿಗೆ ಅರ್ಥವಾಗುತ್ತಿಲ್ಲ. ವಾತಾನುಕೂಲ (ಎ.ಸಿ.) ಇರುವ ಕೊಠಡಿಯಲ್ಲಿ ಮೊಬೈಲ್, ಕಂಪ್ಯೂಟರ್ ಮುಂತಾದ ಗ್ಯಾಜೆಟ್‌ಗಳನ್ನು ಹಿಡಿದು ತಾವು ಪರಿಸರ ರಕ್ಷಣೆ ಮತ್ತು ನಿರ್ವಹಣೆ ಸೇರಿದಂತೆ ಎಲ್ಲವನ್ನೂ ಮಾಡಬಲ್ಲೆವು ಎಂದು ಅವರು ಭಾವಿಸುತ್ತಾರೆ. ಹೀಗಾಗಿಯೇ ನಗರಗಳಲ್ಲಿ ನಾಯಿ, ಬೆಕ್ಕು, ಹಾವು, ಕೋತಿ ಮುಂತಾದ ಪ್ರಾಣಿ ಪಕ್ಷಿಗಳಿಗೆ ಜನರ ಮನೆಗಳಲ್ಲಿ ಮತ್ತು ಬೀದಿಗಳಲ್ಲಿ ಸ್ಥಾನವೇ ಇಲ್ಲದಂತಾಗುತ್ತಿದೆ.

ದೇಶದಲ್ಲಿ ಇಂದು ಬೀದಿ ನಾಯಿಗಳ ಬಗ್ಗೆ ಭಾರಿ ಚರ್ಚೆ ನಡೆಯುತ್ತಿದೆ. ಆದರೆ, 140 ಕೋಟಿಯಷ್ಟಿರುವ ಜನಸಂಖ್ಯೆಯು ಎಲ್ಲ ರೀತಿಯ ಸಂಪನ್ಮೂಲಗಳಿಗೂ ಹೊರೆಯಾಗಿದ್ದು, ಪ್ರಾಣಿ ಮತ್ತು ಪಕ್ಷಿಗಳೊಂದಿಗೂ ಎಲ್ಲೆಡೆ ಸಂಘರ್ಷ ಎದುರಿಸುವಂತಾಗಿದೆ. ಸಾಮಾಜಿಕ ಜಾಲತಾಣಗಳ ಧ್ರುವೀಕರಣದ ಈ ಯುಗದಲ್ಲಿ, ನಾಯಿಗಳ ಬಗ್ಗೆ ಮನುಷ್ಯರಿಗಿರುವ ಮೂಲಭೂತ ಭಯವನ್ನು ಬಡಿದೆಬ್ಬಿಸುವ ಮೂಲಕ ಪ್ರಾಣಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳ ಅನುಷ್ಠಾನದಲ್ಲಿನ ತಮ್ಮ ವೈಫಲ್ಯವನ್ನು ರಾಜಕಾರಣಿಗಳು ಮರೆಮಾಚುತ್ತಿದ್ದಾರೆ. ಆದರೆ, ಪರಿಸ್ಥಿತಿಯು ಮೇಲ್ನೋಟಕ್ಕೆ ಕಾಣುತ್ತಿರುವಷ್ಟು ಉಗ್ರವಾಗಿಯೇನೂ ಇಲ್ಲ.

> ದೇಶದಲ್ಲಿ ಇಂದು ಬೀದಿ ನಾಯಿಗಳ ಬಗ್ಗೆ ಭಾರಿ ಚರ್ಚೆ ನಡೆಯುತ್ತಿದೆ. ಆದರೆ, 140 ಕೋಟಿಯಷ್ಟಿರುವ ಜನಸಂಖ್ಯೆಯು ಎಲ್ಲ ರೀತಿಯ ಸಂಪನ್ಮೂಲಗಳಿಗೂ ಹೊರೆಯಾಗಿದ್ದು, ಪ್ರಾಣಿ ಮತ್ತು ಪಕ್ಷಿಗಳೊಂದಿಗೂ ಎಲ್ಲೆಡೆ ಸಂಘರ್ಷ ಎದುರಿಸುವಂತಾಗಿದೆ. ಸಾಮಾಜಿಕ ಜಾಲತಾಣಗಳ ಧ್ರುವೀಕರಣದ ಈ ಯುಗದಲ್ಲಿ, ನಾಯಿಗಳ ಬಗ್ಗೆ ಮನುಷ್ಯರಿಗಿರುವ ಮೂಲಭೂತ ಭಯವನ್ನು ಬಡಿದೆಬ್ಬಿಸುವ ಮೂಲಕ ಪ್ರಾಣಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳ ಅನುಷ್ಠಾನದಲ್ಲಿನ ತಮ್ಮ ವೈಫಲ್ಯವನ್ನು ರಾಜಕಾರಣಿಗಳು ಮರೆಮಾಚುತ್ತಿದ್ದಾರೆ. ಆದರೆ, ಪರಿಸ್ಥಿತಿಯು ಮೇಲ್ನೋಟಕ್ಕೆ ಕಾಣುತ್ತಿರುವಷ್ಟು ಉಗ್ರವಾಗಿಯೇನೂ ಇಲ್ಲ

ಭಾರತದ ಅನೇಕ ನಗರಗಳು ಮತ್ತು ಸಮುದಾಯಗಳಲ್ಲಿ ಜನ ನಾಯಿಗಳ ಜತೆಗೆ ಸಂತೋಷದಿಂದ ಬಾಳುತ್ತಿದ್ದಾರೆ. ಹಿಂದೆ, ಪ್ರತಿ ಎರಡು ಮನೆಗಳ ಪೈಕಿ ಒಂದರಲ್ಲಿ ನಾಯಿಯನ್ನು ಸಾಕಲಾಗುತ್ತಿತ್ತು. ಅವುಗಳ ಸಂತಾನ ನಿಯಂತ್ರಣ ಮಾಡದೇ ಇದ್ದುದರಿಂದ ಮತ್ತು ಅವುಗಳನ್ನು ಬೀದಿಪಾಲು ಮಾಡುವ ಮೂಲಕ ನಾವು ಇಂದು ದೊಡ್ಡ ಬಿಕ್ಕಟ್ಟಿನ ಸ್ಥಿತಿ ಎದುರಿಸುವಂತಾಗಿದೆ.

ವಾಸಸ್ಥಳವನ್ನು ಪದೇ ಪದೇ ಬದಲಾವಣೆ ಮಾಡುವುದು, ಆಹಾರದ ಕೊರತೆ, ನಿರಂತರವಾಗಿ ಕಿರುಕುಳ ನೀಡುವುದರಿಂದ ಕೆಲವು ಪ್ರದೇಶಗಳಲ್ಲಿ ನಾಯಿಗಳು ಅಸಮವಾಗಿ ಹರಡಿಕೊಂಡಿದ್ದು, ಅದು ಅವುಗಳ ಆಕ್ರಮಣಕಾರಿ ವರ್ತನೆಗೆ ಮತ್ತು ಗುಂಪುಗೂಡುವಿಕೆಗೆ ಕಾರಣವಾಗುತ್ತಿದೆ. ಕೆಲವು ಜಿಲ್ಲೆಗಳಲ್ಲಿ ಸಂತಾನ ಶಕ್ತಿಹರಣ ಉಪಕ್ರಮಗಳ ಕೊರತೆಯಿಂದ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂತಾನಶಕ್ತಿಹರಣ ಯೋಜನೆಯ ಸಮತೋಲನದ ಜಾರಿಯಿಂದ ಸಮಸ್ಯೆಯ ತೀವ್ರತೆ ಅಲ್ಪಮಟ್ಟಿಗೆ ಕಡಿಮೆಯಾಗಿದೆ ಎನ್ನಬಹುದು.

ಕರ್ನಾಟಕದಲ್ಲಿ ಬೀದಿ ನಾಯಿ ಸಮಸ್ಯೆಗೆ ಪರಿಹಾರ ಬೇಕು ಎಂದು ಹಲವು ಜನಪ್ರತಿನಿಧಿಗಳು ಆಗಿಂದಾಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾಪಿಸುತ್ತಲೇ ಇದ್ದು, ಇದು 'ಪ್ರಾಣಿ ಜನನ ನಿಯಂತ್ರಣ ನಿಯಮಗಳು-2023' ವಿಫಲ ಆಗಿರುವುದಕ್ಕೆ ನಿದರ್ಶನವಾಗಿದೆ. ರಾಜ್ಯದಲ್ಲಿ, 2023ರವರೆಗೆ ಕೇವಲ 12 ಪ್ರಾಣಿ ಜನನ ನಿಯಂತ್ರಣ (ಎಬಿಸಿ) ಕೇಂದ್ರಗಳು ಇದ್ದರೆ, ಅವುಗಳಲ್ಲಿ ಎಂಟು ಬೆಂಗಳೂರಿನಲ್ಲಿಯೇ ಇದ್ದವು. ಇಂದಿಗೂ ಶೇ 95ರಷ್ಟು ಜಿಲ್ಲೆಗಳಲ್ಲಿ ಎಬಿಸಿ ಕೇಂದ್ರಗಳಾಗಲಿ, ನಾಯಿಗಳನ್ನು ಹಿಡಿದು ರೇಬಿಸ್ ರೋಗನಿರೋಧಕ ಲಸಿಕೆ ಹಾಕುವ ವ್ಯವಸ್ಥೆಯಾಗಲಿ ಇಲ್ಲ.

ಎಬಿಸಿ ನಿಯಮಗಳ ಅನುಷ್ಠಾನದ ಬಗ್ಗೆ ಜನರು ತಮ್ಮ ಶಾಸಕರನ್ನು ಪ್ರಶ್ನಿಸಬೇಕಿದೆ ಅಥವಾ ನೀವು ವಿಫಲರಾಗಿದ್ದೀರಿ ಎಂದು ಅವರಿಗೆ ಹೇಳಬೇಕಿದೆ. ಆದರೆ, ತಾವು ಈ ದಿಸೆಯಲ್ಲಿ ಸಾಧ್ಯವಿರುವ ಎಲ್ಲವನ್ನೂ ಮಾಡಿದ್ದೇವೆ, ಆದರೂ ಸಮಸ್ಯೆ ಜೀವಂತವಾಗಿದೆ ಎಂದು ಜನಪ್ರತಿನಿಧಿಗಳು ಜನರನ್ನು ನಂಬಿಸುವ ಮೂಲಕ ಮೂರ್ಖರನ್ನಾಗಿಸಿದ್ದಾರೆ. ವಾಸ್ತವ ಏನೆಂದರೆ, ಎಬಿಸಿ ನಿಯಮಗಳ ಅನುಷ್ಠಾನಕ್ಕೆ ಅಗತ್ಯವಾದ ಭೂಮಿ ನೀಡದೇ ಅವರೇ ಈ ಸಮಸ್ಯೆ ಪರಿಹಾರಕ್ಕೆ ಅಡ್ಡಿಯಾಗಿದ್ದಾರೆ. ನಾಯಿಗಳನ್ನು ಮನೆಗಳಿಗೆ ಒಯ್ಯುವುದೂ ಇದಕ್ಕೆ ಪರಿಹಾರವಲ್ಲ. ನೆರೆಹೊರೆಯವರಿಂದ ಅವುಗಳ ಗದ್ದಲದ ಬಗ್ಗೆ ದೂರು ಕೇಳಬೇಕಾಗುತ್ತದೆ. ಸಾಕುಪ್ರಾಣಿಗಳಿದ್ದವರಿಗೆ ಬಾಡಿಗೆ ಮನೆಗಳು ಸಿಗುವುದೇ ಕಷ್ಟವಾಗಿದೆ. ನಾಯಿಗಳು ಮುಕ್ತವಾಗಿ ಓಡಾಡಿಕೊಂಡಿರುವ ಪ್ರಾಣಿಗಳಾಗಿದ್ದು, ಅವುಗಳ ಸ್ವಾತಂತ್ರ್ಯವನ್ನು ಕಸಿದರೆ, ಸಮಸ್ಯೆಗಳು ಮತ್ತಷ್ಟು ಹೆಚ್ಚಾಗುತ್ತವೆ.

ಸಮಸ್ಯೆ ಇಷ್ಟು ಜಟಿಲವಾಗಿದ್ದರೂ, ಪರಿಹಾರದ ಭರವಸೆ ಇದ್ದೇ ಇದೆ. ಮುಖ್ಯವಾಗಿ, ನಾಯಿ ಕಡಿತದ ಪ್ರಕರಣಗಳ ಅತ್ಯಂತ ವಿವರವಾದ ತನಿಖೆ ನಡೆಸಬೇಕು, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಅವುಗಳ ಜನನ ನಿಯಂತ್ರಣ ಮಾಡಬೇಕು ಮತ್ತು ರೇಬಿಸ್ ರೋಗನಿರೋಧಕ ಲಸಿಕೆ ನೀಡಬೇಕು. ಜತೆಗೆ, ಬೆಂಗಳೂರು ಸೇರಿದಂತೆ ಎಲ್ಲ ಜಿಲ್ಲೆಗಳಲ್ಲಿ ಅಗತ್ಯವಿರುವಷ್ಟು ರೇಬಿಸ್ ರೋಗನಿರೋಧಕ ಲಸಿಕೆಗಳ ದಾಸ್ತಾನು ಇಡಬೇಕಿದೆ. ಹೀಗೆ ಮಾಡಿದರೆ, ನಾಯಿ ಕಡಿತದಿಂದ ಸಂಭವಿಸುವ ಸಾವುಗಳನ್ನು ತಡೆಯಬಹುದಾಗಿದೆ.

ಪ್ರತಿಯೊಬ್ಬರೂ ತಮ್ಮ ಬೀದಿಯಲ್ಲಿ ಕನಿಷ್ಠ ಒಂದು ನಾಯಿಗೆ ಆಹಾರ ಒದಗಿಸಿದರೆ, ಅವು ಗುಂಪುಗೂಡುವುದು, ಆಕ್ರಮಣಶೀಲವಾಗಿ ಮೇಲೆ ಎರಗುವುದನ್ನು ತಡೆಯಬಹುದು. ಪ್ರತಿಯೊಂದು ಜೀವಿಯನ್ನೂ ನಾವು ನಾಮಾವಶೇಷ ಮಾಡಲಾಗುವುದಿಲ್ಲ. ನಾವು ಅಪಾಯಗಳ ನಡುವೆಯೇ ಬದುಕುತ್ತಿದ್ದೇವೆ ಎನ್ನುವುದನ್ನೂ, ಒಟ್ಟಿಗೇ ಬಾಳುವುದೊಂದೇ ಅಪಾಯವನ್ನು ಕಡಿಮೆ ಮಾಡುವ ಮಾರ್ಗ ಎನ್ನುವುದನ್ನೂ ಜನರು ಅರ್ಥಮಾಡಿಕೊಳ್ಳಬೇಕಿದೆ.

ಲೇಖಕಿ: ಸಹವರ್ಧಿನ್ ಅನಿಮಲ್ ವೆಲ್ಫೇರ್ ಟ್ರಸ್ಟ್ ಸಂಸ್ಥಾಪಕಿ

ಮಹದೇವಪುರ, ಬೊಮ್ಮನಹಳ್ಳಿ ನಿದರ್ಶನ

ಎಬಿಸಿಗೆ ಭೂಮಿ ಪಡೆಯಲು ರಾಜಧಾನಿ ಬೆಂಗಳೂರಿನಲ್ಲಿಯೇ ಪರದಾಡಬೇಕಾಯಿತು. ನಾಯಿಗಳ ಸಂತಾನ ನಿಯಂತ್ರಣ ಕಾರ್ಯಕ್ರಮಕ್ಕೆ ಸೂಕ್ತ ಸ್ಥಳ ಲಭ್ಯವಿಲ್ಲದೇ, ನಿಯಂತ್ರಣ ಸಾಧ್ಯವಾಗಿ ಇದಿದ್ದರೆ, ನಾಯಿಗಳ ಸಂಖ್ಯೆ ಹೇಗೆ ಸಮಸ್ಯೆಯಾಗಿ ಬದಲಾಗುತ್ತದೆ ಎನ್ನುವುದಕ್ಕೆ ಮಹದೇವಪುರ ಮತ್ತು ಬೊಮ್ಮನಹಳ್ಳಿ ವಲಯಗಳೇ ಸೂಕ್ತ ನಿದರ್ಶನಗಳಾಗಿವೆ. ಎರಡೂ ವಲಯಗಳಲ್ಲಿ ಈ ವರ್ಷ ಎಬಿಸಿಗೆ ಭೂಮಿಯನ್ನು ಒದಗಿಸಲಾಗಿದೆ.

ಈ ವಲಯಗಳಲ್ಲಿ ಎಬಿಸಿ ಕೇಂದ್ರಗಳನ್ನು ಅವುಗಳ ಸಂಪೂರ್ಣ ಸಾಮರ್ಥ್ಯದೊಂದಿಗೆ ನಡೆಸಲು ಇನ್ನೂ ಒಂದು ವರ್ಷ ಬೇಕಿದೆ ಮತ್ತು ನಾಯಿಗಳ ಸಂಖ್ಯೆಯಲ್ಲಿ ಕುಸಿತ ಕಾಣಲು ಇನ್ನೂ ಎರಡು ವರ್ಷವೇ ಬೇಕು. ಒಂದು ಜೀವಿಯನ್ನು ನಿಂದಿಸುವ ಮತ್ತು ನಿರ್ಮೂಲನೆ ಮಾಡುವುದಕ್ಕೆ ಯತ್ನಿಸುವ ಮುನ್ನ ಜನರು ಒಂದು ಕೆಲಸ ಮಾಡಬೇಕಿದೆ; ಪ್ರಜೆಗಳ ರಕ್ಷಣೆಗೆ ಸಂಬಂಧಿಸಿದ ಕಾನೂನು ಜಾರಿಯ ವಿಚಾರದಲ್ಲಿನ ವೈಫಲ್ಯದ ಬಗ್ಗೆ ತಮ್ಮ ನಾಯಕರಿಗೆ ಸರಿಯಾದ ಪ್ರಶ್ನೆಗಳನ್ನು ಕೇಳಲು ಇದು ಸೂಕ್ತ ಸಮಯವಾಗಿದೆ.

ಗುಂಡಣ್ಣ



© 2025 by King Features Syndicate, Inc. World Rights reserved

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

16 ಆಗಸ್ಟ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಅಷ್ಟಮಿ ಗಂ. 21-35 **ನಕ್ಷತ್ರ:** ಭರಣಿ ಗಂ. 6-06 ನಂತರ ಕೃತಿಕ ಗಂ 28-39 **ಯೋಗ:** ವೃದ್ಧಿ ಗಂ. 7-21 **ಕರಣ:** ಬಾಲವ ಗಂ. 10-42 ಕರ್ಕಾಟಕ ಮಾಸದ 31 ನೇ ದಿನ. **ಮಳೆ ನಕ್ಷತ್ರ:** ಆಶ್ಲೇಷ 4 ನೇ ಪಾದ. **ರಾಹುಕಾಲ:** ಬೆಳಿಗ್ಗೆ 09-00 10-30 **ಸೂರ್ಯೋದಯ:** 06-22 **ಸೂರ್ಯಾಸ್ತ:** 06-48, **ಮುಸ್ಲಿಂ ದಿನಾಂಕ:** 21 ಸಫರ್, **ದಿನ ವಿಶೇಷ:** ಕೃಷ್ಣ ಜನ್ಮಾಷ್ಟಮಿ, ಗೋಕುಲಾಷ್ಟಮಿ (ನಂದೋತ್ಸವ), ಶ್ರಾವಣ ಶನಿವಾರ, **ಅದೃಷ್ಟ ಸಂಖ್ಯೆ:** 2, 5

ಮೇಷ: ಬದುಕನ್ನು ಒಂದು ವ್ಯವಸ್ಥೆಗೆ ತರಲು ದಿನದ ಅಲ್ಪ ಸಮಯವನ್ನು ಮೀಸಲಿಡಿ. ಮನಸ್ಸಿಗೆ ಅಪಾರ ಸಂತಸ ದೊರಕಲಿದೆ. ವಾಹನಗಳು ಅಥವಾ ನಿತ್ಯ ಬಳಕೆಯ ಯಂತ್ರೋಪಕರಣಗಳು ರಿಪೇರಿಗೆ ಬರಲಿವೆ.

ವೃಷಭ: ಗಂಭೀರ ಹಂತದಲ್ಲಿರುವ ವೈಯಕ್ತಿಕ ಹಾಗೂ ಔದ್ಯೋಗಿಕ ಸಂಬಂಧಗಳನ್ನು ಸರಿಗೊಳಿಸುವುದರಲ್ಲಿ ಯಶಸ್ವಿಯಾಗುವಿರಿ. ನಾಲ್ಕು ಜನರ ಮಧ್ಯದಲ್ಲಿ ನಾಯಕತ್ವ ಪಟ್ಟ ಸಿಗಲಿದೆ.

ಮಿಥುನ: ಹಳೆಯ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸುವಿರಿ. ವಿದೇಶದಲ್ಲಿ ಉದ್ಯೋಗದ ಅನ್ವೇಷಣೆಗೆ ಒಳ್ಳೆಯ ದಿನ. ಪ್ರಯಾಣ ಸುಗಮವಾಗಿರುವುದಿಲ್ಲ. ಅನಿವಾರ್ಯವಿದ್ದರಷ್ಟೆ ಪ್ರಯಾಣ ಮಾಡಿ.

ಕರ್ಕಾಟಕ: ವಿದ್ಯಾರ್ಥಿಗಳು ಶಿಕ್ಷಣ ಮುಂದುವರಿಸಲು ತೀರ್ಮಾನಿಸಿ, ಬಂಧುಗಳ ಸಹಾಯ ಸಿಗಲಿದೆ. ತಾಯಿಯ ಆರೋಗ್ಯ ಸುಧಾರಿಸಲಿದೆ. ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ವರಮಾನವನ್ನು ಹೆಚ್ಚಿಸಿಕೊಳ್ಳುವಿರಿ.

ಸಿಂಹ: ಯೋಜನೆಗಳು ಮೇಲಧಿಕಾರಿಗಳಿಂದ ಪ್ರಶಂಸೆಗೆ ಒಳಗಾಗಲಿವೆ. ವಾಹನ ಚಾಲನೆಯಂಥ ಕಾರ್ಯದಲ್ಲಿ ಯಾವುದೇ ರೀತಿಯ ಆತುರ ಒಳ್ಳೆಯದಲ್ಲ. ಹಣ್ಣು ಮಾರಾಟಗಾರರಿಗೆ ಲಾಭ ಇರುವುದು.

ಕನ್ಯಾ: ಪ್ರಭಾವಿ ವ್ಯಕ್ತಿಗಳನ್ನು ಸಂಧಿಸಬೇಕಾಗಬಹುದು. ಹೆಚ್ಚಿನ ಮಾಹಿತಿಗಳನ್ನು ಪಡೆಯುವಿರಿ. ಸ್ಪರ್ಧಾತ್ಮಕ ವಾತಾವರಣವಿರುತ್ತದೆ. ಕೆಲವು ವಿಷಯಗಳು ಬೇಸರ ಹುಟ್ಟಿಸುವಂತಾಗಲಿದೆ.

ತುಲಾ: ಮನೆಗಾಗಿ ವಿಲಾಸಿ ಸಾಮಗ್ರಿಗಳನ್ನು ಖರೀದಿಸುವುದು ಖರ್ಚಿಗೆ ದಾರಿಯಾಗಲಿದೆ. ದೈವಾನುಗ್ರಹದಿಂದ ಒಳ್ಳೆಯ ಲಾಭವನ್ನು ಪಡೆಯುವಿರಿ. ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗಿ.

ವೃಶ್ಚಿಕ: ಆದಾಯದಲ್ಲಿ ಸಣ್ಣ ಪುಟ್ಟ ಸಾಲದ ಹಣವನ್ನು ಹಿಂತಿರುಗಿಸುವ ಬಗ್ಗೆ ತೀರ್ಮಾನಿಸಿ. ಮದುವೆಯ ವಿಷಯಗಳು ಪ್ರಸ್ತಾಪಕ್ಕೆ ಬರಲಿವೆ. ಮಕ್ಕಳ ಮತ್ತು ಮನೆಯವರ ಆರೋಗ್ಯ ಕಡೆಗೆ ಕಾಳಜಿ ವಹಿಸಿ.

ಧನು: ಹಿರಿಯರ ಆರೋಗ್ಯ ಸುಧಾರಿಸುವುದರಿಂದ ಸಂತಸವಿರುವುದು. ಸ್ನೇಹಿತರೊಂದಿಗೆ ಭೂಖರೀದಿಗಾಗಿ ಪ್ರಯತ್ನ ನಡೆಸುವಿರಿ. ಮನೆಯಲ್ಲಿ ಸ್ವಲ್ಪ ಮಟ್ಟಿನ ಹೊಂದಾಣಿಕೆ ಅಗತ್ಯ ಎನಿಸಲಿದೆ.

ಮಕರ: ಉತ್ತಮ ಗುಣಗಳು ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಹಾಯ ಮಾಡುವುದು. ವಿಷಯವನ್ನು ಮುಂದೂಡುವುದು ಸರಿಯಲ್ಲ. ನಿರ್ಮಾಣ ಕಾರ್ಯದಲ್ಲಿರುವವರಿಗೆ ಆಶಾಕಿರಣ ದೊರೆಯುತ್ತದೆ.

ಕುಂಭ: ಇಷ್ಟು ದಿನಗಳ ಕಠಿಣ ಪರಿಶ್ರಮದಿಂದ ಬಿಡುಗಡೆ ಬೇಕೆನಿಸಲಿದೆ. ಅರ್ಧಕ್ಕೆ ನಿಂತ ಎಲ್ಲಾ ಕಾರ್ಯಗಳಿಗೆ ಇಂದು ಪುನಃ ಚಾಲನೆ ದೊರೆಯಲಿವೆ. ಸ್ನೇಹಿತರೊಂದಿಗಿನ ಪ್ರವಾಸ ಯೋಜನೆ ಯೋಚನೆಯಾಗಿ ಉಳಿಯುವುದು.

ಮೀನ: ವೃತ್ತಿ ಬದುಕಿನ ಯೋಜನೆಯ ಸುಳಿವು ಯಾರಲ್ಲೂ ಹಂಚಿಕೊಳ್ಳಬೇಡಿ. ನಂಬಿಸಿ ಮೋಸ ಮಾಡುವವರು ಸುತ್ತಲೂ ಇರುವರು. ವ್ಯವಹಾರದಲ್ಲಿ ಲಾಭ-ನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಮನಸ್ಸು ಬರಲಿದೆ.

ಪದಬಂಧ 6136

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೆಬ್ಬೆರಳ ಪಕ್ಕದ ಬೆರಳು (5)
3.ನಾನಾ ಬಗೆಯ ಎಂದು ಹೀಗೆನ್ನಿ (3)
5.ತಲೆ ಎತ್ತಿದಾಗ ಕಾಣಿಸಿದ ಶೀರ್ಷಿಕೆ (5)
7.ಇದು ಒಳ್ಳೆಯ ಹಾದಿ (3)
9.ವಾದದಲ್ಲಿ ಕೊನೆಗೊಂಡಿರುವ ಮಾತುಕತೆ (3)
11.ಲಗ್ನಕ್ಕೊಂದು ಪರ್ಯಾಯ ಪದ (3)
13.ಕೆಟ್ಟ ಉದ್ದೇಶಕ್ಕೆ ಬಳಸುವುದು (5)
15.ಭವನದಲ್ಲಿನ ಹುಟ್ಟು! (3)
16.ಈತ ವರದಿಯನ್ನು ಸಿದ್ಧಪಡಿಸುವವನು (5)

ಮೇಲಿಂದ ಕೆಳಕ್ಕೆ

1.ಹೀಗೆ ವ್ಯಕ್ತಗೊಳಿಸು (4)
2.ಕೊನೆಗೆ ಹಿತವಿದ್ದರೂ ಇಲ್ಲದುದು! (3)
4.ವಿಶೇಷವಾದ ದ್ರೋಹ (3)
6.ಪಂಡಿತ ಇಲ್ಲಿದ್ದಾನೆ (3)
8.ಪಟ್ಟಣದಲ್ಲಿಯೇ ಅಧಿಕಾರವನ್ನು ಹುಡುಕಿ! (2)
9.ತಾಪದ ಹೊತ್ತಿನಲ್ಲಿ ತೋಡಿಕೊಂಡಿರುವ ಅಳಲು (3)
10.ಚನ್ನಾಗಿ ಮಾತನಾಡುವವನು ತಿರುಗಿದ್ದಾನಲ್ಲಾ! (2)
12.ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಬದಲಾಯಿಸುವಿಕೆ (4)
13.ಹೊಂದಲು ಅಸಾಧ್ಯವಾದುದು (3)
14.ಟಾರ ರಸ್ತೆ ಹತ್ತಿರವಿರುವ ಮೋರಿ (3)



6135ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಆಸ್ತಾನಿಕ 3.ನಟ್ಟಡವಿ 5.ವರಾಹ 6.ಜನಿವಾರ 8.ತಿಮಿಂಗಿಲ 10.ಕಲರವ 12.ಗುರುಕುಲ 13.ನಕುಲ 16.ಹರಿಕಾರ 17.ಜಿತೇಂದ್ರಿಯ

ಮೇಲಿಂದ ಕೆಳಕ್ಕೆ:

1.ಆಸ್ತೆ 2.ಕಡವರ 3.ನಖಹತಿ 4.ವಿಷ 7.ನಿಷ್ಫಲ 9.ಗಿಟಕು 11.ವನಚರ 12.ಗುಲಗಂಜಿ 14.ದಾಹ 15.ಲಯ

ಸುಡೊಕು 6520

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		4	9		2	1		6
1		6					8	
	8	2		6				5
7								
	5		7	1	4	2		8
4					6			7
2		5		7			6	
	6					8		
8		1	6		3			9

6519 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಸರ್ಜಾಪುರ: ಮನೆ ಬೆಲೆ ಶೇ 80ರಷ್ಟು ಏರಿಕೆ

ಥಣಿಸಂದ್ರದಲ್ಲೂ ಏರಿಕೆ: ಮೆಟ್ರೊ ಕೆಂಪು ಮಾರ್ಗದ ನಿರ್ಮಾಣದಿಂದ ಹೆಚ್ಚಿದ ಬೇಡಿಕೆ: ಅನರಾಕ್ ವರದಿ

ನವದೆಹಲಿ (ಪಿಟಿಐ): ಬೆಂಗಳೂರಿನ ಸರ್ಜಾಪುರ ರಸ್ತೆ ಮತ್ತು ಥಣಿಸಂದ್ರ ಮುಖ್ಯ ರಸ್ತೆಯಲ್ಲಿನ ಮನೆಗಳ ಸರಾಸರಿ ಬೆಲೆಯು ಕಳೆದ ಮೂರೂವರೆ ವರ್ಷದಲ್ಲಿ ಶೇ 80ರಷ್ಟು ಏರಿಕೆಯಾಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ವರದಿ ತಿಳಿಸಿದೆ.

2021ರ ಅಂತ್ಯದಲ್ಲಿ ಸರ್ಜಾಪುರ ರಸ್ತೆಯಲ್ಲಿನ ಮನೆಗಳ ಬೆಲೆ ಪ್ರತಿ ಚದರ ಅಡಿಗೆ ಸರಾಸರಿ ₹6,050 ಇತ್ತು. ಪ್ರಸಕ್ತ ವರ್ಷದ ಏಪ್ರಿಲ್–ಜೂನ್ ವೇಳೆಗೆ ₹10,800 ಆಗಿದ್ದು, ಶೇ 79ರಷ್ಟು ಹೆಚ್ಚಳವಾಗಿದೆ. ಥಣಿಸಂದ್ರದ ಮುಖ್ಯ ರಸ್ತೆಯ ಮನೆಗಳ ಬೆಲೆ ಪ್ರತಿ ಚದರ ಅಡಿಗೆ ₹5,345ರಿಂದ ₹9,700ಕ್ಕೆ ಏರಿಕೆಯಾಗಿದ್ದು, ಶೇ 81ರಷ್ಟು ಬೆಲೆ ಹೆಚ್ಚಳವಾಗಿದೆ.

ಮುಖ್ಯಾಂಶಗಳು

- ಸರ್ಜಾಪುರದಲ್ಲಿ ಚ.ಅಡಿ ₹10,800, ಥಣಿಸಂದ್ರದಲ್ಲಿ ₹9,700
- ಮನೆಗಳ ಬಾಡಿಗೆ ದರವು ಶೇ 81ರಷ್ಟು ಹೆಚ್ಚಳ
- ಮೂಲಸೌಕರ್ಯ ಹೆಚ್ಚಳದಿಂದ ಬೆಲೆ ಏರಿಕೆ

ಇದೇ ಅವಧಿಯಲ್ಲಿ ಈ ಪ್ರದೇಶದಲ್ಲಿನ ಮನೆಗಳ ಬಾಡಿಗೆ ದರವು ಶೇ 81ರಷ್ಟು ಹೆಚ್ಚಳವಾಗಿದೆ ಎಂದು ಶುಕ್ರವಾರ ಬಿಡುಗಡೆ ಮಾಡಲಾದ ವರದಿಯಲ್ಲಿ ತಿಳಿಸಲಾಗಿದೆ.

ಪ್ರಮುಖ ನಗರಗಳಾದ ಬೆಂಗಳೂರು, ಹೈದರಾಬಾದ್, ಪುಣೆ, ನವದೆಹಲಿ, ಮುಂಬೈ ಮಹಾನಗರ ಪ್ರದೇಶ, ಕೋಲ್ಕತ್ತ ಮತ್ತು ಚೆನ್ನೈನಲ್ಲಿ ಜಾಗದ ಮೌಲ್ಯ ಶೇ 24ರಿಂದ ಶೇ 139ರಷ್ಟು ಹೆಚ್ಚಳವಾಗಿದೆ. ಬಾಡಿಗೆಯು ಶೇ 32ರಿಂದ ಶೇ 81ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

> ಸರ್ಜಾಪುರ ನವೋದ್ಯಮ ಮತ್ತು ಯೂನಿಕಾರ್ನ್‌ಗಳಿಗೆ ಪ್ರಮುಖ ತಾಣವಾಗಿದ್ದರೆ, ಥಣಿಸಂದ್ರವು ಉದ್ಯಮಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ತಾಣವಾಗಿದೆ. ಇದು ಹೂಡಿಕೆದಾರರ ದೃಷ್ಟಿಯಲ್ಲಿ ಹೂಡಿಕೆಗೆ ಸೂಕ್ತ ಸ್ಥಳವಾಗಿದೆ
>
> **ಭವೇಶ್ ಕೊಠಾರಿ,** ಪ್ರಾಪರ್ಟಿ ಫಸ್ಟ್ ರಿಯಾಲ್ಟಿಯ ಸಂಸ್ಥಾಪಕ ಮತ್ತು ಸಿಇಒ

ಸರ್ಜಾಪುರ ರಸ್ತೆ ಬಹಳ ಹಿಂದಿನಿಂದಲೂ ಬೆಂಗಳೂರಿನ ಪೂರ್ವ ಐ.ಟಿ ಕಾರಿಡಾರ್‌ನ ಭಾಗವಾಗಿದೆ. ಹೆಬ್ಬಾಳವನ್ನು ಸರ್ಜಾಪುರಕ್ಕೆ ಸಂಪರ್ಕಿಸುವ 'ನಮ್ಮ ಮೆಟ್ರೊ'ದ ಕೆಂಪು ಮಾರ್ಗದ ನಿರ್ಮಾಣವು ಹೊಸ ಆಸಕ್ತಿಯನ್ನು ಖರೀದಿದಾರರಲ್ಲಿ ಹೆಚ್ಚಿಸಿದೆ. ಥಣಿಸಂದ್ರ ಮುಖ್ಯ ರಸ್ತೆಯು ಮಾನ್ಯತಾ ಟೆಕ್ ಪಾರ್ಕ್‌ಗೆ ಹತ್ತಿರವಾಗಿದೆ. ಅಲ್ಲದೆ ರಸ್ತೆ ಸಂಪರ್ಕದಲ್ಲಿ ಸುಧಾರಣೆ ಆಗಿರುವುದರಿಂದ ಐ.ಟಿ ವೃತ್ತಿಪರರಿಗೆ ಇದು ಆಕರ್ಷಕ ತಾಣವಾಗಿದೆ ಎಂದು ಹೇಳಿದೆ.

'ಸರ್ಜಾಪುರ ರಸ್ತೆ ಮತ್ತು ಥಣಿಸಂದ್ರದ ಮುಖ್ಯ ರಸ್ತೆಯು ಪ್ರಮುಖ ಸ್ಥಳಗಳಾಗಿವೆ. ಹೊರವರ್ತುಲ ರಸ್ತೆ, ವಿಮಾನ ನಿಲ್ದಾಣಕ್ಕೆ ಮೆಟ್ರೊ ಸಂಪರ್ಕ, ಮುಂಬರಲಿರುವ ಸರ್ಜಾಪುರ – ಹೆಬ್ಬಾಳದ ಕಾರಿಡಾರ್ ಜಾಗದ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ' ಎಂದು ಸತ್ವ ಸಮೂಹದ ಅಧ್ಯಕ್ಷೆ (ಮಾರಾಟ, ಸಿಆರ್‌ಎಂ ಮತ್ತು ಮಾರ್ಕೆಟಿಂಗ್ ವಿಭಾಗ) ಕರಿಷ್ಮಾ ಸಿಂಗ್ ಹೇಳಿದ್ದಾರೆ. ಈ ಪ್ರಮುಖ ಪ್ರದೇಶದಲ್ಲಿನ ಸೀಮಿತ ಪೂರೈಕೆಯು ಸಹ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಹೇಳಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹530
	12 ಕ್ಕೆ	₹70
ಮೈಸೂರು:	100 ಕ್ಕೆ	₹538

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹196
ಆರ್‌ಎಸ್‌ಎಸ್‌-5	₹190
ಗುಡ್ ಲಾಟ್	₹174

ಹೆಲಿಕಾಪ್ಟರ್ ಪತನ: ಐವರು ಸಾವು

ಪೇಶಾವರ್: ಪಾಕಿಸ್ತಾನದ ಈಶಾನ್ಯ ಪ್ರಾಂತ್ಯದಲ್ಲಿ ಮಳೆ ಹಾನಿ ಪ್ರದೇಶದ ಪರಿಹಾರ ಕಾರ್ಯದಲ್ಲಿ ತೊಡಗಿದ್ದ ಹೆಲಿಕಾಪ್ಟರ್ ಪತನಗೊಂಡು, ಇಬ್ಬರು ಪೈಲಟ್‌ಗಳು ಸೇರಿದಂತೆ ಐವರು ಸಿಬ್ಬಂದಿ ಸಾವಿಗೀಡಾಗಿದ್ದಾರೆ ಎಂದು ಪ್ರಾಂತೀಯ ಮುಖ್ಯಮಂತ್ರಿ ಶುಕ್ರವಾರ ತಿಳಿಸಿದ್ದಾರೆ.

ಮಹಮಂಡ್ ಜಿಲ್ಲೆಯ ಬಜೌರ್ ಪ್ರದೇಶಕ್ಕೆ ಪರಿಹಾರ ಸಾಮಗ್ರಿ ಸಮೇತ ತೆರಳುತ್ತಿದ್ದ ಖೈಬರ್ ಪಖ್ತುಂಖ್ವಾ ಸರ್ಕಾರದ ಎಂಐ–17 ಹೆಲಿಕಾಪ್ಟರ್ ಹವಾಮಾನ ವೈಪರೀತ್ಯದಿಂದ ಪತನಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381.

ಬೆಂಗಳೂರು ದಕ್ಷಿಣ ಮತ್ತು ರಾಮನಗರ ಜಿಲ್ಲೆಯ ತಾಲೂಕು ಕಚೇರಿ, ಜಿಲ್ಲಾಧಿಕಾರಿ ಕಚೇರಿ, ಎಸಿ ಕಚೇರಿಯಿಂದ ಭೂ ಕಂದಾಯ ದಾಖಲೆಗಳ ಖರೀದಿಗಾಗಿ ನಾವು ಭೂ ದಾಖಲೆ ಸಂಪರ್ಕ ಕಾರ್ಯ ನಿರ್ವಾಹಕರನ್ನು ನೇಮಿಸಿಕೊಳ್ಳುತ್ತಿದ್ದೇವೆ. ಸ್ಥಳ: ಆರ್.ಆರ್. ನಗರ, ಬೆಂಗಳೂರು. ದೂ: 9535486707

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಕರ್ನಾಟಕದಾದ್ಯಂತ ಫುಲ್ ಟೈಮ್, ಪಾರ್ಟ್ ಟೈಮ್ Work from Home ಕೆಲಸಕ್ಕೆ ವಿದ್ಯಾರ್ಥಿಗಳಿಗೆ, ವಯಸ್ಕರಿಗೂ, ವಿದ್ಯಾರ್ಹತೆಯಿಲ್ಲದವರೂ 18000/- 25000/-. Ph:6364595602

ಆರ್.ಆರ್.ನಗರದಲ್ಲಿರುವ ನಮ್ಮ ಕಚೇರಿಗೆ ಭೂ ದಾಖಲೆ ಕಾರ್ಯನಿರ್ವಾಹಕ ಹುದ್ದೆಗೆ ಮಹಿಳಾ ಅಭ್ಯರ್ಥಿ. ತಾಲೂಕು ಕಚೇರಿ, ಎಸಿ ಕಚೇರಿ, ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ಭೂ ದಾಖಲೆಗಳು ಮತ್ತು ಕಂದಾಯ ದಾಖಲೆಗಳ ಜ್ಞಾನ ಮತ್ತು ತಿಳುವಳಿಕೆ ಕಡ್ಡಾಯವಾಗಿದೆ. ನಾವು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಸಂಪರ್ಕಿಸಿ: +919535486707

ಕರ್ನಾಟಕದಾದ್ಯಂತ ಕಂಪನಿಗಳಿಗೆ work from Home ಕೆಲಸಕ್ಕೆ ಯುವಕ & ಯುವತಿಯರು ಬೇಕಾಗಿದ್ದಾರೆ. (17,900-25,000) 7th, 10th, Any Degree. Ph:9019427194/9364595602

ಪ್ರವಾಸ

Travel Agencies

ನೇಪಾಳ ಪ್ರವಾಸ 9 ದಿನಗಳು ಚಾರ್ಧಾಮ್ ಯಾತ್ರ 13 ದಿನ ಪೂರಿ ಜಗನ್ನಾಥ ಪ್ರವಾಸ 3 ದಿನ ಗುಜರಾತ್ ಪ್ರವಾಸ 8 ದಿನಗಳ ಶಿರಡಿಪ್ರವಾಸ 3 ದಿನ ಸುವರ್ಣಯಾತ್ರ: 6360146483/ 9019462508

Travel

07.10.2025 11.11.2025 08.12.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.11.2025 ದುಬೈ,ಅಬುದಾಬಿ 5 ದಿನಗಳು. 11.09.2025 04.10.2025 16.11.2025 24.12.2025 ಭೂತಾನ್ 8 ದಿನಗಳು. 11.10.2025 01.11.2025 ಶ್ರೀಲಂಕಾ 7 ದಿನಗಳು. 15.09.2025 06.10.2025 13.11.2025 ಕಾಶಿ,ಗಯಾ,ಅಯೋಧ್ಯ 7 ದಿನಗಳು. 11.10.2025 16.11.2025 ಅಸ್ಸಾಂ,ಮೇಘಾಲಯ 6/9 ದಿನಗಳು. 04.10.2025 16.11.2025 ಮಧ್ಯಪ್ರದೇಶ 4/10 ದಿನಗಳು. 20.09.2025 06.10.2025 03.11.2025 ಗುಜರಾತ್ 8 ದಿನಗಳು. 22.09.2025 16.10.2025 11.11.2025 ರಾಜಸ್ಥಾನ 9 ದಿನಗಳು.15.09.2025 06.10.2025 03.11.2025 ರಾಮೇಶ್ವರಂ ಮಧುರೈ,ಕನ್ಯಾಕುಮಾರಿ 5 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವೆಲ್ಸ್ ಬೆಂಗಳೂರು.03. 9448402248 7022547922

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಸಾರ್ವಜನಿಕ ಪ್ರಕಟಣೆ

BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS

@500/-* PER SQCM

www.dhclassifieds.com BOOK NOW

*Conditions apply

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9886213331 | +91 9845114560
+91 9731810277 | 080- 45557163/164

ಹೊಸತನದೊಂದಿಗೆ ಬಂದ 'ರೋಡ್‌ಸ್ಟರ್'

ಮುಂಬೈನ ಮುಕೇಶ್ ಮಿಲ್‌ನಲ್ಲಿ ಬೈಕ್ ಅನಾವರಣ ಕಾರ್ಯಕ್ರಮ

• ಜಿ.ಶಿವಕುಮಾರ

ಮುಂಬೈ: ಯೆಜ್ಡಿ 'ರೋಡ್‌ಸ್ಟರ್' ಬೈಕ್ ಈಗ ಹೊಸತನದೊಂದಿಗೆ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ.

ಬೈಕ್ ಅನಾವರಣ ಕಾರ್ಯಕ್ರಮವು ಮುಂಬೈನಲ್ಲಿ ಈಚೆಗೆ ನಡೆಯಿತು. 5 ಆಕರ್ಷಕ ಬಣ್ಣಗಳಲ್ಲಿ, ಗಮನ ಸೆಳೆಯುವ ವಿನ್ಯಾಸ, ನಾವೀನ್ಯ ಎಂಜಿನ್, ವೈಶಿಷ್ಟ್ಯಗಳೊಂದಿಗೆ ರೋಡ್‌ಸ್ಟರ್ ರಸ್ತೆಗಿಳಿಯುತ್ತಿದೆ.

ಗ್ರಾಹಕರನ್ನು ಸೆಳೆಯುವ ಉದ್ದೇಶದಿಂದ 4 ವರ್ಷ ಅಥವಾ 50 ಸಾವಿರ ಕಿ.ಮೀ.ವರೆಗೆ ವಾರಂಟಿ ನೀಡಲಾಗುತ್ತಿದೆ. ವಾರಂಟಿ ಅವಧಿ ವಿಸ್ತರಿಸಿಕೊಳ್ಳುವ ಅವಕಾಶ ಗ್ರಾಹಕರಿಗಿದೆ.

ಯೆಜ್ಡಿಯ ಈ ಹಿಂದಿನ ಅವತರಣಿಕೆಯ ಬೈಕ್‌ಗಳಿಗೆ ಹೋಲಿಸಿದರೆ ರೋಡ್‌ಸ್ಟರ್‌ನ ಸೀಟ್ ಹಾಗೂ ಇಂಡಿಕೇಟರ್‌ಗಳ ವಿನ್ಯಾಸದಲ್ಲಿ ಬದಲಾವಣೆ ಕಾಣಬಹುದಾಗಿದೆ. ಗ್ರಾಹಕರು ಬೇಕಿದ್ದರೆ ಹಿಂದಿನ ಸೀಟ್ ತೆಗೆದಿಡಬಹುದು. ಅಗತ್ಯಬಿದ್ದರೆ ಮತ್ತೆ ಅಳವಡಿಸಿಕೊಳ್ಳಬಹುದು.

ಇದು 334 ಸಿ.ಸಿ.ಸಾಮರ್ಥ್ಯದ ಸಿಂಗಲ್ ಸಿಲಿಂಡರ್, ಲಿಕ್ವಿಡ್ ಕೂಲ್ಡ್ ಆಲ್ಫಾ–2 ಎಂಜಿನ್ ಒಳಗೊಂಡಿದೆ. 6 ಸ್ಪೀಡ್ ಗೇರ್ ಬಾಕ್ಸ್, 320 ಎಂ.ಎಂ. ಫ್ರಂಟ್ ಡಿಸ್ಕ್ ಬ್ರೇಕ್, 240 ಎಂ.ಎಂ ರಿಯರ್ (ಹಿಂಬದಿ) ಡಿಸ್ಕ್ ಬ್ರೇಕ್ ಹೊಂದಿದೆ. ಬಣ್ಣಕ್ಕನುಗುಣವಾಗಿ ನವದೆಹಲಿಯಲ್ಲಿ ಈ ಬೈಕ್‌ಗಳ ಎಕ್ಸ್ ಷೋರೂಂ ಬೆಲೆ ₹2.10 ಲಕ್ಷದಿಂದ ₹2.26 ಲಕ್ಷದವರೆಗೆ ಇದೆ.

'ಆಸಕ್ತರು ಕಂಪನಿಯ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ, ಮುಂಗಡವಾಗಿ ₹999 ಪಾವತಿಸಿ ಆನ್‌ಲೈನ್ ಮೂಲಕ ಬೈಕ್ ಕಾಯ್ದಿರಿಸಬಹುದು. ಒಂದೊಮ್ಮೆ ಬುಕಿಂಗ್ ರದ್ದುಮಾಡಿದರೆ ಪೂರ್ಣ ಮೊತ್ತ ಮರುಪಾವತಿಸಲಾಗುತ್ತದೆ' ಎಂದು ಜಾವಾ ಯೆಜ್ಡಿ ಮೋಟರ್ ಸೈಕಲ್ಸ್‌ನ ಸಹ ಸಂಸ್ಥಾಪಕ ಅನುಪಮ್ ಥರೇಜಾ ತಿಳಿಸಿದರು.

ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಸುನೀಲ್ ಶೆಟ್ಟಿ ಹಾಗೂ ಉದ್ಯಮಿ ಆನಂದ್ ಮಹೀಂದ್ರ ಮಾತನಾಡಿದರು.

(ಕಂಪನಿಯ ಆಹ್ವಾನದ ಮೇರೆಗೆ ಪ್ರತಿನಿಧಿ ಮುಂಬೈಗೆ ತೆರಳಿದ್ದರು)

ಕಾರ್ಯಕ್ರಮದಲ್ಲಿ (ಎಡದಿಂದ) ಕ್ಲಾಸಿಕ್ ಲೆಜೆಂಡ್ಸ್‌ನ ಆರ್ ಆ್ಯಂಡ್ ಡಿ ವಿಭಾಗದ ಮುಖ್ಯಸ್ಥ ಸುಶೀಲ್ ಸಿನ್ಹಾ, ಚೀಫ್ ಬ್ಯುಸಿನೆಸ್ ಆಫೀಸರ್ ಶರದ್ ಅಗರವಾಲ್ ಹಾಗೂ ಚೀಫ್ ಆಪರೇಟಿಂಗ್ ಆಫೀಸರ್ ಲಲಿತ್ ವರ್ಮಾ 'ರೋಡ್‌ಸ್ಟರ್' ಬೈಕ್ ಅನಾವರಣಗೊಳಿಸಿದರು

> ಇಂತಹದ್ದೊಂದು ಬೈಕ್ ಮಾರುಕಟ್ಟೆಗೆ ತರಬೇಕೆಂಬುದು ತಂದೆಯ ಕನಸಾಗಿತ್ತು. ಅದೀಗ ನನಸಾಗಿದೆ. ಎಲ್ಲಾ ವಯೋಮಾನದವರಿಗೂ ಇದು ಇಷ್ಟವಾಗಲಿದೆ
>
> **ಬೊಮನ್ ರುಸ್ತೊಮ್ ಇರಾನಿ,** ಸಹ ಸಂಸ್ಥಾಪಕ, ಜಾವಾ ಯೆಜ್ಡಿ ಮೋಟರ್‌ಸೈಕಲ್ಸ್

ಸಂಕ್ಷಿಪ್ತ ಸುದ್ದಿ

ಅಮೆರಿಕಕ್ಕೆ ರಫ್ತು ಶೇ 20ರಷ್ಟು ಏರಿಕೆ

ನವದೆಹಲಿ (ಪಿಟಿಐ): ಜುಲೈ ತಿಂಗಳಿನಲ್ಲಿ ಅಮೆರಿಕಕ್ಕೆ ದೇಶದ ಸರಕುಗಳ ರಫ್ತು ಶೇ 20ರಷ್ಟು ಏರಿಕೆಯಾಗಿದೆ. ಇದರ ಒಟ್ಟು ಮೌಲ್ಯ ₹70,208 ಕೋಟಿಯಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಇದೇ ಅವಧಿಯಲ್ಲಿ ಆಮದು ಶೇ 13ರಷ್ಟು ಹೆಚ್ಚಳವಾಗಿದ್ದು, ₹39,881 ಕೋಟಿಯಾಗಿದೆ ಎಂದು ತಿಳಿಸಿದೆ.

ಏಪ್ರಿಲ್–ಜುಲೈ ಅವಧಿಯಲ್ಲಿ ದೇಶದ ರಫ್ತು ಶೇ 21ರಷ್ಟು ಹೆಚ್ಚಳವಾಗಿದ್ದು, ₹2.93 ಲಕ್ಷ ಕೋಟಿಯಾಗಿದೆ. ಆಮದು ₹1.52 ಲಕ್ಷ ಕೋಟಿಯಾಗಿದ್ದು, ಶೇ 12ರಷ್ಟು ಏರಿಕೆಯಾಗಿದೆ. ಅಮೆರಿಕದ ದೇಶದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದ್ದು, ₹1.10 ಲಕ್ಷ ಕೋಟಿ ದ್ವಿಪಕ್ಷೀಯ ವ್ಯಾಪಾರ ಹೊಂದಿದೆ.

ಏಪ್ರಿಲ್‌ನಿಂದ ಅಮೆರಿಕಕ್ಕೆ ದೇಶದ ರಫ್ತು ಸಕಾರಾತ್ಮಕ ಬೆಳವಣಿಗೆ ದಾಖಲಿಸಿದೆ. ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಬಗ್ಗೆ ಭಾರತ ಮತ್ತು ಅಮೆರಿಕ ಮಾತುಕತೆ ನಡೆಸುತ್ತಿವೆ. ಆಗಸ್ಟ್ 25ಕ್ಕೆ ಅಮೆರಿಕದ ತಂಡವು ಭಾರತಕ್ಕೆ ಭೇಟಿ ನೀಡಿ, ಒಪ್ಪಂದದ ಬಗ್ಗೆ ಮಾತುಕತೆ ನಡೆಸಲಿದೆ.

ಹತ್ತಿ ಉತ್ಪಾದನೆ ಇಳಿಕೆ ನಿರೀಕ್ಷೆ

ಮುಂಬೈ (ಪಿಟಿಐ): 2024–25ರ ಋತುವಿನಲ್ಲಿ (ಅಕ್ಟೋಬರ್‌ನಿಂದ ಸೆಪ್ಟೆಂಬರ್) ದೇಶದಲ್ಲಿ ಹತ್ತಿ ಉತ್ಪಾದನೆಯಲ್ಲಿ ಇಳಿಕೆ ಆಗಲಿದೆ ಎಂದು ಭಾರತೀಯ ಹತ್ತಿ ಬೆಳೆಗಾರರ ಒಕ್ಕೂಟ (ಸಿಎಐ) ಅಂದಾಜಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಹತ್ತಿ ಉತ್ಪಾದನೆ 336 ಲಕ್ಷ ಬೇಲ್ ಇತ್ತು. ಈ ಬಾರಿ 311 ಲಕ್ಷ ಬೇಲ್‌ಗೆ ಇಳಿಯುವ ನಿರೀಕ್ಷೆ ಇದೆ. ಹೆಚ್ಚಾಗಿ ಹತ್ತಿ ಬೆಳೆಯುವ ಪ್ರದೇಶಗಳಲ್ಲಿ ಇಳುವರಿ ಕಡಿಮೆ ಆಗಿರುವುದೇ ಇಳಿಕೆಗೆ ಕಾರಣ ಎಂದು ತಿಳಿಸಿದೆ.

ಒಂದು ಬೇಲ್‌ನಲ್ಲಿ 170 ಕೆ.ಜಿ ಹತ್ತಿ ಇರುತ್ತದೆ.

ಹಣಕಾಸು ಸಂಸ್ಥೆಗಳ ರೇಟಿಂಗ್ ಮೇಲ್ದರ್ಜೆಗೆ: ಎಸ್ ಆ್ಯಂಡ್ ಪಿ

ನವದೆಹಲಿ (ಪಿಟಿಐ): ಜಾಗತಿಕ ರೇಟಿಂಗ್ ಸಂಸ್ಥೆ ಎಸ್ ಆ್ಯಂಡ್ ಪಿ ಗ್ಲೋಬಲ್, ಎಸ್‌ಬಿಐ, ಎಚ್‌ಡಿಎಫ್‌ಸಿ ಬ್ಯಾಂಕ್, ಟಾಟಾ ಕ್ಯಾಪಿಟಲ್ ಸೇರಿದಂತೆ ದೇಶದ ಪ್ರಮುಖ 10 ಹಣಕಾಸು ಸಂಸ್ಥೆಗಳ ರೇಟಿಂಗ್ ಅನ್ನು ಮೇಲ್ದರ್ಜೆಗೇರಿಸಿದೆ.

ಭಾರತದ ಹಣಕಾಸು ಸಂಸ್ಥೆಗಳು ದೇಶದ ಉತ್ತಮ ಆರ್ಥಿಕ ಬೆಳವಣಿಗೆಯ ವೇಗಕ್ಕೆ ನಿರಂತರವಾಗಿ ಚಾಲನೆ ನೀಡುತ್ತಿವೆ. ಈ ಸಂಸ್ಥೆಗಳು ವಸೂಲಾಗದ ಸಾಲದ ಪ್ರಮಾಣದಲ್ಲಿ ಸುಧಾರಣೆ ಕಂಡಿವೆ ಎಂದು ಶುಕ್ರವಾರ ಹೇಳಿದೆ. ಭಾರತದ ಬ್ಯಾಂಕ್‌ಗಳು ಮುಂದಿನ 12 ತಿಂಗಳಿನಿಂದ 14 ತಿಂಗಳಿನಲ್ಲಿ ಉತ್ತಮ ಲಾಭದಾಯಕತೆ ಮತ್ತು ಬಂಡವಾಳವನ್ನು ಹೊಂದುವ ನಿರೀಕ್ಷೆಯಿದೆ ಎಂದು ಹೇಳಿದೆ.

ಐವಿಎಫ್: ಜಾಲ ಭೇದಿಸಿದ ಪೊಲೀಸರು

ಹೈದರಾಬಾದ್: ಇಲ್ಲಿನ ಬಾಡಿಗೆ ತಾಯ್ತನ ಮತ್ತು ಅಂಡಾಣು ಮಾರಾಟ ಕೇಂದ್ರವೊಂದರ ಮೇಲೆ ದಾಳಿ ನಡೆಸಿದ ಪೊಲೀಸರು, ಅಕ್ರಮವಾಗಿ ನಡೆಯುತ್ತಿದ್ದ ಕೃತಕ ಗರ್ಭಧಾರಣೆಯ (ಐವಿಎಫ್) ಬೃಹತ್ ಜಾಲವನ್ನು ಭೇದಿಸಿದ್ದಾರೆ.

ಏಳು ಮಹಿಳೆಯರು ಸೇರಿಕೊಂಡು ನಗರದ ಕೆಲವು ಕೃತಕ ಗರ್ಭಧಾರಣೆ ಕೇಂದ್ರಗಳ ಸಹಕಾರದಲ್ಲಿ ಈ ಕೇಂದ್ರ ನಡೆಸುತ್ತಿದ್ದರು. ಇತ್ತೀಚೆಗೆ ಮಗು ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ಸೃಷ್ಟಿ ಐವಿಎಫ್ ಕ್ಲಿನಿಕ್ ಮೇಲೆ ಪೊಲೀಸರು ದಾಳಿ ನಡೆಸಿದ್ದರು. ಇದರ ಬೆನ್ನಲ್ಲೇ, ಈ ಅಕ್ರಮ ಜಾಲ ಬಹಿರಂಗಗೊಂಡಿದೆ.

ಈ ಪ್ರಕರಣದ ಪ್ರಮುಖ ಆರೋಪಿ ಎನ್. ಲಕ್ಷ್ಮಿ ರೆಡ್ಡಿ, ಈ ಹಿಂದೆ ಅಂಡಾಣು ದಾನಿಯಾಗಿ ಹಾಗೂ ಬಾಡಿಗೆ ತಾಯಿಯಾಗಿ ಕಾರ್ಯನಿರ್ವಹಿಸಿದ್ದರು. ಆ ಅನುಭವ ಇಟ್ಟುಕೊಂಡು ಅಕ್ರಮವಾಗಿ ಹಣ ಗಳಿಸಲು ಮಧ್ಯವರ್ತಿಗಳ ಮೂಲಕ ಐವಿಎಫ್ ಕೇಂದ್ರಗಳೊಂದಿಗೆ ಸಂಪರ್ಕ ಸಾಧಿಸಿ ವ್ಯವಹಾರ ನಡೆಸುತ್ತಿದ್ದರು. ಇದಕ್ಕಾಗಿ ಬಾಡಿಗೆ ತಾಯಂದಿರನ್ನು ಮತ್ತು ಅಂಡಾಣು ದಾನಿಗಳನ್ನು ನೇಮಿಸಿಕೊಂಡು, ಅವರನ್ನು ಐವಿಎಫ್ ಕೇಂದ್ರಗಳಿಗೆ ಪೂರೈಸುತ್ತಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶ್ರೀಕೃಷ್ಣ ಎಲ್ಲ ಕಾಲದ ಜಗದ್ಗುರು

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಶ್ರೀಕೃಷ್ಣ ಜನ್ಮಾಷ್ಟಮಿ

ನಮ್ಮ ಮನಸ್ಸು ಎಷ್ಟೋ ಸಂದರ್ಭಗಳಲ್ಲಿ ಏನೋನೋ ಸಿಕ್ಕುಗಳಲ್ಲಿ ಸಿಕ್ಕಿಹಾಕಿಕೊಂಡು ಸಂಕಟಕ್ಕೆ ತುತ್ತಾಗುತ್ತಿರುತ್ತದೆ. ಇಂಥ ಸಂಕಟಸಮಯಗಳು ಇಂಥದೇ ವಯಸ್ಸಿನವರಿಗೆ, ಇಂಥದೇ ವೃತ್ತಿಯರವರಿಗೆ, ಇಂಥದೇ ಜಾತಿಯವರಿಗೆ, ಇಂಥದೇ ವ್ಯಕ್ತಿಗಳಿಗೆ ಮಾತ್ರವೇ ಬರುತ್ತವೆ ಎಂದೇನಿಲ್ಲ; ಯಾರಿಗೂ ಯಾವ ಕಾಲದಲ್ಲೂ ಬಿಕ್ಕಟ್ಟುಗಳು ಎದುರಾಗಬಹುದೆನ್ನಿ. ಆಗ ಮನಸ್ಸು ಪರಿಹಾರಕ್ಕಾಗಿ ಹುಡುಕುತ್ತದೆ; ಮಾರ್ಗದರ್ಶನಕ್ಕಾಗಿ ಹಂಬಲಿಸುತ್ತದೆ. ಅವರವರ ಸಮಸ್ಯೆಗಳಿಗೆ ತಕ್ಕ ಪರಿಹಾರ ಸಿಕ್ಕರೆ ನೆಮ್ಮದಿ. ಆದರೆ ಹೀಗೆ ಎಲ್ಲರಿಗೂ ಸಮಾಧಾನ ನಿಶ್ಚಯವಾಗಿ ಸಿಕ್ಕೇ ಸಿಗುತ್ತದೆ ಎನ್ನಲಾಗುವುದಿಲ್ಲ. ಹೀಗಿರುವಾಗ ಎಲ್ಲರ ಸಮಸ್ಯೆಗಳಿಗೂ ಒಂದೇ ಕಡೆ ಪರಿಹಾರ ಸಿಗುವಂತಾದರೆ ಹೇಗಿರುತ್ತದೆ? ಹೀಗೆ ಸರ್ವದುಃಖಪರಿಹಾರದ ಏಕಸ್ಥಳವೊಂದು ಇರಲು ಸಾಧ್ಯವೆ? ಈ ಪ್ರಶ್ನೆಗೆ ಉತ್ತರ ಎಂದರೆ, ಅದು ಶ್ರೀಕೃಷ್ಣ.

ಶ್ರೀಕೃಷ್ಣನನ್ನು ಪೂರ್ಣಾವತಾರ ಎಂದು ಪರಂಪರೆ ಒಕ್ಕಣಿಸಿದೆ. ಮಾನುಷಭಾವದ ಎಲ್ಲ ಭಾವಗಳ ಮೂರ್ತರೂಪವಾಗಿ ಅವನು ಕಾಣಿಸಿಕೊಂಡ; ಮಾತ್ರವಲ್ಲ, ಆ ಎಲ್ಲ ಭಾವಗಳನ್ನೂ ಮೀರಿನಿಂತ ಕೂಡ. ಹೀಗಾಗಿಯೇ ಅವನು ಪೂರ್ಣಾವತಾರಿ. ಅವನು ಎಲ್ಲರ ಭಾವಗಳನ್ನೂ ಅರ್ಥಮಾಡಿಕೊಳ್ಳಬಲ್ಲ; ಅವನು ಎಲ್ಲರ ಸಮಸ್ಯೆಗಳಿಗೂ ಪರಿಹಾರವಾಗಿಯೂ ಒದಗಬಲ್ಲ. ಹೀಗಾಗಿಯೇ ಅವನು ಜಗದ್ಗುರು.

ಶ್ರೀಕೃಷ್ಣನು ಗೀತೆಯನ್ನು ಉಪದೇಶಿಸಿದ್ದು ಕೇವಲ ಅರ್ಜುನನಿಗೆ ಮಾತ್ರವಲ್ಲ; ಅರ್ಜುನ ಅವನಿಗೆ ಒಂದು ನೆಪ ಅಷ್ಟೆ; ಅವನ ಉಪದೇಶದ ಉದ್ದೇಶ ಇಡಿಯ ಮನುಕುಲ. ನಮ್ಮ ಎಲ್ಲರ ಜೀವನದ ನೆಮ್ಮದಿಗೂ ಬೇಕಾದ ತಿಳಿವಳಿಕೆಯಷ್ಟೂ ಗೀತೆಯಲ್ಲಿದೆ. ಶ್ರೀಕೃಷ್ಣನು ಯಾರಿಗೂ ಒದಗಬಲ್ಲ; ಯಾರ ಸಮಸ್ಯೆಗೂ ಪರಿಹಾರವಾಗಬಲ್ಲ – ಎಂಬುದೇ ಅವನ ವ್ಯಕ್ತಿತ್ವದ ವಿಶೇಷತೆ. ನಾವಿಂದು ಬದುಕುವುದಕ್ಕಾಗಿಯೇ ಹೋರಾಡುತ್ತಿದ್ದೇವೆ, ಹೊಡೆದಾಡುತ್ತಿದ್ದೇವೆ. ಆದರೆ ಗೀತೆ ನಮಗೆ ಚೆನ್ನಾಗಿ ಬದುಕುವ ದಾರಿಯನ್ನು ಕಾಣಿಸಿಕೊಡುತ್ತದೆ; ಮಾತ್ರವಲ್ಲ, ನೆಮ್ಮದಿಯಾಗಿಯೂ ಬದುಕುವ ಬಗೆಯನ್ನು ತಿಳಿಸಿಕೊಡುತ್ತದೆ. ಸಂಗ್ರಾಮದ ನಡುವೆ ತೋರಿಕೊಂಡ ಗೀತೆಗೆ ಜೀವನಸಂಗ್ರಾಮದ ಎಲ್ಲ ಪಟ್ಟುಗಳೂ ಗೊತ್ತಿದೆ. ಶ್ರೀಕೃಷ್ಣನಾದರೂ ಈ ಪಟ್ಟು–ವರಸೆಗಳನ್ನು ಉಪದೇಶಿಸಿದವನಷ್ಟೆ ಅಲ್ಲ; ಅವನ್ನು ತಾನೇ ಅನುಸರಿಸಿದವನು; ಅನುಸರಿಸಿ 'ಜಯ'ಕ್ಕೆ ಕಾರಣನಾದವನು.

ಎಲ್ಲ ವಿಧದ ದುಃಖಗಳೂ ನಾಶವಾಗುವ ಬಗೆಯನ್ನು ಗೀತೆ ಹೀಗೆಂದಿದೆ:

ಪ್ರಸಾದೇ ಸರ್ವದುಃಖಾನಾಂ
ಹಾನಿರಸ್ಯೋಪಜಾಯತೇ
ಪ್ರಸನ್ನಚೇತಸೋ ಹ್ಯಾಶು
ಬುದ್ಧಿಃಪರ್ಯವತಿಷ್ಠತೇ

'ಮನಸ್ಸು ನೆಮ್ಮದಿಯಾಗಿದ್ದಾಗ ಎಲ್ಲ ದುಃಖಗಳೂ ನಾಶವಾಗುತ್ತವೆ. ಏಕೆಂದರೆ ಅಂಥ ಚಿತ್ತಶುದ್ಧನ ಬುದ್ಧಿ ಬೇಗನೆ ಸ್ಥಿರವಾಗುತ್ತದೆ' ಎಂಬುದು ಶ್ರೀಕೃಷ್ಣನ ಈ ಮಾತಿನ ತಾತ್ಪರ್ಯ.

ನಮ್ಮ ಎಲ್ಲರ ಇಂದಿನ ಸಮಸ್ಯೆಯನ್ನು ಶ್ರೀಕೃಷ್ಣ ಅಂದೇ ಗುರುತಿಸಿದ್ದು ಮಾತ್ರವಲ್ಲ, ಅದಕ್ಕೆ ಪರಿಹಾರವನ್ನೂ ಸೂಚಿಸಿದ್ದಾನೆ. ನಾವು ನಮ್ಮ ಮನಸ್ಸನ್ನು ಎಲ್ಲಿ ನೆಲೆಯಾಗಿಸಬೇಕೋ ಅಲ್ಲಿ ಅದನ್ನು ನೆಲೆಗೊಳ್ಳಲು ಬಿಡುತ್ತಿಲ್ಲ; ಈ ಕಾರಣದಿಂದಲೇ ಮನಸ್ಸು ಉದ್ವೇಗಕ್ಕೆ ಒಳಗಾಗುತ್ತಿರುತ್ತದೆ. ಉದ್ವೇಗಕ್ಕೆ ಸಿಕ್ಕಿದ ಮನಸ್ಸು ಬುದ್ಧಿಯನ್ನು ಕೆಡಿಸುವುದು ಸಹಜ. ಅಂಕೆಯಲ್ಲಿರದ ಮನಸ್ಸು–ಬುದ್ಧಿಗಳು ಒಂದಾಗಿ ನಮ್ಮ ಜೀವನದಲ್ಲಿ ಅಶಾಂತಿಯನ್ನು ಸೃಷ್ಟಿಸುತ್ತಿರುತ್ತದೆ.

ನಮ್ಮ ಮನಸ್ಸು ಪ್ರತಿ ಕ್ಷಣವೂ ಕೆರಳುತ್ತಿರುತ್ತದೆ; ಅದು ಒಂದೆಡೆ ನಿಲ್ಲದು; ಸದಾ ಕಾಲ ಯಾವುದಾದರೊಂದು ವಿಷಯದ ಹಿಂದೆ ಬಿದ್ದು ಅಲೆಯುತ್ತಲೇ ಇರುತ್ತದೆ. ಒಂದು ಕ್ಷಣವೂ ನೆಮ್ಮದಿಯಾಗಿ ಯಾವ ವಿಷಯದ ಬಗ್ಗೆಯೂ ನಾವು ನಮ್ಮ ಗಮನವನ್ನು ಕೇಂದ್ರೀಕರಿಸಲು ಸೋಲುತ್ತಿದ್ದೇವೆ. ಮನಸ್ಸಿನ ನಿಗ್ರಹದಲ್ಲಿಯೇ ಜೀವನದ ನೆಮ್ಮದಿಯ ಗುಟ್ಟು ಅಡಗಿದೆ ಎಂಬುದು ಶ್ರೀಕೃಷ್ಣನ ಮುಖ್ಯ ಉಪದೇಶ. ❖

ದೇಶ ರಕ್ಷಣೆಗೆ 'ಸುದರ್ಶನ ಚಕ್ರ'

ಒಂದನೇ ಪುಟದಿಂದ...

103 ನಿಮಿಷಗಳ ಭಾಷಣ

ಪ್ರಧಾನಿ ಮೋದಿ ಅವರು ಸುದೀರ್ಘ 103 ನಿಮಿಷ ಮಾತನಾಡಿ, ತಮ್ಮದೇ ಹೆಸರಿನಲ್ಲಿದ್ದ ಸುದೀರ್ಘ ಭಾಷಣದ ದಾಖಲೆ ಮುರಿದರು. ಕಳೆದ ವರ್ಷ 98 ನಿಮಿಷಗಳ ಭಾಷಣ ಮಾಡಿದ್ದು ಅವರ ಸುದೀರ್ಘ ಭಾಷಣ ಎನಿಸಿತ್ತು. 2016ರಲ್ಲಿ ಅವರು 96 ನಿಮಿಷ ಭಾಷಣ ಮಾಡಿದ್ದರು. 2017ರ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮಾಡಿದ್ದ 56 ನಿಮಿಷಗಳ ಭಾಷಣ ಅವರ ಅತ್ಯಂತ ಕಡಿಮೆ ಅವಧಿಯ ಭಾಷಣವಾಗಿತ್ತು.

ಸತತ 12ನೇ ಭಾಷಣ: ಮೋದಿ ಅವರು ಕೆಂಪು ಕೋಟೆಯಿಂದ ಸತತ 12 ಭಾಷಣಗಳನ್ನು ಮಾಡುವ ಮೂಲಕ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರನ್ನು ಹಿಂದಿಕ್ಕಿದರು. ಮಾಜಿ ಪ್ರಧಾನಿ ಜವಾಹರಲಾಲ್ ಅವರು ಸತತ 17 ಸ್ವಾತಂತ್ರ್ಯ ದಿನಾಚರಣೆ ಭಾಷಣ ಮಾಡಿದ್ದಾರೆ. ಇಂದಿರಾ ಅವರು ಒಟ್ಟು 16 ಭಾಷಣ ಮಾಡಿದ್ದರೂ, ಅದರಲ್ಲಿ 11 ಭಾಷಣ (1966ರಿಂದ 1977ರವರೆಗೆ) ಸತತವಾಗಿದ್ದವು.

ಪ್ರಧಾನಿ ಮಾತು...

- 'ನುಸುಳುಕೋರರು' ನನ್ನ ದೇಶದ ಯುವಕರ ಜೀವನೋಪಾಯವನ್ನು ಕಸಿದುಕೊಳ್ಳುತ್ತಿದ್ದು, ಇಲ್ಲಿನ ಹೆಣ್ಣುಮಕ್ಕಳನ್ನು ಗುರಿಯಾಗಿಸಿಕೊಂಡಿದ್ದಾರೆ. ಅದನ್ನು ಸಹಿಸಲು ಸಾಧ್ಯವಿಲ್ಲ
- ಬಾಹ್ಯಾಕಾಶ ಕ್ಷೇತ್ರದಲ್ಲಿ 300ಕ್ಕೂ ಹೆಚ್ಚು ನವೋದ್ಯಮಗಳು ಕಾರ್ಯನಿರ್ವಹಿಸುತ್ತಿವೆ. ಸಾವಿರಾರು ಯುವಕರು ಈ ನವೋದ್ಯಮಗಳಲ್ಲಿ ಪೂರ್ಣ ಸಾಮರ್ಥ್ಯದೊಂದಿಗೆ ಕೆಲಸ ಮಾಡುತ್ತಿದ್ದಾರೆ
- ದೇಶದ ಅಗತ್ಯಕ್ಕೆ ಬೇಕಾದಷ್ಟು ರಸಗೊಬ್ಬರವನ್ನು ಇಲ್ಲಿಯೇ ತಯಾರಿಸುವಂತಾಗಬೇಕು ಎಂದು ಯುವಕರು, ಕೈಗಾರಿಕಾ ವಲಯ ಮತ್ತು ಖಾಸಗಿ ವಲಯದವರಿಗೆ ಹೇಳಲು ಬಯಸುತ್ತೇನೆ. ರಸಗೊಬ್ಬರಗಳಿಗೆ ನಾವು ಯಾರನ್ನೂ ಅವಲಂಬಿಸಬಾರದು
- ಈ ವರ್ಷಾಂತ್ಯದಲ್ಲಿ ಭಾರತದ ದೇಸಿ ಸೆಮಿಕಂಡಕ್ಟರ್ ಚಿಪ್ ಮಾರುಕಟ್ಟೆಗೆ ಬರಲಿದೆ

ಕೇಂದ್ರದ ವಿರುದ್ಧ ಸಿ.ಎಂ ಮತ್ತೆ ಕಿಡಿ

ಒಂದನೇ ಪುಟದಿಂದ...

'ತೆರಿಗೆ ಮುಂತಾದ ಸಂಪನ್ಮೂಲಗಳನ್ನು ಹಂಚುವಾಗ ಕೇಂದ್ರ ಸರ್ಕಾರವು ನಿಷ್ಪಕ್ಷಪಾತ ಧೋರಣೆ ಅನುಸರಿಸುತ್ತಿಲ್ಲ ಎನ್ನುವ ಅಭಿಪ್ರಾಯ ಕರ್ನಾಟಕ ಮಾತ್ರವಲ್ಲದೇ ಇತರೆ ರಾಜ್ಯಗಳಿಂದಲೂ ವ್ಯಕ್ತವಾಗುತ್ತಿದೆ' ಎಂದೂ ಅವರು ಹೇಳಿದರು.

'ಕರ್ನಾಟಕದಲ್ಲಿ ಕೃಷಿ ವಲಯಕ್ಕೆ 2025-26ರ ಬಜೆಟ್‌ನಲ್ಲಿ ₹51,339 ಕೋಟಿ ಒದಗಿಸಿದ್ದೇವೆ. ಕೃಷಿ ವಲಯಕ್ಕೆ ನಾವು ಹೆಚ್ಚಿನ ಒತ್ತು ಕೊಟ್ಟರೂ, ನಮಗೆ ಬೇಕಾಗಿರುವಷ್ಟು ಗೊಬ್ಬರವನ್ನು ಕೇಂದ್ರ ಸರ್ಕಾರ ಪೂರೈಸುತ್ತಿಲ್ಲ. ಇದರಿಂದ ಕರ್ನಾಟಕದಲ್ಲಿ ಸಮಸ್ಯೆಗಳಾಗಿವೆ, ಇದನ್ನು ಬೇಗನೇ ಪರಿಹರಿಸಬೇಕು' ಎಂದು ಆಗ್ರಹಿಸಿದರು.

'ದೇಶದ ಪ್ರಮುಖ ಸಂಸ್ಥೆಗಳು ನಡೆಸಿರುವ ಸಮೀಕ್ಷೆಗಳ ಪ್ರಕಾರ, ಶೇ 10ರಷ್ಟಿರುವ ಶ್ರೀಮಂತರ ಬಳಿ ಶೇ 80ರಷ್ಟು ಸಂಪತ್ತು ಶೇಖರಣೆಯಾಗಿದೆ. ಅವರಲ್ಲಿ ಶೇ 3ರಷ್ಟು ಜನರು ಮಾತ್ರ ಜಿಎಸ್‌ಟಿ ಪಾವತಿಸುತ್ತಿದ್ದಾರೆ. ಉಳಿದ ಶೇ 90ರಷ್ಟು ಜನ ಹೊಟ್ಟೆ-ಬಟ್ಟೆಗೆ ದುಡಿಯುವವರಾದರೂ ಶೇ 97ರಷ್ಟು ಜಿಎಸ್‌ಟಿ ಪಾವತಿಸುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಯಾವ ಆರ್ಥಿಕತೆ ಮುಂದುವರೆಯಲು ಸಾಧ್ಯ' ಎಂದೂ ಅವರು ಪ್ರಶ್ನಿಸಿದರು.

ಪ್ರಧಾನಿಯ ಪ್ರಮುಖ ಘೋಷಣೆಗಳು

ಒಂದನೇ ಪುಟದಿಂದ...

ಆರ್ಥಿಕ ಬೆಳವಣಿಗೆಯ ವೇಗ ಹೆಚ್ಚಿಸಲು ಮತ್ತು 2047ರ ವೇಳೆಗೆ ದೇಶದ ಆರ್ಥಿಕತೆಯ ಗಾತ್ರವನ್ನು 10 ಟ್ರಿಲಿಯನ್ ಡಾಲರ್‌ಗೆ ತಲುಪಿಸುವ ನಿಟ್ಟಿನಲ್ಲಿ ಮಹತ್ವದ ಸುಧಾರಣೆಗಳನ್ನು ತರಲು ಕಾರ್ಯಪಡೆಯೊಂದನ್ನು ರಚಿಸುವುದಾಗಿ ಘೋಷಿಸಿದರು.

ಉದ್ಯೋಗ ಯೋಜನೆ

ಮುಂದಿನ ಎರಡು ವರ್ಷಗಳಲ್ಲಿ 3.5 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಹೊಂದಿರುವ 'ಪ್ರಧಾನ ಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆ' ಪ್ರಾರಂಭಿಸುವುದಾಗಿ ಘೋಷಿಸಿದರು. ₹1 ಲಕ್ಷ ಕೋಟಿ ಮೊತ್ತದ ಈ ಯೋಜನೆಯಡಿ, ಹೊಸದಾಗಿ ಉದ್ಯೋಗಕ್ಕೆ ಸೇರಿಕೊಂಡ ಯುವಜನರು ಪ್ರತಿ ತಿಂಗಳು ₹15 ಸಾವಿರ ಆರ್ಥಿಕ ನೆರವು ಪಡೆಯಲಿದ್ದಾರೆ. ಈ ಉಪಕ್ರಮದಿಂದ ಸುಮಾರು ಮೂರು ಕೋಟಿ ಯುವಜನರು ಪ್ರಯೋಜನ ಪಡೆಯುವ ನಿರೀಕ್ಷೆಯಿದೆ.

ಈ ಯೋಜನೆಯು ಸ್ವತಂತ್ರ ಭಾರತದಿಂದ ಸಮೃದ್ಧ ಭಾರತದೆಡೆಗಿನ ಸೇತುವೆಯನ್ನು ಬಲಪಡಿಸುವಲ್ಲಿ ಪ್ರಮುಖ ಹೆಜ್ಜೆ ಎಂದು ಸರ್ಕಾರ ಪರಿಗಣಿಸಿದೆ. ದೇಶದಾದ್ಯಂತ ಉದ್ಯೋಗ ಸೃಷ್ಟಿಸುವ ಪ್ರಯತ್ನದ ಭಾಗವಾಗಿ ಮೋದಿ ನೇತೃತ್ವದ ಸಚಿವ ಸಂಪುಟ ಇದೇ ವರ್ಷ ಜುಲೈ 1ರಂದು ಈ ಯೋಜನೆಗೆ ಅನುಮೋದನೆ ನೀಡಿತ್ತು.

ಜನಸಂಖ್ಯಾ ಮಿಷನ್

ಒಳನುಸುಳುವಿಕೆ, ಅಕ್ರಮ ವಲಸೆಯಿಂದಾಗಿ ಗಡಿಗೆ ಹೊಂದಿಕೊಂಡಿರುವ ಪ್ರದೇಶಗಳ ಜನಸಂಖ್ಯೆಯ ಸ್ವರೂಪದಲ್ಲಿ ಅಸಮತೋಲನ ಕಂಡುಬಂದಿರುವುದು ಕಳವಳಕ್ಕೆ ಕಾರಣವಾಗಿದೆ ಎಂದು ಹೇಳಿದರು. ರಾಷ್ಟ್ರೀಯ ಭದ್ರತೆಗೆ ಎದುರಾಗಿರುವ ಈ ಸವಾಲು ಎದುರಿಸಲು ಮತ್ತು ದೇಶದ ಜನರ ಒಗ್ಗಟ್ಟು, ಸಮಗ್ರತೆ ಹಾಗೂ ಹಕ್ಕುಗಳ ರಕ್ಷಣೆ ಖಾತರಿಪಡಿಸಿಕೊಳ್ಳಲು ಉನ್ನತ ಮಟ್ಟದ ಜನಸಂಖ್ಯಾ ಮಿಷನ್ ಪ್ರಾರಂಭಿಸುವುದಾಗಿ ಘೋಷಿಸಿದರು.

ಅಣು ವಿದ್ಯುತ್ ಸ್ಥಾವರ ನಿರ್ಮಾಣ

ಮುಂದಿನ ಎರಡು ದಶಕಗಳಲ್ಲಿ ದೇಶದ ಪರಮಾಣು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹತ್ತು ಪಟ್ಟು ಹೆಚ್ಚಿಸುವ ಗುರಿ ಇಟ್ಟುಕೊಳ್ಳಲಾಗಿದ್ದು, ಅದಕ್ಕಾಗಿ 10 ಹೊಸ ಅಣು ವಿದ್ಯುತ್ ಸ್ಥಾವರಗಳ ನಿರ್ಮಾಣದ ಕೆಲಸ ನಡೆಯುತ್ತಿದೆ ಎಂದು ಪ್ರಧಾನಿ ಹೇಳಿದರು.

ಅಲಾಸ್ಕದಲ್ಲಿ ಟ್ರಂಪ್, ಪುಟಿನ್ ಸಭೆ • ಆರ್ಥಿಕ ಒಪ್ಪಂದ ಕುರಿತು ಮಾತುಕತೆ ಸಾಧ್ಯತೆ

ಕದನ ವಿರಾಮ: ಅನಿಶ್ಚಿತತೆ ನಡುವೆ ಸಭೆ

ವಾಷಿಂಗ್ಟನ್/ಅಲಾಸ್ಕ (ಪಿಟಿಐ/ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಅಲಾಸ್ಕದಲ್ಲಿ ಶುಕ್ರವಾರ ಬಂದಿಳಿದರು.

ಉಭಯ ನಾಯಕರು ಇಲ್ಲಿಗೆ ಬಂದಿಳಿದ ನಂತರ ಹಸ್ತಲಾಘವ ಮಾಡಿ, ಸಭೆ ಆರಂಭಿಸಿದರು.

ರಷ್ಯಾ–ಉಕ್ರೇನ್ ನಡುವಿನ ಯುದ್ಧ ಕೊನೆಗಾಣಿಸಿ, ಕದನ ವಿರಾಮ ಘೋಷಿಸಲು ಅಂತಿಮ ಒಪ್ಪಂದಕ್ಕೆ ಬರುವ ಕುರಿತು ಸಭೆಯಲ್ಲಿ ಉಭಯ ನಾಯಕರು ಚರ್ಚಿಸಲಿದ್ದಾರೆ.

ಪುಟಿನ್ ಅವರ ಆಗಮನಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, 'ಉಕ್ರೇನ್ ಮತ್ತು ರಷ್ಯಾ ನಡುವೆ ತ್ವರಿತವಾಗಿ ಕದನ ವಿರಾಮ ಘೋಷಣೆ ಆಗಬೇಕು ಎಂಬುದು ನನ್ನ ಬಯಕೆ. ಇಂದಿನ ಈ ಸಭೆಯಲ್ಲಿ ಇದು ಸಾಧ್ಯವಾಗಲಿದೆಯೇ ಎಂಬುದು ನನಗೆ ತಿಳಿಯದು' ಎಂದು ಹೇಳಿದರು.

'ಒಪ್ಪಂದ ಕುರಿತಂತೆ ಯಾವುದೇ ನಿರ್ದಿಷ್ಟವಾಗಿ ಯಾವುದೂ ನಿರ್ಧಾರವಾಗಿಲ್ಲ' ಎನ್ನುವ ಮೂಲಕ ಅವರು,

ಡೊನಾಲ್ಡ್ ಟ್ರಂಪ್–ವ್ಲಾದಿಮಿರ್ ಪುಟಿನ್ –ಎಎಫ್‌ಪಿ ಚಿತ್ರ

ಇಂದಿನ ಸಭೆ ಉದ್ದೇಶಿತ ಗುರಿ ಸಾಧಿಸುವಲ್ಲಿ ಸಫಲವಾಗುವ ಅನಿಶ್ಚಿತತೆ ಇರುವುದನ್ನು ಸೂಚ್ಯವಾಗಿ ಹೇಳಿದರು.

'ಕದನ ವಿರಾಮಕ್ಕೆ ಒಂದು ವೇಳೆ ಪುಟಿನ್ ಅವರು ಒಪ್ಪದಿದ್ದಲ್ಲಿ ನಾನು ಸಭೆಯಿಂದ ಹೊರನಡೆಯುವುದು ಖಚಿತ' ಎಂದು ವಿಮಾನದಲ್ಲಿ ಪ್ರಯಾಣಿಸುವ ವೇಳೆ, ಫಾಕ್ಸ್ ನ್ಯೂಸ್‌ಗೆ ನೀಡಿದ ಪ್ರತ್ಯೇಕ ಸಂದರ್ಶನದಲ್ಲಿ ಟ್ರಂಪ್ ಹೇಳಿದ್ದಾರೆ.

'ಹೆಚ್ಚುವರಿ ಸುಂಕವೇ ಕಾರಣ': ಅಲಾಸ್ಕಕ್ಕೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, 'ರಷ್ಯಾದಿಂದ ಎರಡನೇ ಅತಿ ಹೆಚ್ಚು ಕಚ್ಚಾತೈಲ ಖರೀದಿಸುತ್ತಿದ್ದ ಭಾರತದ ಮೇಲೆ ಹೆಚ್ಚುವರಿ ಸುಂಕ ವಿಧಿಸಿದ್ದರಿಂದಲೇ, ರಷ್ಯಾವು–ಅಮೆರಿಕದ ಜೊತೆಗೆ ಮಾತುಕತೆಗೆ ಮುಂದಾಯಿತು' ಎಂದು ತಿಳಿಸಿದ್ದಾರೆ.

'ನೀವು ರಷ್ಯಾದಿಂದ ಕಚ್ಚಾತೈಲ ಖರೀದಿಸುತ್ತಿದ್ದು, ನಿಮಗೆ ಹೆಚ್ಚುವರಿ ತೆರಿಗೆ ವಿಧಿಸಲಾಗುವುದು ಎಂದು ಭಾರತಕ್ಕೆ ಮೊದಲೇ ಎಚ್ಚರಿಕೆ ನೀಡಲಾಗಿತ್ತು. ಅದೇ ರಷ್ಯಾ ಮಾತುಕತೆ ನಡೆಸಲು ಕಾರಣವಾಗಿದೆ' ಎಂದು ಟ್ರಂಪ್ ತಿಳಿಸಿದ್ದಾರೆ.

ಬದಲಾವಣೆ ಇಲ್ಲ: 'ರಷ್ಯಾದಿಂದ ತೈಲ ಆಮದು ನಿಲ್ಲಿಸಿಲ್ಲ. ಭಾರತವೂ ಮುಂದೆಯೂ ಖರೀದಿಸಲಿದ್ದು, ಈ ನಿರ್ಧಾರದಲ್ಲಿ ಬದಲಾವಣೆಯಿಲ್ಲ' ಎಂದು ಐಒಸಿಎಲ್‌ನ ಮುಖ್ಯಸ್ಥ ಎ.ಎಸ್. ಸಾಹ್ನಿ ತಿಳಿಸಿದ್ದಾರೆ.

ಜಾಗತಿಕ ವ್ಯವಹಾರದಲ್ಲಿ ಭಾರತದ ಪ್ರಾಬಲ್ಯ: ವ್ಲಾದಿಮಿರ್ ಪುಟಿನ್ ಶ್ಲಾಘನೆ

ಮಾಸ್ಕೋ (ಪಿಟಿಐ): 'ಜಾಗತಿಕ ವ್ಯವಹಾರಗಳಲ್ಲಿ ಭಾರತವು ಸ್ಪಷ್ಟವಾದ ಪ್ರಾಬಲ್ಯ ಹೊಂದಿದೆ' ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ತಿಳಿಸಿದ್ದಾರೆ. ಅಂತರರಾಷ್ಟ್ರೀಯ ಪ್ರಮುಖ ವಿಚಾರಗಳಲ್ಲಿ ಭಾರತವು ಸಕ್ರಿಯ ಪಾತ್ರವನ್ನು ಉಲ್ಲೇಖಿಸಿ ಈ ಅಭಿಪ್ರಾಯಪಟ್ಟಿದ್ದಾರೆ.

ಸ್ವಾತಂತ್ರ್ಯ ದಿನದ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಂದೇಶ ಕಳುಹಿಸಿರುವ ಅವರು, 'ಎರಡು ರಾಷ್ಟ್ರಗಳ ನಡುವೆ ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ರಷ್ಯಾ ಬದ್ಧವಾಗಿದೆ' ಎಂದು ಪುಟಿನ್ ಒತ್ತಿ ಹೇಳಿದ್ದಾರೆ.

'ಜಾಗತಿಕ ವ್ಯವಹಾರಗಳಲ್ಲಿ ಭಾರತವು ಸ್ಪಷ್ಟವಾದ ಪ್ರಾಬಲ್ಯ ಹೊಂದಿದೆ. ಹಲವು ಪ್ರಮುಖ ಸಮಸ್ಯೆಗಳನ್ನು ಬಗೆಹರಿಸಲು ಸಕ್ರಿಯವಾಗಿ ಭಾಗವಹಿಸಿದೆ' ಎಂದು ತಿಳಿಸಿದ್ದಾರೆ.

ಯುದ್ಧ ತಪ್ಪಿಸಿದ್ದು ನಾನೇ; ಟ್ರಂಪ್ ಪುನರುಚ್ಚಾರ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ಭಾರತ–ಪಾಕ್ ನಡುವೆ ಅಣ್ವಸ್ತ್ರ ಯುದ್ಧ ನಡೆಯುವ ಸಾಧ್ಯತೆ ಇದ್ದು, ಅದನ್ನು ನಾನೇ ತಪ್ಪಿಸಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ.

ಓವಲ್ ಕಚೇರಿಯಲ್ಲಿ ಮಾತನಾಡಿದ ಅವರು, 'ನೀವು ಭಾರತ ಹಾಗೂ ಪಾಕಿಸ್ತಾನವನ್ನು ಒಮ್ಮೆ ಗಮನಿಸಿ. ವಿಮಾನಗಳನ್ನು ಗಾಳಿಯಲ್ಲಿ ಹೊಡೆದುರುಳಿಸಲಾಯಿತು. ಆರರಿಂದ ಏಳು ವಿಮಾನಗಳು ಕೆಳಕ್ಕುರುಳಿದವು. ಅವರು ಅಣ್ವಸ್ತ್ರ ಯುದ್ಧಕ್ಕೂ ಮುಂದಾಗಿದ್ದರು, ನಾವು ಸಮಸ್ಯೆಯನ್ನು ಬಗೆಹರಿಸಿದೆವು' ಎಂದು ಹೇಳಿದ್ದಾರೆ.

ರಷ್ಯಾದಿಂದ 20 ಲಕ್ಷ ಬ್ಯಾರೆಲ್ ತೈಲ ಖರೀದಿ

ನವದೆಹಲಿ (ಪಿಟಿಐ): ರಷ್ಯಾದಿಂದ ಭಾರತವು ಪ್ರತಿ ನಿತ್ಯ ಖರೀದಿಸುವ ಕಚ್ಚಾ ತೈಲದ ಪ್ರಮಾಣವು ಆಗಸ್ಟ್ ತಿಂಗಳ ಮೊದಲಾರ್ಧದಲ್ಲಿ 20 ಲಕ್ಷ ಬ್ಯಾರೆಲ್‌ಗೆ ಏರಿಕೆಯಾಗಿದೆ ಎಂದು ಜಾಗತಿಕ ವ್ಯಾಪಾರ ವಿಶ್ಲೇಷಕ ಸಂಸ್ಥೆ ಕೆಪ್ಲೆರ್ ತಿಳಿಸಿದೆ.

ಪ್ರಸಕ್ತ ತಿಂಗಳ ಮೊದಲಾರ್ಧದಲ್ಲಿ ದಿನಕ್ಕೆ ಅಂದಾಜು 52 ಲಕ್ಷ ಬ್ಯಾರೆಲ್ ಕಚ್ಚಾ ತೈಲವು ದೇಶಕ್ಕೆ ಆಮದಾಗಿದೆ. ಈ ಪೈಕಿ ಶೇ 38ರಷ್ಟು ರಷ್ಯಾದಿಂದ ಬಂದಿದೆ ಎಂದು ತಿಳಿಸಿದೆ.

ಜುಲೈ ತಿಂಗಳಿನಲ್ಲಿ ರಷ್ಯಾದಿಂದ ಪ್ರತಿ ನಿತ್ಯ 16 ಲಕ್ಷ ಬ್ಯಾರೆಲ್ ತೈಲ ಆಮದಾಗಿತ್ತು. ಇದು ಆಗಸ್ಟ್‌ನಲ್ಲಿ 20 ಲಕ್ಷ ಬ್ಯಾರೆಲ್‌ಗೆ ಹೆಚ್ಚಳವಾಗಿದೆ. ಇರಾಕ್, ಸೌದಿ ಅರೇಬಿಯಾದಿಂದ ಆಮದು ಕಡಿಮೆಯಾಗಿದೆ ಎಂದು ತಿಳಿಸಿದೆ.

'ಆಗಸ್ಟ್ ತಿಂಗಳಿಗೆ ಬೇಕಾದ ದಾಸ್ತಾನಿಗೆ ಜೂನ್ ಮತ್ತು ಜುಲೈನಲ್ಲಿ ಬೇಡಿಕೆ ಸಲ್ಲಿಸಲಾಗಿರುತ್ತದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಸುಂಕ ನಿರ್ಧಾರದ ಪರಿಣಾಮವು ಸೆಪ್ಟೆಂಬರ್ ನಂತರ ಇರಲಿದೆ' ಎಂದು ಕೆಪ್ಲೆರ್‌ನ ಸಂಶೋಧನಾ ವಿಶ್ಲೇಷಕ (ಸಂಸ್ಕರಣೆ ಮತ್ತು ಮಾಡೆಲಿಂಗ್) ಸುಮಿತ್ ರಿಟೋಲಿಯಾ ಹೇಳಿದ್ದಾರೆ.

ಆ್ಯಕ್ಷನ್‌ಗೆ ಸೀಮಿತವಾದ ಕಥೆ

‘ಕೈಥಿ’, ‘ವಿಕ್ರಮ್’, ‘ಲಿಯೋ’ ಹೀಗೆ ತನ್ನ ಲೋಕೇಶ್ ಸಿನಿಮ್ಯಾಟಿಕ್ ಯೂನಿವರ್ಸ್ (ಎಲ್‌ಸಿಯು) ಅಥವಾ ಲೋಕಿವರ್ಸ್‌ಗೆ ಹೆಸರುವಾಸಿಯಾಗಿರುವ ನಿರ್ದೇಶಕ ಲೋಕೇಶ್ ಕನಗರಾಜ್, ಈ ಪ್ರಪಂಚದಿಂದ ಹೊರಹೆಜ್ಜೆ ಇಟ್ಟು ‘ಕೂಲಿ’ಯನ್ನು ತೆರೆಗೆ ತಂದಿದ್ದಾರೆ. ಈ ಸಿನಿಮಾಗೂ ‘ಎಲ್‌ಸಿಯು’ಗೆ ಯಾವುದೇ ಸಂಬಂಧ ಇಲ್ಲ. ಇದು ಸೂಪರ್‌ಸ್ಟಾರ್ ರಜನಿಕಾಂತ್‌ಗಾಗಿಯೇ ಲೋಕೇಶ್ ಮಾಡಿದ ಪ್ರತ್ಯೇಕ ಸಿನಿಮಾ. ಹೀಗಾಗಿಯೇ ಫೈಟ್ಸ್, ಮಲ್ಟಿಸ್ಟಾರ್‌ಗಳು ಇದರಲ್ಲಿ ತುಂಬಿವೆ. ಲೋಕೇಶ್ ನಿರ್ದೇಶನದ ‘ವಿಕ್ರಮ್’, ರಜನಿಕಾಂತ್ ನಟನೆಯ ‘ಜೈಲರ್’ ಮಾದರಿಯಲ್ಲಿ ಈ ಸಿನಿಮಾ ಸಾಗುತ್ತದೆ. ಕಥೆಯನ್ನು ಎಳೆದಾಡಿ ಅಭಿಮಾನಿಗಳನ್ನು ಖುಷಿಪಡಿಸುವುಕ್ಕೇ ನಿರ್ದೇಶಕರು ಹೆಜ್ಜೆ ಇಟ್ಟಂತೆ ಭಾಸವಾಗುತ್ತದೆ.

ದೇವ;ದೇವರಾಜ್(ರಜನಿಕಾಂತ್) ‘ದೇವ ಮ್ಯಾನ್ಷನ್’ನ ಮಾಲೀಕ. ಈತನ ಸ್ನೇಹಿತ ರಾಜಶೇಖರ್(ಸತ್ಯರಾಜ್) ನಿಧನ ಹೊಂದಿದಾಗ ಈ ಸಾವು ಸಹಜವಲ್ಲ, ಅದೊಂದು ಕೊಲೆ ಎಂದು ದೇವನಿಗೆ ತಿಳಿಯುತ್ತದೆ. ಸ್ನೇಹಿತನನ್ನು ಕೊಂದವರ ವಿರುದ್ಧ ಸೇಡು ತೀರಿಸಿಕೊಳ್ಳಲು ರಾಜಶೇಖರ್ ಮಗಳ (ಶೃತಿ ಹಾಸನ್)ಜೊತೆಗೂಡಿ ದೇವ ಯೋಜನೆ ರೂಪಿಸುತ್ತಾನೆ. ಹೀಗೆ ವಿಶಾಖಪಟ್ಟಣ ಬಂದರಿನಲ್ಲಿರುವ ‘ಕಿಂಗ್‌ಪಿನ್’ ಕಂಪನಿ ಪ್ರವೇಶಿಸುವ ದೇವನಿಗೆ ಆ ಕಂಪನಿ ಮಾಲೀಕ ಸೈಮನ್(ನಾಗಾರ್ಜುನ) ಹಾಗೂ ದಯಾಳ್(ಸೌಬೀನ್) ಎದುರಾಗುತ್ತಾರೆ. ಇಲ್ಲಿಂದ ಕಥೆ ತೆರೆದುಕೊಳ್ಳುತ್ತದೆ. ದೇವನ 30 ವರ್ಷಗಳ ಹಿಂದಿನ ವೈಯಕ್ತಿಕ ಜೀವನ, ‘ಕೂಲಿ’ ಪ್ರಪಂಚವೂ ಇಲ್ಲಿ ಅನಾವರಣಗೊಳ್ಳುತ್ತದೆ.

ಈ ಹಿಂದೆ ಹಲವು ಸಿನಿಮಾಗಳಲ್ಲಿ ಬಂದಂತಹ ಅಂಗಾಂಗ ಮಾರಾಟ ಮಾಫಿಯಾ ಕಥೆಯನ್ನು ಇದು ಹೊಂದಿದೆ. ‘ಡ್ರಗ್ಸ್’ ಬಳಿಕ ಈ ಮಾಫಿಯಾದ ಕಥೆಯನ್ನು ಲೋಕೇಶ್ ಇಲ್ಲಿ ಹೆಣೆದಿದ್ದಾರೆ. ‘ಕೈಥಿ’, ‘ವಿಕ್ರಮ್’, ‘ಮಾಸ್ಟರ್’ನಲ್ಲಿರುವಂತೆ ಗಟ್ಟಿಯಾದ ಕಥೆಯ ಕೊರತೆ ‘ಕೂಲಿ’ಯಲ್ಲಿದೆ. ಇದು ಚಿತ್ರಕಥೆಯ ಮೇಲೂ ಪರಿಣಾಮ ಬೀರಿದೆ. ಸುಮಾರು ಮೂರು ಗಂಟೆಗಳ ಈ ಸಿನಿಮಾದಲ್ಲಿ ಅನಗತ್ಯ ದೃಶ್ಯಗಳ ಸರಣಿಯೇ ಕಾಣಸಿಗುತ್ತದೆ. ಇಡೀ ಸಿನಿಮಾದಲ್ಲಿ ರಜನಿಕಾಂತ್ ಗತ್ತು ಪ್ರದರ್ಶಿಸುವಂಥ ದೃಶ್ಯಗಳು ಹಾಗೂ ಬಿಜಿಎಂ ಕೊರತೆ ಎದ್ದುಕಾಣುತ್ತದೆ. ವಾವ್ ಎನ್ನುವಂತಹ, ಸತತವಾಗಿ ಶಿಳ್ಳೆ, ಚಪ್ಪಾಳೆ ಕೇಳಿಸುವಂತಹ ರಜನಿಕಾಂತ್ ಸ್ಟೈಲಿಶ್ ದೃಶ್ಯಗಳು ಸಿನಿಮಾದಲ್ಲಿಲ್ಲ. ರಜನಿಕಾಂತ್ ಅವರ ಗತ್ತು, ಗಮ್ಮತ್ತು ಈ ಹಿಂದಿನ ಸಿನಿಮಾಗಳಿಗಿಂತ ಇಲ್ಲಿ ಕೊಂಚ ಕಡಿಮೆಯೇ ಎನ್ನಬಹುದು. ಮೊದಲಾರ್ಧದಲ್ಲಿ ಬರುವ ‘ಮೋನಿಕಾ..’ ಹಾಡು ಹಾಗೂ ಅದರಲ್ಲಿನ ಸೌಬೀನ್ ನೃತ್ಯ ಚೆನ್ನಾಗಿದೆ.

ರಜನಿಕಾಂತ್

ಚಿತ್ರರಂಗದಲ್ಲಿ 50 ವರ್ಷ ಪೂರೈಸಿರುವ ರಜನಿಕಾಂತ್ ಅವರಿಗಾಗಿಯೇ ಈ ಸಿನಿಮಾ ಮಾಡಿರುವುದರಿಂದ 74ರ ರಜನಿ ಪ್ರತಿ ಫ್ರೇಮ್‌ನಲ್ಲೂ ಮಿಂಚಿದ್ದಾರೆ. ಡ್ಯಾನ್ಸ್, ಫೈಟ್, ಡೈಲಾಗ್ಸ್, ಭಾವನಾತ್ಮಕ ದೃಶ್ಯಗಳು ಹೀಗೆ ರಜನಿಕಾಂತ್ ಅಭಿಮಾನಿಗಳಿಗೆ ಬೇಕಾದ ಅಂಶಗಳನ್ನು ಭರಪೂರವಾಗಿ ತುಂಬಲಾಗಿದೆ.

ನಾವು ನೋಡಿದ ಸಿನಿಮಾ

ಕೂಲಿ (ತಮಿಳು)
- ನಿರ್ಮಾಣ: ಸನ್ ಪಿಕ್ಚರ್ಸ್
- ನಿರ್ದೇಶನ: ಲೋಕೇಶ್ ಕನಗರಾಜ್
- ತಾರಾಗಣ: ರಜನಿಕಾಂತ್, ಸೌಬೀನ್ ಶಾಹಿರ್, ನಾಗಾರ್ಜುನ, ಶೃತಿಹಾಸನ್, ಸತ್ಯರಾಜ್, ಉಪೇಂದ್ರ, ಅಮೀರ್ ಖಾನ್ ಮತ್ತಿತರರು.

ನಾಗಾರ್ಜುನ ಹಾಗೂ ಸೌಬೀನ್ ಹೊರತುಪಡಿಸಿ ಉಳಿದ ಮಲ್ಟಿಸ್ಟಾರ್‌ಗಳನ್ನು ಕಥೆಗೆ ಅನಗತ್ಯವಾಗಿ ತುರುಕಿದಂತೆ ಭಾಸವಾಗುತ್ತದೆ. ನಾಗಾರ್ಜುನ ಹಾಗೂ ಸೌಬೀನ್ ವಿಲನ್ ಪಾತ್ರಗಳಲ್ಲಿ ಇಷ್ಟವಾಗುತ್ತಾರೆ. ನಟನೆಯಲ್ಲಿ ಸೌಬೀನ್‌ಗೆ ಹೆಚ್ಚು ಅಂಕ. ಕನ್ನಡದ ‘ಘೋಸ್ಟ್’ನಲ್ಲಿದ್ದಂತೆ ಡಿಏಜಿಂಗ್ ಲುಕ್ ಪ್ರಯೋಗ ಸಿನಿಮಾದಲ್ಲಿದ್ದು ಸುಮಾರು 35–40ರ ಪ್ರಾಯದ ರಜನಿಕಾಂತ್ ಅವರನ್ನು ತೆರೆಯಲ್ಲಿ ನೋಡಬಹುದು. ನಟಿ ರಚಿತಾ ರಾಮ್ ನಟನೆಯ ಜೊತೆಗೆ ಆ್ಯಕ್ಷನ್ ದೃಶ್ಯಗಳಲ್ಲಿ ಮಿಂಚಿದ್ದಾರೆ. ನಟ ಉಪೇಂದ್ರ ಅವರ ‘ಕಾಳೀಶ’ ಎಂಬ ಪಾತ್ರ ಒಂದು ಫೈಟ್ ಹಾಗೂ ನಾಲ್ಕೈದು ದೃಶ್ಯಗಳಿಗೆ ಸೀಮಿತವಾಗಿದ್ದಾರೆ. ಇದನ್ನು ಅವರು ಚೆನ್ನಾಗಿ ನಿಭಾಯಿಸಿದ್ದಾರೆ. ಅಮೀರ್ ಖಾನ್ ಪಾತ್ರ ಬಿಲ್ಡ್‌ಅಪ್‌ಗಷ್ಟೇ ಸೀಮಿತ.

–ಅಭಿಲಾಷ್ ಪಿ.ಎಸ್.

‘ಹಲಗಲಿ’ಯಲ್ಲಿ ‘ಜಡಗ’ನಾದ ಡಾಲಿ ಧನಂಜಯ

ಧನಂಜಯ

‘666 ಆಪರೇಷನ್ ಡ್ರೀಮ್ ಥಿಯೇಟರ್’ ಸಿನಿಮಾ ಘೋಷಣೆ ಬೆನ್ನಲ್ಲೇ ನಟ ಧನಂಜಯ ನಟನೆಯ ಮತ್ತೊಂದು ಸಿನಿಮಾದ ಘೋಷಣೆಯಾಗಿದೆ. ಸುಕೇಶ್ ನಾಯಕ್ ನಿರ್ದೇಶನದ ಐತಿಹಾಸಿಕ ಸಿನಿಮಾ ‘ಹಲಗಲಿ’ಯಲ್ಲಿ ಬೇಡರ ನಾಯಕ ‘ಜಡಗ’ನಾಗಿ ಧನಂಜಯ ಭಿನ್ನವಾದ ಪಾತ್ರದಲ್ಲಿ ಪ್ರೇಕ್ಷಕರ ಎದುರು ಕಾಣಿಸಿಕೊಳ್ಳಲಿದ್ದಾರೆ.

ಚಿತ್ರದಲ್ಲಿನ ಅವರ ಪಾತ್ರದ ಲುಕ್ ಇತ್ತೀಚೆಗೆ ಬಿಡುಗಡೆಯಾಗಿದೆ. ಧನಂಜಯ ಅವರಿಗೆ ನಾಯಕಿಯಾಗಿ ‘ಕಾಂತಾರ’ ಖ್ಯಾತಿಯ ಸಪ್ತಮಿ ಗೌಡ ಕಾಣಿಸಿಕೊಳ್ಳಲಿದ್ದಾರೆ. ಕಲ್ಯಾಣ್ ಚಕ್ರವರ್ತಿ ಧೂಳಿಪಾಳ್ಯ ನಿರ್ಮಾಣದ ಈ ಬಹುತಾರಾಗಣದ ಚಿತ್ರವು ಎರಡು ಭಾಗಗಳಲ್ಲಿ ಮೂಡಿ ಬರಲಿದ್ದು, ಮಣ್ಣಿನ ಕಥೆಯನ್ನು ಜನರ ಎದುರಿಗೆ ಇಡಲಿದೆ. ಕನ್ನಡ ನಾಡಿನ ಸ್ವಾತಂತ್ರ್ಯ ಪೂರ್ವದ ವೀರರ ಕಥೆ ಇದಾಗಿದ್ದು, ಸಿನಿಮಾದ ಶೂಟಿಂಗ್ ಆರಂಭವಾಗಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಧನಂಜಯ, ‘ಈ ಚಿತ್ರದಲ್ಲಿ ‘ಜಡಗ’ ಎಂಬ ಪಾತ್ರ ಮಾಡಿದ್ದೇನೆ. ಮೊದಲಿನಿಂದಲೂ ಐತಿಹಾಸಿಕ ಸಿನಿಮಾ ಮಾಡಬೇಕು ಎನ್ನುವ ಆಸೆ ಇತ್ತು. ನನ್ನ ವೃತ್ತಿಯ ಆರಂಭದಲ್ಲಿ ಆ ರೀತಿಯ ಪ್ರಯತ್ನ ಮಾಡಿದ್ದೆ. ‘ಅಲ್ಲಮ’ ಬಯೋಪಿಕ್ ಮಾಡಿದ್ದೆ. ಈಗ ‘ಹಲಗಲಿ’ ಕೈಗೆತ್ತಿಕೊಂಡಿದ್ದೇನೆ. ಐತಿಹಾಸಿಕ ಸಿನಿಮಾಗಳನ್ನು ಶುರು ಮಾಡುತ್ತಾರೆ ಆಮೇಲೆ ನಿಲ್ಲಿಸುತ್ತಾರೆ ಎಂಬ ಭಯವಿತ್ತು. ತಂಡವನ್ನು ಭೇಟಿಯಾದಾಗ ಅವರು ಬ್ರಿಟಿಷ್ ಎಪಿಸೋಡ್ ಶೂಟಿಂಗ್ ಮುಗಿಸಿದ್ದರು. ಅಲ್ಲಿಂದ ನಂಬಿಕೆ ಬಂತು’ ಎಂದರು.

> ನನ್ನ ಪಾತ್ರದ ಹೆಸರು ಹೊನ್ನಿ. ಈ ಪಾತ್ರಕ್ಕಾಗಿ ಸಾಕಷ್ಟು ತಯಾರಿ ನಡೆಸಿದ್ದೇನೆ. ಚಿತ್ರಕ್ಕಾಗಿ ಉತ್ತರ ಕರ್ನಾಟಕ ಭಾಷೆ ಕಲಿತಿದ್ದೇನೆ. ನನ್ನ ಲುಕ್ ವಿಭಿನ್ನವಾಗಿದೆ.
> **ಸಪ್ತಮಿ ಗೌಡ,** ನಟಿ

ನಿರ್ದೇಶಕ ಸುಕೇಶ್ ಮಾತನಾಡಿ, ‘ಇದು ನನ್ನ ಎರಡನೇ ಸಿನಿಮಾ. ನನಗೆ ಐತಿಹಾಸಿಕ ಕಥೆಗಳು ಇಷ್ಟ. ಪುಸ್ತಕಗಳನ್ನು ಓದುವ ಸಂದರ್ಭದಲ್ಲಿ ಹಲಗಲಿ ತಲೆಗೆ ಬಂತು. ಆಯುಧಕ್ಕಾಗಿ ಇಡೀ ಊರೇ ಪ್ರಾಣ ಕೊಟ್ಟಿತ್ತು ಎಂಬುವುದು ನನಗೆ ಆಸಕ್ತಿ ಹುಟ್ಟುಹಾಕಿತು. ಪುಸ್ತಕ ಓದಿದ ಬಳಿಕ ಆ ಊರಿಗೆ ಹೋದೆ. ಅಲ್ಲಿ ಹೋರಾಟ ಮಾಡಿದ ಆಯುಧಗಳನ್ನು ದೇವರಗುಡಿಯಲ್ಲಿ ಇಟ್ಟಿದ್ದಾರೆ. ಕಥೆಯ ಎಳೆ ಮಾಡಿಕೊಂಡೆ. ಕಮರ್ಷಿಯಲ್ ಆಗಿ ಮೂಲ ಕಥೆಗೆ ಯಾವುದೇ ಚ್ಯುತಿಯಾಗದಂತೆ ಸಿನಿಮಾ ಮಾಡುತ್ತಿದ್ದೇವೆ. ಈಗಾಗಲೇ ಶೇ 40 ಶೂಟಿಂಗ್ ಮುಗಿದಿದೆ. ಮೊದಲ ಹಂತದಲ್ಲಿ ಮೈಸೂರಿನಲ್ಲಿ ಚಿತ್ರೀಕರಣ ನಡೆಸಿದ್ದೆವು. ಇದೀಗ ನೆಲಮಂಗಲದಲ್ಲಿ ಅದ್ದೂರಿ ಸೆಟ್ ಹಾಕಿ ಸಿನಿಮಾ ಮಾಡುತ್ತಿದ್ದೇವೆ’ ಎಂದರು.

ಬ್ರಿಟಿಷರ ವಿರುದ್ಧ ಮೊದಲ ಗೆರಿಲ್ಲಾ ಯುದ್ಧ ಮಾಡಿದ ರಾಜ್ಯದ ಹಲಗಲಿ ಬೇಡರ ಕುರಿತ ಕಥೆ ಇದಾಗಿದೆ. ವಾಸುಕಿ ವೈಭವ್ ಸಂಗೀತ ನಿರ್ದೇಶನ, ‘ಕೆಜಿಎಫ್’ ಖ್ಯಾತಿಯ ವಿಕ್ರಮ್ ಮೋರ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಚಿತ್ರಕ್ಕಾಗಿ ನಾಲ್ಕೈದು ಬೃಹತ್ ಹಳ್ಳಿಯ ಸೆಟ್‌ಗಳನ್ನು ಹಾಕಿದ್ದು, ಹಲಗಲಿ ಗ್ರಾಮವನ್ನೇ ಮರುಸೃಷ್ಟಿ ಮಾಡಲಾಗಿದೆ. ಕನ್ನಡ, ತೆಲುಗು, ತಮಿಳು, ಮಲಯಾಳ ಹಾಗೂ ಹಿಂದಿಯಲ್ಲಿ ಈ ಸಿನಿಮಾ ಮೂಡಿಬರಲಿದೆ.

‘ಓ ಮೈ ಬ್ರೋ’ ಹಾಡಿಗೆ ಸಾಯಿಕುಮಾರ್, ಪೃಥ್ವಿ ಹೆಜ್ಜೆ

‘ರಥಾವರ’ ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ಆ್ಯಕ್ಷನ್ ಕಟ್ ಹೇಳಿರುವ, ಪೃಥ್ವಿ ಅಂಬಾರ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ‘ಚೌಕಿದಾರ್’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ.

ಅಪ್ಪ ಮಗನ ಬಾಂಧವ್ಯದ ಕುರಿತಾದ ಈ ಸಿನಿಮಾದಲ್ಲಿ ಸಾಯಿಕುಮಾರ್ ಹಾಗೂ ಪೃಥ್ವಿ ಅಂಬಾರ್ ತಂದೆ–ಮಗನಾಗಿ ನಟಿಸಿದ್ದಾರೆ. ಇತ್ತೀಚೆಗೆ ಚಿತ್ರದ ‘ಓ ಮೈ ಬ್ರೋ’ ಹಾಡು ಬಿಡುಗಡೆಯಾಗಿದೆ. ತಂದೆ ಪಾತ್ರ ನಿರ್ವಹಿಸಿರುವ ಸಾಯಿಕುಮಾರ್ ಅವರು ಈ ಹಾಡಿನಲ್ಲಿ ಭರ್ಜರಿಯಾಗಿ ಹೆಜ್ಜೆ ಹಾಕಿರುವುದು ವಿಶೇಷ. ಮುರುಳಿ ಮಾಸ್ಟರ್ ನೃತ್ಯ ನಿರ್ದೇಶನ ಮಾಡಿರುವ ಈ ಹಾಡನಲ್ಲಿ ಪೃಥ್ವಿ ಅಂಬಾರ್ ಹಾಗೂ ಸಾಯಿಕುಮಾರ್ ಡ್ಯಾನ್ಸ್ ಜುಗಲ್ ಬಂದಿ ಗಮನಸೆಳೆದಿದೆ.

ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ‘ಓ ಮೈ ಬ್ರೋ’ ಹಾಡಿಗಿದ್ದು, ಕೈಲಾಶ್ ಖೇರ್ ದನಿಯಾಗಿದ್ದಾರೆ. ಸಚಿನ್ ಬಸ್ರೂರ್ ಸಂಗೀತ ಹಾಡಿಗಿದೆ. ಚಿತ್ರದಲ್ಲಿ ಪೃಥ್ವಿಗೆ ಧನ್ಯಾ ರಾಮ್‌ಕುಮಾರ್ ಜೋಡಿಯಾಗಿದ್ದಾರೆ. ‘ಚೈತ್ರದ ಪ್ರೇಮಾಂಜಲಿ’ ಚಿತ್ರದ ನಾಯಕಿ ಶ್ವೇತಾ ತಾರಾಬಳಗದಲ್ಲಿದ್ದಾರೆ. ಸುಧಾರಾಣಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿದ್ದಾರೆ. ಸಿನಿಮಾವನ್ನು ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡಿದ್ದು, ಸಿದ್ದು ಕಂಚನಹಳ್ಳಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ವಿಪಕ್ಷಗಳ ಟೀಕೆ; ಬಿಜೆಪಿ ಸಮರ್ಥನೆ

ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಆರ್‌ಎಸ್‌ಎಸ್ ಹೊಗಳಿದ ಪ್ರಧಾನಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರೋತ್ಸವ ಭಾಷಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು (ಆರ್‌ಎಸ್‌ಎಸ್) ಹೊಗಳಿದ್ದಕ್ಕೆ ವಿರೋಧ ಪಕ್ಷಗಳು ಟೀಕಿಸಿವೆ. ಬಿಜೆಪಿಯು ಪ್ರಧಾನಿ ಅವರನ್ನು ಸಮರ್ಥಿಸಿಕೊಂಡಿದೆ.

ಪ್ರಧಾನಿ ಅವರು ಆರ್‌ಎಸ್‌ಎಸ್‌ಅನ್ನು ಹೊಗಳುವ ಮೂಲಕ ಅಧಿಕಾರದಲ್ಲಿ ಉಳಿಯಲು ಹತಾಶ ಪ್ರಯತ್ನ ನಡೆಸಿದ್ದಾರೆ. ಈ ಮೂಲಕ ಹುತಾತ್ಮರು ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಅಗೌರವ ತೋರಿದ್ದಾರೆ ಎಂದು ಕಾಂಗ್ರೆಸ್ ಶುಕ್ರವಾರ ವಾಗ್ದಾಳಿ ನಡೆಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, ‘ಪ್ರಧಾನಿ ಮೋದಿ ತಮ್ಮ ಭಾಷಣದಲ್ಲಿ ಆರ್‌ಎಸ್‌ಎಸ್ ಹೆಸರು ಉಲ್ಲೇಖಿಸಿದ್ದು, ಸಾಂವಿಧಾನಿಕ ಮತ್ತು ಜಾತ್ಯತೀತ ಗಣತಂತ್ರ ವ್ಯವಸ್ಥೆಗೆ ಮಾಡಿದ ಅಪಮಾನ’ ಎಂದು ಹೇಳಿದರು.

‘ಮುಂದಿನ ತಿಂಗಳು ಮೋದಿ ಅವರು 75 ವರ್ಷಕ್ಕೆ ಕಾಲಿಡಲಿದ್ದಾರೆ. ಆರ್‌ಎಸ್‌ಎಸ್ ಓಲೈಕೆ ಮಾಡುವ ಉದ್ದೇಶದಿಂದ ಈ ಹತಾಶ ಪ್ರಯತ್ನ ನಡೆಸಿದ್ದಾರಲ್ಲದೆ ಮತ್ತೇನೂ ಅಲ್ಲ’ ಎಂದರು.

‘ಸೆಪ್ಟೆಂಬರ್ ನಂತರವೂ ಪ್ರಧಾನಿ ಹುದ್ದೆಯಲ್ಲಿ ಮುಂದುವರಿಸಲಿ ಎಂಬ ಉದ್ದೇಶದಿಂದ ಅವರು ಆರ್‌ಎಸ್‌ಎಸ್ ಕೃಪಾಕಟಾಕ್ಷದ ನಿರೀಕ್ಷೆಯಲ್ಲಿದ್ದಾರೆ. ಇಂದು ಅವರು ಬಳಲಿದಂತಿದ್ದರು. ಶೀಘ್ರವೇ ಅವರು ನಿವೃತ್ತಿ ಪಡೆಯಲಿದ್ದಾರೆ’ ಎಂದು ವ್ಯಂಗ್ಯವಾಡಿದರು.

75 ವರ್ಷ ತುಂಬಿದವರು ಕಿರಿಯ ನಾಯಕರಿಗೆ ಅವಕಾಶ ನೀಡಬೇಕು ಎಂಬ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಹೇಳಿಕೆಯನ್ನು ಉಲ್ಲೇಖಿಸಿ, ಜೈರಾಮ್ ಅವರು ಪ್ರಧಾನಿ ಅವರನ್ನು ಟೀಕಿಸಿದರು.

ಬಿಜೆಪಿ ಸಮರ್ಥನೆ: ಸ್ವಾತಂತ್ರ್ಯ ದಿನಾಚರಣೆ ಭಾಷಣದಲ್ಲಿ ಪ್ರಧಾನಿ ಅವರು ಆರ್‌ಎಸ್‌ಎಸ್‌ಅನ್ನು ಶ್ಲಾಘಿಸಿರುವುದನ್ನು ಬಿಜೆಪಿ ಸಮರ್ಥಿಸಿಕೊಂಡಿದೆ. ‘ಆರ್‌ಎಸ್‌ಎಸ್ 100 ವರ್ಷಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲಿ, ಪ್ರಧಾನಿ ಮೋದಿ ಅವರು ಕೆಂಪು ಕೋಟೆಯಿಂದ ಆ ಸಂಘಟನೆಯ ಬಗ್ಗೆ ಪ್ರಸ್ತಾಪಿಸಿರುವುದು ಸೂಕ್ತವಾಗಿಯೇ ಇದೆ’ ಎಂದು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ.

‘ವಿಶ್ವದ ಅತಿದೊಡ್ಡ ಎನ್‌ಜಿಒ’

ಪ್ರಧಾನಿ ಮೋದಿ ಅವರು ತಮ್ಮ ಭಾಷಣದಲ್ಲಿ ಆರ್‌ಎಸ್‌ಎಸ್‌ನ 100 ವರ್ಷಗಳ ಪಯಣವನ್ನು ‘ಅತ್ಯಂತ ಹೆಮ್ಮೆಯದ್ದು ಮತ್ತು ಅದ್ಭುತವಾದುದು’ ಎಂದು ಬಣ್ಣಿಸಿದ್ದಾರೆ. ಸಂಘವು ರಾಷ್ಟ್ರ ನಿರ್ಮಾಣಕ್ಕೆ ನೀಡಿದ ಕೊಡುಗೆಗಳಿಗಾಗಿ ಅದರ ಎಲ್ಲ ಸ್ವಯಂಸೇವಕರನ್ನು ಶ್ಲಾಘಿಸಿದ್ದಾರೆ.

‘ನಾನು ಬಹಳ ಹೆಮ್ಮೆಯಿಂದ ಒಂದು ವಿಷಯವನ್ನು ಉಲ್ಲೇಖಿಸಲು ಬಯಸುತ್ತೇನೆ. ಆರ್‌ಎಸ್‌ಎಸ್ ಹೆಸರಿನ ಸಂಘಟನೆ 100 ವರ್ಷಗಳ ಹಿಂದೆ ಹುಟ್ಟಿಕೊಂಡಿತು. ಈ 100 ವರ್ಷಗಳಲ್ಲಿ ರಾಷ್ಟ್ರ ಸೇವೆಗೆ ಕೊಡುಗೆ ನೀಡಿದ ಎಲ್ಲಾ ಸ್ವಯಂಸೇವಕರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ’ ಎಂದರು.

‘ಸೇವೆ, ಸಮರ್ಪಣೆ, ಸಂಘಟನೆ ಮತ್ತು ಶಿಸ್ತು... ಆರ್‌ಎಸ್‌ಎಸ್‌ನ ಗುರುತು. ಈ ಸಂಘಟನೆಯು ಒಂದು ರೀತಿಯಲ್ಲಿ ವಿಶ್ವದ ಅತಿದೊಡ್ಡ ಎನ್‌ಜಿಒ’ ಎಂದು ಬಣ್ಣಿಸಿದರು.

> ಕೋಮು ಗಲಭೆ ಪ್ರಚೋದಿಸುವಲ್ಲಿ ಆರ್‌ಎಸ್‌ಎಸ್ ಪಾತ್ರ ಏನು ಎಂದು ಇತಿಹಾಸಕಾರರು ಬರೆದಿಟ್ಟಿದ್ದಾರೆ. ಪ್ರಧಾನಿ ಆರ್‌ಎಸ್‌ಎಸ್ ಹೊಗಳಿದ್ದು ನಾಚಿಕೆಗೇಡು
> **ಎಂ.ಎ.ಬೇಬಿ**, ಸಿಪಿಎಂ ಪ್ರಧಾನ ಕಾರ್ಯದರ್ಶಿ

> ಆರ್‌ಎಸ್‌ಎಸ್ ವೈಭವೀಕರಣ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡಿದ ಅಪಮಾನ. ಸ್ವಾತಂತ್ರ್ಯಕ್ಕಾಗಿ ಎಂದಿಗೂ ಹೋರಾಟಗಾರರೊಂದಿಗೆ ಆರ್‌ಎಸ್‌ಎಸ್ ಕೈಜೋಡಿಸಿಲ್ಲ
> **ಅಸಾದುದ್ದೀನ್ ಓವೈಸಿ**, ಎಐಎಂಐಎಂ ಅಧ್ಯಕ್ಷ

> ಸ್ವಾತಂತ್ರ್ಯೋತ್ಸವ ದಿನದ ಭಾಷಣವು ಇತಿಹಾಸ ತಿರುಚುವ, ತಮ್ಮ ಗುಪ್ತ ಸಂದೇಶವನ್ನು ಪಸರಿಸುವ ಅಥವಾ ಬಾಯಿಗೆ ಬಂದಂತೆ ಮಾತನಾಡುವ ಕಾರ್ಯಕ್ರಮ ಅಲ್ಲ
> **ಮನೋಜ್ ಝಾ**, ಆರ್‌ಜೆಡಿ ಸಂಸದ

‘ಅಧಿಕಾರಕ್ಕಾಗಿ ಅನೈತಿಕ ಹಾದಿ’

ಬಿಜೆಪಿ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಧಿಕಾರದಲ್ಲಿ ಉಳಿಯಲು ಬಿಜೆಪಿಯು ಅತ್ಯಂತ ಅನೈತಿಕ ಹಾದಿ ಹಿಡಿದಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶನಿವಾರ ಆರೋಪಿಸಿದರು.

‘ಚುನಾವಣೆಯ ಹಿಂದಿನ ದಿನ ಹೊಸ ಮತದಾರ ಪಟ್ಟಿಯನ್ನು ಬಿಡುಗಡೆ ಮಾಡುವ ‘ಹೊಸ ಟ್ರೆಂಡ್’ ಸೃಷ್ಟಿಯಾಗಿದೆ. ಆ ಸಂದರ್ಭದಲ್ಲಿ ಪರಿಶೀಲಿಸಲು ಅಭ್ಯರ್ಥಿಗೆ ಸಮಯ ಇರುವುದಿಲ್ಲ. ಇದು ನಮ್ಮ ವಿರೋಧಿಗಳ ಪಿತೂರಿ. ಈ ಸಂಚನ್ನು ಬಯಲು ಮಾಡುತ್ತೇವೆ’ ಎಂದರು.

ಬಿಹಾರದಲ್ಲಿ ಸುಮಾರು 65 ಲಕ್ಷ ಮತದಾರರ ಹೆಸರನ್ನು ಅಳಿಸಿಹಾಕಿದ್ದರೂ ಬಿಜೆಪಿಯು ಆಕ್ಷೇಪ ವ್ಯಕ್ತಪಡಿಸಿಲ್ಲ. ಈ ನಡೆಯು ಆಶ್ಚರ್ಯ ಮೂಡಿಸುವಂತಿದೆ ಮತ್ತು ಇದರಿಂದಲೇ ಎಲ್ಲವೂ ಸ್ಪಷ್ಟವಾಗುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಮುಖ್ಯ ಕಚೇರಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಧ್ವಜಾರೋಹಣ ನೆರವೇರಿಸಿದರು. ರಾಹುಲ್ ಗಾಂಧಿ ಮತ್ತು ಪಕ್ಷದ ನಾಯಕರು ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ಕಾಂಗ್ರೆಸ್ ಮುಖ್ಯ ಕಚೇರಿಯಲ್ಲಿ ಸ್ವಾತಂತ್ರ್ಯೋತ್ಸವ ಅಂಗವಾಗಿ ಧ್ವಜಾರೋಹಣ ನೆರವೇರಿಸಿದ ಬಳಿಕ ಮಾತನಾಡಿದ ಅವರು, ‘ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಮೂಲಕ ವಿರೋಧ ಪಕ್ಷಗಳ ಬೆಂಬಲಿಗರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕುವುದೂ ಸೇರಿದಂತೆ ದೊಡ್ಡ ಮಟ್ಟದಲ್ಲಿ ಚುನಾವಣಾ ಅಕ್ರಮ ಎಸಗಲಾಗುತ್ತಿದೆ. ಚುನಾವಣಾ ಆಯೋಗದ ಪಕ್ಷಪಾತವನ್ನು ವಾಸ್ತವಾಂಶಗಳ ಮೂಲಕ ಬಯಲಿಗೆ ತರಬಹುದು. ಆದರೆ ಯಾರನ್ನು, ಯಾವ ಕಾರಣಕ್ಕಾಗಿ ಮತದಾರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಬಹಿರಂಗಪಡಿಸಲು ಅದು ಸಿದ್ಧವಿಲ್ಲ. ಬಿಹಾರದಲ್ಲಿ ಜೀವಂತ ಇರುವವರನ್ನೂ ಮೃತಪಟ್ಟಿದ್ದಾರೆ ಎಂದು ದಾಖಲಿಸಲಾಗಿದೆ’ ಎಂದು ಹೇಳಿದರು.

‘ಜನರ ಧ್ವನಿಯನ್ನು ಸುಪ್ರೀಂ ಕೋರ್ಟ್ ಆಲಿಸಿ, ಪಟ್ಟಿಯಿಂದ ಕೈಬಿಟ್ಟವರ ವಿವರ ನೀಡಲು ಆಯೋಗಕ್ಕೆ ನಿರ್ದೇಶನ ನೀಡಿದೆ. ಅದಕ್ಕಾಗಿ ಧನ್ಯವಾದ ತಿಳಿಸುತ್ತೇನೆ’ ಎಂದರು.

ಚಿಟಿಕೆ ಸುದ್ದಿ

ದರ್ಗಾ ಗೋಡೆ ಕುಸಿತ: ಆರು ಸಾವು

ನವದೆಹಲಿ (ಪಿಟಿಐ): ಇಲ್ಲಿನ ನಿಜಾಮುದ್ದೀನ್ ಪ್ರದೇಶದ ಹುಮಾಯೂನ್ ಸಮಾಧಿ ಬಳಿ ಇರುವ ಷರೀಫ್ ಪಟ್ಟೆ ಷಾ ದರ್ಗಾದ ಗೋಡೆ ಹಾಗೂ ಪಕ್ಕದ ಎರಡು ಕೊಠಡಿಗಳ ಚಾವಣಿ ಶುಕ್ರವಾರ ಕುಸಿದು ಮೂವರು ಮಹಿಳೆಯರು ಸೇರಿದಂತೆ ಆರು ಮಂದಿ ಮೃತಪಟ್ಟಿದ್ದು, ಐವರು ಗಾಯಗೊಂಡಿದ್ದಾರೆ.

ಮಧ್ಯಾಹ್ನ 3.30ರ ಸುಮಾರಿಗೆ ಈ ಅವಘಡ ಸಂಭವಿಸಿದೆ. ಘಟನೆಯಲ್ಲಿ ಒಟ್ಟು 11 ಮಂದಿ ಗಾಯಗೊಂಡಿದ್ದು, ಏಮ್ಸ್ ಟ್ರಾಮಾ ಕೇಂದ್ರಕ್ಕೆ ದಾಖಲಿಸಲಾಗಿತ್ತು. ಈ ಪೈಕಿ ಒಬ್ಬರನ್ನು ಎಲ್‌ಎನ್‌ಜೆಪಿ ಆಸ್ಪತ್ರೆಗೆ ಕಳುಹಿಸಲಾಗಿದೆ. ಟ್ರಾಮಾ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದವರ ಪೈಕಿ ಆರು ಮಂದಿ ಅಸುನೀಗಿದ್ದಾರೆ.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ

ಹೈದರಾಬಾದ್: ಆಂಧ್ರಪ್ರದೇಶ ಸರ್ಕಾರವು ಮಹಿಳೆಯರಿಗೆ ‘ಎಪಿಎಸ್‌ಆರ್‌ಟಿಸಿ’ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವ ಸ್ತ್ರೀ ಶಕ್ತಿ ಯೋಜನೆಯನ್ನು ಜಾರಿಗೊಳಿಸಿದೆ.


ಚಂದ್ರಬಾಬು ನಾಯ್ಡು

ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಶುಕ್ರವಾರ ಯೋಜನೆಗೆ ಚಾಲನೆ ನೀಡಿದರು.

ಪಲ್ಲೆವೆಲುಗು, ಅಲ್ಟ್ರಾ ಪಲ್ಲೆವೆಲುಗು, ಸಿಟಿ ಆರ್ಡಿನರಿ, ಎಕ್ಸ್‌ಪ್ರೆಸ್ ಮತ್ತು ಮೆಟ್ರೊ ಎಕ್ಸ್‌ಪ್ರೆಸ್ ಸೇರಿ ‘ಎಪಿ ಎಸ್‌ಆರ್‌ಟಿಸಿ’ಯ ಬಸ್‌ಗಳಲ್ಲಿ ಮಹಿಳೆಯರು ರಾಜ್ಯದಾದ್ಯಂತ ಉಚಿತವಾಗಿ ಪ್ರಯಾಣಿಸಬಹುದಾಗಿದೆ.

ಈ ಯೋಜನೆಯಿಂದ 2.62 ಕೋಟಿ ಮಹಿಳೆಯರಿಗೆ ಪ್ರಯೋಜನವಾಗಲಿದೆ. ‘ಎಪಿಎಸ್‌ಆರ್‌ಟಿಸಿ’ಯ 11,449 ಬಸ್‌ಗಳಲ್ಲಿ ಶೇ 70ರಷ್ಟು ಬಸ್‌ಗಳು ಮಹಿಳೆಯರ ಉಚಿತ ಪ್ರಯಾಣಕ್ಕೆ ಲಭ್ಯವಾಗಲಿವೆ.

ಆರ್‌ಎಸ್‌ಎಸ್ ಹೊಗಳಿದ ಪ್ರಧಾನಿ ಕ್ಷಮೆ ಕೇಳಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವದ ದಿನ ಕೆಂಪುಕೋಟೆಯಲ್ಲಿ ಮಾತನಾಡುತ್ತಾ ಆರ್‌ಎಸ್‌ಎಸ್ ಅನ್ನು ಹೊಗಳಿರುವುದು ಸ್ವಾತಂತ್ರ್ಯ ಹೋರಾಟ, ರಾಷ್ಟ್ರ ಧ್ವಜ ಮತ್ತು ಸಂವಿಧಾನದ ನಿಜ ಆಶಯಗಳಿಗೆ ಮಾಡಿರುವ ಅವಮಾನ. ತಮ್ಮ ಮಾತುಗಳನ್ನು ಹಿಂದಕ್ಕೆ ಪಡೆದು, ದೇಶದ ಜನರಲ್ಲಿ ಕ್ಷಮೆ ಕೇಳಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪ್ರತಿಕ್ರಿಯೆ ಹಾಕಿರುವ ಅವರು, ‘ಸ್ವಾತಂತ್ರ್ಯ ಹೋರಾಟದಲ್ಲಿ ಎಂದೂ ಭಾಗವಹಿಸದೆ ಇದ್ದ, ಇತ್ತೀಚಿನವರೆಗೆ ರಾಷ್ಟ್ರ ಧ್ವಜವನ್ನು ತಮ್ಮ ಕಚೇರಿಯಲ್ಲಿ ಆರೋಹಣ ಮಾಡದ ಆರ್‌ಎಸ್‌ಎಸ್‌ಗೆ ಅಭಿನಂದನೆ ಸಲ್ಲಿಸುವ ಮೂಲಕ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಪವಿತ್ರವಾದ ವೇದಿಕೆಯನ್ನು ತಮ್ಮ ಸ್ಥಾನದ ಮೂಲಕ ದುರುಪಯೋಗ ಮಾಡಿಕೊಂಡಿದ್ದಾರೆ’ ಎಂದು ಟೀಕಿಸಿದ್ದಾರೆ.

ನಾಗಪುರದ ಆರ್‌ಎಸ್‌ಎಸ್ ಕೇಂದ್ರ ಕಚೇರಿಯಲ್ಲಿ 2001ರವರೆಗೆ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವದ ದಿನ ರಾಷ್ಟ್ರಧ್ವಜ ಹಾರಿಸಿರಲಿಲ್ಲ. ಧ್ವಜಾರೋಹಣ ಮಾಡಿದ್ದ ತಮ್ಮದೇ ಸಂಘಟನೆಯ ಯುವಕರ ವಿರುದ್ಧ ದೂರು ನೀಡಿ, ಜೈಲಿಗೆ ಕಳುಹಿಸಿದ್ದನ್ನು ದೇಶದ ಜನ ಮರೆತಿಲ್ಲ ಎಂದು ನೆನಪಿಸಿದ್ದಾರೆ.

ಕೋಮುವಾದವನ್ನೇ ಉಸಿರಾಗಿಸಿಕೊಂಡ, ಹಿಂದೂ ಧರ್ಮವನ್ನು ರಾಜಕೀಯ ಆಯುಧವಾಗಿ ಬಳಸಿಕೊಂಡು ಭಾರತೀಯರನ್ನು ಒಡೆದು ಹಾಕಿದ ಆರ್‌ಎಸ್‌ಎಸ್ ಈಗ, ಬಿಜೆಪಿಯನ್ನು ರಾಜಕೀಯವಾಗಿ ಬಲಪಡಿಸಲು ಶ್ರಮಿಸುತ್ತಿದೆ. ದೇಶದ ಬಗ್ಗೆಯಾಗಲಿ, ಹಿಂದೂ ಧರ್ಮದ ಬಗ್ಗೆಯಾಗಲಿ ಯಾವ ಬದ್ಧತೆಯೂ ಇಲ್ಲ ಎಂದು ಟೀಕಿಸಿದ್ದಾರೆ.

ಪ್ರಧಾನಿ ಮೋದಿಗೆ ಮಾಹಿತಿ ನೀಡಿದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ

ಮೇಘಸ್ಫೋಟ: ಸಾವಿನ ಸಂಖ್ಯೆ 60ಕ್ಕೆ ಏರಿಕೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಿಶ್ತವಾಡ ಜಿಲ್ಲೆಯ ಚಸೌತಿ ಗ್ರಾಮದಲ್ಲಿ ಗುರುವಾರ ಸಂಭವಿಸಿದ ಮೇಘಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 60ಕ್ಕೆ ಏರಿಕೆಯಾಗಿದ್ದು, 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಘಟನೆ ಕುರಿತು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿದರು.

‘ನಾನು ಈಗಷ್ಟೇ ಪ್ರಧಾನಿ ಮೋದಿ ಅವರ ಕರೆ ಸ್ವೀಕರಿಸಿದೆ. ಕಿಶ್ತವಾಡದ ಪರಿಸ್ಥಿತಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡಿದೆ’ ಎಂದು ಅಬ್ದುಲ್ಲಾ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಮೇಘಸ್ಫೋಟದಲ್ಲಿ ದುರಂತಕ್ಕೆ ಒಳಗಾದ ತಕ್ಷಣವೇ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರ ನೀಡಿದ ನೆರವಿಗೆ ರಾಜ್ಯ ಸರ್ಕಾರ, ಜನರು ಆಭಾರಿಯಾಗಿದ್ದೇವೆ’ ಎಂದು ಹೇಳಿದರು.

ಇದಕ್ಕೂ ಮುನ್ನ ಇಲ್ಲಿನ ಬಕ್ಷಿ ಕ್ರೀಡಾಂಗಣದಲ್ಲಿ ನಡೆದ ಸ್ವಾತಂತ್ರ್ಯ ದಿನದ ಸಮಾರಂಭದಲ್ಲಿ ಮಾತನಾಡಿದ ಅವರು,‘ಗುರುವಾರ ಸಂಭವಿಸಿದ ದುರಂತದಿಂದ 60 ಮಂದಿ ಮೃತಪಟ್ಟಿದ್ದು, 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಭಾರಿ ಮಳೆ, ದಿಢೀರ್ ಪ್ರವಾಹದ ಮೊದಲೇ ಮುನ್ಸೂಚನೆ ಸಿಕ್ಕಿತ್ತು, ಆದಾಗ್ಯೂ ನಮ್ಮಿಂದ ಏನಾದರೂ ಲೋಪವಾಗಿದೆಯೇ ಎಂಬುದರ ಕುರಿತು ಪರಿಶೀಲನೆ ನಡೆಸಲಾಗುವುದು’ ಎಂದು ತಿಳಿಸಿದ್ದಾರೆ.

ರಾಜ್ಯ ಸ್ಥಾನಮಾನ ಮರುಸ್ಥಾಪನೆಗೆ ಆಗ್ರಹ

ಭಯೋತ್ಪಾದಕ ದಾಳಿಯನ್ನು ಜಮ್ಮು ಮತ್ತು ಕಾಶ್ಮೀರದ ರಾಜಕೀಯ ಭವಿಷ್ಯದೊಂದಿಗೆ ಸಂಬಂಧ ಕಲ್ಪಿಸುವ ಪರಿಪಾಟವನ್ನು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಟೀಕಿಸಿದ್ದಾರೆ.

ಒಮರ್

ಶುಕ್ರವಾರ ಇಲ್ಲಿನ ಬಕ್ಷಿ ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯೋತ್ಸವದ ಭಾಷಣ ಮಾಡಿದ ಅವರು, ‘ಭಯೋತ್ಪಾದನೆಯ ಮೂಲಕ ಈ ರೀತಿಯ ಪ್ರಭಾವ ಬೀರಲು ಪಾಕಿಸ್ತಾನಕ್ಕೆ ಅವಕಾಶ ಕಲ್ಪಿಸುವುದಿಲ್ಲ’ ಎಂದು ಪ್ರತಿಪಾದಿಸಿದರು.

ಜಮ್ಮು ಮತ್ತು ಕಾಶ್ಮೀರದ ರಾಜ್ಯ ಸ್ಥಾನಮಾನವನ್ನು ಮರುಸ್ಥಾಪಿಸುವಾಗ ಈಚೆಗಿನ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ಘಟನೆ ಸೇರಿದಂತೆ ವಸ್ತುಸ್ಥಿತಿಯನ್ನು ನಿರ್ಲಕ್ಷಿಸುವಂತಿಲ್ಲ ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿತ್ತು. ಇದರ ಬೆನ್ನಲ್ಲೇ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಪ್ರತಿಕ್ರಿಯೆ ಹೊರಬಿದ್ದಿದೆ.

ಮಲಗುಂಡಿ ಸ್ವಚ್ಛತೆ ಉಸಿರುಗಟ್ಟಿ ನಾಲ್ವರು ಸಾವು

ಗರ್ವಾ (ಪಿಟಿಐ): ಮಲಗುಂಡಿ ಶುಚಿಗೊಳಿಸುತ್ತಿದ್ದ ವೇಳೆ ಉಸಿರುಗಟ್ಟಿ ನಾಲ್ವರು ಸಾವಿಗೀಡಾಗಿರುವ ಘಟನೆ ಜಾರ್ಖಂಡ್‌ನ ಗಢವಾ ಜಿಲ್ಲೆಯಲ್ಲಿ ಶುಕ್ರವಾರ ನಡೆದಿದೆ.

ನವಾಡ ಗ್ರಾಮದಲ್ಲಿ ಅವಘಡ ನಡೆದಿದೆ. ಮೃತರಲ್ಲಿ ಮೂವರು ಸಹೋದರರು ಎಂದು ಡಿಐಜಿ ನೌಶದ್ ಆಲಂ ತಿಳಿಸಿದರು.

ಅಜಯ್ ಚೌಧರಿ (50), ಚಂದ್ರಶೇಖರ ಚೌಧರಿ (42), ರಾಜು ಶೇಖರ ಚೌಧರಿ (55) ಹಾಗೂ ಮಾಲ್ತೂ ರಾಮ್ ಮೃತರು.

ಮಲಗುಂಡಿಯ ಮುಚ್ಚಳ ತೆರೆದ ಬಳಿಕ ಅದರಿಂದ ಹೊರಬಂದ ವಿಷಕಾರಿ ಅನಿಲ ಸೇವಿಸಿ ನಾಲ್ವರು ಮೃತಪಟ್ಟಿದ್ದಾರೆ.

ಮೂವರು ಸಾವು: ಮಹಾರಾಷ್ಟ್ರದ ಪುಣೆಯ ಸಮೀಪದ ನಿಗ್ಡಿಯಲ್ಲಿ, ಮ್ಯಾನ್ ಹೋಲ್ ಸ್ವಚ್ಛಗೊಳಿಸುತ್ತಿದ್ದ ವೇಳೆ ಮೂವರು ಕಾರ್ಮಿಕರು ಉಸಿರುಗಟ್ಟಿ ಶುಕ್ರವಾರ ಮೃತಪಟ್ಟಿದ್ದಾರೆ.

ಪಿಂಪ್ರಿ–ಚಿಂಚ್ವಡದಲ್ಲಿ ಘಟನೆ ಸಂಭವಿಸಿದೆ. ಮೃತರು ದತ್ತಾ ಹೋಲಾರೆ, ಲಖನ್ ಧಾವ್ರೆ ಹಾಗೂ ಸಾಹೇಬ್‌ರಾವ್ ಗಿರ್ಸೆಪ್ ಎಂದು ಗುರುತಿಸಲಾಗಿದೆ ಮೃತರು.

ಹೈಕೋರ್ಟ್ ಕೊಲಿಜಿಯಂಗೆ ಆದೇಶ ಮಾಡುವಂತಿಲ್ಲ–ಸಿಜೆಐ

‘ಸುಪ್ರೀಂ’ ಒಂದೇ ಶ್ರೇಷ್ಠ ಅಲ್ಲ: ಗವಾಯಿ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಕೊಲಿಜಿಯಂ– ಎರಡೂ ಸಾಂವಿಧಾನಿಕ ಸಂಸ್ಥೆಗಳು. ಇವುಗಳಲ್ಲಿ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ಶನಿವಾರ ಅಭಿಪ್ರಾಯಪಟ್ಟರು.

ಬಿ.ಆರ್. ಗವಾಯಿ

ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ (ಎಸ್‌ಸಿಬಿಎ) 79ನೇ ಸ್ವಾತಂತ್ರ್ಯ ದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಎಸ್‌ಸಿಬಿಎ ಅಧ್ಯಕ್ಷ ವಿಕಾಸ್ ಸಿಂಗ್ ಅವರು, ‘ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ವಕೀಲಿಕೆ ಮಾಡುವ ವಕೀಲರನ್ನೂ ಪರಿಗಣಿಸಿ’ ಎಂದು ಮನವಿ ಮಾಡಿದರು.

ಆಗ ಸಿಜೆಐ ಗವಾಯಿ ಅವರು, ‘ನ್ಯಾಯಮೂರ್ತಿಗಳ ನೇಮಕಕ್ಕೆ ನಿರ್ದಿಷ್ಟ ಹೆಸರು ಶಿಫಾರಸು ಮಾಡುವಂತೆ ಹೈಕೋರ್ಟ್ ಕೊಲಿಜಿಯಂಗೆ, ಸುಪ್ರೀಂ ಕೋರ್ಟ್ ಕೊಲಿಜಿಯಂ ಆದೇಶ ಮಾಡುವಂತಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ನ್ಯಾಯಮೂರ್ತಿಗಳ ನೇಮಕ ವಿಚಾರದಲ್ಲಿ ಹೈಕೋರ್ಟ್ ಕೊಲಿಜಿಯಂ ಮೊದಲಿಗೆ ನಿರ್ಧಾರ ಕೈಗೊಳ್ಳುತ್ತದೆ. ಹೈಕೋರ್ಟ್ ಕೊಲಿಜಿಯಂಗೆ ನಾವು ಕೆಲವು ಹೆಸರುಗಳನ್ನು ಶಿಫಾರಸು ಮಾಡುತ್ತೇವೆ ಮತ್ತು ಅವುಗಳನ್ನು ಪರಿಗಣಿಸುವಂತೆ ಮನವಿ ಮಾಡುತ್ತೇವೆ. ಅಂತಿಮವಾಗಿ ಹೈಕೋರ್ಟ್ ಕೊಲಿಜಿಯಂ ಅರ್ಹ ಅಭ್ಯರ್ಥಿಗಳ ಹೆಸರುಗಳನ್ನು ಅಂತಿಮಗೊಳಿಸಿ ಸುಪ್ರೀಂ ಕೋರ್ಟ್‌ಗೆ ಕಳುಹಿಸುತ್ತದೆ’ ಎಂದು ಅವರು ವಿವರಿಸಿದರು.

ಸಂಜೀವ್ ಖನ್ನಾ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಆಗಿದ್ದಾಗ, ಅಭ್ಯರ್ಥಿಗಳೊಂದಿಗೆ ಸಂದರ್ಶನ ನಡೆಸುವ ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಅಭ್ಯರ್ಥಿಗಳೊಂದಿಗೆ 10 ನಿಮಿಷ, 15 ನಿಮಿಷ ಅಥವಾ ಅರ್ಧ ತಾಸು ಸಂವಾದ ನಡೆಸಿದಾಗ ಸಮಾಜದ ಸೇವೆ ಸಲ್ಲಿಸಲು ಅವರು ಯೋಗ್ಯರೇ ಎಂಬುದನ್ನು ಪರಿಶೀಲಿಸಬಹುದು ಎಂದು ಅವರು ಹೇಳಿದರು.

ಸ್ವಾತಂತ್ರ್ಯೋತ್ಸವನ್ನು ಉಲ್ಲೇಖಿಸಿ, ಸ್ವಾತಂತ್ರ್ಯವು ರಾಜಕೀಯ ಚಳವಳಿ ಅಷ್ಟೇ ಅಲ್ಲ, ನೈತಿಕ ಮತ್ತು ಕಾನೂನಾತ್ಮಕ ಹೋರಾಟವೂ ಆಗಿತ್ತು. ಅಸಂಖ್ಯಾತ ವಕೀಲರು ಈ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂಬುದನ್ನು ದೇಶದ ಇತಿಹಾಸವು ತಿಳಿಸಿಕೊಡುತ್ತದೆ ಎಂದು ಹೇಳಿದರು.

ರವೀಂದ್ರನಾಥ ಟ್ಯಾಗೋರ್, ಮಹಾತ್ಮ ಗಾಂಧಿ, ಬಿ.ಆರ್. ಅಂಬೇಡ್ಕರ್, ಮೌಲಾನಾ ಅಬುಲ್ ಕಲಾಮ್ ಆಜಾದ್ ಮತ್ತಿತರ ಸ್ವಾತಂತ್ರ್ಯ ಹೋರಾಟಗಾರರನ್ನು ಅವರು ಸ್ಮರಿಸಿದರು. ದುರ್ಬಲರ ಸ್ವಾತಂತ್ರ್ಯವನ್ನು ವಿಸ್ತರಿಸುವ ಮತ್ತು ಅವರ ಹಕ್ಕುಗಳನ್ನು ರಕ್ಷಿಸುವ ಮೂಲಕ ನಾವು ಕಾನೂನನ್ನು ವ್ಯಾಖ್ಯಾನಿಸಿ, ಬಲಪಡಿಸಬೇಕಾಗಿದೆ. ಆಗ ಮಾತ್ರ ಟ್ಯಾಗೋರ್ ಅವರ ಪ್ರಾರ್ಥನೆ, ಮಹಾತ್ಮ ಗಾಂಧಿ ಅವರ ಸ್ವರಾಜ್ಯ, ಅಂಬೇಡ್ಕರ್ ಅವರ ಪ್ರಜಾಪ್ರಭುತ್ವ ಚಿಂತನೆ ಫಲಿಸುತ್ತದೆ ಎಂದರು.

ಭಾರತ–ಅಮೆರಿಕ ಜತೆಯಾಗಿ ಸಮಸ್ಯೆ ಬಗೆಹರಿಸಿಕೊಳ್ಳಲಿವೆ: ರುಬಿಯೊ

ನ್ಯೂಯಾರ್ಕ್ (ಪಿಟಿಐ): ‘ಭಾರತ ಮತ್ತು ಅಮೆರಿಕ ಒಟ್ಟಾಗಿ ಆಧುನಿಕ ಸವಾಲುಗಳನ್ನು ಎದುರಿಸಲಿದ್ದು, ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಿವೆ’ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

‘ಭಾರತ ಮತ್ತು ಅಮೆರಿಕದ ನಡುವಿನ ಸಂಬಂಧಕ್ಕೆ ದೀರ್ಘಾವಧಿ ಮತ್ತು ಐತಿಹಾಸಿಕ ಮಹತ್ವ ಇದೆ. ಉಭಯ ದೇಶಗಳು ಒಟ್ಟಿಗೆ ಉಜ್ವಲವಾದ ಭವಿಷ್ಯ ರೂಪಿಸಿಕೊಳ್ಳಲಿವೆ’ ಎಂದು ರುಬಿಯೊ ಭಾರತಕ್ಕೆ ಸ್ವಾತಂತ್ರ್ಯ ದಿನದ ಶುಭಾಶಯ ಕೋರಿದ ಸಂದರ್ಭದಲ್ಲಿ ತಿಳಿಸಿದ್ದಾರೆ.

ಆರ್‌.ಜಿ.ಕರ್ ಪ್ರಕರಣ: ಹೈಕೋರ್ಟ್‌ಗೆ ಅರ್ಜಿ

ಕೋಲ್ಕತ್ತ (ಪಿಟಿಐ): ದುಷ್ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಲು ತಮ್ಮ ವಕೀಲರಿಗೆ ಅನುಮತಿ ನಿರಾಕರಿಸಿದ ಕೆಳ ನ್ಯಾಯಾಲಯದ ಆದೇಶವನ್ನು ರದ್ದುಗೊಳಿಸುವಂತೆ ಕೋರಿ, ಆರ್‌.ಜಿ.ಕರ್ ಆಸ್ಪತ್ರೆಯಲ್ಲಿ ಅತ್ಯಾಚಾರಕ್ಕೀಡಾಗಿ ಕೊಲೆಯಾದ ಸಂತ್ರಸ್ತೆಯ ತಂದೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

‘ಕಳೆದ ವರ್ಷ ಆ. 9ರಂದು ನಡೆದ ದುಷ್ಕೃತ್ಯದ ವೇಳೆ ಅಪರಾಧಿ ಸಂಜಯ್ ರಾಯ್ ಜೊತೆಗೆ ಇತರ ವ್ಯಕ್ತಿಗಳು ಅಲ್ಲಿದ್ದರು ಎಂಬುದು ನನ್ನ ದೃಢ ನಂಬಿಕೆಯಾಗಿದೆ’ ಎಂದು ಅರ್ಜಿದಾರರು ಹೇಳಿದ್ದಾರೆ.

ಮುಂದಿನ ವಾರದ ಆರಂಭದಲ್ಲಿ ಹೈಕೋರ್ಟ್‌ನ ಏಕಪೀಠವು ಈ ಅರ್ಜಿಯ ವಿಚಾರಣೆ ನಡೆಸುವ ಸಾಧ್ಯತೆಯಿದೆ ಎಂದು ಅವರ ಪರ ವಕೀಲರು ತಿಳಿಸಿದ್ದಾರೆ.

‘ತನಿಖೆಯ ನಂತರವೂ ಪತ್ತೆಯಾಗದ ಗಮನಾರ್ಹ ಲೋಪಗಳನ್ನು ಶೋಧಿಸಿ, ನ್ಯಾಯಾಲಯಕ್ಕೆ ಪೂರಕ ಮಾಹಿತಿ ಒದಗಿಸಲು ದುಷ್ಕೃತ್ಯ ನಡೆದ ಸ್ಥಳದ ಸ್ವತಂತ್ರ ಪರೀಕ್ಷೆ ನಡೆಯಬೇಕಿದೆ. ಹೀಗಾಗಿ ತಮ್ಮ ವಕೀಲ ಫಿರೋಜ್ ಎಡ್ಜುಲಿ ಮತ್ತು ಆರು ಕಿರಿಯ ವಕೀಲರಿಗೆ ಆರ್‌.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಎರಡು ಗಂಟೆ ಕಾಲ ಭೇಟಿ ನೀಡಲು ಅವಕಾಶ ಕೊಡಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ನಾಗಾಲ್ಯಾಂಡ್ ರಾಜ್ಯಪಾಲ ಲಾ ಗಣೇಶನ್ ನಿಧನ

ಚೆನ್ನೈ/ಕೋಹಿಮಾ (ಪಿಟಿಐ): ನಾಗಾಲ್ಯಾಂಡ್ ರಾಜ್ಯಪಾಲ ಲಾ ಗಣೇಶನ್ (80) ಚೆನ್ನೈನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಮೃತಪಟ್ಟರು.

ಲಾ ಗಣೇಶನ್

ಆರ್‌ಎಸ್‌ಎಸ್ ಪ್ರಚಾರಕ್ ಆಗಿದ್ದ ಗಣೇಶನ್ ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. 2021 ಹಾಗೂ 2025ರ ಅವಧಿಯಲ್ಲಿ ಮಣಿಪುರ, ಪಶ್ಚಿಮ ಬಂಗಾಳ ಹಾಗೂ ನಾಗಾಲ್ಯಾಂಡ್ ರಾಜ್ಯಪಾಲರಾಗಿ ಕೆಲಸ ನಿರ್ವಹಿಸಿದ್ದರು.

ಪ್ರಾಣೇಶ್‌ಗೆ ಚಾಲೆಂಜರ್ಸ್ ಪ್ರಶಸ್ತಿ

ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್: ಮಾಸ್ಟರ್ಸ್ ವಿಭಾಗದಲ್ಲಿ ಜರ್ಮನಿಯ ಕೀಮರ್ ಚಾಂಪಿಯನ್

ಚೆನ್ನೈ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಎಂ. ಪ್ರಾಣೇಶ್ ಅಂತಿಮ ಸುತ್ತಿನಲ್ಲಿ ಹರ್ಷವರ್ಧನ್ ಜಿ.ಬಿ. ಎದುರು ಸೋತು ಹಿನ್ನಡೆ ಅನುಭವಿಸಿದರೂ ಚಾಲೆಂಜರ್ಸ್ ವಿಭಾಗದ ಪ್ರಶಸ್ತಿ ಗೆಲ್ಲುವಲ್ಲಿ ಸಮಸ್ಯೆಯಾಗಲಿಲ್ಲ. ಶುಕ್ರವಾರ ಮುಕ್ತಾಯಗೊಂಡ ಈ ಟೂರ್ನಿಯ ಮಾಸ್ಟರ್ಸ್ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಆಟಗಾರ ಅರ್ಜುನ್ ಇರಿಗೇಶಿ ಜಂಟಿ ಎರಡನೇ ಸ್ಥಾನ ಪಡೆದರು.

ಮಾಸ್ಟರ್ಸ್ ವಿಭಾಗದಲ್ಲಿ ಒಂದು ಸುತ್ತು ಮೊದಲೇ ಪ್ರಶಸ್ತಿ ಖಾತರಿಪಡಿಸಿಕೊಂಡಿದ್ದ ಜರ್ಮನಿಯ ವಿನ್ಸೆಂಟ್ ಕೀಮರ್ ಒಂಬತ್ತನೇ ಹಾಗೂ ಅಂತಿಮ ಸುತ್ತಿನಲ್ಲೂ ಜಯಗಳಿಸಿ ಒಟ್ಟು 7 ಅಂಕ ಸಂಗ್ರಹಿಸಿದರು. ನೆದರ್ಲೆಂಡ್ಸ್‌ನ ಅನಿಶ್ ಗಿರಿ, ಅರ್ಜುನ್ ಮತ್ತು ಕಾರ್ತಿಕೇಯನ್ ಮುರಳಿ ಅವರು ತಲಾ ಐದು ಅಂಕ ಗಳಿಸಿದರು.

ಭಾರತೀಯ ಆಟಗಾರರ ಪೈಕಿ ನಿಹಾಲ್ ಸರಿನ್ ಐದನೇ, ವಿದಿತ್ ಗುಜರಾತಿ ಏಳನೇ ಮತ್ತು ಪ್ರಣವ್ ಒಂಬತ್ತನೇ ಸ್ಥಾನಗಳಿಸಿದರು.

ಅರ್ಜುನ್ ಅಂತಿಮ ಸುತ್ತಿನಲ್ಲಿ ಕಾರ್ತಿಕೇಯನ್ ಮುರಳಿ ಜೊತೆ ಡ್ರಾ ಮಾಡಿಕೊಂಡರೆ, ಅವಾಂಡರ್ ಲಿಯಾಂಗ್ (4.5), ವಿದಿತ್ ಗುಜರಾತಿ (4) ಜೊತೆ ಡ್ರಾ ಮಾಡಿಕೊಂಡರು.

ಜೋರ್ಡನ್ ಫೋರೀಸ್ಟ್ (4), ಅನಿಸ್ ಗಿರಿ ಅವರಿಗೆ ಸೋತರೆ, ರೇ ರಾಬ್ಸನ್ (3), ವಿನ್ಸೆಂಟ್ ಕೀಮರ್ ಅವರಿಗೆ ಶರಣಾದರು. ನಿಹಾಲ್ ಸರಿನ್ (4.5), ಸ್ವದೇಶದ ಪ್ರಣವ್ (3) ಅವರನ್ನು ಮಣಿಸಿದರು.

ಪ್ರಾಣೇಶ್ ಚಾಂಪಿಯನ್: ತಮಿಳುನಾಡಿನ ಪ್ರಾಣೇಶ್ ಅವರು ಚಾಲೆಂಜರ್ಸ್ ವಿಭಾಗದ ಒಟ್ಟು 6.5 ಅಂಕಗಳೊಡನೆ ಅಗ್ರಸ್ಥಾನ ಉಳಿಸಿಕೊಂಡರು. ಅವರು ಟ್ರೋಫಿ ಜೊತೆ ₹5 ಲಕ್ಷ ಬಹುಮಾನ ಪಡೆದರು. ಜೊತೆಗೆ ಮುಂದಿನ ವರ್ಷ ಮಾಸ್ಟರ್ಸ್ ವಿಭಾಗದಲ್ಲಿ ಆಡುವ ಅವಕಾಶ ಸಂಪಾದಿಸಿದರು.

ಚಾಲೆಂಜರ್ ವಿಭಾಗದಲ್ಲಿ ಭಾರತದ ಆಟಗಾರರದ್ದೇ ಇದ್ದರು. ಅಧಿಬನ್ ಭಾಸ್ಕರನ್, ಅಭಿಮನ್ಯು ಪುರಾಣಿಕ್ ಮತ್ತು ಲಿಯಾನ್ ಲ್ಯೂಕ್ ಮೆಂಡೋನ್ಸಾ ತಲಾ ಆರು ಪಾಯಿಂಟ್ ಸಂಗ್ರಹಿಸಿದರು. ಪಿ.ಇನಿಯನ್ (5.5) ಐದನೇ ಸ್ಥಾನ ಪಡೆದರೆ, ದೀಪ್ತಾಯನ ಘೋಷ್ (4.5) ಆರನೇ ಸ್ಥಾನ ಗಳಿಸಿದರು.

ಹರ್ಷವರ್ಧನ್ (4) ಮತ್ತು ಆರ್ಯನ್ ಚೋಪ್ರಾ (4) ಜಂಟಿ ಏಳನೇ ಸ್ಥಾನ ಪಡೆದರು. ಹಾರಿಕಾ (1.5) ಒಂಬತ್ತನೇ ಹಾಗೂ ವೈಶಾಲಿ (1) ಅಂತಿಮ ಸ್ಥಾನ ಪಡೆದರು.

ಒಂಬತ್ತನೇ ಸುತ್ತಿನಲ್ಲಿ ಆರ್ಯನ್, ಹಾರಿಕಾ ವಿರುದ್ಧ; ದೀಪ್ತಾಯನ್, ವೈಶಾಲಿ ವಿರುದ್ಧ; ಇನಿಯನ್, ಅಭಿಮನ್ಯು ಪುರಾಣಿಕ್ ವಿರುದ್ಧ, ಅಧಿಬನ್, ಲಿಯಾನ್ ಮೆಂಡೋನ್ಸಾ ವಿರುದ್ಧ ಜಯಗಳಿಸಿದರು. ಆ ಮೂಲಕ ಎಲ್ಲ ಬೋರ್ಡ್‌ಗಳಲ್ಲಿ ನಿರ್ಣಾಯಕ ಫಲಿತಾಂಶ ಬಂದಿತು.

ಟ್ರೋಫಿಯೊಂದಿಗೆ ಭಾರತದ ಎಂ. ಪ್ರಾಣೇಶ್ ಮತ್ತು ಜರ್ಮನಿಯ ವಿನ್ಸೆಂಟ್ ಕೀಮರ್

ಫಿಡೆ ರೇಟೆಡ್ ಚೆಸ್: ಸಿದ್ಧಾಂತ್ ಪೂಂಜಗೆ ಕಿರೀಟ

ಬೆಂಗಳೂರು: ಸಿದ್ಧಾಂತ್ ಪೂಂಜ ಅವರು ಬೆಂಗಳೂರು ಗ್ರಾಮೀಣ ಜಿಲ್ಲಾ ಚೆಸ್ ಸಂಸ್ಥೆಯು (ಬಿಆರ್‌ಡಿಸಿಎ) ಆಯೋಜಿಸಿದ್ದ ಆಲ್ ಇಂಡಿಯಾ ಓಪನ್ ಫಿಡೆ ರೇಟೆಡ್ 'ಇಂಡಿಪೆಂಡೆನ್ಸ್ ಕಪ್' ರ‍್ಯಾಪಿಡ್ ಚೆಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು.

ಹೊಸಕೋಟೆಯ ಸಣ್ಣತಮ್ಮನಹಳ್ಳಿ ಶ್ರೀಮಂಜುನಾಥ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ನಡೆದ ಟೂರ್ನಿಯಲ್ಲಿ ಹೆಬ್ಬಾಳ ಕೆಂಪಾಪುರದ ಸಿಂಧಿ ಶಾಲೆಯ 8ನೇ ತರಗತಿ ವಿದ್ಯಾರ್ಥಿ ಸಿದ್ಧಾಂತ್ ಒಟ್ಟು ಒಂಬತ್ತು ಸುತ್ತುಗಳಲ್ಲಿ 8.5 ಅಂಕ ಗಳಿಸಿ 'ಇಂಡಿಪೆಂಡೆನ್ಸ್ ಡೇ ಕಪ್'ನೊಂದಿಗೆ ₹30 ಸಾವಿರ ಬಹುಮಾನ ತಮ್ಮದಾಗಿಸಿಕೊಂಡರು.

ಎರಡನೇ ಸ್ಥಾನ ಗಳಿಸಿದ ಆರ್.ಶೈಲೇಶ್ ₹25 ಸಾವಿರ, ಮೂರನೇ ಸ್ಥಾನ ಗಳಿಸಿದ ಎಸ್.ರೋಹಿತ್ ₹ 20 ಸಾವಿರ ಬಹುಮಾನ ಪಡೆದರು. ಫಿಡೆ ರೇಟೆಡ್ 252 ಆಟಗಾರರು ಸೇರಿದಂತೆ ಒಟ್ಟು 537 ಮಂದಿ ಟೂರ್ನಿಯಲ್ಲಿ ಭಾಗವಹಿಸಿದ್ದರು.

ಪ್ರಶಸ್ತಿ ಗೆದ್ದ ಸಿದ್ಧಾಂತ್ ಪೂಂಜ

6ನೇ ಸ್ಥಾನಕ್ಕೆ ಸರಿದ ಗುಕೇಶ್: ಲೆವೊನ್‌ಗೆ ಅಗ್ರಸ್ಥಾನ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಸೇಂಟ್ ಲೂಯಿ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ಬ್ಲಿಟ್ಜ್ ವಿಭಾಗದಲ್ಲಿ ಹಿನ್ನಡೆ ಕಂಡರು. ಗುರುವಾರ ಅವರು ಒಂದು ಪಂದ್ಯ ಮಾತ್ರ ಗೆದ್ದು, ನಾಲ್ಕು ಡ್ರಾ ಮಾಡಿಕೊಂಡು, ನಾಲ್ಕರಲ್ಲಿ ಸೋಲನುಭವಿಸಿ ಒಟ್ಟಾರೆ ಜಂಟಿ ಆರನೇ ಸ್ಥಾನಕ್ಕೆ ಸರಿದರು.

ಬ್ಲಿಟ್ಜ್ ವಿಭಾಗವು 18 ಸುತ್ತುಗಳನ್ನು ಒಳಗೊಂಡಿದ್ದು, ಗುರುವಾರ 9 ಸುತ್ತುಗಳು ನಡೆದವು. ಇದರಲ್ಲಿ ಅಮೆರಿಕದ ಲೆವೊನ್ ಅರೋನಿಯನ್ ಆರು ಅಂಕ ಗಳಿಸಿ ಅಗ್ರಸ್ಥಾನದಲ್ಲಿದ್ದಾರೆ.

ರ‍್ಯಾಪಿಡ್ ಮತ್ತು ಬ್ಲಿಟ್ಜ್ ಸೇರಿ ಅರೋನಿಯನ್ ಅವರು ಒಟ್ಟು 19 ಅಂಕ ಸಂಗ್ರಹಿಸಿದ್ದಾರೆ. ಅಮೆರಿಕದ ಇನ್ನೊಬ್ಬ ಆಟಗಾರ ಫ್ಯಾಬಿಯಾನೊ ಕರುವಾನ (17) ಎರಡನೇ ಸ್ಥಾನದಲ್ಲಿದ್ದಾರೆ. ಫ್ರಾನ್ಸ್‌ನ ಗ್ರ್ಯಾಂಡ್‌ಮಾಸ್ಟರ್ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ (16.5) ಅವರು ಅಮೆರಿಕದ ಆಟಗಾರನ ಬೆನ್ನಟ್ಟಿದ್ದಾರೆ.

ರ‍್ಯಾಪಿಡ್ ವಿಭಾಗದಲ್ಲಿ ಹಿನ್ನಡೆ ಕಂಡಿದ್ದ ಉಜ್ಬೇಕ್ ಜಿಎಂ ನದಿರ್ಬೆಕ್ ಅಬ್ದುಸತ್ತಾರೋವ್ ಬ್ಲಿಟ್ಜ್ ವಿಭಾಗದಲ್ಲಿ ಪುಟಿದೆದ್ದು ಒಟ್ಟು 15 ಅಂಕ ಸಂಗ್ರಹಿಸಿದ್ದು, ಅಮೆರಿಕದ ವೆಸ್ಲಿ ಸೊ (15) ಜೊತೆ ನಾಲ್ಕನೇ ಸ್ಥಾನ ಹಂಚಿಕೊಂಡಿದ್ದಾರೆ.


ಅರೋನಿಯನ್

ಗುಕೇಶ್ ಮತ್ತು ವಿಯೆಟ್ನಾಮ್‌ನ ಲೀಮ್ ಲೆ ಕ್ವಾಂಗ್ (ತಲಾ 13) ಅವರು ಆರನೇ ಸ್ಥಾನ ಹಂಚಿಕೊಂಡಿದ್ದಾರೆ.

ಒಟ್ಟು 10 ಆಟಗಾರರು ಕಣದಲ್ಲಿದ್ದಾರೆ.

ಗುಕೇಶ್ ಅವರು ಬ್ಲಿಟ್ಜ್ ವಿಭಾಗದಲ್ಲಿ ಮೊದಲ ದಿನ ತಮ್ಮ ಏಕೈಕ ಜಯವನ್ನು ಅಮೆರಿಕದ ಲೀನಿಯರ್ ಡೊಮಿಂಗೆಝ್ ಪೆರೆಝ್ ವಿರುದ್ಧ ಐದನೇ ಸುತ್ತಿನಲ್ಲಿ ದಾಖಲಿಸಿದರು. ಅವರು ಅರೋನಿಯನ್, ಸ್ಯಾಮ್ ಶಂಕ್ಲಾಂಡ್ (ಅಮೆರಿಕ), ಕರುವಾನ, ಗ್ರೆಗೊರಿ ಒಪಾರಿನ್ (ಅಮೆರಿಕ) ಜೊತೆ ಡ್ರಾ ಮಾಡಿಕೊಂಡರು. ಆದರೆ ವೆಸ್ಲಿ ಸೊ, ಅಬ್ದುಸತ್ತಾರೋವ್, ಲೀಮ್ ಮತ್ತು ವೇಷಿಯರ್ ಲಗ್ರಾವ್ ಅವರಿಗೆ ಸೋತರು. ವೇಷಿಯರ್ ಲಗ್ರಾವ್ ಅವರು ಈ ವಿಭಾಗದಲ್ಲಿ ಅಜೇಯರಾಗುಳಿದರು. ಎರಡು ಪಂದ್ಯ ಗೆದ್ದ ಅವರು ಉಳಿದ ಏಳನ್ನು ಡ್ರಾ ಮಾಡಿಕೊಂಡರು.

ಭಾರತ ಎ ತಂಡಕ್ಕೆ ಸರಣಿ ಕೈವಶ

ಮಹಿಳಾ ಕ್ರಿಕೆಟ್: ಯಷ್ಟಿಕಾ, ರಾಧಾ, ತನುಜಾ ಅರ್ಧಶತಕ

ಬ್ರಿಸ್ಬೇನ್ (ಪಿಟಿಐ): ಅಮೋಘ ಅರ್ಧ ಶತಕಗಳನ್ನು ದಾಖಲಿಸಿದ ಯಷ್ಟಿಕಾ ಭಾಟಿಯಾ, ರಾಧಾ ಯಾದವ್ ಮತ್ತು ತನುಜಾ ಕನ್ವರ್ ಅವರ ಬಲದಿಂದ ಭಾರತ ಎ ತಂಡವು ಆಸ್ಟ್ರೇಲಿಯಾ ಎ ತಂಡದ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ಶುಕ್ರವಾರ ಇಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಭಾರತ ಎ ತಂಡವು 2 ವಿಕೆಟ್‌ಗಳಿಂದ ಜಯಿಸಿತು. ಸರಣಿಯಲ್ಲಿ ಇನ್ನೊಂದು ಪಂದ್ಯ ಬಾಕಿ ಇದೆ. 266 ರನ್‌ಗಳ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಆರಂಭಿಕ ಬ್ಯಾಟರ್ ಯಷ್ಟಿಕಾ (66; 71ಎ, 4X9), ನಾಯಕಿ ರಾಧಾ (60; 78ಎ, 4X5, 6X1) ಹಾಗೂ ತನುಜಾ ಕನ್ವರ್ (50; 57ಎ, 4X3) ಅವರು ಗೆಲುವಿನ ಕಾಣಿಕೆ ನೀಡಿದರು. ಪ್ರೇಮಾ ರಾವತ್ (ಅಜೇಯ 32; 33ಎ, 4X3) ಅವರೂ ಉಪಯುಕ್ತ ಕಾಣಿಕೆ ನೀಡಿದರು.

ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಅಲಿಸಾ ಹೀಲಿ (91; 87ಎ, 4X8, 6X3) ಹಾಗೂ ಕಿಮ್ ಗಾರ್ಥ್ (ಅಜೇಯ 41; 45ಎ, 4X4) ಅವರ ಬ್ಯಾಟಿಂಗ್ ಬಲದಿಂದ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 265 ರನ್ ಗಳಿಸಿತು. ಭಾರತ ಎ ತಂಡದ ಸೈಮಾ ಠಾಕೂರ್ (30ಕ್ಕೆ2) ಮತ್ತು ಮಿನು ಮಣಿ (46ಕ್ಕೆ3) ಅವರು ಆತಿಥೇಯ ತಂಡವು 300ರ ಗಡಿ ದಾಟದಂತೆ ನೋಡಿಕೊಂಡರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ ಎ: 50 ಓವರ್‌ಗಳಲ್ಲಿ 9ಕ್ಕೆ265 (ಅಲಿಸಾ ಹೀಲಿ 91, ರಚೆಲ್ ಟ್ರೆನಾಮನ್ 24, ಎಲ್ಲಾ ಹೇವಾರ್ಡ್ 28, ಕಿಮ್ ಗಾರ್ಥ್ ಔಟಾಗದೇ 41, ಸೈಮಾ ಠಾಕೂರ್ 30ಕ್ಕೆ2, ಮಿನು ಮಣಿ 46ಕ್ಕೆ3) ಭಾರತ ಎ: 49.5 ಓವರ್‌ಗಳಲ್ಲಿ 8ಕ್ಕೆ266 (ಯಷ್ಟಿಕಾ ಭಾಟಿಯಾ 66, ರಾಧಾ ಯಾದವ್ 60, ತನುಜಾ ಕನ್ವರ್ 50, ಪ್ರೇಮಾ ರಾವತ್ ಔಟಾಗದೇ 32, ತೇಜಲ್ ಹಸ್ಬನೀಸ್ 19, ಜಾರ್ಜಿಯಾ ಪ್ರೆಸ್ಟ್‌ವಿಚ್ 63ಕ್ಕೆ2, ಆಮಿ ಎಡ್ಗರ್ 55ಕ್ಕೆ2, ಎಲಾ ಹೇವರ್ಡ್ 57ಕ್ಕೆ2)

ಫಲಿತಾಂಶ: ಭಾರತ ಎ ತಂಡಕ್ಕೆ 2 ವಿಕೆಟ್ ಜಯ ಹಾಗೂ ಸರಣಿಯಲ್ಲಿ 2–0 ಮುನ್ನಡೆ.



ಭಾರತ ಎ ಮಹಿಳಾ ತಂಡದ ಯಷ್ಟಿಕಾ ಭಾಟಿಯಾ (ಎಡ). ಭಾರತ ತಂಡದ ನಾಯಕಿ ರಾಧಾ ಯಾದವ್ —ಎಎಫ್‌ಪಿ ಚಿತ್ರಗಳು

ಮೈಸೂರು ಓಪನ್ ಗಾಲ್ಫ್: ಯುವರಾಜ್‌ಗೆ ಕಿರೀಟ

ಪ್ರಜಾವಾಣಿ ವಾರ್ತೆ

ಮೈಸೂರು: ಚಂಡೀಗಢದ ಆಟಗಾರ ಯುವರಾಜ್ ಸಂಧು ಅವರು ಶುಕ್ರವಾರ ಮೈಸೂರು ಓಪನ್ ಗಾಲ್ಫ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಇದರೊಂದಿಗೆ ಹಾಲಿ ಋತುವಿನಲ್ಲಿ ಮೂರನೇ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡು, ಪಿಜಿಟಿಐ (ಪ್ರೊಫೆಷನಲ್ ಗಾಲ್ಫ್ ಟೂರ್ ಆಫ್ ಇಂಡಿಯಾ) ಆರ್ಡರ್ ಆಫ್ ಮೆರಿಟ್‌ನಲ್ಲಿ ಮುನ್ನಡೆಯನ್ನು ಬಲಪಡಿಸಿಕೊಂಡರು.

28 ವರ್ಷದ ಯುವರಾಜ್ ಅವರು ಒಟ್ಟು 31 ಅಂಡರ್ 249 (61-65-62-61) ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ಪಡೆದರು. ಮೊದಲ ಸುತ್ತಿನಿಂದಲೇ ಮುನ್ನಡೆಯನ್ನು ಕಾಯ್ದುಕೊಂಡಿದ್ದ ಅವರು ಕೊನೆಯ ಮತ್ತು ನಾಲ್ಕನೇ ಸುತ್ತಿನಲ್ಲಿ ಅಮೋಘ ಆಟ ಪ್ರದರ್ಶಿಸಿದರು. ಒಂಬತ್ತು ಅಂಡರ್‌ಗಳಲ್ಲಿ 61 ಅಂಕ ಕಲೆಹಾಕಿ ಪ್ರಶಸ್ತಿಗೆ ಮುತ್ತಿಕ್ಕಿದರು.

ಯುವರಾಜ್ ಅವರು ಇಲ್ಲಿ ₹ 15 ಲಕ್ಷ ಬಹುಮಾನವನ್ನು ಜೇಬಿಗಿಳಿಸಿಕೊಂಡರು. ಇದರೊಂದಿಗೆ ಅವರ ಋತುವಿನ ಗಳಿಕೆ ₹73.67 ಲಕ್ಷಕ್ಕೆ ಏರಿಕೆಯಾಯಿತು. ಯುವರಾಜ್ ಗಳಿಸಿದ ಪಾಯಿಂಟ್ಸ್ (249) ಪಿಜಿಟಿಐ ಟೂರ್ನಿಗಳಲ್ಲೇ ಅತ್ಯಂತ ಕಡಿಮೆಯಾಗಿದೆ. ಆದರೆ, ಟೂರ್ನಿಯ ವೇಳೆ ಮಳೆ ಬಂದ ಕಾರಣ ನಿಯಮದಲ್ಲಿ ಪರಿಷ್ಕರಣೆ ಮಾಡಲಾಗಿತ್ತು. ಹೀಗಾಗಿ, ಅದನ್ನು ದಾಖಲೆಗೆ ಪರಿಗಣಿಸಿಲ್ಲ.

ಪ್ರಶಸ್ತಿಯೊಂದಿಗೆ ಯುವರಾಜ್ ಸಂಧು

ಬಾಂಗ್ಲಾದೇಶದ ಜಮಾಲ್ ಹುಸೇನ್ 23 ಅಂಡರ್‌ಗಳಲ್ಲಿ 257 (62-65-64-66) ಅಂಕ ಕಲೆಹಾಕಿ ಎರಡನೇ ಸ್ಥಾನ ಪಡೆದರು. ದೇಹಲಿಯ ಅರ್ಜುನ್ ಪ್ರಸಾದ್ 22 ಅಂಡರ್‌ಗಳಲ್ಲಿ 258 (66-62-64-66) ಪಾಯಿಂಟ್‌ನೊಂದಿಗೆ ಮೂರನೇ ಸ್ಥಾನ ಗಳಿಸಿದರು.

ಸ್ಥಳೀಯ ವೃತ್ತಿಪರರ ಪೈಕಿ ಮೈಸೂರಿನ ಧ್ರುವ ಬೋಪಣ್ಣ ಜಂಟಿ 53ನೇ ಸ್ಥಾನ ಪಡೆದರು. ಅವರು ಒಟ್ಟು 277 ಅಂಕ ಗಳಿಸಿದರು.

ಎನ್‌ಎಸ್‌ಪಿಯಿಂದ ಕ್ರೀಡಾಭಿವೃದ್ಧಿ: ಮೋದಿ ಆಶಯ

ನವದೆಹಲಿ (ಪಿಟಿಐ): ನೂತನ ರಾಷ್ಟ್ರೀಯ ಕ್ರೀಡಾ ನೀತಿಯು (ಎನ್‌ಎಸ್‌ಪಿ) ದೇಶದ ಕ್ರೀಡಾ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ವ್ಯಕ್ತಪಡಿಸಿದರು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಶುಕ್ರವಾರ ಅವರು ಕೆಂಪುಕೋಟೆಯಲ್ಲಿ ಧ್ವಜಾರೋಹಣ ಮಾಡಿ ಮಾತನಾಡಿದರು.

'ದೇಶವು ಇವತ್ತು ಕ್ರೀಡಾ ಕ್ಷೇತ್ರದಲ್ಲಿ ಬಹುದೂರ ಸಾಗಿಬಂದಿದೆ. ಭವಿಷ್ಯ ರೂಪಿಸಿಕೊಳ್ಳುವ ಅವಕಾಶಗಳಿರುವ ಕ್ಷೇತ್ರ ಇದಾಗಿದೆ. ಕ್ರೀಡೆಯು ದೇಶದ ಅಭಿವೃದ್ಧಿಯ ಮಹತ್ವದ ಅಂಗವಾಗಿದೆ. ಪಾಲಕರು ತಮ್ಮ ಮಕ್ಕಳನ್ನು ಕ್ರೀಡಾಪಟುಗಳನ್ನಾಗಿ ರೂಪಿಸಲು ಒಲವು ತೋರುತ್ತಿದ್ದಾರೆ. ಇದು ನನಗೆ ಸಂತಸ ತಂದಿದೆ. ಮಕ್ಕಳು ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡರೆ ಸಂತಸಪಡುವ ಪಾಲಕರ ಸಂಖ್ಯೆ ಹೆಚ್ಚುತ್ತಿದೆ' ಎಂದರು.

'ಕ್ರೀಡೆಯನ್ನು ಮತ್ತಷ್ಟು ಬೆಳೆಸಲು ರಾಷ್ಟ್ರೀಯ ಕ್ರೀಡಾ ನೀತಿಯನ್ನು ರೂಪಿಸಿದ್ದೇವೆ. ಇದು ಶಾಲೆಯಿಂದ ಒಲಿಂಪಿಕ್ಸ್‌ವರೆಗೆ ಎಲ್ಲ ಹಂತಗಳಲ್ಲಿಯೂ ಬೆಳವಣಿಗೆಗೆ ನೆರವಾಗಲಿದೆ. ತರಬೇತಿ, ಫಿಟ್‌ನೆಸ್ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಿದೆ' ಎಂದರು.

ಚಿಟಿಕೆ ಸುದ್ದಿ

ಟಿ.ಟಿ: ಕರ್ನಾಟಕದ ಸಿದ್ಧಾಂತ್‌ಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಸಿದ್ಧಾಂತ್ ಅವರು ಗುಜರಾತ್‌ನ ವಡೋದರಾದಲ್ಲಿ ನಡೆದ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ 13 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿ ಗೆದ್ದರು. ಸಿದ್ಧಾಂತ್ ಫೈನಲ್‌ನಲ್ಲಿ 11-9, 12-10, 11-7ರಿಂದ ಪಶ್ಚಿಮ ಬಂಗಾಳದ ರಾಜ್‌ದೀಪ್ ಬಿಸ್ವಾಸ್ ಅವರನ್ನು ಮಣಿಸಿದರು.

11 ವರ್ಷದೊಳಗಿನ ಸಿಂಗಲ್ಸ್‌ನಲ್ಲಿ ಕರ್ನಾಟಕದ ಅರ್ಣವ್ ಮಿಥುನ್ ಮತ್ತು ಸಾಕ್ಷ್ಯಾ ಸಂತೋಷ್ ರನ್ನರ್ಸ್ ಅಪ್ ಆದರು. ಬಾಲಕರ ವಿಭಾಗದ ಫೈನಲ್‌ನಲ್ಲಿ ರಾಜ್‌ದೀಪ್ 11-8, 6-11, 11-3, 9-11, 11-6ರಿಂದ ಅರ್ಣವ್ ಅವರನ್ನು ಸೋಲಿಸಿದರು. ಬಾಲಕಿಯರ ಫೈನಲ್‌ನಲ್ಲಿ ಮಹಾರಾಷ್ಟ್ರದ ಆದ್ಯಾ ಬಹೇತಿ 11-4, 9-11, 11-7, 13-11ರಿಂದ ಸಾಕ್ಷ್ಯಾ ಅವರನ್ನು ಹಿಮ್ಮೆಟ್ಟಿಸಿದರು.

ರೂಟ್ಸ್‌ಗೆ ಜಯ

ಬೆಂಗಳೂರು: ರೂಟ್ಸ್ ಎಫ್‌ಸಿ ತಂಡವು ಶುಕ್ರವಾರ ಕೆಎಸ್‌ಎಫ್‌ಎ ಕರ್ನಾಟಕ ಮಹಿಳೆಯರ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 1–0 ಗೋಲಿನಿಂದ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಇತರ ಪಂದ್ಯಗಳಲ್ಲಿ ಬೆಂಗಳೂರು ಎಫ್‌ಸಿ 1–0ಯಿಂದ ಮಾತೃ ಪ್ರತಿಷ್ಠಾನ ಎಫ್‌ಸಿ ವಿರುದ್ಧ; ಮಿಸಾಕಾ ಯುನೈಟೆಡ್ ಎಫ್‌ಸಿ 8–1ರಿಂದ ಪಿಂಕ್ ಪ್ಯಾಂಥರ್ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು.

ಭಾರತ–ಪಾಕ್ ಪಂದ್ಯ: ಆದಿತ್ಯ ವಿರೋಧ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಹಣದಾಸೆಗಾಗಿ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಕಿಸ್ತಾನ ಎದುರಿನ ಪಂದ್ಯವನ್ನು ಬಹಿಷ್ಕರಿಸುತ್ತಿಲ್ಲ. ದೇಶಕ್ಕಾಗಿ ಸೇನೆಯು ಮಾಡಿದ ಬಲಿದಾನಕ್ಕಿಂತ ಕ್ರಿಕೆಟ್ ಮಂಡಳಿಯ ಹಣದಾಸೆಯೇ ಪ್ರಧಾನವಾಗಿದೆ ಎಂದು ಶಿವಸೇನಾದ ನಾಯಕ ಆದಿತ್ಯ ಠಾಕ್ರೆ ಕಿಡಿಕಾರಿದ್ದಾರೆ.

'ಭಾರತ ಮತ್ತು ಪಾಕ್ ನಡುವೆ ರಕ್ತ ಹಾಗೂ ನೀರು ಜೊತೆಯಾಗಿ ಹರಿಯಲು ಸಾಧ್ಯವಿಲ್ಲವೆಂದು ಸ್ವಾತಂತ್ರ್ಯೋತ್ಸವ ದಿನಾಚರಣೆಯ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ಪಹಲ್ಗಾಮ್ ಭಯೋತ್ಪಾದನಾ ದಾಳಿಯಲ್ಲಿ ಪಾಕಿಸ್ತಾನದ ಪ್ರಚೋದನೆಯಿದೆ ಎಂದು ಜಗತ್ತಿನ ಎದುರು ಸಾಬೀತುಪಡಿಸಲು ಕೇಂದ್ರ ಸರ್ಕಾರ ಮತ್ತು ದೇಶವು ಹಲವು ಪ್ರಯತ್ನಗಳನ್ನು ಮಾಡಿದೆ. ಆದರೆ ಬಿಸಿಸಿಐ ಧೋರಣೆ ದೇಶವಿರೋಧಿಯಾಗಿದೆ' ಎಂದು ಆದಿತ್ಯ ಹೇಳಿದರು.

ಶಿವಮೊಗ್ಗ ವಿರುದ್ಧ ಬೆಂಗಳೂರು ಬ್ಲಾಸ್ಟರ್ಸ್‌ಗೆ ಎಂಟು ವಿಕೆಟ್‌ಗಳ ಗೆಲುವು

ಶುಭಾಂಗ್ ಆಟಕ್ಕೆ ಮಣಿದ 'ಲಯನ್ಸ್'

● ಮೋಹನ್ ಕುಮಾರ ಸಿ.

ಮೈಸೂರು: ಮಳೆ ಕಾಡಿದ ಪಂದ್ಯದಲ್ಲಿ ಆಲ್‌ರೌಂಡ್ ಆಟವಾಡಿದ ನಾಯಕ ಶುಭಾಂಗ್ ಹೆಗ್ಡೆ ಬೆಂಗಳೂರು ಬ್ಲಾಸ್ಟರ್ಸ್ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟರು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 'ಮಹಾರಾಜ ಟ್ರೋಫಿ' ಟ್ವೆಂಟಿ-20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಬೆಂಗಳೂರು ತಂಡವು 8 ವಿಕೆಟ್‌ಗಳಿಂದ ಶಿವಮೊಗ್ಗ ಲಯನ್ಸ್ ತಂಡವನ್ನು ಮಣಿಸಿತು.

ಮಳೆಯಿಂದ 6 ಓವರ್‌ಗಳಿಗೆ ಸೀಮಿತವಾದ ಪಂದ್ಯದಲ್ಲಿ ಟಾಸ್ ಸೋತ ಶಿವಮೊಗ್ಗ ಲಯನ್ಸ್ ನಾಯಕ ನಿಹಾಲ್ ಉಲ್ಲಾಳ್ 11 ಎಸೆತದಲ್ಲಿ ತಲಾ 3 ಬೌಂಡರಿ ಹಾಗೂ ಸಿಕ್ಸರ್‌ನೊಂದಿಗೆ 31 ರನ್ ಗಳಿಸಿ ಅಬ್ಬರಿಸಿದರು. ಮೊದಲ ಎರಡು ಓವರ್‌ನಲ್ಲಿ ತಂಡದ ಮೊತ್ತ ವಿಕೆಟ್ ನಷ್ಟವಿಲ್ಲದೇ 34 ಆಗಿತ್ತು. ಈ ವೇಳೆ ದಾಳಿಗಿಳಿದ ಶುಭಾಂಗ್ ಅವರು ಅನೀಶ್ವರ್ ಗೌತಮ್ ಅವರನ್ನು ಬೌಲ್ಡ್ ಮಾಡಿದರು. ನಿಹಾಲ್ ಉಲ್ಲಾಳ್ 3ನೇ ಓವರ್‌ನಲ್ಲಿ ಮೊಹಸೀನ್ ಖಾನ್ ಅವರಿಗೆ ವಿಕೆಟ್ ಒಪ್ಪಿಸಿದರು. ಅಲ್ಲಿಂದ ಶಿವಮೊಗ್ಗ ತಂಡದವರು ರನ್ ಗಳಿಸಲು ತಿಣುಕಾಡಿದರು.

ಈ ವೇಳೆ ಶುಭಾಂಗ್ ತಮ್ಮ 2ನೇ ಓವರ್‌ನ ಮೊದಲ ಎರಡು ಎಸೆತದಲ್ಲಿ ಅನಿರುದ್ಧ ಜೋಶಿ ಹಾಗೂ ಅವಿನಾಶ್ ಅವರಿಗೆ ಪೆವಿಲಿಯನ್ ಹಾದಿ ತೋರಿಸಿದರು. ಮೊಹಸಿನ್ ಖಾನ್ (5ಕ್ಕೆ 2) ಹಾಗೂ ಎಂ.ಜಿ.ನವೀನ್ (32ಕ್ಕೆ 2) ಶುಭಾಂಗ್ ಅವರಿಗೆ ಸಾಥ್ ನೀಡಿದರು. ಕೊನೆಯ ಓವರ್‌ನಲ್ಲಿ ಎಂ.ಬಿ.ದರ್ಶನ್ ಅವರ 14 ರನ್ ನೆರವಿನಿಂದ ಶಿವಮೊಗ್ಗ 6 ವಿಕೆಟ್‌ಗೆ 62 ರನ್ ಗಳಿಸಿತು.

ಸವಾಲಿನ ಗುರಿ ಬೆನ್ನತ್ತಿದ್ದ ಬೆಂಗಳೂರು ತಂಡಕ್ಕೆ ಎಲ್.ಆರ್.ಚೇತನ್ (16 ರನ್), ಎ.ರೋಹನ್ ಪಾಟೀಲ (12) ಉತ್ತಮ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ ಈ ಜೋಡಿ 25 ರನ್ ಕಲೆಹಾಕಿತ್ತು.

ನಾಲ್ಕು ವಿಕೆಟ್ ಪಡೆದ ಸಂಭ್ರಮದಲ್ಲಿ ಮಂಗಳೂರು ಡ್ರ್ಯಾಗನ್ಸ್ ತಂಡದ ಕ್ರಾಂತಿಕುಮಾರ್
ಪ್ರಜಾವಾಣಿ ಚಿತ್ರ:ಅನೂಪ್ ರಾಘು ಟಿ.

ಭರ್ಜರಿ ಸಿಕ್ಸರ್ ಸಿಡಿಸಲು ಹೋದ ಚೇತನ್, ಕೌಶಿಕ್ ಅವರಿಗೆ ವಿಕೆಟ್ ಒಪ್ಪಿಸಿದರೆ, ರೋಹನ್ ಅವರು ನಿಹಾಲ್ ಅವರಿಗೆ ಕ್ಯಾಚ್ ನೀಡಿದರು. ಆಗ ಕ್ರೀಸ್‌ಗೆ ಬಂದ ಮಯಂಕ್ ಅಗರವಾಲ್ (ಔಟಾಗದೇ18; 4x2, 6x1) ಹಾಗೂ ನಾಯಕ ಶುಭಾಂಗ್ ಹೆಗ್ಡೆ (ಔಟಾಗದೇ 14; 6x2) ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಜೊತೆಯಾಟದಿಂದ 32 ರನ್ ಹರಿದು ಬಂದವು.

ಡ್ರ್ಯಾಗನ್ಸ್‌ಗೆ ಜಯ

ಮೈಸೂರು: ಕೆ.ವಿ.ಅನೀಶ್ (62) ಮತ್ತು ಮೆಕ್ನೀಲ್ ನೊರೊನಾ (56) ಅವರ ಸೊಗಸಾದ ಅರ್ಧಶತಕ ಹಾಗೂ ಕ್ರಾಂತಿಕುಮಾರ್ ಅವರ ಆಲ್‌ರೌಂಡ್ ಆಟದ (30 ರನ್ ಮತ್ತು 28ಕ್ಕೆ 4 ವಿಕೆಟ್) ಬಲದಿಂದ 'ಮಂಗಳೂರು ಡ್ರ್ಯಾಗನ್ಸ್' ತಂಡವು 'ಹುಬ್ಬಳ್ಳಿ ಟೈಗರ್ಸ್' ತಂಡದ ಎದುರು 16 ರನ್‌ಗಳಿಂದ ಗೆಲುವು ಸಾಧಿಸಿತು.

ಶುಕ್ರವಾರದ ಎರಡನೇ ಪಂದ್ಯದಲ್ಲಿ ಮಂಗಳೂರು ತಂಡವು 5 ವಿಕೆಟ್‌ಗೆ 195 ರನ್‌ಗಳ ಸವಾಲಿನ ಮೊತ್ತ ಕಲೆ ಹಾಕಿತು. ಉತ್ತರವಾಗಿ ಹುಬ್ಬಳ್ಳಿ ತಂಡವು ನಾಯಕ ದೇವದತ್ತ ಪಡಿಕ್ಕಲ್ (60 ರನ್) ಅರ್ಧಶತಕದಿಂದ 9 ವಿಕೆಟ್‌ಗೆ 178 ರನ್ ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರ್: ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 195 (ಕೆ.ವಿ.ಅನೀಶ್ 62, ಮೆಕ್ನೀಲ್ ನೊರೊನಾ 56, ನಿತಿನ್ ಶಾಂತವೇರಿ 54ಕ್ಕೆ 2). ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 179 (ದೇವದತ್ತ ಪಡಿಕ್ಕಲ್ 60. ಕ್ರಾಂತಿಕುಮಾರ್ 28ಕ್ಕೆ 4)

ಸಂಕ್ಷಿಪ್ತ ಸ್ಕೋರ್: ಶಿವಮೊಗ್ಗ ಲಯನ್ಸ್: 6 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 62 (ನಿಹಾಲ್ ಉಲ್ಲಾಳ್ 31, ಶುಭಾಂಗ್ ಹೆಗ್ಡೆ 7ಕ್ಕೆ 3, ಮೊಹಸಿನ್ ಖಾನ್ 5ಕ್ಕೆ 2, ಎಂ.ಜಿ.ನವೀನ್ 32ಕ್ಕೆ 2, ವಿದ್ಯಾಧರ ಪಾಟೀಲ 16ಕ್ಕೆ 1). ಬೆಂಗಳೂರು ಬ್ಲಾಸ್ಟರ್ಸ್: 4.2 ಓವರ್‌ಗಳಲ್ಲಿ 2 ವಿಕೆಟ್‌ಗೆ 63 (ಮಯಂಕ್ ಅಗರವಾಲ್ ಔಟಾಗದೇ 18, ಶುಭಾಂಗ್ ಹೆಗ್ಡೆ ಔಟಾಗದೇ 14, ರೋಹಿತ್ 7ಕ್ಕೆ 1, ಕೌಶಿಕ್ 16ಕ್ಕೆ 1) ಪಂದ್ಯದ ಆಟಗಾರ: ಶುಭಾಂಗ್ ಹೆಗ್ಡೆ

ಇಂದಿನ ಪಂದ್ಯಗಳು
ಶಿವಮೊಗ್ಗ ಲಯನ್ಸ್-ಗುಲ್ಬರ್ಗ ಮಿಸ್ಟಿಕ್ಸ್, ಮಧ್ಯಾಹ್ನ 3.15
ಮೈಸೂರು ವಾರಿಯರ್ಸ್–ಹುಬ್ಬಳ್ಳಿ ಟೈಗರ್ಸ್, ಸಂಜೆ 7.15

'ಸುಪ್ರೀಂ' ಅಂಗಳಕ್ಕೆ ಐಎಸ್‌ಎಲ್ ಬಿಕ್ಕಟ್ಟು

ನವದೆಹಲಿ (ಪಿಟಿಐ): ಇಂಡಿಯನ್ ಸೂಪರ್ ಲೀಗ್‌ನ (ಐಎಸ್‌ಎಲ್) ಬಿಕ್ಕಟ್ಟನ್ನು ಸುಪ್ರೀಂ ಕೋರ್ಟ್ ಮುಂದೆ ಪ್ರಸ್ತಾಪಿಸಲು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಸಿದ್ಧತೆ ನಡೆಸಿದೆ.

ಎಐಎಫ್‌ಎಫ್ ಸಂವಿಧಾನದ ಕರಡುವಿಗೆ ಸಂಬಂಧಿಸಿದಂತೆ ತೀರ್ಪನ್ನು ಸುಪ್ರೀಂ ಕೋರ್ಟ್ ಕಾಯ್ದಿರಿಸಿದ್ದು, ಈ ಕುರಿತ ವಿಚಾರಣೆ ಸೋಮವಾರ ನಿಗದಿಯಾಗಿದೆ. ಅಂದು ಐಎಸ್‌ಎಲ್ ಸಮಸ್ಯೆ ಕುರಿತು ಪ್ರಸ್ತಾಪಿಸಲಿದೆ.

ಎಐಎಫ್‌ಎಫ್ ಮತ್ತು ಲೀಗ್ ಆಯೋಜಕ ಎಫ್‌ಎಸ್‌ಡಿಎಲ್ ನಡುವೆ ಮಾಸ್ಟರ್ ರೈಟ್ಸ್ ಒಪ್ಪಂದ ನವೀಕರಣಕ್ಕೆ ಸಂಬಂಧಿಸಿದ ಗೊಂದಲ ಬಗೆಹರಿದಿಲ್ಲದ ಕಾರಣ ಲೀಗ್ ಅನಿಶ್ಚಿತವಾಗಿದೆ. ಮತ್ತೊಂದೆಡೆ ಬಿಕ್ಕಟ್ಟು ಶಮನ ಆಗುವವರೆಗೆ ಆಟಗಾರರು ಮತ್ತು ಸಹಾಯಕ ಸಿಬ್ಬಂದಿಯ ವೇತನವನ್ನು ಕ್ಲಬ್‌ಗಳು ತಡೆಹಿಡಿದಿವೆ.

ದಾಖಲೆ ಹೊಸ್ತಿಲಲ್ಲಿ ಜೇಕಬ್

ಲಂಡನ್ (ಎಎಫ್‌ಪಿ): ಜೇಕಬ್ ಬೆಥೆಲ್ ಅವರು ಇಂಗ್ಲೆಂಡ್ ಕ್ರಿಕೆಟ್ ತಂಡದ ಅತಿ ಕಡಿಮೆ ವಯಸ್ಸಿನ ನಾಯಕನಾಗಿ ಕಣಕ್ಕಿಳಿಯಲಿದ್ದಾರೆ.

21 ವರ್ಷ ವಯಸ್ಸಿನ ಜೇಕಬ್ ಅವರು ಮುಂದಿನ ತಿಂಗಳು ಐರ್ಲೆಂಡ್ ಎದುರು ನಡೆಯಲಿರುವ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಇಂಗ್ಲೆಂಡ್ ತಂಡವನ್ನು ಮುನ್ನಡೆಸಲಿದ್ದಾರೆ. ಮೂರು ಪಂದ್ಯಗಳ ಈ ಸರಣಿಯು ಡಬ್ಲಿನ್‌ನಲ್ಲಿ ನಡೆಯಲಿದೆ. ಮುಂದಿನ ವರ್ಷ ಭಾರತ ಮತ್ತು ಶ್ರೀಲಂಕಾದ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪೂರ್ವಸಿದ್ಧತೆಯ ದೃಷ್ಟಿಯಿಂದ ಈ ಸರಣಿಯು ಇಂಗ್ಲೆಂಡ್‌ಗೆ ಮುಖ್ಯವಾಗಿದೆ.

ವಾರ್ವಿಕ್‌ಶೈರ್ ಕ್ಲಬ್ ಆಲ್‌ರೌಂಡರ್ ಆಗಿರುವ ಇಂಗ್ಲೆಂಡ್‌ನ ಉದಯೋನ್ಮುಖ ಆಟಗಾರರಲ್ಲಿ ಒಬ್ಬರಾಗಿದ್ದಾರೆ. ಇದುವರೆಗೂ ಅವರು ಯಾವುದೇ ಮಾದರಿಯಲ್ಲಿಯೂ ಶತಕ ದಾಖಲಿಸಿಲ್ಲ.

ಯೋಜನೆಯಂತೆ ಜೇಕಬ್ ಅವರು ನಾಯಕರಾಗಿ ಆಡಿದರೆ, ಮಾಂಟಿ ಬೌಡೆನ್ ಅವರ ದಾಖಲೆಯನ್ನು ಮೀರುವರು. 1888–89ರಲ್ಲಿ ಕೇಪ್‌ಟೌನ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ಆಡಿದ್ದ ಇಂಗ್ಲೆಂಡ್ ತಂಡವನ್ನು ಮಾಂಟಿ ಮುನ್ನಡೆಸಿದ್ದರು. ಆಗ ಅವರಿಗೆ 23 ವರ್ಷ, 144 ದಿನಗಳ ವಯಸ್ಸಾಗಿತ್ತು.

ಜೇಕಬ್ ಅವರು ಇದುವರೆಗೆ ನಾಲ್ಕು ಟೆಸ್ಟ್, 13 ಟಿ20 ಮತ್ತು 12 ಏಕದಿನ ಪಂದ್ಯಗಳಲ್ಲಿ ಇಂಗ್ಲೆಂಡ್ ತಂಡವನ್ನು ಪ್ರತಿನಿಧಿಸಿದ್ದಾರೆ. ಈಚೆಗೆ ಲಂಡನ್‌ನ ಓವಲ್‌ನಲ್ಲಿ ನಡೆದಿದ್ದ ಭಾರತ ಮತ್ತು ಇಂಗ್ಲೆಂಡ್ ನಡುವಣ ಸರಣಿಯ ಐದನೇ ಟೆಸ್ಟ್‌ನಲ್ಲಿ ಜೇಕಬ್ ಆಡಿದ್ದರು. ಆದರೆ ಅದರಲ್ಲಿ ಎರಡೂ ಇನಿಂಗ್ಸ್‌ಗಳಲ್ಲಿ ಕ್ರಮವಾಗಿ ಆರು ಮತ್ತು ಐದು ರನ್ ಗಳಿಸಿದ್ದರು. ಎಡಗೈ ಸ್ಪಿನ್ನರ್ ಆಗಿರುವ ಅವರು ವಿಕೆಟ್ ಗಳಿಸಿರಲಿಲ್ಲ.

ಅಂಕಿತಾ ರಾಷ್ಟ್ರೀಯ ದಾಖಲೆ

ನವದೆಹಲಿ (ಪಿಟಿಐ): ಒಲಿಂಪಿಯನ್ ಅಂಕಿತಾ ಧ್ಯಾನಿ ಅವರು ಇಸ್ರೇಲ್‌ನಲ್ಲಿ ನಡೆಯುತ್ತಿರುವ ಗ್ರ್ಯಾನ್‌ಸ್ಲ್ಯಾಮ್ ಜೆರುಸಲೆಂ ಅಥ್ಲೆಟಿಕ್ ಕೂಟದಲ್ಲಿ ಮಹಿಳೆಯರ 2000 ಮೀಟರ್ಸ್ ಸ್ಟೀಪಲ್‌ಚೇಸ್‌ನಲ್ಲಿ ಚಿನ್ನದ ಪದಕ ಗೆದ್ದರು. ಅದರೊಂದಿಗೆ ರಾಷ್ಟ್ರೀಯ ದಾಖಲೆಯನ್ನೂ ನಿರ್ಮಿಸಿದರು.

23 ವರ್ಷದ ಅಂಕಿತಾ 6 ನಿಮಿಷ, 13.92 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಹಿಂದೆ ಪಾರುಲ್ ಚೌಧರಿ ಅವರು ಮಾಡಿದ್ದ ದಾಖಲೆ (6ನಿ,14.38ಸೆ) ದಾಖಲೆಯನ್ನು ಮೀರಿ ನಿಂತರು.

ಈ ಗೆಲುವಿನೊಂದಿಗೆ ಅಂಕಿತಾ ಅವರ ರ‍್ಯಾಂಕಿಂಗ್ ಪಾಯಿಂಟ್ಸ್‌ಗಳಲ್ಲಿ ಹೆಚ್ಚಳವಾಗಿದೆ. ಇದರೊಂದಿಗೆ ಅವರು ಮುಂದಿನ ತಿಂಗಳು ಟೋಕಿಯೊದಲ್ಲಿ ನಡೆಯುವ ವಿಶ್ವ ಚಾಂಪಿಯನ್‌ಷಿಪ್‌ಗೆ (3000 ಮೀ ಸ್ಟೀಪಲ್‌ಚೇಸ್) ಅರ್ಹತೆ ಪಡೆಯುವ ಸಾಧ್ಯತೆ ಹೆಚ್ಚಿದೆ.

ಅಂಕಿತಾ ಧ್ಯಾನಿ

'ಹೌದು. ನಿಯಮದ ಪ್ರಕಾರ ಇಲ್ಲಿ 2000 ಮೀ ಸ್ಟೀಪಲ್‌ಚೇಸ್‌ನಲ್ಲಿ ಮಾಡಿದ ಸಾಧನೆಯು ವಿಶ್ವ ರ‍್ಯಾಂಕಿಂಗ್‌ಗೆ ಪರಿಗಣಿತವಾಗಲಿದೆ. ಅಲ್ಲದೇ ವಿಶ್ವ ಚಾಂಪಿಯನ್‌ಷಿಪ್ 3000 ಮೀ ಸ್ಟೀಪಲ್‌ಚೇಸ್‌ಗೂ ಅರ್ಹತೆ ಪಡೆಯಲು ಅವಕಾಶವಿದೆ' ಎಂದು ಭಾರತ ಅಥ್ಲೆಟಿಕ್ಸ್ ತಂಡದ ಮುಖ್ಯಕೋಚ್ ರಾಧಾಕೃಷ್ಣನ್ ನಾಯರ್ ಹೇಳಿದ್ದಾರೆ.

ಗ್ರ್ಯಾನ್‌ಸ್ಲ್ಯಾಮ್ ಜೆರುಸಲೇಂ ಕೂಟವು ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟರ್ ಟೂರ್ ಸಿಲ್ವರ್ ಲೆವೆಲ್ (ಬಿ ಕೆಟಗರಿ) ಕೂಟವಾಗಿದೆ. ಇಸ್ರೇಲ್‌ನ ಅದ್ವಾ ಕೊಹೆನ್ ಮತ್ತು ಡೆನ್ಮಾರ್ಕಿನ ಜೂಲಿಯನ್ ಹವಿದ್ ಕ್ರಮವಾಗಿ ದ್ವಿತೀಯ (6ನಿ,15.20ಸೆ) ಮತ್ತು ತೃತೀಯ (6ನಿ,17.80ಸೆ) ಸ್ಥಾನ ಪಡೆದರು.

ಹೋದ ತಿಂಗಳು ನಡೆದಿದ್ದ ವಿಶ್ವ ಯುನಿವರ್ಸಿಟಿ ಗೇಮ್ಸ್‌ನಲ್ಲಿ ಅಂಕಿತಾ ಅವರು 3000 ಮೀ ಸ್ಟೀಪಲ್ ಚೇಸ್‌ನಲ್ಲಿ ಬೆಳ್ಳಿ ಪದಕ ಗಳಿಸಿದ್ದರು. ಅಲ್ಲಿ ಅವರು ತಮ್ಮ ವೈಯಕ್ತಿಕ ಶ್ರೇಷ್ಠ ಸಮಯ (9ನಿ,31.99ಸೆ) ದಾಖಲಿಸಿದ್ದರು.

2024ರ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಅವರು ಮಹಿಳೆಯರ 5000 ಮೀ ಓಟದಲ್ಲಿ ಸ್ಪರ್ಧಿಸಿದ್ದರು. 2023ರಲ್ಲಿ ಬ್ಯಾಂಕಾಕ್‌ನಲ್ಲಿ ನಡೆದಿದ್ದ ಏಷ್ಯನ್ ಅಥ್ಲೆಟಿಕ್ಸ್‌ನಲ್ಲಿ ಅವರು 5000 ಮೀ ಓಟದಲ್ಲಿ ಕಂಚು ಪಡೆದಿದ್ದರು.

ಶಿಲ್ಲಾಂಗ್‌ಗೆ ಇಂಡಿಯನ್ ನೇವಿ ಸವಾಲು ಇಂದು

ಶಿಲ್ಲಾಂಗ್/ಕೊಕ್ರಜಾರ್ (ಪಿಟಿಐ): ಸ್ಥಳೀಯ ನೆಚ್ಚಿನ ಶಿಲ್ಲಾಂಗ್ ಲಜಾಂಗ್ ಎಫ್‌ಸಿ ಮತ್ತು ಉತ್ತಮ ಲಯದಲ್ಲಿರುವ ಇಂಡಿಯನ್ ನೇವಿ ಎಫ್‌ಟಿ ತಂಡಗಳು ಶನಿವಾರ 134ನೇ ಆವೃತ್ತಿಯ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಹಾಲಿ ಚಾಂಪಿಯನ್ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವು ದಿನದ ಮತ್ತೊಂದು ಕ್ವಾರ್ಟರ್ ಫೈನಲ್‌ನಲ್ಲಿ ಬೋಡೊಲ್ಯಾಂಡ್ ಎಫ್‌ಸಿ ವಿರುದ್ಧದ ಸವಾಲನ್ನು ಎದುರಿಸಲಿದೆ.

ಶಿಲ್ಲಾಂಗ್ ತಂಡವು ಗುಂಪು ಹಂತದಲ್ಲಿ ಮೂರು ಪಂದ್ಯಗಳಲ್ಲಿ ಎರಡನ್ನು ಗೆದ್ದಿತ್ತು. ಆರು ಅಂಕ ಗಳಿಸಿ ಇ ಗುಂಪಿನಲ್ಲಿ ಎರಡನೇ ಸ್ಥಾನದೊಂದಿಗೆ ಎಂಟರ ಘಟ್ಟ ಪ್ರವೇಶಿಸಿತ್ತು. ನೇವಿ ತಂಡವು ಎರಡರಲ್ಲಿ ಗೆಲುವು, ಒಂದರಲ್ಲಿ ಡ್ರಾ ಸಾಧಿಸಿ (7 ಅಂಕ), ಎಫ್ ಗುಂಪಿನಲ್ಲಿ ಅಗ್ರಸ್ಥಾನ ಪಡೆದಿತ್ತು.

ನಾರ್ತ್‌ಈಸ್ಟ್ ತಂಡವು ಎರಡು ಗೆಲುವು ಮತ್ತು ಒಂದು ಪಂದ್ಯ ಡ್ರಾ ಸಾಧಿಸಿ ಏಳು ಅಂಕಗಳೊಂದಿಗೆ ಇ ಗುಂಪಿನಲ್ಲಿ ಅಗ್ರಸ್ಥಾನ ಪಡೆದಿತ್ತು. ಬೋಡೊಲ್ಯಾಂಡ್ ತಂಡವು ಆಡಿರುವ ಮೂರೂ ಪಂದ್ಯಗಳನ್ನು ಗೆದ್ದು 9 ಅಂಕ ಸಂಪಾದಿಸಿ ಡಿ ಗುಂಪಿನಲ್ಲಿ ಮೊದಲ ಸ್ಥಾನ ಪಡೆದಿತ್ತು.

ಭಾರತ ಪ್ರವಾಸ ದೃಢಪಡಿಸಿದ ಫುಟ್‌ಬಾಲ್ ದಿಗ್ಗಜ ● ನಾಲ್ಕು ಮಹಾನಗರಗಳಿಗೆ ಭೇಟಿ

ಕೋಲ್ಕತ್ತಕ್ಕೆ ಮೆಸ್ಸಿ ಬರುವುದು ಖಚಿತ

ಕೋಲ್ಕತ್ತ (ಪಿಟಿಐ): ಫುಟ್‌ಬಾಲ್ ತಾರೆ ಲಯೊನೆಲ್ ಮೆಸ್ಸಿ ಅವರು ಭಾರತ ಪ್ರವಾಸ ಕೈಗೊಳ್ಳುವುದು ಖಚಿತವಾಗಿದೆ. ಭಾರತದ ಫುಟ್‌ಬಾಲ್ ಪ್ರೇಮಿಗಳ ಬಹುದಿನದ ನಿರೀಕ್ಷೆ ಈಡೇರಲಿದೆ.

ಅರ್ಜೆಂಟೀನಾ ಸೂಪರ್ ಸ್ಟಾರ್ ಆಟಗಾರ ಡಿಸೆಂಬರ್ 12ರಂದು ಕೋಲ್ಕತ್ತಕ್ಕೆ ಆಗಮಿಸಲಿದ್ದಾರೆ. ಮೂರು ದಿನಗಳ ಕಾಲ ಅವರು ಭಾರತದಲ್ಲಿ ಇರಲಿದ್ದಾರೆ ಎಂದು ಕಾರ್ಯಕ್ರಮ ಸಂಘಟಕ ಸತಾದ್ರು ದತ್ತಾ ಶುಕ್ರವಾರ ಹೇಳಿದ್ದಾರೆ.

'ಗೋಟ್ (GOAT - Greatest Of All Time) ಟೂರ್ ಆಫ್ ಇಂಡಿಯಾ 2025' (ಸಾರ್ವಕಾಲಿಕ ಮಹಾನ್ ಆಟಗಾರ ಭಾರತ ಪ್ರವಾಸ) ಕಾರ್ಯಕ್ರಮದ ಅಂಗವಾಗಿ ಅವರು ಭೇಟಿ ನೀಡುತ್ತಿದ್ದಾರೆ. ಈ ಪ್ರವಾಸದಲ್ಲಿ ಅವರ ಮೊದಲ ನಿಲ್ದಾಣ ಕೋಲ್ಕತ್ತ ಆಗಲಿದೆ. ನಂತರ ಅಹಮದಾಬಾದ್, ಮುಂಬೈ ಮತ್ತು ನವದೆಹಲಿಗೂ ಭೇಟಿ ನೀಡುವರು ಎಂದು ಪಿಟಿಐ ಸುದ್ದಿ ಸಂಸ್ಥೆ ಈ ಹಿಂದೆ ವರದಿ ಮಾಡಿತ್ತು. ಡಿಸೆಂಬರ್ 15ರಂದು ಅವರು ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಲಿದ್ದಾರೆ. ನಂತರ ತಮ್ಮ ದೇಶಕ್ಕೆ ಮರಳುವರು.

2011ರಲ್ಲಿ ಮೆಸ್ಸಿ ಅವರು ಕೋಲ್ಕತ್ತದ ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ನಡೆದಿದ್ದ ವೆನೆಜುವೆಲಾ ಎದುರು ನಡೆದಿದ್ದ ಫಿಫಾ ಸ್ನೇಹಪರ ಪಂದ್ಯದಲ್ಲಿ ಆಡಲು ಬಂದಿದ್ದರು. ಅದಾದ ನಂತರ ಅವರು ಭಾರತಕ್ಕೆ ಭೇಟಿ ನೀಡುತ್ತಿರುವುದು ಈಗಲೇ.

ಫುಟ್‌ಬಾಲ್ ತಾರೆ ಲಯೊನೆಲ್ ಮೆಸ್ಸಿ

'ಮೆಸ್ಸಿ ಅವರ ಆಗಮನವು ದೃಢಪಟ್ಟಿದೆ. ಅದರ ನಂತರವೇ ಅಧಿಕೃತವಾಗಿ (ಸಾಮಾಜಿಕ ಜಾಲತಾಣದಲ್ಲಿ) ಪ್ರಕಟಿಸಲಾಗಿದೆ. ಮೆಸ್ಸಿ ಅವರು ಆಗಸ್ಟ್ 28 ರಿಂದ ಸೆಪ್ಟೆಂಬರ್ 1ರ ಅವಧಿಯಲ್ಲಿ ತಮ್ಮ ಪ್ರವಾಸದ ಕುರಿತ ಪೋಸ್ಟ್ ಹಾಕುವ ನಿರೀಕ್ಷೆ ಇದೆ' ಎಂದು ದತ್ತಾ ಹೇಳಿದರು.

ಮೆಸ್ಸಿ ಅವರು ತಾವು ಭೇಟಿ ನೀಡುವ ನಗರಗಳಲ್ಲಿ ಮಕ್ಕಳೊಂದಿಗೆ 'ಮಾಸ್ಟರ್ ಕ್ಲಾಸ್' ಕಾರ್ಯಕ್ರಮ ನಡೆಸಿಕೊಡುವರು. ಅವರು ಕೋಲ್ಕತ್ತಕ್ಕೆ ಡಿ.12ರ ರಾತ್ರಿ ಆಗಮಿಸುವರು. ಈ ಪ್ರವಾಸದಲ್ಲಿ ಅತಿ ಹೆಚ್ಚು ಸಮಯವನ್ನು ಫುಟ್‌ಬಾಲ್ ಪ್ರೇಮಿಗಳ ಊರು ಕೋಲ್ಕತ್ತದಲ್ಲಿಯೇ ಕಳೆಯಲಿದ್ದಾರೆ.

'ಮೆಸ್ಸಿ ಅವರಿಗೆ ಮೇಟ್ (ಅರ್ಜೆಂಟಿನಾದ ಹರ್ಬಲ್ ಚಹಾ) ಅಚ್ಚುಮೆಚ್ಚು. ಅದಕ್ಕಾಗಿ ಅವರಿಗೆ ಅರ್ಜೆಂಟಿನಾ ಮತ್ತು ಅಸ್ಸಾಂ ಚಹಾದ ಸಮ್ಮಿಶ್ರದ ಔತಣ ನೀಡಲಿದ್ದೇವೆ. ಡಿ.13ರಂದು ತಾಜ್ ಬೆಂಗಾಲ್ ಹೋಟೆಲ್‌ನಲ್ಲಿ ಶುಭಮಿಲನ ಕಾರ್ಯಕ್ರಮವನ್ನೂ ಆಯೋಜಿಸಲಾಗಿದೆ. ಹಿಲ್ಸಾ ಮೀನು ಸೇರಿದಂತೆ ಬೆಂಗಾಲಿ ಖಾದ್ಯಗಳು ಹಾಗೂ ಸಿಹಿ ತಿಂಡಿಗಳನ್ನು ಆಹಾರ ಮೇಳಕ್ಕಾಗಿ ಸಿದ್ಧಪಡಿಸಲಾಗುತ್ತಿದೆ' ಎಂದು ದತ್ತಾ ವಿವರಿಸಿದರು.

ಈಡನ್ ಗಾರ್ಡನ್ಸ್ ಅಥವಾ ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ 'ಗೋಟ್ ಕಾನ್ಸರ್ಟ್' ಮತ್ತು 'ಗೋಟ್ ಕಪ್' ಅನಾವರಣ ನಡೆಯುವ ಸಾಧ್ಯತೆ ಇದೆ. ಇದೇ ಸಂದರ್ಭದಲ್ಲಿ ಮೆಸ್ಸಿ ಪುತ್ಥಳಿಯನ್ನು ಅನಾವರಣ ಮಾಡಲಾಗುವುದು.

ಕಾರ್ಯಕ್ರಮದಲ್ಲಿ ಕ್ರಿಕೆಟ್ ತಾರೆ ಸೌರವ್ ಗಂಗೂಲಿ, ಟೆನಿಸ್ ದಿಗ್ಗಜ ಲಿಯಾಂಡರ್ ಪೇಸ್, ಫುಟ್‌ಬಾಲ್ ದಿಗ್ಗಜ ಬೈಚುಂಗ್ ಭುಟಿಯಾ ಮತ್ತು ಸಿನಿತಾರೆ ಜಾನ್ ಅಬ್ರಹಾಂ ಕೂಡ ಹಾಜರಿರುವರು.

ಡಿ.13ರಂದು ಅಹಮದಾಬಾದಿನಲ್ಲಿ ನಡೆಯಲಿರುವ ಅದಾನಿ ಫೌಂಡೇಷನ್ ಕಾರ್ಯಕ್ರಮದಲ್ಲಿ ಮೆಸ್ಸಿ ಭಾಗವಹಿಸುವರು. ಡಿ.14ರಂದು ಮುಂಬೈನಲ್ಲಿ ಸಿಸಿಐ ಬ್ರೆಬೋರ್ನ್ ಗೋಟ್ ಕಾನ್ಸರ್ಟ್ ಮತ್ತು ವಾಂಖೆಡೆ ಕ್ರೀಡಾಂಗಣದಲ್ಲಿ 'ಗೋಟ್ ಕಪ್' ಕಾರ್ಯಕ್ರಮ ನಡೆಯಲಿವೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ನಿವೇಶನಗಳು ಲಭ್ಯ

ಆಕರ್ಷಕ ಬೆಲೆಗಳಲ್ಲಿ

ಕಗ್ಗಲೀಪುರ

ಬೆಲೆ ಕೇವಲ ₹10.2 ಲಕ್ಷ ದಿಂದ ಪ್ರಾರಂಭ

Electricity | Water | Tar Road | Park | Drainage

" ಅನುಮೋದಿತ ಬಡಾವಣೆಗಳು ಲಭ್ಯ "

ಕಗ್ಗಲೀಪುರ ಸಮೀಪ ವಸತಿ ನಿವೇಶನಗಳು

89700 56056

ಬಾಕಿ ಹಣವನ್ನು 3 ಕಂತುಗಳಲ್ಲಿ ಪಾವತಿಸಬಹುದು.

ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage, VISHWESHRAIAH LAYOUT, BDA SITES 50X80, 40X60, 30X40, 20X30 Buying/ Selling, Immediate Settlement. 9845675290 9845446826.

AVAILABLE BANSHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

BDA SITES Available @ Banashankari 6th Stage all Blocks 20x30, 30x40, 40x60 50x80 In Good Location Contact: 99722-06988

BDA AUCTION SITE SALE 3250 Sqft NORTH WEST CORNER BANSASHANKARI 6th STAGE 4th B Block Call 9008444779

Hoskote

PLOT FOR IMMEDIATE SALE Location: Haraluru, Hoskote 6000sqft at Rs.2500/sqft West facing Corner plot 500m from Hoskote-Malur highwayCall: +91 9448011981

HOSKOTE LAND sale 4 acres Shiddlagatta Rd Near Suguna feeds Residential zone price 4.5 crore per Acre: 9243438373/ 9611118888

HSR Layout

"HSR-LAYOUT 20X30 Duplex House on 40`feet Road, 20x30,30x40, 40x60 Sites`and Rental income Building for`sale. Contact: "Krishna" 9886294610"

J P Nagar

SALE BDA 40x60 WEST FACING JP NAGAR 9TH PHASE, 3RD BLOCK. FOR PRICE CONTACT: 7022435107

Kengeri

***30X40 E/F** BBMP* 'A' Khata site Sale KENGERI SATELLITE TOWN, Arunachalam Layout,Clear Title.₹.9500/-. 9742681666/ 9886634578

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Uttarahalli

UTTARAHALLI PLOT SALE 55x65 BBMP A Khatha North Facing, Corner & Lake View. Rs.15,000/-sft. Call: 6362348146.

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, BANASHANKARI 6th Stage. Contact: 8892901567

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

COMMERCIAL SITE SALE SMV Layout, 50x80 West Face 100 Feet Road, Opposite BDA Complex Call: 9986869996.

VISHWESHWARAIAH LAYOUT BDA 6th Block Sit No. 3755, 5.5 Crore Direct Owner Meeting: 6360050356

BDA SITE FOR SALE 50x80 Vishweswaraiah Layout 8th Block, 60 Feet Road. Genuine Buyers Call: 8105688602.

"40X60 WEST- FACING Residential Site`sale`at Vishveswaraiah Layout 1st-Block 40`feet wide Road near`100 Feet`Road, 15 Minutes drive`to Metro. 9880031654"

SMV LAYOUT 5th BLOCK 30x40 NORTH FACE Near KLE LAW COLLEGE, BDA ALLOTEE SITE SALE. CALL: 9663226688, 9902817664.

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

Vidyaranyapura

SALE SITES 1200 & 1600 SQFT BBMP EASTHI EAST FACING COMPOUND WALL CLEAR TITLES 9035883017

Udupi

KHB SEMI Commercial NF SITE 4860 Sqft Prime Location HEBRI TOWN 59 LAKHS Owner: 9606866368

Chickbanavara

CHIKKABANAVARA 15X40 South Facing Site E-Khata for SALE Acharya College Road, Chikkabanavara. 4800/- Negotiable. 8296137578

Kanakapura Road

FLOORWISE_3BHK Flat 2150/2200Sft 1.65Cr 1.90Cr 40x60,Corner 15000/-Y Halli metro_GatedComunity_2100 sft,14000/-770sft,3BHK Duplex 1.80cr:8904210201

House

Basaweshwaranagar

SALE INDEPENDENT 2&3 BHK HOUSE 2500 SQFT BUILT 1600 SQFT SITE EASTHI KHATHA 2CRORE: 9035883017

Magadi Road

15X40 NORTH G+2 Building with Factory 10hp Power Kamakshipalya, Magadi Road, E-Katha, 59L Owner 9739957911

Mysore Road

30X50 EAST 3 Floors 45x50 E/S 5Floors PG 34 Rooms Hejjala Near Chirst College: 9448081380

Moodalpalya

15X40 SOUTH G+2 Building 5 Houses, East Door, SVG Nagar, Moodalapalya, E-Katha 85L Owner 9740073482

Flat

Sadashiva Nagar

SADASHIVNAGAR EXCLUSIVE! Immediate Sale. Architect Designed 4BHK duplex apartment with terrace. Commercial Use.8088907346

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Kanakapura Road

SALE OF FLATS Close to Silk Institute Metro & Nice Road Flats with Feel of A Villa 3 BHK starts from 1.25Cr. Private Varanda Space, RERA APPROVED, 100%Vastu Compliant Homes, Balinese Theme Land Space, with 60+Amenities. Call: 9743859000.

Commerical

R T Nagar

SALE COMMERCIAL INDEPENDENT DUPLEX BUILDING GROUND FIRST FLOOR VACANT POSITION A KHATHA 56 LAKHS 9035883017

Commercial Land

Mysore Road

Industrial & Factory

Out-Station

Tumkur Road

10 ACRES Industrial Land for Sale on Dabaspet- Doddaballapur 10 Lane Highway. Interested Contact: 9341211588

Residential/ Commercial

Multiple Locations

REAL ESTATE- We undertake Property Maintenance, Civil, Painting, Electrical, Plumbing, Carpentry, Farmhouse, Houses,Offices, Industrial- shed's.etc- Invest on Small Agricultural plots around Bangalore South, Harohalli, Jigani, Maralwadi etc.and get Good returns in Resale Business: Property Monitoring: Property Management- Rental/ Buying/Selling of:All kinds of properties. Contact- Victory Properties:Mobile: 7411692219/ 8618576685/ 9686894972 info@victoryproperties.in www.victoryproperties.in

Outer Ring Road

ORR (MAGADI Rd- Tumkur Rd) facing corner site 2,800 Sqft near Pipeline- Chowdeshwarinagar @ Rs. 22,000 call: 9980555558

Srirampura

SALE 30X100, 1st cross, North facing, Site, Single owner, 2 mins from metro, 17000/sqft PH 9739732433

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Flats

RANKA COLONY Bannerghatta Road 2 BHK 1 attached Flat For Rent Furnished 1 Car Parking Call:9739393607

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654



email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE BUYING

Sites

Banashankari

BDA-SITES WANTED @ Banashankari 6th Stage Any Block Vishweshwaraiah Layout 30x40, 40x60, 50x80 Sattlement Immediately Contact: 98455-55666

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout. Contact: SAPTHAGIRI. 9036360366.

Vishweshwariah Layout

REQUIRED BDA SITES @ Nagarbhavi, Vishweswaraiya layout, Kempegowda layout. For Immediate Purchase any measurement. 9513955756, 9513119696.

"WANTED VISHVESHWARAIAH Layout 30x40 Sites any facing, Direct Registration, Direct Buyers only. Genuine Owners Contact: 7892224597"

BUSINESS

Business to Business

Business

FOR OUTDOOR Branding, Autoback, Bus back, Cycle, Mobile Van, Police Barricades, Hoardings, No parking boards, branding for Educational institutions, Corporates, Business, Jewellery Brands, FMNG's/Small Eateries/Events branding. Contact: Venuscast Technologies Pvt.Ltd. (UAE &Bangalore). www.Venus cast.com Call: 9482303339/ 8722123445/ 9538123445

INSURANCE FOR Life, General, Health, Automobile, Factories, Business, Educational institutions, Students, international Travel, Private& Public sector employees insurances. Contact Victory Fin Services: www.victoryfin services.com Call: 7411692219/ 8618576685/ 9482303339

Finance

LOANS ARRANGED for Housing, Business, Educational institutions, Personal, Automobile, Govt Employees, Software Employees from Banks. Contact Victory Fin.Services: www.victoryfinservices.com Call: 7411692219/ 8618576685/ 9482303339

Business Offers

Finance

MSME LOANS Available for Any Startup Companies,Any Existing Companies NOTE:Also One Approved Loan Available Contact-7204995189

MATRIMONIAL

Brides Wanted

Hindu

HINDU- 34YRS/SWE/172CMS/SC/ AYILLAM. Affluent family, settled in Bangalore. Looking for Bride from same/other caste. Con No 9845401461.

PERSONAL

Change of Name

CHANGE OF NAME
I, **S. Sanjay** S/o B. Saravanan residing No.359, Wheeler Road, Cox Town, near Banaswadi railway station Bangalore- 560084, have changed my name from **S.Sanjay** to
B.S. SANJAY CHETTY
vide affidavit dated 12-08-2025 sworn before advocate and notary TV. Uday Kumar K. at Bangalore

PROPERTY CORNER

ತಾರಕನ್ಸ್
ಕಾರ್ಮೆಲ್ ಮಂತ್ರ
ಅಭಿವೃದ್ಧಿ ಮಾಡಿದ ಪ್ರೀಮಿಯಂ ಪ್ಲಾಟ್ಸ್
STRR ನಲ್ಲಿ ಹೂಡಿಕೆ ಮಾಡಿ
ಬೆಂಗಳೂರಿನ ಮುಂದಿನ ಬೆಳವಣಿಗೆಯ ಕಾರಿಡಾರ್
₹ 30 Lakhs onwards
BMRDA ಅನುಮೋದನೆ
ಇ-ಖಾತಾ
90% ಬ್ಯಾಂಕ್ ಲೋನ್
ಮಾಲೂರು
ಸರ್ಜಾಪುರ ಮತ್ತು ವೈಟ್‌ಫೀಲ್ಡ್ ಹತ್ತಿರ
STRR ಈಗ ಬೆಂಗಳೂರು - ಚೆನ್ನೈ ಎಕ್ಸ್‌ಪ್ರೆಸ್‌ವೇಗೆ ತುಂಬಾ ಹತ್ತಿರ
9035 589 596
tharakanscarmelmantra.com

33 Flats - 2 BHK
AVAILABLE FOR RENT
Ground + 4 Floors
Suitable for : Institutions, Company Guest House, Service Apartment, Senior Citizens Home, PG etc.
Each Floor 8 Flat & Terrace with 2 BHK Penthouse
Ground Floor Parking & 2 Security Room with Bathroom
2 Borwell, Power Backup Generator & Lift, etc.
Good Location @ Sambhram Institute of Technology
Vidyaranyapura Post, Bangalore - 560075
Contact : +91 98440 29375

DH Classifieds
More value, more impact
ಪ್ರಜಾವಾಣಿ
NAME CHANGE
@50/-* PER WORDS
Book your *Name Change* Ad in DH All Karnataka + Prajavani Bengaluru City All Days
www.dhclassifieds.com
BOOK NOW
For more details contact:
+91 7795158424
+91 9731810277 | +91 9900428036
*Conditions apply

NARGUND
COLLEGE OF PHARMACY
Dattatreyanagar, Hosakerehalli,BSK-3rd Stage ,Bengaluru-560085.

APPLY NOW – LIMITED SEATS!
ADMISSION NOW OPEN
ACADEMIC YEAR 2025 | 2026
COURSES WE OFFER
• Diploma in Pharmacy
• Bachelors in Pharmacy
• Master of Pharmacy
• Pharm D
• Ph. D
WHY US
✓ Modern Labs & Advanced Research Facilities
✓ Expert Faculty with Industry Partnerships
✓ 100% Placement & Internship Support
✓ Merit-Based Scholarships Available
Practical Learning | Career-Ready Training

SCAN FORREGISTRATION
AFFLIATIONS & RECOGNITIONS
Contact Us
7019425622 www.nargund.edu.in nargundcop@gmail.com

DH DECCAN HERALD
ಪ್ರಜಾವಾಣಿ
Classifieds
More value, more impact
EDUCATION
Book your Educational Related Ads in DH All Karnataka + Prajavani Bengaluru City

*Conditions apply
www.dhclassifieds.com
BOOK NOW
For more details contact:
9731810277 | 9886213331
9845114560 | 9900428036
080- 45557163/164

DH | ಪ್ರಜಾವಾಣಿ
https://dhclassifieds.com
Book your Ad in 4 Easy Steps --Select Category-- Book ad
1 Select Category 2 Publication & Date 3 Compose Your Ad 4 Payment

ಖರೀದಿಸಿ ಅಥವಾ ಮಾರಾಟ ಮಾಡಿ
ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ
ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?
ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!
• ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬುಕಿಂಗ್
• ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
• ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
• ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ
ಈಗ ಬುಕ್ ಮಾಡಿ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಬೆಂಗಳೂರಿನ ಅತ್ಯಂತ ನಂಬಿಕೆಯುಳ್ಳ ಆಯುರ್ವೇದ ಆಸ್ಪತ್ರೆ

Ayushman AYURVEDA GROUP OF COMPANIES

ಆತ್ಮೀಯ **ಪ್ರಾಮಾಣಿಕ ಆಯುರ್ವೇದ**ದ ಸ್ಪರ್ಶವನ್ನು ಅನುಭವಿಸಿ

ಆಯುಷ್ಮಾನ್ ಆಯುರ್ವೇದ ಆಸ್ಪತ್ರೆ
ಗುಟ್ಟಹಳ್ಳಿ, ಸದಾಶಿವನಗರ, ಬೆಂಗಳೂರು, ಕರ್ನಾಟಕ

ಬೆಂಗಳೂರಿನ ಮುಂಚೂಣಿಯಲ್ಲಿರುವ ಆಯುರ್ವೇದ ಆಸ್ಪತ್ರೆಗಳು

ನಿಮ್ಮ ಹತ್ತಿರದ ಶಾಖೆಗಳು — ಬೆಂಗಳೂರಿನಾದ್ಯಂತ 13 ಶಾಖೆಗಳು

ಬಾಬುಸಪಾಳ್ಯ	ಗುಟ್ಟಹಳ್ಳಿ	ಕಸ್ತೂರಿ ನಗರ	ಮಹಾಲಕ್ಷ್ಮಿ ಲೇಔಟ್
ಬನಶಂಕರಿ	ಇಂದಿರಾ ನಗರ	ನಾಗೇನಹಳ್ಳಿ	
ಬಿದರಹಳ್ಳಿ	ಜಕ್ಕೂರು	ನಂದಿ ಬೆಟ್ಟ	
ಫ್ರೇಜರ್ ಟೌನ್	ಕಲ್ಯಾಣ ನಗರ	ಸಹಕಾರ ನಗರ	

ಆಯುಷ್ಮಾನ್ ಆಯುರ್ವೇದ ಸಂಸ್ಥೆ
Opp. ಕಲ್ಪೆಟ್ಟ ಬಸ್ ನಿಲ್ದಾಣ, ಕಲ್ಪೆಟ್ಟ, ವಯನಾಡ್, ಕೇರಳ

ಈಗಲೇ ಸಂಪರ್ಕಿಸಿ **+91 90 7135 1212**

ayushmanayurvedic   www.ayushmanayurvedic.in

Scan Website

ತೊಂದರೆ-ಮುಕ್ತ ಇನ್ಶೂರೆನ್ಸ್ ಕ್ಲೈಮ್

ಅನುಮೋದನೆ: GOVERNMENT OF KARNATAKA; Dept. of Ayurveda, Yoga & Naturopathy, Unani, Siddha and Homoeopathy (AYUSH)

- ನೋವು ನಿರ್ವಹಣೆಯಲ್ಲಿ ಪರಿಣತರು
- ಅತ್ಯಧಿಕ ಅನುಭವ ಹೊಂದಿದ ವೈದ್ಯರು
- ಪ್ರಮಾಣಿತ ಹಾಗೂ ನುರಿತ ತಜ್ಞರು
- ವೈಯಕ್ತಿಕ ಚಿಕಿತ್ಸಾ ಯೋಜನೆಗಳು
- ಸುರಕ್ಷಿತ ಹಾಗೂ ಸ್ವಾಭಾವಿಕ ಚಿಕಿತ್ಸೆ
- ಅಸಲಿ ಕೇರಳ ಆಯುರ್ವೇದ ಚಿಕಿತ್ಸೆಗಳು

ವಿಶೇಷ ಚಿಕಿತ್ಸೆ:

ಪಂಚಕರ್ಮ	ಆರ್ಥ್ರೈಟಿಸ್	ಬೆನ್ನುನೋವು
ಸಯಾಟಿಕಾ	ತೂಕ ಇಳಿಕೆ	ಮೈಗ್ರೇನ್
ರೆಮ್ಯಾಟಾಯಿಡ್ ಆರ್ಥ್ರೈಟಿಸ್		ವರಿಕೋಸ್ ವೇನ್
ಸ್ಪಾಂಡಿಲೈಟಿಸ್	ಭುಜ ನೋವು	ಮೊಣಕಾಲು ನೋವು
ಸೈನಸೈಟಿಸ್	ಬ್ಯೂಟಿ ಕೇರ್	ಸೋರಿಯಾಸಿಸ್
ಹೆರಿಗೆಯ ಆರೈಕೆ	ಗ್ಯಾಸ್ಟ್ರಿಟಿಸ್	ನಿದ್ರಾಹೀನತೆ

ಸಂತಾನೋತ್ಪತ್ತಿ ಹಾಗೂ ಇತರ ಗೈನಕಾಲಜಿಕಲ್ ತೊಂದರೆಗಳು

iRobo® Relaxation Redefined...

ಸ್ವಾತಂತ್ರ್ಯ ದಿನದ ವಿಶೇಷ **ಆಫರ್**
ಒತ್ತಡದಿಂದ ಸ್ವಾತಂತ್ರ್ಯ
ನೋವಿನಿಂದ ಸ್ವಾತಂತ್ರ್ಯ

ಈ ಸ್ವಾತಂತ್ರ್ಯ ದಿನ...
ಅರಸರಂತೆ ವಿಶ್ರಾಂತಿ ಪಡೆಯಿರಿ.
ಐಷಾರಾಮಿ ವೆಲ್ನೆಸ್ ಈಗ ನಿಮ್ಮ ಕೈಗೆಟುಕುವ ಬೆಲೆಗೆ!

iRoyal ಮಸಾಜ್ ಕುರ್ಚಿ
~~₹ 3,49,990~~
₹ 1,39,990

- **ಹ್ಯಾಂಡ್ ರಬ್ಬಿಂಗ್ ರಿಲೀಫ್** ತಳಿ ಹಾಗೂ ಬೆರಳ ಒತ್ತಡದಿಂದ ಕೈ/ಬಾಹುಗಳಿಗೆ ವಿಶ್ರಾಂತಿ.
- **ಜಿರೋ ಗ್ರಾವಿಟಿ** ಮೆದುಳು/ಹೆನ್ನೆಲುಬಿನ ಒತ್ತಡ ಕಡಿತ & ರಕ್ತಪ್ರಸರಣ ಹೆಚ್ಚಳ.
- **1D-5D ಮಸಾಜ್** ಇಂಟೆಲಿಜೆಂಟ್, ಮಾನವ-ಹಸ್ತ ಅನುಭವ.
- **22 ಆಟೋ ಮೋಡ್‌ಗಳು** ಮಾಸ್ಟರ್, ಕ್ರೌಡ್, & ಮ್ಯೂಸಿಕ್ ಥೆರಪಿ.
- **137 cm S+L ಟ್ರ್ಯಾಕ್** ಕುತ್ತಿಗೆದಿಂದ ಕುರ್ಚಿಯ ತಳವರೆಗೆ ಮಸಾಜ್.
- **ಅಡ್ವಾನ್ಸ್ಡ್ ಪಾದ ಮಸಾಜ್** ಶಿಯಾಟ್ಸು, ಮಸಾಜ್ ಮತ್ತು ಸ್ಕ್ರೇಪಿಂಗ್ ತಂತ್ರ.
- **ಕಾಲ್ಫ್ ನೀಡಿಂಗ್** ಕಾಲಿನ ಗಟ್ಟಿತನ ಮತ್ತು ಒತ್ತಡ ನಿವಾರಣೆ.
- **ಸ್ಪೇಸ್-ಸೇವಿಂಗ್** ಗೋಡೆಯಿಂದ ಕೇವಲ 5 cm ಅಂತರ.

@irobowellness   @irobowellness3933
iRobo Massage Chairs   enquiry@irobowellness.com

+91 99806 58125 +91 80956 46566

AISHWARYA'S

ಸ್ವಾತಂತ್ರ್ಯ ದಿನಾಚರಣೆಯ ಹಾರ್ದಿಕ ಶುಭಾಶಯಗಳು

AISHWARYA TEA INDUSTRIES since 1996

"ಕರ್ನಾಟಕದ ಅತ್ಯಂತ"
ರುಚಿಕರವಾದ ಚಹಾ

ಸೂರ್ಯೋದಯದ ಜೊತೆ
ಒಂದು ಕಪ್ ಚಹಾ,
ಮನಸ್ಸಿಗೆ ಹೊಸ ಉಲ್ಲಾಸ

100% NATURAL

Available in amazon blinkit

ಅದ್ಭುತ ರುಚಿ * ಮಿತವಾದ ಬೆಲೆ * ಉತ್ಕೃಷ್ಟ ಗುಣಮಟ್ಟ

Kt Special Tea   SHALIMAR GOLD TEA

TRADE ENQUIRIES

Bangalore	Rest of Karnataka
Prasanna Kumar ASM	Satish RSM
+91 9980 157884	+91 97313 03541

www.aishwaryateaindustries.com
aishwaryatea@gmail.com